- “Swachh Bharath” and “Tree Plantation” Programmes were conducted on 6th July 2019.
- 32 cadets participated in “Swami Vivekananda Birth Anniversary Jaatha” from Udupi Board High School to Ajjarakadu District ground on 12-1-2020.
- Our cadets voluntarily participated in blood donation camp on 11-1-2020 and 10 of our cadets donated the blood.
- Kargil Vijay Diwas on 26th July 2019.
- 20 cadets attended the “B” Certificate examination held at MGM College on 15th and 16th Feb. 2020.
- 8 cadets attended the “C” Certificate examination held at St. Aloysius College, Mangalore on 23rd and 24th Feb. 2019.

8. National Service Scheme:

- Orientation and personality development session was conducted by Dr. Arun Kumar S. R. on 10 July 2019.
- NSS volunteers actively participated in the Independence and Republic Day parade.
- Visited an orphanage ‘Planet Mars Foundation’ on the occasion of Independence Day and spent some quality time with the children.
- Sadhbhavana Day was celebrated on 20 Aug. 2019. Theatre artist and director, Santhosh Nayak was the guest of honour.
- A documentary on Cancer Awareness

was shown to the NSS volunteers on 28 Aug. 2019.

- Actively participated in the Vanamahotsava and planted new saplings.
- NSS volunteers participated in the Jaatha of Awareness of Drug abuse and intoxicating drinks on 26th June 2019.
- Annual Special Camp was held at Neelavara Goshala from 27th Nov. to 3rd Dec. 2019. 100 volunteers actively participated in the camp.
- Volunteers participated in the Youth Day Jaatha organised by The Udupi District Administration on 12 Jan. 2020.
- 20 NSS volunteers attended a 7 days camp organised by NDRF held at Vijayavada, Andhra Pradesh from 8 Feb. to 17 Feb. 2020.
- Smitha S. B., a II year NSS volunteer participated in the RD Parade held at Rajpath, New Delhi on 26 Jan. 2020.

9. Rangers and Rovers:

- Inauguration of the annual activities was held on 6th Sept. in Geethanjali. Mr. Jayram Naik, a retired BSF inaugurated it.
- Students actively took part in the Independence Day and Republic Day parades.
- Shramadaan programme was conducted on the occasion of Gandhi Jayanthi.
- A two-day service and personality development camp was conducted on 27th and 28th Nov. 2019 at Sharada Sabhabhavan, Neelavara.
- Three students participated in the NDRF (National Disaster Response Force) camp held at Vijayavada, Andhra Pradesh in Feb.
- Four students took part in the coastal trekking adventure camp in April 2019.

10. Youth Red Cross:

- It was inaugurated on 10th July 2019.
- Vanamahotsava was celebrated on 17th July 2019.
- On 4th Sept. 2019 there was a talk by Jyothi N.
- A programme on Swachh Sarvekshana Abhiyana by DC, Udupi was observed on 12th Sept. 2019.
- Voters Awareness Programme by SWEEP Udupi was on 25th Sept. 2019.
- A Jatha from Ajjarkad to Sri Krishna Mutt in connection with Geneva agreement and collection of fund was on 14th Aug. 2019.
- Organised a special talk on Youth in Nation Serving by Raveendra Rai, DGM, Bank of Baroda, Udupi on 18th Sept. 2019.
- On 11th Jan. 2020, YRC organised a blood donation camp in association with KMC, Manipal and collected 98 units of blood.
- Organised a special talk on Biodiversity and Endangered Species by Dr. Vijayalaxmi, Dept. of Sanskrit, MGM College, Udupi on 14th Feb. 2020.

11. Sports Club:

- The Annual Sports Meet was held on 1st Feb. 2020. The meet was declared open by Dr. Kemparaj, former Director of Physical Education, MAHE, Manipal and Principal of Alva's College of Physical Education, Moodabidri.

Students Achievements:

- **Mr. Abhin Devadiga,** I B.Com. secured Silver Medal in 200 m in the 17th Federation Cup National Junior Athletic Championship from 24th to 26th Sept. 2019 in Tamilnadu.
- **Mr. Sangamesh Handi,** III B.Com. secured Silver Medal in 21 km Marathon in the Mangalore University Inter-Collegiate

Athletic Meet held at Moodabidri from 25th to 27th Sept. 2019 and 6th Place in the All India Inter-University 42 km Marathon held at Alva's College, Moodabidri from 3rd to 6th Jan. 2020. He bagged Gold Medal in Goa River Marathon (42 km run) held in Goa on 17th Nov. 2019.

- **Ms. Ananya**, III B.Sc. secured the 2nd place in High Jump in Karnataka State Inter District Junior Athletic Championship held at Udupi on 21st and 22nd Aug. 2019.
- **Mr. Vishesh**, III B.C.A. got the 3rd place in Discus Throw in the Divisional Level Dasara Sports held at Mangala Stadium, Mangalore on 21st and 22nd Sept. 2019.
- **Mr. Shashank**, II B.Com. bagged 1st place in Manipal Marathon 2020 category 5 km.
- **Mr. Pranav Achar**, III B.Com. participated in the All India Inter-University Karate held at Satyabhama University, Chennai from 8th to 10th Jan. 2020.

12. Commerce Club:

- The Club was inaugurated on 17th July 2019. CA Ganesh Kamath inaugurated the club activities for the year 2019-20. Sanitation workers who help in maintaining the cleanliness in the college were honoured on this occasion.
- Vanamahotsava was celebrated by Commerce Club on 17th July 2019 by planting saplings in front of the Commerce Block.
- The 'Talent Hunt' was conducted on 30th July 2019.
- Organized a 'Fund Collection Drive' on 8 August 2019 and the collected funds were sent to the flood affected areas of Uttara Karnataka.
- The Dept. Bulletin – EduCom was released on 28th of August 2019. CA Mallesh was the Chief Guest.
- Organized 'The Invitation Making' competition on 4th of September 2019. 'Art from Waste' was the theme of the competition.
- 'Pick and Speak' was conducted on 18th September 2019.
- 'Cooking without fire' competition was conducted on 27th September 2019.
- 'Investment Awareness Program' was organized by Commerce Club in association with MUCTA, Mangalore and Franklin Templeton Mutual Fund on 30th September 2019. Leo Amal of Franklin Templeton Mutual Fund was the Chief Guest.
- Dhatri and Madhavi who secured 2nd and 7th ranks respectively in the University semester exams were felicitated on 1st January 2020. CA Ananth Narayan Pai felicitated the Rank holders.

13. Science Club:

The following activities were conducted under the guidance of Mrs. Shailaja, HOD of Physics.

- Ms. Shubha Revanakar and Mr. Linton Cannet Fernandes presented a seminar on 10th July 2019.
- Vanamahotsava was celebrated on 17th July 2019.
- Dr. Raviprakash, Assistant Professor, Dept. of Physics, MIT, Manipal gave a special talk on 'The making of great scientists' on 21st Aug. 2019.
- Pick and speech competition was conducted on 28th Aug. 2019.
- Mr. Praveen Kumar of 2nd B.Sc. presented a seminar on 4th Sept. 2019.
- Ms. Disha of II B.Sc. gave a talk on summer research fellowship programme on 19th Feb. 2020.
- An essay competition on Chandrayaana was conducted on 24th Feb. 2020.
- A quiz competition was held on 25th Feb. 2020.

02 Pg_001-034 TY200028

Prizes won by Science club members for different competitions are as follows:

- Students participated in the Science fest held at the Pilikula Regional Science Centre on 3rd and 4th Jan. 2020 where Mr. Hariprasad of III year won first place and was selected for the state level. Along with that, 11 students bagged first place in the drama competition and got selected for the state level.
- Mr. Varun Bhat and Mr. Vikram Prabhu bagged first place in the inter-collegiate quiz competition on 8th Feb. 2020 at Vijaya College, Mulki.

14. The Eco Club:

- The convener is Mrs. Usharani S. Suvarna, Associate Professor and HOD of Botany.
- The members of Eco Club celebrated Vanamahotsava by successfully grafting a rare species of Clitorea arborea i.e., Shankhapushpa and planting it in Botanica along with old students on 3 July 2019.
- Even celebrated Vanamahotsava in the college campus on 17 July 2019.
- A seminar on Rainwater Harvesting was given by Ms. Nayana of III B.Sc. who won the first place in State level Kannada Science Elocution competition organised by the Karnataka Rajya Vijnana Parishad on 10 July 2019.
- Members of Eco club gave a demonstration of vermicomposting to the High school students of Girls School, Udupi on 1 Feb. 2020.

15. IT Club:

- Quiz Time (Prelims) on 27th June 2019.
- The IT Orientation on 3rd July 2019.
- Crossword Competition on 10th July 2019.
- Vanamahotsava on 17th July 2019.
- A Seminar on 'How to Monetize Android App' on 21st Aug. 2019.
- Essay Writing competition on 28th Aug. 2019.
- App Launch Prelims on 4th Sept. 2019.
- Logology (Select the Correct Logo) on 18th Sept. 2019.
- Toggle Talk on 1st Jan. 2020.
- Product Launch on 5th Feb. 2020.

16. Literary and Fine Arts Club:

- Talent Search programme was held on 19th Aug. 2019.

17. Yakshagana and Theatre:

- Mr. Prashanth, Lecturer in Kannada directed a drama 'Panchavati' which was performed by our students in Inter-college fest bagged first place in National level.
- The College Yakshagana team, presented a Yakshagana programme Nala Kaarkotaka on the occasion of Founders Day directed by Sri Bannanje Sanjeeva Suvarna.

18. Tulu Sangha:

- The Tulu Sangha of our college in collaboration with Karnataka Tulu Sahitya Academy and Tulu Koota (R.), Udupi organised Tulu Isiri 2020 on 28th Feb. 2020.

With this presentation, I would like to conclude the SWC Report. I sincerely thank the Principal, the faculties and my fellow friends for their support and cooperation.

●

ACTIVITIES OF THE PU STUDENTS' WELFARE COUNCIL 2019-2020

According to Walter Annenberg "Many activities and team play participation will give you a training that will prove invaluable later on in life".

A pleasant morning to you all. I Lerisa of 2nd Arts deem it my priviledge to present before you the student report for the year 2019-2020.

The office bearers for the academic year 2019-2020 are: Shravya Pai from Science, A. Krishnaraj Hegde from Commerce and Lerisa D'Souza from the Arts stream.

The Inaugural Ceremony of Co-curricular and extra curricular activities for the year 2019-20 was held on the 13th of August, 2019. Vidhushi Manasi Sudheer inaugurated the cultural activities by lighting the lamp.

To begin with, the achievements of our students for the academic year 2019-2020 are as follows:

1) Our college students participated in the "Navarang 2019" held at Milagres College, Mangalore on 6th September 2019.
2) The 'Cooking without Fire' competition was held at Srinivasa College, Mangalore on 7th November in which Nisha Sheriff and Amritha of I PU won the 3rd Prize.
3) The PU Board District level competitions were held in the month of November.

   The following students won prizes in different competitions and have been selected to represent our college at the zonal level to be held in Chickmagalur this month:

   i) Adeline of I PU won the 2nd prize in the English Essay competition.
   ii) Anish of II PU won the 2nd prize in the mono acting competition.
   iii) Vivek Poojary of I PU won the 2nd place in the drawing competition.
   iv) Nandana of II PU and Rajath Adiga of I PU won the 3rd place in the 'Bhakthigeethe' competition.
   v) Vidmahi of I PU won the 3rd place in the mono acting competition.
4) Sumanth S. Karanth of I PU and Salwan Ibrahim of I PU won the 3rd prize in the LIC Insurance week quiz.
5) Our students represented our college at the 'Nitte Ashwamedha' of which the result are as follows:

   i) In the Icebreaker's competition, our college group which consisted of the following participants:

      Anagha of II S3, Chethan of II S3, Shannon of II S1, Vidmahi of I PU Arts, Sumanth of II S1, Sohan of I S2, Damodar of II S5, Sanjana of II C2, Sunil of II S1, have bagged the 1st place.
   ii) In the 'Cyber quest' competition Damodar of II S5 won the 1st place.
   iii) In the quiz competition A. Krishnaraj Hegde and Anantha Krishna from II C1 won the 2nd place.

   Our college students won the 'runners-up' in the competitions held at Nitte in the month of September.
6) The results of the competitions held at Aloysius College are as follows:

   i) Varshini of II S3 and Sanjana of II S5 won the 1st place in rangoli competition.
   ii) In the 'Icebreakers' competitions, our college group won the 2nd place.
   iii) Our group consisting of the following participants: Damodar of II S5,

02 Pg_001-034 TY200028

Shravya Pai from II S1, Suraj from II S3, won the 2nd place at the Interactive Chemistry.

iv) Shravya from II S1 won the 2nd place in the seminar competition.

7) Our college participants Veeresh Rao H. and M. Rohan Pai from II C2 won the 1st place and S. Harshavardhan from II S4 and Anish from II S5 won the 2nd place in the 'Rural IT' quiz competition.

8) The Taluk level competitions conducted at the Government PU College, Udupi of which the results are as follows:

   i) Pallavi Kodagu of I PU won the 2nd place in the English essay competition.

   ii) Simran Sheikh and Vidmahi of I PU won the 3rd place in the quiz competition.

   iii) Thejaswi U. Poojary of I PU won the 3rd place in the Kannada essay competition.

   Competitions were conducted on election awareness and Systematic Voter's Electrol and Educational Programme (the SVEEP). The Competitions aimed to create election awareness among the young generation.

9) The Sports field: The Achievements are as follows:

   i) Our college volleyball group emerged winners at the Taluk level.

   ii) The college table tennis group emerged as the District level winners and were runners at the State level.

   iii) The boys basketball team was the runners at the District level.

   iv) The girls basketball team emerged winners at the District level.

10) In the Athletics:

   i) Nidhi M. Shetty of I Arts won the 1st place at the District level Javelin throw competition and she won the 2nd place in the State level tournament. She has also participated in the National level athletics. i.e. Javelin throw held at Punjab.

   ii) Sahana of I Arts won the 2nd place in shotput at the District level competition.

   iii) Khalid Abdullah of II PU won the 3rd place at the District level pole vault competition.

The State level participation by our College students in athletics is a follows:

1) Nidhi M. Shetty and Sahana from I PU.
2) Srajan and Rithesh of I PU have participated in the Table tennis Tournament.
3) Danish of II C2 has participated in the Volleyball Tournament.
4) Abdul Hannan of II S5 has participated in the Football Tournament.
5) Khalid of II PU has participated in Kabaddi.
6) Navneet, Manvit from II PU and Lanceler of I PU have participated in the Basketball Tournament.

The girls basketball team consisted of the following participants:

Prathvi, Deepthi, Prassidhi, Prajna and Madhusmitha from 2nd PU & Vindhya from I PU.

Vidmahi of I PU Arts won the 1st place at the District level Karate competition. She has also participated at the State level.

In the Throwball and Chess competitions, Sahana from I PU Arts and Ananya Shetty of II PU have participated respectively.

Prajwal of I PU has been selected to participate at the State level jump rope.

In the Annual Sports Day:

The individual championship among the boys has been bagged by Abdul Hanan, Vishal from II PU.

The individual championship among the girls has been bagged by Nidhi M. Shetty from I PU.

These were the various competitions in which our college students have participated.

We congratulate all our college participants and prize winners on their commendable achievements.

02 Pg_001-034 TY200028

ಕನ್ನಡ ವಿಭಾಗ

ಉಂಡಾರಿನ ಶ್ರೀವಿಷ್ಣುಮೂರ್ತಿ

✍ **ಅಕ್ಷತಾ ನಾಯಕ್,** ಪ್ರಥಮ ಪಿ.ಯು.ಸಿ.

ಉಡುಪಿಯಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಶಂಕರಪುರದ ಹತ್ತಿರದ ಗ್ರಾಮವೇ ಇನ್ನಂಜೆ. ಇಲ್ಲಿನ ಪ್ರಸಿದ್ಧ ದೇವಾಲಯ ಉಂಡಾರು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಇನ್ನಂಜೆ. ಉಂಡಾರು ಈ ಊರಿನ ಹೆಸರಿನ ಹಿಂದೆ ಒಂದು ಐತಿಹ್ಯವಿದೆ. ಅದೇನೆಂದರೆ...

ವಿಷ್ಣುಮೂರ್ತಿ ದೇವಾಲಯದ ಅರ್ಚಕರು ಒಂದು ದಿನ ಬೇರೊಂದು ಊರಿಗೆ ಯಾತ್ರೆಗೆ ಹೋಗುವುದಾಗಿ ನಿರ್ಧರಿಸಿದರು. ಜೊತೆಗೆ ತನ್ನ ಮಡದಿಯನ್ನೂ ಕರೆದುಕೊಂಡು ಹೋಗುವುದಾಗಿ ಯೋಚಿಸಿದರು. ಅರ್ಚಕರು ಯಾತ್ರೆಗೆ ಹೋದರೆ ದೇವಸ್ಥಾನದಲ್ಲಿ ದೇವರಿಗೆ ನೈವೇದ್ಯ ಮಾಡಲು ಯಾರೂ ಇಲ್ಲದ ಕಾರಣ... ಬ್ರಹ್ಮಚಾರಿಯಾದಂತಹ ತನ್ನ ಮಗನಲ್ಲಿ ನೈವೇದ್ಯ ಮಾಡಲು ಹೇಳಿ ನೈವೇದ್ಯ ಮಾಡುವ ರೀತಿಯನ್ನು ಹೇಳಿಕೊಟ್ಟರು. ಅದನ್ನು ಚೆನ್ನಾಗಿ ಅರ್ಥೈಸಿಕೊಂಡ ವಟುವು ನೈವೇದ್ಯ ಮಾಡಲು ಒಪ್ಪುವನು. ಆತನು ತುಂಬಾ ಮುಗ್ಧನಾಗಿದ್ದನು. ಬೆಳ್ಳಗಿರುವುದೆಲ್ಲಾ ಹಾಲೆಂದೇ ನಂಬುತ್ತಿದ್ದನು. ಹಾಗಿರುವಾಗ ನೈವೇದ್ಯ ಎಂದಾಗ ವಟುವಿನಲ್ಲಿ ಮೂಡಿದ ಭಾವನೆಯೆಂದರೆ ''ದೇವರೇ ನಮ್ಮೆದುರು ಪ್ರತ್ಯಕ್ಷರಾಗಿ ನಾವು ಇಟ್ಟ ನೈವೇದ್ಯ ಸ್ವೀಕರಿಸುವನು'' ಎಂದು. ಆಗ ವಟುವು ತಕ್ಷಣ ಅರ್ಚಕರ ಬಳಿ ಹೋಗಿ ನೈವೇದ್ಯ ಸ್ವೀಕರಿಸಲು ದೇವರು ಬರುವನೋ? ಎಂದು ಪ್ರಶ್ನೆಯನ್ನು ಕೇಳುವನು. ಅದಕ್ಕೆ ಅರ್ಚಕರು ತಮಾಷೆಗೆ 'ಹೌದಪ್ಪ... ದೇವರು ಬರುವನು' ಎಂದು ಉತ್ತರಿಸಿದರು. ''ದೇವರು ಬರುವನು'' ಎಂಬ ಅರ್ಚಕರ ಉತ್ತರವು ವಟುವಿನ ಮನಸ್ಸಿನಲ್ಲಿ ಗಾಢವಾಗಿ ಬೇರೂರಿತು. ತಕ್ಷಣವೇ ಅರ್ಚಕರು ಕೈಗೊಂಡ ಯಾತ್ರೆ ಆರಂಭಿಸುವರು.

ಸಮಯ ಕಳೆಯಿತು ಮಧ್ಯಾಹ್ನದ ನೈವೇದ್ಯದ ಸಮಯ ವಾಯಿತು. ವಟುವು ಸ್ನಾನಾಭ್ಯಂಗವನ್ನು ಮಾಡಿ ನೈವೇದ್ಯವನ್ನು ಶ್ರದ್ಧಾಭಕ್ತಿಯಿಂದ ತಯಾರಿಸಿ ''ಶ್ರೀ ವಿಷ್ಣುಮೂರ್ತಿ'' ದೇವರ ಮೂರ್ತಿಯ ಎದುರು ತಂದಿಟ್ಟು ಮನಸಾರೆ ಭಕ್ತಿಯಿಂದ ಪ್ರಾರ್ಥಿಸುವನು. ಸ್ವಲ್ಪ ಹೊತ್ತಿನಲ್ಲಿ ಕಣ್ತೆರೆದು ನೋಡಿದಾಗ ನೈವೇದ್ಯವು ಖಾಲಿಯಾಗದೆ ಹಾಗೆಯೇ ಉಳಿದಿತ್ತು. ಇದು ವಟುವನ್ನು ಬೇಸರಗೊಳಿಸುತ್ತದೆ. ಬೇಸರಗೊಂಡ ವಟುವು

ದೇವರಲ್ಲಿ ''ನಾನೆಂದರೆ ನಿನಗೆ ಇಷ್ಟವಿಲ್ಲವೇ? ನನ್ನಿಂದ ಏನಾದರು ತಪ್ಪಾಗಿದೆಯೇ?'' ಇಂತಹ ಅಸಮಾಧಾನಕರ ಪ್ರಶ್ನೆಯನ್ನು ಕೇಳುವನು.

ಅನಂತರ ತನ್ನನ್ನು ತಾನು ಸಮಾಧಾನಪಡಿಸಿಕೊಂಡು ದೇವರಿಗೆ ನೈವೇದ್ಯದೊಂದಿಗೆ ಬೇಯಿಸಿ ಉಪ್ಪಿನಲ್ಲಿ ಹಾಕಿದ ಮಾವಿನಕಾಯಿ ಬೇಕೋ ಏನೋ? ಎಂದು ಎಣಿಸಿ ತನ್ನ ಮನೆಯಲ್ಲಿದ್ದ ಮಾವಿನಕಾಯಿ ತಂದು ನೈವೇದ್ಯದೊಂದಿಗೆ ಇರಿಸಿ ಶ್ರದ್ಧಾ ಭಕ್ತಿಯಿಂದ ಕೂಡಿದ ತನ್ನ ಪ್ರಾರ್ಥನೆಯನ್ನು ದೇವರಿಗೆ ಅರ್ಪಿಸುವನು ಆದರೂ ದೇವರು ಬಾರದ ಕಾರಣ ತುಂಬಾ ದುಃಖಿತನಾಗಿ ತನ್ನನ್ನು ತಾನು ಶಿಕ್ಷಿಸಿಕೊಳ್ಳಲು ನಿರ್ಧರಿಸುವನು.

ಶಿಕ್ಷಿಸಿಕೊಳ್ಳಲು ಅಲ್ಲಿ ಏನೂ ಸಿಗದ ಕಾರಣ ಅಲ್ಲಿಯೇ ಇದ್ದಂತಹ ಶ್ರೀ ವಿಷ್ಣುಮೂರ್ತಿ ದೇವರ ವಿಗ್ರಹಕ್ಕೆ ತನ್ನ ತಲೆಯನ್ನು ಜಜ್ಜುತ್ತಾನೆ. ರಕ್ತವು ಬರಲಾರಂಭಿಸುತ್ತದೆ... ತಕ್ಷಣವೇ ಎಲ್ಲಿಂದಲೋ ಅಶರೀರವಾಣಿ

03 Pg_035-110 TY200028

ಕೇಳಿ ಬರುತ್ತದೆ. ಏನಿರಬಹುದು ಎಂದು ತಲೆ ಎತ್ತಿ ನೋಡಿದಾಗ ವಿಷ್ಣುಮೂರ್ತಿ ದೇವರ ವಿಗ್ರಹದಿಂದ ''ಮಗೂ.... ನನಗೆ ನೀನು ನೀಡಿದ ನೈವೇದ್ಯವು ತುಂಬಾ ಇಷ್ಟವಾಗಿದೆ. ಮನಃಪೂರ್ವಕವಾಗಿ ಸ್ವೀಕರಿಸಿರುವೆ''.... ಎಂಬ ಮಾತು ಕೇಳಿಬರುತ್ತದೆ. ನನ್ನ ಭ್ರಮೆಯೋ ಏನೋ ಎಂದು ನೈವೇದ್ಯವನ್ನು ನೋಡಿದಾಗ ನೈವೇದ್ಯದ ಪಾತ್ರೆ ಅಲ್ಲಿ ಇರುವುದಿಲ್ಲ. ತನ್ನ ನೈವೇದ್ಯವನ್ನು ಸ್ವೀಕರಿಸಿದ್ದು ಶ್ರೀ ದೇವರೇ ಎಂದು ತಿಳಿದು ಸಂತುಷ್ಟನಾಗಿ ಮನೆ ಕಡೆ ತೆರಳುವನು.

ಯಾತ್ರೆ ಮುಗಿಸಿ ಮನೆಗೆ ಬಂದ ಅರ್ಚಕರು ತನ್ನ ಮಗನನ್ನು ಕರೆದು ನೈವೇದ್ಯ ಪಾತ್ರೆಯ ಬಗ್ಗೆ ವಿಚಾರಿಸಿದಾಗ ವಟುವು ಮುಗ್ಧನಾಗಿ ದೇವರು ಬಂದು ನೈವೇದ್ಯವನ್ನು ತೆಗೆದುಕೊಂಡು ಹೋದರು ಎಂದು ಹೇಳಿದನು. ಕೋಪಗೊಂಡ ಅರ್ಚಕರು ಸರಿಯಾಗಿ ವಿಚಾರಿಸಿದಾಗಲೂ ವಟುವು ಅದೇ ಉತ್ತರವನ್ನು ಹೇಳುವುದನ್ನು ನೋಡಿ ಮತ್ತಷ್ಟು ಕೋಪಗೊಂಡು ಬೆತ್ತದಿಂದ ಸರಿಯಾಗಿ ಹೊಡೆದರು.

ಅದೇ ರಾತ್ರಿ ಅರ್ಚಕರು ಮಲಗಿದ್ದಾಗ ಅವರಿಗೆ ಕನಸೊಂದು ಬಿತ್ತು. ಆ ಕನಸಿನಲ್ಲಿ ಸಾಕ್ಷಾತ್ ವಿಷ್ಣುಮೂರ್ತಿ ದೇವರೇ ಪ್ರತ್ಯಕ್ಷರಾಗಿ ''ನೀನು ಆ ಮುಗ್ಧ ವಟುವಿಗೆ ನೋಯಿಸಿ ನನ್ನ ಮನಸ್ಸನ್ನು ತುಂಬಾ ನೋಯಿಸಿದೆ. ನೀನೊಮ್ಮೆ ವಟುವಿನ ಉತ್ತರವನ್ನು ಪರಿಶೀಲಿಸ ಬೇಕಿತ್ತು. ವಟುವು ನೀಡಿದ ನೈವೇದ್ಯಕ್ಕೆ ಸಂತುಷ್ಟವಾಗಿ ನೈವೇದ್ಯದ ಪಾತ್ರೆಯನ್ನೇ ಸ್ವೀಕರಿಸಿರುವೆ. ನನ್ನನ್ನೂ ನಂಬಲು ಅಸಾಧ್ಯವಾದರೆ ದೇವಸ್ಥಾನದ ಎದುರಿನ ಕೊಳದಲ್ಲಿ ಪರಿಶೀಲಿಸು'' ಎಂದು ಹೇಳಿ ತಕ್ಷಣವೇ ದೇವರು ಅರ್ಚಕರ ಕನಸಿನಿಂದ ಹೊರಟುಹೋದರು. ಎಚ್ಚರವಾದ ಅರ್ಚಕರು ಕೊಳದ ಬಳಿ ಹೋಗಿ ನೋಡಿದಾಗ ನೈವೇದ್ಯ ಪಾತ್ರೆಯು ಒಂದು ಚೂರೂ ಕೊಳೆಯಾಗದೆ ಕೊಳದಲ್ಲಿ ಬಿದ್ದಿತ್ತು.

ಇನ್ನಂಜೆ ಎಂಬ ಗ್ರಾಮದಲ್ಲಿ ಇಂತಹ ಪವಾಡ ನಡೆದ ಅನಂತರದಿಂದ ಇನ್ನಂಜೆಯನ್ನು ದೇವರು ಉಂಡ ಊರು ''ಉಂಡಾರು'' ಎಂದು ಕರೆಯಲಾಯಿತು ಹಾಗೂ ಎಲ್ಲೆಡೆ ಪ್ರಸಿದ್ಧಿಯಾಯಿತು. ಇಂದಿಗೂ ದೀವಿಗೆ ಅಮಾವಾಸ್ಯೆ (ಆಟಿ ಅಮಾವಾಸ್ಯೆ)ಯ ದಿನ ಅಂದು ವಟುವು ದೇವರಿಗೆ ನೈವೇದ್ಯವಾಗಿ ನೀಡಿದಂತಹ ಬೇಯಿಸಿ ಉಪ್ಪಿಗೆ ಹಾಕಿದ ಮಾವಿನಕಾಯಿ ಸಹಿತ ನೈವೇದ್ಯವು ಅನ್ನಸಂತರ್ಪಣೆಯ ಪ್ರಸಾದದ ರೂಪದಲ್ಲಿ ಭಕ್ತಾಭಿಮಾನಿಗಳಿಗೆ ಸೇರಲಿರುವುದು.

ಕವನಗಳು

ತಿನ್ನಲು ಊಟವೇ ಇಲ್ಲದ ಪರಿಸ್ಥಿತಿಯಿಂದ
ಶುರುವಾಗಿ
ತಿನ್ನಲು ಸಮಯವೇ ಇಲ್ಲದ ಪರಿಸ್ಥಿತಿಗೆ
ಬಂದು ನಿಲ್ಲುವುದೇ
ಮನುಷ್ಯನ ನಿಜವಾದ ಜೀವನ.

* * *

ಗುಡಿಗೆ ಗೋಪುರ ಚೆಂದ
ಗಿಡಕ್ಕೆ ಹೂ ಚೆಂದ
ಮನೆಗೆ ಮಗ ಚೆಂದ
ನನಗೆ ನನ್ನ ತಾಯಿ ತಂದೆ ಚೆಂದ.

ಮೈಲಾರ, ಪ್ರಥಮ ಬಿ.ಎ.

(ಪ್ರವಾಸ ಕಥನ ಮತ್ತು ಸಂಗ್ರಹ)

ಮಠದ ಅಂಗಳದಲ್ಲಿ ಮಸೀದಿ

✍ **ಪ್ರಮೋದ್ ಆರ್. ನಾಯಕ್**, ದ್ವಿತೀಯ ಪಿ.ಯು.ಸಿ.

ಯಾವುದೇ ಧರ್ಮವಿರಲಿ, ಸಂಪ್ರದಾಯವಿರಲಿ ಅವೆಲ್ಲವುಗಳ ಅಂತಿಮ ಗುರಿ ಮಾನವ ಕಲ್ಯಾಣ ಮತ್ತು ಆತ್ಮಸಾಕ್ಷಾತ್ಕಾರವೇ ಆಗಿದೆ. ಹಾಗಿದ್ದು ಕೂಡ ಈ ಪರಮಸತ್ಯವನ್ನು ಅರಿಯದೆ ಮತಾಂಧತೆಯ ಮಡುವಿನಲ್ಲಿ ಬಿದ್ದವರೇ ಹೆಚ್ಚು. ಆದರೆ ಈ ಮಾತಿಗೆ ಅಪವಾದ ಶಿರಹಟ್ಟಿಯ ಶ್ರೀ ಫಕೀರೇಶ್ವರ ಮಠ. ದೇಶದಲ್ಲೇ ಅಪರೂಪ ಎನಿಸುವ ಸಾಮರಸ್ಯದ ಹಲವು ಧಾರ್ಮಿಕ ಆಚರಣೆಗಳು ಇಂದಿಗೂ ಇಲ್ಲಿವೆ.

ಸಾಮಾನ್ಯವಾಗಿ ಭಾವೈಕ್ಯತೆ ಎಂಬುದು ಭಾಷಣಕ್ಕೆ, ಬರಹಕ್ಕೆ ಸೀಮಿತವಾಗಿರುತ್ತದೆ. ಆದರೆ ಗದಗ ಜಿಲ್ಲೆ ಶಿರಹಟ್ಟಿಯಲ್ಲಿರುವ ಶ್ರೀ ಫಕೀರೇಶ್ವರ ಮಠ ಈ ಮಾತಿಗೆ ಅಪವಾದ. ಸುದೀರ್ಘ ಪರಂಪರೆಯ ಮಠದ ಅಂಗಳದಲ್ಲೇ ಮಸೀದಿಯನ್ನು ನಿರ್ಮಾಣ ಮಾಡುವ ಮೂಲಕ ಸೌಹಾರ್ದ ಪರಂಪರೆಗೆ ಕಳಶವಿಟ್ಟಂತಾಗಿದೆ. 1927ರಲ್ಲಿ ಮೂರನೇ ಫಕೀರ ಶಿವಯೋಗಿಗಳು ಮಠದ ಅಂಗಳದಲ್ಲಿ ಮುಸ್ಲಿಂ ವಾಸ್ತುಶೈಲಿಯ ಬೃಹತ್ ಕಟ್ಟಡವನ್ನು ಕಟ್ಟಿದ್ದು, ಸ್ಥಳೀಯರು ಇದನ್ನು ನಗಾರಿಖಾನೆ ಎಂದು ಕರೆಯುತ್ತಾರೆ. ಕರ್ತೃ ಜಗದ್ಗುರು ಫಕೀರೇಶ್ವರರ ಗದ್ದುಗೆಯ ಎದುರಿಗೆ ನಿರ್ಮಾಣಗೊಂಡಿರುವ ಈ ಕಟ್ಟಡದ ಮೇಲೆ ಕಲ್ಲಿನ 8 ಮಿನಾರ್‌ಗಳಿದ್ದು, ಅವುಗಳಲ್ಲಿ ಹಿಂದೂ-ಮುಸ್ಲಿಂ ಧರ್ಮದ ಲಾಂಛನಗಳಿವೆ.

ನಾಲ್ಕು ಶತಮಾನಗಳಿಂದ ಅರ್ಧಕ್ಕೇ ನಿಂತಿದ್ದ ಕರ್ತೃ ಶ್ರೀ ಫಕೀರೇಶ್ವರರ ಗದ್ದುಗೆಯ ಕಾಮಗಾರಿಯನ್ನು ಪ್ರಸ್ತುತ ಪೀಠಾಧಿಪತಿಗಳಾದ ಜಗದ್ಗುರು ಫಕೀರ ಸಿದ್ಧರಾಮ ಸ್ವಾಮಿಗಳು ಪೂರ್ಣಗೊಳಿಸಿದ್ದಾರೆ. ಗದ್ದುಗೆ ಕಟ್ಟಡದ ಮೇಲೆ ಮುಸ್ಲಿಂ ಧರ್ಮ ಸಂಖ್ಯೆ 786, ಮೆಕ್ಕಾ-ಮದೀನ ಹಾಗೂ ಹಿಂದೂ ದೇವತೆಗಳಾದ ಶಿವ, ಪಾರ್ವತಿ, ನಂದಿ, ಗಣೇಶರ ಚಿತ್ರಗಳನ್ನು ಕೆತ್ತಿಸಿದ್ದಾರೆ. ನೂತನವಾಗಿ ನಿರ್ಮಿಸಿರುವ ಮಹಾದ್ವಾರದ ಮೇಲೂ ಮಿನಾರ್‌ಗಳನ್ನು ನಿರ್ಮಿಸಿದ್ದಾರೆ.

ಇಲ್ಲಿರುವ ಮಸೀದಿಯಲ್ಲಿ ಪ್ರತಿದಿನ ನಗಾರಿ, ಟಕೂರಿ, ತಾಳ, ಕರಣಿ, ಸನಾದಿ ಹೀಗೆ ಪಂಚವಾದ್ಯಗಳನ್ನು ನುಡಿಸಲಾಗುತ್ತದೆ. ವರ್ಷಕ್ಕೊಮ್ಮೆ ಉರೂಸ್ ಆಚರಣೆ ವೇಳೆ ಜಾತಿ, ಮತ, ಪಂಥವೆಂಬ ಭೇದವಿಲ್ಲದೆ ಸರ್ವಧರ್ಮೀಯರೂ ಬಂದು ಸಕ್ಕರೆಯನ್ನು ಅರ್ಪಿಸುತ್ತಾರೆ. ಈ ಮಸೀದಿಯಲ್ಲಿ ಕುಳಿತು ಫಕೀರೇಶ್ವರರಿಗೆ ಅರ್ಪಿಸುವ ನಾದವನ್ನು ಕೇಳಿದರೆ; ಭೂತ ಚೇಷ್ಟೆಗಳಿಂದ ಬಳಲುತ್ತಿರುವವರ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ನಂಬಿಕೆಯಿದೆ. ಸಮಸ್ಯೆಯಿಂದ ಮುಕ್ತಿ ಹೊಂದಿದವರು ನಿತ್ಯ ಇಲ್ಲಿಗೆ ಬಂದು ಸಕ್ಕರೆಯನ್ನು ಅರ್ಪಿಸಿ ಹರಕೆ ಸಲ್ಲಿಸುತ್ತಾರೆ.

ಫಕೀರೇಶ್ವರ ಸ್ವಾಮಿಗಳ ಪವಾಡ

16ನೇ ಶತಮಾನದಲ್ಲಿದ್ದ ಶ್ರೀ ಫಕೀರೇಶ್ವರರ ಜನ್ಮಸ್ಥಳ ವಿಜಯಪುರ. ಮಕ್ಕಳಿಲ್ಲದೆ ಪರಿತಪಿಸುತ್ತಿದ್ದ ಅಲ್ಲಿನ ಶಿವಯ್ಯ - ಗೌರಮ್ಮ ದಂಪತಿಗೆ ವಿಜಯಪುರದ ಪ್ರಸಿದ್ಧ ಖಾಜಾ ಅಮೀನರ ಅನುಗ್ರಹದಿಂದಾಗಿ 4 ಗಂಡು ಮಕ್ಕಳು ಜನಿಸಿದರು. ಖಾಜಾ ಅಮೀನರು ಮೊದಲ ಮಗು ತಮಗೆ ನೀಡಬೇಕೆಂದು ಹೇಳಿದ್ದರೂ ಪುತ್ರ ವ್ಯಾಮೋಹದಿಂದ ಮಗುವನ್ನು ನೀಡಲ್ಲ. ಹೀಗಿರುವಾಗ ಹಿರಿಯ ಮಗ ಚನ್ನವೀರನಿಗೆ ಭಯಂಕರ ಜ್ವರ ಬಂದು ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ. ಆ ಪರಿಸ್ಥಿತಿಯಲ್ಲಿ ಮಗನನ್ನು ಖಾಜಾ ಅಮೀನರಿಗೆ ಒಪ್ಪಿಸಿದರು.

ಖಾಜಾ ಅವರ ಕೃಪೆಯಿಂದ ಉಳಿದ ಆ ಮಗು ಮುಂದೆ ಅಮೀನರ ಜೊತೆಯೇ ಬೆಳೆಯಿತು. ಹಿಂದೂ-ಮುಸ್ಲಿಂ ಎರಡೂ ತತ್ವಗಳನ್ನು ಅರಗಿಸಿಕೊಂಡು ಬ್ರಹ್ಮಾನಂದರೆಂದು ಕರೆಸಿಕೊಳ್ಳುತ್ತಿದ್ದ ಖಾಜಾರಿಂದ ಫಕೀರ ಚನ್ನವೀರರು ಆಧ್ಯಾತ್ಮ, ತತ್ವಗಳನ್ನು ತಿಳಿದುಕೊಂಡರು. ಒಮ್ಮೆ ದರ್ಗಾಕ್ಕೆ ವಿಜಯಪುರದ ಸುಲ್ತಾನ ಆದಿಲ್‌ಶಾ ಭೇಟಿ ನೀಡಿದಾಗ; ಚನ್ನವೀರ ಅನ್ಯಧರ್ಮೀಯ ಬಾಲಕನೆಂದು ತಿಳಿದು ಅಗೌರವ ತೋರಿದ. ಆಗ ಖಾಜಾ ಅಮೀನರು ಶಿಷ್ಯನನ್ನು ಕರೆದು ನೀರಿನ ಮೇಲೆ ಜಮಖಾನವನ್ನು ಹಾಸಲು ಹೇಳಿ, ಗುರು-ಶಿಷ್ಯರಿಬ್ಬರೂ ಅದರ ಮೇಲೆ ನಿಂತು ನಮಾಜ್ ಮಾಡಿದರು. ಇದರಿಂದ ಅಚ್ಚರಿಗೊಂಡ ಆದಿಲ್‌ಶಾ ಮತ್ತು ಅವನ ವಂಶಸ್ಥರು ಫಕೀರ ಪರಂಪರೆಗೆ ಶರಣಾಗಿ ಸಾಕಷ್ಟು ದಾನದತ್ತಿಗಳನ್ನು ನೀಡಿದ್ದರು.

ಬೆಳೆದು ದೊಡ್ಡವನಾದ ಫಕೀರನಿಗೆ ಗುರು ಖಾಜಾ ಅಮೀನರು, ''ನೀನಿನ್ನು ಲೋಕಸಂಚಾರಕ್ಕೆ ಹೊರಡು, ನಾವು ಈ ದೇಹವನ್ನು ಬಿಟ್ಟು ಮುಂದೆ ಗೋನಾಳದಲ್ಲಿ ಮೌನೇಶ್ವರ ಶರಣರಾಗಿ ಹುಟ್ಟಿ ನಿನ್ನನ್ನು ಶಿರಹಟ್ಟಿಯಲ್ಲಿ ಭೇಟಿಯಾಗುತ್ತೇವೆ'' ಎಂದರು. ಅದರಂತೆ ಲೋಕಸಂಚಾರ ಮಾಡುತ್ತಾ ಹೊರಟ ಫಕೀರೇಶ್ವರರು ಚಿತ್ರದುರ್ಗದ ಮುರುಘಾ ಮಠಕ್ಕೆ ಬಂದು ಕೆಲವು ಕಾಲ ಅಲ್ಲಿದ್ದು, ವಿವಿಧೆಡೆಗಳಲ್ಲಿ ಹಲವು ಪವಾಡಗಳನ್ನು ಮಾಡುತ್ತಾ ಶಿರಹಟ್ಟಿಗೆ ಬಂದು ಅಲ್ಲಿ ಮಠವನ್ನು ನಿರ್ಮಿಸಿ ಅಲ್ಲಿಯೇ ಐಕ್ಯರಾದರು.

03 Pg_035-110 TY200028

ಶತಮಾನಗಳ ಐತಿಹಾಸ ಹೊಂದಿರುವ ಶಿರಹಟ್ಟಿ ಸಂಸ್ಥಾನ ಮಠದ ಪರಂಪರೆಯಲ್ಲಿ ಇಲ್ಲಿಯವರೆಗೆ ಹನ್ನೆರಡು ಪೀಠಾಧಿಪತಿಗಳು ಆಗಿಹೋಗಿದ್ದು, ಸದ್ಯ 13ನೇ ಪೀಠಾಧಿಪತಿಗಳಾಗಿ ಜಗದ್ಗುರು ಫಕೀರ ಸಿದ್ಧರಾಮ ಮಹಾಸ್ವಾಮಿಗಳಿದ್ದಾರೆ.

ಹೆಚ್ಚಿನ ಮಠಗಳಿಗೆ ಇರುವಂತೆ ಶಿರಹಟ್ಟಿ ಮಠಕ್ಕೆ ಕೂಡ 50ಕ್ಕೂ ಹೆಚ್ಚು ಶಾಖಾ ಮಠಗಳಿವೆ. ಅಚ್ಚರಿ ಎಂದರೆ ಶಾಖಾ ಮಸೀದಿಗಳೂ ಇವೆ. ಶಿರಹಟ್ಟಿ ಮೂಲಮಠ, ಸಂಶಿ ಮತ್ತು ಸವದತ್ತಿಯಲ್ಲಿ ಮಠದ ಆವರಣದಲ್ಲಿಯೇ ಮಸೀದಿಗಳಿವೆ. ಧಾರವಾಡದ ಉಳ್ಳಾಗಡ್ಡಿ ಓಣಿಯಲ್ಲಿರುವ ಪ್ರಸಿದ್ಧ ಫಕೀರೇಶ್ವರ ಮಠವು ಫಕೀರೇಶ್ವರ ದರ್ಗಾ ಎಂದೇ ಜನಜನಿತವಾಗಿದ್ದು, ಇಲ್ಲಿ ಎರಡೂ ಕೋಮಿನವರು ಪೂಜೆ ಮಾಡುತ್ತಾರೆ. ದರ್ಗಾದಲ್ಲಿ 3 ಮುಸ್ಲಿಂ ಪಂಜಾಗಳಿವೆ. ಅವುಗಳಿಗೆ ಲಿಂಗವುಳ್ಳ ಗುಂಡಗಡಿಗೆ, ರುದ್ರಾಕ್ಷಿಮಾಲೆ ಹಾಕಿ ಭಸ್ಮ, ಗಂಧ ಲೇಪನ ಮಾಡಿ ಕಾಯಿ, ಸಕ್ಕರೆ ನೈವೇದ್ಯ ಮಾಡುತ್ತಾರೆ. ಶಾಖಾ ಮಸೀದಿಯ ಮುಲ್ಲಾಗಳಾಗುವವರು ಶಿರಹಟ್ಟಿಯ ಜಗದ್ಗುರುಗಳಿಂದ ವಸ್ತ್ರ, ಕರಡಿಗೆ, ರುದ್ರಾಕ್ಷಿ ಮಾಲೆಗಳನ್ನು ಪಡೆದು ಧರಿಸುತ್ತಾರೆ. ಎಲ್ಲಾ ಶಾಖಾ ಮಠ ಮತ್ತು ಮಸೀದಿಗಳಲ್ಲಿ ಉರೂಸ್, ಮೊಹರಂ ಸೇರಿದಂತೆ ಎರಡೂ ಸಂಪ್ರದಾಯದ ಹಬ್ಬ, ಜಾತ್ರೆಗಳನ್ನೂ ಆಚರಿಸಲಾಗುತ್ತದೆ.

ಶಿರಹಟ್ಟಿ ಜಗದ್ಗುರುಗಳ ವಸ್ತ್ರ ಮತ್ತು ಆಭರಣಗಳೂ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಶೈಲಿಯಲ್ಲಿವೆ. ನೂತನ ಗುರುಗಳ ಪಟ್ಟಾಧಿಕಾರ ಮತ್ತು ಗುರುಗಳು ಲಿಂಗೈಕ್ಯರಾದಾಗ ವಿಜಯಪುರ ದರ್ಗಾದ ಖಾಜಾಗಳು ಬಂದು ಪಾರ್ಥಿವ ಶರೀರದ ಮುಂದೆ ನಮಾಜ್ ಮಾಡಿ ತಮ್ಮ ಸಂಪ್ರದಾಯದಂತೆ ವಿಧಿವಿಧಾನಗಳನ್ನು ನಡೆಸಿದ ನಂತರ ವೀರಶೈವ ಧರ್ಮದ ವಿಧಿವಿಧಾನಗಳೊಂದಿಗೆ ಅಂತ್ಯಸಂಸ್ಕಾರ ನಡೆಯುತ್ತದೆ. ●

ಮನಸ್ಸು ಮೌನದಲ್ಲಿ

ಮರೆಯದೇ ಮರೆತು ಹೋಗಿರುವೆ
ಮಳೆಯಲಿ ಒಂಟಿಯಾಗಿ ನೆನೆಯುವೆ
ಮರೆಯುವ ಮನಸು ಮರುಕಾಡಿದೆ
ಮನಸ್ಸಿನ ಭಾವನೆಗಳು ಮರೆಯುತ್ತಿವೆ

ಮುದ್ದು ಮುಖವು ಕಾಡುತಿದೆ ಮನದಲ್ಲಿ
ಮರೆಯದೇ ಮುದ್ದಿಸು ಮನದಂಗಳದಲ್ಲಿ
ಮುದುರಿಟ್ಟ ಆಸೆಗಳು ಉಳಿದಿವೆ ಮನದಲ್ಲಿ
ಮಧುರ ಮಾತುಗಳಾಡುವ ಮನಸು ಮೌನದಲ್ಲಿ

ಮುಗುಳುನಗೆ ತುಂಬಿರುವ ಮುದ್ದು ಮುಖವು
ಮಾತುಗಳೇ ಮರೆತು ಹೋಗಿವೆ.
ಕನಸುಗಳೇ ಕಣ್ಮರೆಯಾಗಿ ಉಳಿದಿವೆ
ಮೌನವೇ ಮಾತಾಗಿ ಉಳಿದಿದೆ ಮನದಲ್ಲಿ.

ಸದಾಶಿವ ಬಿ. ಎನ್., ದ್ವಿತೀಯ ಬಿ.ಎ.

03 Pg_035-110 TY200028

ಮಕರ ಸಂಕ್ರಾಂತಿ

✍ **ಅದಿತಿ ಎನ್. ಪ್ರಭು,** ತೃತೀಯ ಬಿ.ಸಿ.ಎ.

ಸಂಕ್ರಾಂತಿ ಸೂರ್ಯಾರಾಧನೆಯ ಹಬ್ಬವಾಗಿದೆ. ಮಕರ ಸಂಕ್ರಾಂತಿ ಪ್ರಸಿದ್ಧವಾಗಿರುವ ಸುಗ್ಗಿಯ ಕಾಲದ ಹಬ್ಬ, ಪೈರು ತೆಗೆಯುವ ಸಂದರ್ಭದಲ್ಲಿ ಆಚರಿಸಲಾಗುವ ಸಂಕ್ರಾಂತಿ ಹಬ್ಬ ಸಮೃದ್ಧಿಯ ಸಂಕೇತ. ಸಂಕ್ರಾಂತಿಯನ್ನು ಧಾರ್ಮಿಕ ತತ್ವಗಳಿಂದ ಸ್ವತಂತ್ರವಾಗಿ ಆಚರಿಸಲಾಗುತ್ತದೆಯಾದರೂ ವೇದಾಂಗ ಜ್ಯೋತಿಷ್ಯ ಶಾಸ್ತ್ರದ ತಳಹದಿ ಹೊಂದಿರುವುದರಿಂದ ಮುಖ್ಯವಾಗಿ ಹಿಂದೂ ಧರ್ಮದವರಿಂದ ಆಚರಿಸಲ್ಪಡುತ್ತದೆ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳ ಮುಖ್ಯ ಹಬ್ಬಗಳಲ್ಲಿ ಸಂಕ್ರಾಂತಿಯೂ ಒಂದು.

ಕರ್ನಾಟಕದಲ್ಲಿ ಸಂಕ್ರಾಂತಿಗೆ ಸಂಬಂಧಪಟ್ಟ ಆಚರಣೆಗಳಲ್ಲಿ ಮುಖ್ಯವಾಗಿ ಕಂಡುಬರುವುದು ''ಎಳ್ಳುಬೆಲ್ಲ''. ಮನೆಗಳಲ್ಲಿ ಎಳ್ಳುಬೆಲ್ಲವನ್ನು ತಯಾರಿಸಿ ಸುತ್ತಮುತ್ತಲಿನ ಮನೆಗಳಿಗೆ ಹಂಚುವುದು ಸಂಕ್ರಾಂತಿಯ ಸಂಪ್ರದಾಯ. ರೈತರಿಗೆ ಇದು ಸುಗ್ಗಿಯ ಹಬ್ಬ. ಎಳ್ಳಿನ ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು ಮತ್ತು ಕಬ್ಬಿನ ತುಂಡುಗಳನ್ನು ಸಹ ಹಂಚುವ ಕ್ರಮವಿದೆ. ಕಬ್ಬು ಈ ಭಾಗಗಳಲ್ಲಿ ಪ್ರಧಾನ ಏಕೆಂದರೆ ಇದು ಹಬ್ಬದ ಋತುವಿನ ಸುಗ್ಗಿಯನ್ನು ಸೂಚಿಸುತ್ತದೆ. ದನಕರುಗಳ ಮೈತೊಳೆದು ಸಿಂಗರಿಸುವುದು ಮತ್ತು ಮೆರವಣಿಗೆ ಮಾಡುವುದು ಇನ್ನೊಂದು ಧಾರ್ಮಿಕ ಪದ್ಧತಿಯಾಗಿದೆ. ಅವುಗಳನ್ನು ''ಕಿಚ್ಚು ಹಾಯಿಸುವುದು'' ಹಳ್ಳಿಗಳಲ್ಲಿ ಸಾಮಾನ್ಯವಾಗಿದೆ.

ತಮಿಳುನಾಡಿನಲ್ಲಿ ಈ ಹಬ್ಬವನ್ನು ''ಪೊಂಗಲ್'' ಎಂದು ಕರೆಯಲಾಗುತ್ತದೆ. ನಾಲ್ಕು ದಿನಗಳ ಕಾಲ ಹಬ್ಬವನ್ನು ಆಚರಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ''ಜಲ್ಲಿಕಟ್ಟು'' ಎಂಬ ಗೂಳಿಯನ್ನು ಪಳಗಿಸುವ ಆಟ ನಡೆಯುತ್ತದೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಸಂಕ್ರಾಂತಿಯ ದಿನದಂದು ಗಾಳಿಪಟಗಳನ್ನು ಹಾರಿಬಿಡುವ ಸಂಪ್ರದಾಯವುಂಟು.

ಒಂದು ವರ್ಷದಲ್ಲಿ 12 ಮಾಸಗಳು. ಅವುಗಳನ್ನು ಎರಡು ಭಾಗ ಮಾಡಿರುವರು – ಉತ್ತರಾಯಣ ಹಾಗೂ ದಕ್ಷಿಣಾಯನ ಎಂದು. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಯನ್ನು ಪ್ರವೇಶಿಸುವ ಸಂಧಿಕಾಲಕ್ಕೆ ಸಂಕ್ರಾಂತಿ ಅಥವಾ ಸಂಕ್ರಮಣ ಎಂದು ಹೆಸರು. ಸೂರ್ಯ ಧನಸ್ಸು ರಾಶಿಯಿಂದ ಮಕರ ರಾಶಿಗೆ ಸೇರುವ ಸಮಯವನ್ನು ಮಕರ ಸಂಕ್ರಾಂತಿ ಎನ್ನುತ್ತಾರೆ. ಸೂರ್ಯ ಪ್ರತಿ ವರ್ಷ ಜನವರಿ 14 ಅಥವಾ 15ರಂದು ಮಕರ ರಾಶಿಗೆ ಪ್ರವೇಶ ಮಾಡುತ್ತಾನೆ ಹಾಗೂ ಅನಂತರ ಆತನ ಪಥವು ಉತ್ತರಾಭಿಮುಖವಾಗಿ ಚಲಿಸಲು ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ಬೆಳಕು ಹೆಚ್ಚು ಇರುತ್ತದೆ. 6 ತಿಂಗಳುಗಳ ಕಾಲ ಉತ್ತರಾಯಣ ನಂತರ ಅಂದರೆ ಜೂನ್ 15ರ ನಂತರ ದಕ್ಷಿಣಾಯನ ಪ್ರಾರಂಭವಾಗುತ್ತದೆ.

ಉತ್ತರಾಯಣ ಪುಣ್ಯಕಾಲ: ಸಾಮಾನ್ಯವಾಗಿ ಪುಷ್ಯ ಮಾಸದಲ್ಲಿ ಬರುವ ಮಕರ ಸಂಕ್ರಾಂತಿಯನ್ನು ಉತ್ತರಾಯಣ ಪುಣ್ಯಕಾಲವೆಂದೂ ಕರೆಯುತ್ತಾರೆ. ಪುರಾಣ ಮತ್ತು ಜ್ಯೋತಿಷ್ಯದ ಪ್ರಕಾರ ಉತ್ತರಾಯಣದಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂದು ನಂಬಿಕೆಯಿದೆ. ಈ ಸಮಯದಲ್ಲಿ ಸತ್ತವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂಬ ನಂಬಿಕೆಯೂ ಇದೆ. ಶ್ರೀಕೃಷ್ಣನು ಗೀತೆಯಲ್ಲಿ ಉತ್ತರಾಯಣ ಅತೀ ಶ್ರೇಷ್ಠ ಎಂದು ಹೇಳಿರುವನು. ಭೀಷ್ಮ ಪಿತಾಮಹನು ಬಾಣಗಳ ಮಂಚದ ಮೇಲೆ ಮಲಗಿ ಯಾತನೆಯನ್ನು ಅನುಭವಿಸುತ್ತಿದ್ದರೂ ದಕ್ಷಿಣಾಯನದಲ್ಲಿ ತನ್ನ ದೇಹವನ್ನು ತ್ಯಜಿಸಲು ಒಪ್ಪದೆ ಉತ್ತರಾಯಣದ ಪುಣ್ಯಕಾಲದ ಅಷ್ಟಮಿ ದಿನ ಸಾವನ್ನು ಬರ ಮಾಡಿಕೊಳ್ಳುತ್ತಾನೆ. ಉತ್ತರಾಯಣ ದೇವತೆಗಳ ಕಾಲ, ದಕ್ಷಿಣಾಯನ ಪಿತೃಗಳ ಕಾಲವಾಗಿರುತ್ತದೆ. ಆದ್ದರಿಂದ ಯಜ್ಞ ಯಾಗಾದಿಗಳಿಗೆ, ಸಮಸ್ತ ದೇವತಾ ಶುಭಕಾರ್ಯಗಳಿಗೆ ಉತ್ತರಾಯಣ ಕಾಲ ಶ್ರೇಷ್ಠವಾಗಿದೆ.

ವೈಜ್ಞಾನಿಕ ರೀತಿಯಲ್ಲಿ ನೋಡಿದಾಗ ಸಂಕ್ರಾಂತಿಯ ಸಮಯದಲ್ಲಿ ಚಳಿ ಹೆಚ್ಚು ಇರುತ್ತದೆ. ಎಳ್ಳು ಸೇವನೆಯಿಂದ ದೇಹದ ಉಷ್ಣತೆ ಹೆಚ್ಚು ಆಗುತ್ತದೆ ಹಾಗೂ ಚರ್ಮದ ಕಾಂತಿಯೂ ಹೆಚ್ಚುತ್ತದೆ. ಈ ಹಬ್ಬವು ಅತ್ಯಂತ ಪ್ರಾಚೀನ ಕಾಲದಿಂದಲೂ ಆಚರಣೆಗೆ ಬಂದಿದೆ. ಶಿವ ಮತ್ತು ಪಾರ್ವತಿಯರು ಲೋಕ ಸಂಚಾರ ಪ್ರಾರಂಭಿಸುತ್ತಾರಂತೆ. ಈ ಸಂಕ್ರಮಣದ ಕಾಲದ ಗೋಧೂಳಿ ಲಗ್ನಕ್ಕಿಂತ ಹೆಚ್ಚು ಸಮಯ ಈ ಭೂಲೋಕದಲ್ಲಿರುತ್ತಾರೆ ಎಂದು ಪುರಾಣದಲ್ಲಿ ಇದೆ. ಈ ಪುಣ್ಯದಿನದಲ್ಲಿ ಹಲವಾರು ದೇವತೆಗಳಿಗೆ ಶಾಪ ವಿಮೋಚನೆ ಉಂಟಾಗಿದೆ. ಉದಾಹರಣೆಗೆ ಇಂದ್ರ ಮತ್ತು ಚಿತ್ರಸೇನ ಪ್ರತಿ ವರ್ಷ ಸಂಕ್ರಾಂತಿಯ ಹಬ್ಬದ ದಿನ ಸಂಜೆ ಶಬರಿಮಲೆಯಲ್ಲಿ ಅಯ್ಯಪ್ಪ ಸ್ವಾಮಿಯ ಜ್ಯೋತಿ ರೂಪದಲ್ಲಿ ದರ್ಶನ ನೀಡುತ್ತಾರೆ ಎಂಬ ನಂಬಿಕೆ ಇದೆ. ●

03 Pg_035-110 TY200028

ಬಾಗಲಕೋಟೆಯ ಸೊಬಗು

✍ **ಕುಮಾರ ಎಸ್. ಎಮ್.**, ಪ್ರಥಮ ಬಿ.ಎ.

ಬಾಗಲಕೋಟೆ ಇದು ಉತ್ತರ ಕರ್ನಾಟಕದಲ್ಲಿ ಬರುವಂತಹ ಒಂದು ಜಿಲ್ಲೆಯಾಗಿದೆ. ಇದು ಬೆಳಗಾವಿ, ಗದಗ, ಕೊಪ್ಪಳ, ರಾಯಚೂರು ಹಾಗೂ ಬಿಜಾಪುರ (ವಿಜಯಪುರ) ಇವುಗಳೊಂದಿಗೆ ತನ್ನ ಗಡಿಯನ್ನು ಹೊಂದಿದೆ. 1997ರಲ್ಲಿ ಕರ್ನಾಟಕ ಸರ್ಕಾರ ಬಾಗಲಕೋಟೆಯನ್ನು ಪ್ರತ್ಯೇಕ ಜಿಲ್ಲೆಯಾಗಿ ನೇಮಿಸಿತು. ಬಾಗಲಕೋಟೆ ಇದನ್ನು ಕೋಟೆ ನಾಡು ಹಾಗೂ ಚಾಲುಕ್ಯರ ನಾಡು ಎಂದು ಕರೆಯುತ್ತಾರೆ. ಈ ಜಿಲ್ಲೆಯಲ್ಲಿ ಹಲವಾರು ಪ್ರವಾಸಿ ತಾಣಗಳನ್ನು ನಾವು ಕಾಣಬಹುದು ಅವುಗಳು ಈ ಕೆಳಗಿನಂತಿವೆ.

1) ಬಾಗಲಕೋಟೆ :

ಚಾಲುಕ್ಯರ ಕಾಲದ ಶ್ರೀಮಂತರ ನಗರ ಎಂದು ಪ್ರಸಿದ್ಧಿ ಪಡೆದ ನಾಡು ಬಾಗಲಕೋಟೆ. ಶಿಲಾಶಾಸನಗಳ ಪ್ರಕಾರ ಮೊದಲು ಬಾಗಡಿಗೆ ಎಂದು ಕರೆಯಲಾಗುತ್ತಿತ್ತು. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ನಾಡು ಇಂದು ವ್ಯಾಪಾರ, ವಾಣಿಜ್ಯ, ಶಿಕ್ಷಣ, ಕೈಗಾರಿಕೆ ಹಾಗೂ ಪ್ರವಾಸೋದ್ಯಮಕ್ಕೆ ಪ್ರಮುಖ ಕೇಂದ್ರವಾಗಿ ನಿಂತಿದೆ. ಈ ನಗರದ ಹೃದಯ ಭಾಗದಲ್ಲಿ ಸಿಎಸ್ಐ (CSI) ಸಂತ ಪಾಲನ ದೇವಾಲಯ ಇದೆ. ಈ ದೇವಾಲಯದ ಕಟ್ಟಡವು ನೂತನವಾದರೂ ಇಲ್ಲಿ ಶತಮಾನಗಳಿಗಿಂತಲೂ ಮೊದಲೇ ಕ್ರೈಸ್ತ ಸಭೆ ಭಾಸೆಲ್ ಮಿಷನರಿಗಳಿಂದ ಪ್ರಾರಂಭವಾಗಿತ್ತು. ಈ ನಗರದಲ್ಲಿ ಒಂದು ಸುಂದರವಾದ ಕಲಾ ಸಂಗ್ರಹಾಲಯ ಇರುವುದನ್ನು ಸಹ ನಾವು ಕಾಣಬಹುದು. ಹಾಗೂ ಈ ನಗರವು ಸಿಮೆಂಟ್ ತಯಾರಿಸುವಲ್ಲಿ ಪ್ರಸಿದ್ಧಿಯನ್ನು ಹೊಂದಿದೆ.

2) ಬಾದಾಮಿ :

ಬಾದಾಮಿಯಲ್ಲಿ ಬರುವ ಪ್ರವಾಸಿ ತಾಣಗಳು ಗತಕಾಲದ ಇತಿಹಾಸವನ್ನು ನೆನಪಿಸುತ್ತವೆ. ಇಲ್ಲಿ ಗುಡ್ಡಗಳನ್ನು ಕೊರೆದು ನಿರ್ಮಿಸಿದ ಅಜಂತಾ ಗುಹೆಗಳು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತವೆ. ಹಾಗೆಯೇ ಈ ಗುಹಾಲಯಗಳು ವಿಶ್ವ ವಿಖ್ಯಾತವಾಗಿವೆ. ಈ ಗುಡ್ಡದ ಬುಡದಲ್ಲಿರುವ ಕೆರೆಯ ಪಶ್ಚಿಮ ತೀರದಲ್ಲಿ ಊರು ಹಬ್ಬಿದೆ. ಗುಡ್ಡದ ಮೇಲೆ ಕೋಟೆ ಚಾಲುಕ್ಯರ ಕಾಲದ ದೇವಾಲಯಗಳು ಹಾಗೂ ಕಟ್ಟಡಗಳನ್ನು ಕಾಣಬಹುದು ಹಾಗೂ ಕೆರೆಯ ಉತ್ತರದ ದಡದ ಮೇಲೆ ಬಂಡೆಯೊಂದರ ಮೇಲೆ ಕಪ್ಪೆ ಅರಭಟ್ಟನ ಶಾಸನವನ್ನು ಕಾಣಬಹುದು. ಅದರ ಹತ್ತಿರದಲ್ಲಿ ಇನ್ನೊಂದು ಬಂಡೆಯ ಮೇಲೆ, ಮುನ್ನಿದ್ದ ಶಾಸನವನ್ನು ಅಳಿಸಿ ಕೆತ್ತಲಾಗಿರುವ ಪಲ್ಲವರ ದೊರೆ ನರಸಿಂಹನ ಜಯ ಶಾಸನವನ್ನು ನಾವು ಬಾದಾಮಿಯಲ್ಲಿ ಕಾಣಬಹುದು.

3) ಐಹೊಳೆ :

ಐಹೊಳೆಯನ್ನು ಭಾರತೀಯ ಶಿಲ್ಪಕಲೆಯ ತೊಟ್ಟಿಲು ಎಂದು ಕರೆಯುತ್ತಾರೆ. ಇಲ್ಲಿ ಮಲಪ್ರಭಾ ನದೀ ತೀರದ ಮೇಲಿರುವ ಈ ಐಹೊಳೆಯು ಚಾಲುಕ್ಯರ ವಾಸ್ತುಶಿಲ್ಪದ ಒಂದು ದೊಡ್ಡ ಕೇಂದ್ರ ವಾಗಿದೆ. ಇಲ್ಲಿ ದುರ್ಗಾದೇವಿ ದೇವಾಲಯ ಅತ್ಯಂತ ಪ್ರಮುಖವಾಗಿದೆ. ಇದು ಮೂಲತಃ ಸೂರ್ಯದೇವಾಲಯವಾಗಿದೆ. ಹಾಗೂ ಇಲ್ಲಿನ ಇನ್ನಿತರ ದೇವಾಲಯಗಳೆಂದರೆ ಮೇಗುತಿ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಹುಚ್ಚುಮಲ್ಲಿ ದೇವಾಲಯ, ಹುಚ್ಚಪ್ಪಯ್ಯನ ಮಠ, ಕಂಚಿಗುಡಿ ಹಾಗೂ ಇನ್ನಿತರ ದೇವಾಲಯಗಳನ್ನು ಕಾಣಬಹುದು.

4) ಪಟ್ಟದಕಲ್ಲು :

ಇಲ್ಲಿನ ದೇವಸ್ಥಾನಗಳು ಶಿಲ್ಪಕಲೆಯ ವಿಶಿಷ್ಟತೆಯನ್ನು ಹೊಂದಿವೆ. ದಕ್ಷಿಣ ಭಾರತದ ದ್ರಾವಿಡ ಶೈಲಿ ಹಾಗೂ ಉತ್ತರ ಭಾರತದ ಆರ್ಯ ಶೈಲಿ ಎರಡನ್ನೂ ನಾವು ಇಲ್ಲಿ ಕಾಣಬಹುದು. ಇದು ಚಾಲುಕ್ಯ ವಂಶದ ರಾಜಧಾನಿಯಾಗಿತ್ತು. ಚಾಲುಕ್ಯ ವಂಶದ ಅರಸರು 7ರಿಂದ 8 ಶತಮಾನಗಳಲ್ಲಿ ಇಲ್ಲಿನ ದೇವಾಲಯಗಳನ್ನು ನಿರ್ಮಿಸಿದರು. ಇಲ್ಲಿ 9 ಪ್ರಮುಖ ದೇವಾಲಯಗಳಲ್ಲಿ ಒಂದು ಜೈನ ಬಸದಿ ಇದೆ. ಇದನ್ನು 1987ರಲ್ಲಿ ವಿಶ್ವಪರಂಪರೆಯ ತಾಣ ಎಂದು ಘೋಷಿಸಲಾಗಿದೆ.

5) ಕೂಡಲ ಸಂಗಮ :

ಕೂಡಲ ಸಂಗಮವು ಜಿಲ್ಲಾ ಕೇಂದ್ರವಾದ ಬಾಗಲಕೋಟೆಯಿಂದ 47 ಕಿ.ಮೀ. ದೂರದಲ್ಲಿದೆ. ಇಲ್ಲಿ ವಿಶ್ವಗುರು ಬಸವಣ್ಣನವರ ಐಕ್ಯ ಮಂಟಪದ ಸ್ಥಳವನ್ನು ಕಾಣಬಹುದು. ಕೂಡಲ ಸಂಗಮವು ಲಿಂಗಾಯತ ಪಂಗಡದವರಿಗೆ ಪ್ರಮುಖ ಪುಣ್ಯಕ್ಷೇತ್ರವಾಗಿದೆ ಹಾಗೂ ಲಿಂಗಾಯತ ಪಂಗಡದವರನ್ನು ಇಲ್ಲಿ ಹೆಚ್ಚಾಗಿ ಕಾಣಬಹುದು. ಬಸವಣ್ಣನವರು ಚಿಕ್ಕವಯಸ್ಸಿನಲ್ಲಿ ಇಲ್ಲಿಗೆ ಬಂದು ಈಶಾನ್ಯ ಗುರುಗಳೆಂದು ಖ್ಯಾತರಾಗಿರುವ ಪರಮಪೂಜ್ಯ ಜಾತವೇದ ಮುನಿಗಳಿಂದ ಶಿಕ್ಷಣವನ್ನು ಪಡೆದರು. ಇಲ್ಲಿ ಕೃಷ್ಣಾ, ಮಲಪ್ರಭಾ

03 Pg_035-110 TY200028

ನದಿಗಳು ವಿಲೀನವಾಗಿ ಪೂರ್ವದಿಕ್ಕಿನಲ್ಲಿ ಆಂಧ್ರಪ್ರದೇಶದ ಶ್ರೀಶೈಲದ ಇನ್ನೊಂದು ಪುಣ್ಯಕ್ಷೇತ್ರದ ಕಡೆಗೆ ಹರಿಯುತ್ತವೆ. ಕರ್ನಾಟಕ ಸರ್ಕಾರ ಇದನ್ನು ಪ್ರೇಕ್ಷಣೀಯ ಸ್ಥಳವಾಗಿ ಹಾಗೂ ಪ್ರವಾಸಿ ತಾಣ ಎಂದು ಘೋಷಿಸಿದೆ. ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರವು ಈ ಪುಣ್ಯಸ್ಥಳದ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ. ಇಲ್ಲಿನ ಸಂಸ್ಕೃತಿ ಅಪ್ಪಟ ಉತ್ತರ ಕರ್ನಾಟಕ ಶೈಲಿಯ ಕಲೆಯನ್ನು ಒಳಗೊಂಡಿದೆ. ಕೂಡಲ ಸಂಗಮದ ಪ್ರಮುಖ ಸ್ಥಳಗಳು ಈ ಕೆಳಗಿನಂತಿವೆ:

1. ಚಾಲುಕ್ಯ ಶೈಲಿಯ ಶ್ರೀ ಸಂಗಮೇಶ್ವರ ದೇವಾಲಯ. ಈ ದೇವಾಲಯ ಕೃಷ್ಣಾ ಹಾಗೂ ಮಲಪ್ರಭಾ ನದಿ ತೀರದಲ್ಲಿದೆ.
2. ಬಸವೇಶ್ವರರ ಐಕ್ಯ ಮಂಟಪ
3. ಬಸವ ಧರ್ಮ ಪೀಠದ ಮಹಾಮನೆ
4. ಬಸವ ಆಶ್ರಮ ಇಲ್ಲಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲು ಸಹಾಯಕವಾಗಿದೆ.
5. ಪೂಜಾವನ
6. ಗುಮ್ಮಟ ರೀತಿಯ ಬೃಹತ್ ಸಭಾಭವನ. ಇದು 6 ಸಾವಿರ ಜನರಿಗೆ ಸ್ಥಳಾವಕಾಶಗಳನ್ನೊಳಗೊಂಡ ಸಭಾಂಗಣ. ಈ ಸಭಾಂಗಣವು 4 ಪ್ರಮುಖ ದ್ವಾರಗಳನ್ನು ಒಳಗೊಂಡಿದೆ. ಅವುಗಳೆಂದರೆ 1. ಗಂಗಾಂಬಿಕೆ 2. ನೀಲಾಂಬಿಕೆ 3. ಚೆನ್ನ ಬಸವಣ್ಣ 4. ಅಕ್ಕ ನಾಗಮ್ಮ ಎಂದು ಹೆಸರಿಸಲಾಗಿದೆ.
7. ಬಸವ ಅಂತಾರಾಷ್ಟ್ರೀಯ ಕೇಂದ್ರ
8. ವಸ್ತು ಸಂಗ್ರಹಾಲಯ ಮತ್ತು ಕಲಾ ಸಂಗ್ರಹಾಲಯ
9. ಬಸವಾದಿ ನಿಜ ಶರಣರ ಕಾಲದ ಶಿಲ್ಪಗಳು ಹಾಗೂ ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟ ವಸ್ತು ಸಂಗ್ರಹಾಲಯವನ್ನು ಕಾಣಬಹುದು ಹಾಗೂ ಇನ್ನೂ ಅನೇಕ ಸ್ಥಳಗಳನ್ನು ಒಳಗೊಂಡಿದೆ. ಕೂಡಲ ಸಂಗಮ ಕ್ಷೇತ್ರದಲ್ಲಿ ಪ್ರತಿವರ್ಷ ಜನವರಿ 11ರಿಂದ 15 ತಾರೀಖಿನವರೆಗೆ ಅಂದರೆ ಮಕರ ಸಂಕ್ರಮಣದವರೆಗೆ ಶರಣ ಮೇಳ ನಡೆಯುತ್ತದೆ.

6) ಮಹಾಕೂಟ :

ಇದು ಕೂಡಾ ಚಾಲುಕ್ಯರ ಕಾಲದ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಇದು ಬಾದಾಮಿಯಿಂದ 5.8 ಮೀ. ದೂರದಲ್ಲಿದೆ. ನಂದಿಕೇಶ್ವರ ಗ್ರಾಮದಲ್ಲಿರುವ ತೀರ್ಥಕ್ಷೇತ್ರವಾಗಿದ್ದು ಚಾಲುಕ್ಯರು ತಮ್ಮ ಆಡಳಿತದ ಆದಿಭಾಗದಲ್ಲಿ ನಿರ್ಮಿಸಿದ ದೇವಾಲಯಗಳ ಅವಶೇಷಗಳನ್ನು ಒಳಗೊಂಡಿದೆ. ಮಹಾಕೂಟ ಪುಣ್ಯಕ್ಷೇತ್ರವು ದಕ್ಷಿಣದ ಕಾಶಿ ಎಂದು ಪ್ರಖ್ಯಾತಿಯನ್ನು ಹೊಂದಿದೆ. ಅತೀ ಅಮೂಲ್ಯವಾದ ಮತ್ತು ವಿರಳವಾದ ಗಿಡಮೂಲಿಕೆ ಸಂಪತ್ತು ಈ ಕ್ಷೇತ್ರದಲ್ಲಿ ಕಾಣಬಹುದು. ಕ್ರಿ.ಶ. 602ರಲ್ಲಿ ಅನೇಕ ಶಿವಲಿಂಗ ದೇವಾಲಯಗಳನ್ನು ಮಂಗಳೇಶ ಕಟ್ಟಿಸಿದ್ದಾನೆ. ಮಂಗಳೇಶನ ಶಾಸನವುಳ್ಳ ಅಷ್ಟಕೋನದ ಶಿಲಾಸ್ತಂಭವಿದ್ದು ಇಲ್ಲಿ ದೇವರಿಗೆ ಚಿನ್ನದಿಂದ ಕಟ್ಟಿದ ಪೀಠ ಮತ್ತು ಬೆಳ್ಳಿ ಕೊಡೆ ಇದೆಯೆಂದು ತಿಳಿದು ಬಂದಿದೆ.

7) ಇಲಕಲ್ (ಇಳಕಲ್):

ಇದು ವ್ಯಾಪಾರ, ವಾಣಿಜ್ಯ, ಶಿಕ್ಷಣ ಮತ್ತು ಉದ್ಯಮದ ಪ್ರಮುಖ ಕೇಂದ್ರವಾಗಿದೆ. ಇಲ್ಲಿ ಇಲಕಲ್ ಸೀರೆಯನ್ನು ತಯಾರಿಸುವುದರಿಂದ ಇದು ದೇಶದಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ತಯಾರಾಗಿರುವ ಸೀರೆಗಳು ಬೇರೆ ರಾಜ್ಯಗಳಿಗೆ ಮಾರಾಟವಾಗುತ್ತಿವೆ. ಈ ಸೀರೆಯನ್ನು ಉತ್ತರ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ಹಾಗೂ ಇನ್ನಿತರ ರಾಜ್ಯಕ್ಕೆ ಮಾರಾಟ ಮಾಡಲಾಗುತ್ತದೆ ಹಾಗೂ ಇಲಕಲ್ ನಗರವು ಗ್ರಾನೈಟ್ ಕಲ್ಲಿಗೆ ಹೆಸರುವಾಸಿಯಾಗಿದೆ. ಈ ಕಲ್ಲನ್ನು ಪ್ರಪಂಚದಾದ್ಯಂತ ರಫ್ತು ಮಾಡಲಾಗುತ್ತದೆ.

8) ಗುಳೇದಗುಡ್ಡ:

ಇದು ಸಹ ಅಭಿವೃದ್ಧಿ ಹೊಂದುತ್ತಿರುವ ಒಂದು ಪಟ್ಟಣ. ಇಲ್ಲಿ ತಯಾರಾಗುವ ಕುಪ್ಪಸದ ಕಣಗಳು ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. ಇಳಕಲ್ ಸೀರೆ, ಅಮೀನಗಡದ ಕರದಂಟು ಮತ್ತು ಗುಳೇದಗುಡ್ಡದ ಕಣ ಇದು ಉತ್ತರ ಕರ್ನಾಟಕದಲ್ಲಿ ಮನೆ ಮಾತಾಗಿದೆ. ಇಲ್ಲಿ ತಯಾರಾಗುವ ಹತ್ತಿ ಮತ್ತು ರೇಷ್ಮೆ ಬಟ್ಟೆಗಳು ಸೋಲಾಪುರ, ಮುಂಬೈ, ಪುಣೆ, ಹೈದ್ರಾಬಾದ್ ರಾಜ್ಯಗಳಿಗೆ ಸಾಗುತ್ತವೆ.

ಬಾಗಲಕೋಟೆ ಜಿಲ್ಲೆಗೆ ಹೊಸದಾಗಿ 2018ರಲ್ಲಿ ಮೂರು ಹೊಸ ತಾಲೂಕುಗಳನ್ನು ಮಾಡಿದ್ದಾರೆ. ಅವುಗಳೆಂದರೆ ಇಲಕಲ್, ಗುಳೇದಗುಡ್ಡ ಮತ್ತು ರಬಕವಿಬನಹಟ್ಟಿ. ಈ ಮೂರು ತಾಲೂಕುಗಳು ಬಾಗಲಕೋಟೆಯ ಹೊಸ ತಾಲೂಕು ಕೇಂದ್ರಗಳಾಗಿ ಸೃಷ್ಟಿಯಾಗಿವೆ ಹಾಗೂ ಇಲ್ಲಿ ಜೋಳ, ಸಜ್ಜೆ, ನೆಲಕಡಲೆ ಇತ್ಯಾದಿ ಪ್ರಮುಖ ಬೆಳೆಗಳಾಗಿವೆ ಹಾಗೂ ಇಲ್ಲಿನ ಆಹಾರ ಪದ್ಧತಿ ವಿಭಿನ್ನ ಶೈಲಿಯಲ್ಲಿದೆ. ಜೋಳದ ರೊಟ್ಟಿ, ಗುರೆಳ್ಳು ಚಟ್ನಿ, ಸಜ್ಜೆ ರೊಟ್ಟಿ ಹಾಗೂ ಇನ್ನೂ ಅನೇಕ ರೀತಿಯ ಖಾದ್ಯಗಳನ್ನು ತಯಾರಿಸುತ್ತಾರೆ. ಹಾಗೂ ಇಲ್ಲಿನ ಜನರು ಅಮಾವಾಸ್ಯೆ, ಹುಣ್ಣಿಮೆಯಂದು ತಮ್ಮ ತಮ್ಮ ಹೊಲ ಮನೆಗಳಲ್ಲಿ ಪೂಜೆಗಳನ್ನು ಮಾಡುತ್ತಾರೆ. ಈ ದಿನಗಳನ್ನು ಹಬ್ಬದಂತೆ ಆಚರಿಸುತ್ತಾರೆ. ದೊಡ್ಡ ದೊಡ್ಡ ಹಬ್ಬಗಳಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಹೋಳಿಗೆ, ಹುಗ್ಗಿ, ತುಪ್ಪ ಇತ್ಯಾದಿ ಆಹಾರಗಳನ್ನು ತಯಾರಿಸುತ್ತಾರೆ. ಉದಾ: ಸಂಕ್ರಮಣ, ನಾಗರಪಂಚಮಿ, ದಸರಾ, ಮಹಾನವಮಿ, ಯುಗಾದಿ. ಇಲ್ಲಿ ಎಲ್ಲರೂ ಒಗ್ಗಟ್ಟಿನಿಂದ ನಾವು ನಮ್ಮವರೆಂಬ ಭಾವನೆಯಿಂದ ಬದುಕುತ್ತಾರೆ. ಇನ್ನೂ ಹಲವಾರು ವಿಷಯಗಳಿವೆ. ಅವುಗಳ ಮಾಹಿತಿಗಳನ್ನು ತಿಳಿಯಲು ನಿಮ್ಮ ಬಿಡುವಿನ ಸಮಯದಲ್ಲಿ ನಿಮ್ಮ ಕುಟುಂಬದೊಂದಿಗೆ ನೀವು ಬನ್ನಿ ನಿಮ್ಮವರನ್ನೂ ಕರೆತನ್ನಿ ನಮ್ಮೂರಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳಿ. ●

03 Pg_035-110 TY200028

ಬೆಳಗಾವಿ ಕೋಟೆ

✍ **ಅಶ್ವಿನಿ ನವಲಗುಂದ,** ದ್ವಿತೀಯ ಬಿ.ಎ.

ಬೆಳಗಾವಿ ಕೋಟೆ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಬೆಳಗಾವಿ ನಗರದಲ್ಲಿದೆ. ಕ್ರಿ.ಶ. 1204ದಲ್ಲಿ ರಟಾ ರಾಜವಂಶದ ಮಿತ್ರ ರಾಷ್ಟ್ರವಾದ ಬಿಚಿ ರಾಜ ಎಂದು ಕರೆಯಲ್ಪಡುವ ಜಯರಾಯರಿಂದ ಇದನ್ನು ಪ್ರಾರಂಭಿಸಲಾಯಿತು. ಉತ್ತಮ ಕೋಟೆಗಳು ಮತ್ತು ದೊಡ್ಡ ಕಂದಕದಿಂದ ಕಟ್ಟಲ್ಪಟ್ಟ ಈ ಕೋಟೆಯು ಆದಿಲ್‌ಶಾಹಿ ರಾಜವಂಶಕ್ಕೆ ಹಲವಾರು ಐತಿಹಾಸಿಕ ಮತ್ತು ಧಾರ್ಮಿಕ ಸ್ಮಾರಕಗಳುಳ್ಳ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಈ ಕೋಟೆಯು ಇಂಡೋ-ಸಾರ್ಸೆನಿಕ್ ಮತ್ತು ಡೆಕ್ಕನ್ ಶೈಲಿಯಲ್ಲಿ ನಿರ್ಮಿತವಾದ ಕೋಟೆಯಾಗಿದೆ. 13ನೇ ಶತಮಾನದಲ್ಲಿ ರಟಾ ರಾಜವಂಶದ ಮೂಲ ಮತ್ತು ಬಿಜಾಪುರ ಸುಲ್ತಾನರ ಯಾಕೂಬ್ ಆಲಿ ಖಾಸ್ರಿಂದ ಕೋಟೆಯನ್ನು ಅಲಂಕರಿಸಿದರು. ಈ ಕೋಟೆಯನ್ನು ಗ್ರಾನೈಟ್ ಸ್ಟೋನ್ಸ್ ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಈ ಕೋಟೆಯು ಬೆಳಗಾವಿ ಪಟ್ಟಣದ ಆವರಣಗಳಲ್ಲಿ (ಪಶ್ಚಿಮ ಘಟ್ಟಗಳ) ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಿನಲ್ಲಿದೆ. (ಇದು ಬೆಳಗಾವಿ ಅಥವಾ ವೆಂಬುಗ್ರಾ ಎಂದು ಕರೆಯಲ್ಪಡುವ ಬಂಬೂ ಗ್ರಾಮ ಅಂತಲೂ ಕರೆಯುತ್ತಾರೆ.) ಸುಮಾರು 762 ಮೀಟರ್ ಎತ್ತರದಲ್ಲಿರುವ ಈ ಕೋಟೆಯು ಮಾರ್ಕಂಡೇಯ ನದಿಯ ಹತ್ತಿರ ಹರಿಯುತ್ತದೆ.

ಕೋಟೆಯ ಒಳಗಡೆ ಇರುವ ಎರಡು ಜೈನ ದೇವಾಲಯಗಳಲ್ಲಿ ಕಲ್ಲಿನ ಬಸದಿ, ಜೈನ ಬಸದಿ ಕಪ್ಪು ಕಲ್ಲಿನಲ್ಲಿರುವ ನೇಮಿನಾಥ ವಿಗ್ರಹದೊಂದಿಗೆ (ಸಮೀಪದ ಕಾಡಿನಲ್ಲಿ ಕಂಡುಬರುವ ವಿಗ್ರಹ) ಕಲ್ಲಿನಿಂದ ಕೆತ್ತಿದ ಪೀಠದ ಮೇಲೆ ವಿಂಗಡಿಸಲಾಗಿದೆ. ಇದನ್ನು ಕ್ರಿ.ಶ. 1204ರಲ್ಲಿ ಚಾಲುಕ್ಯ ಶೈಲಿಯಲ್ಲಿ ನಿರ್ಮಿಸಲಾಗಿದೆ. ಚಿಕ್ಕಿ ಬಸದಿ ಎಂದು ಕರೆಯಲಾಗುವ ಇನ್ನೊಂದು ದೇವಾಲಯವು ಈಗ ಅವಶೇಷದಲ್ಲಿದೆ. ಚಾಲುಕ್ಯರ ವಾಸ್ತು ಶೈಲಿಯಲ್ಲಿ ಕೋಟೆ ಒಳಗೆ ಜೈನ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಈ ದೇವಸ್ಥಾನದ ''ಮುಖಮಂಟಪ'' ಅತ್ಯಂತ ಆಕರ್ಷಣೀಯವಾಗಿದೆ, ಮೇಲ್ಛಾವಣಿಯಿಂದ ಪ್ರಕ್ಷೇಪಿಸುವ ಒಂದು ಅಂದವಾಗಿ ಚಿತ್ರಿಸಿದ ಕಮಲದ ಕೆತ್ತನೆ ಮಂಟಪ ಅಥವಾ ಮುಖ್ಯ ಸಭಾಂಗಣವನ್ನು ದೊಡ್ಡ ಗುಮ್ಮಟದಿಂದ ಭಾಗಶಃ ಜೋಡಿಸಲಾಗಿರುವ ಹಲವಾರು ಹಂತಗಳ ಮೂಲಕ ಪ್ರವೇಶಿಸಬಹುದು. ದೇವಾಲಯದ ಗೋಪುರವು 72 ದಳಗಳನ್ನು ಹೊಂದಿರುವ ಕಮಲ್ ಚಿತ್ರಣದ ನಂತರ ಕಮಲ್ ಬಸದಿ ಎಂದು ಹೆಸರಿಸಲ್ಪಟ್ಟಿದೆ. ಅದು ಪ್ರಸ್ತುತ 24 ತೀರ್ಥಂಕರರ ಚಿತ್ರಗಳನ್ನು ಪ್ರದರ್ಶಿಸುತ್ತದೆ.

ಹಿಂದೂ ದೇವಾಲಯ: ಕೋಟೆಯ ಪ್ರವೇಶದ್ವಾರದಲ್ಲಿ ಎರಡು ಹಿಂದೂ ದೇವಾಲಯಗಳಿವೆ. ಒಂದು ಗಣೇಶನಿಗೆ ಅರ್ಪಿತವಾದದ್ದು ಮತ್ತು ಇನ್ನೊಂದು ದೇವತೆ ದುರ್ಗಾ. ದುರ್ಗಾ ದೇವಸ್ಥಾನವು ಬಹು ಸಶಸ್ತ್ರ ದೇವತೆ ದುರ್ಗಾನಿಗೆ ಸಮರ್ಪಿಸಲಾಗಿದೆ. ಇದನ್ನು ಕೋಟೆಗಳ ಮತ್ತು ಯುದ್ಧದ ದೇವತೆ ಎಂದು ಪರಿಗಣಿಸಲಾಗಿದೆ. ಇದು ಕೋಟೆಯ ಒಂದು ಮೂಲೆಯಲ್ಲಿದೆ. ದೇವಾಲಯದ ಹೊರ ಮುಂಭಾಗವು ಪೌರಾಣಿಕ ವ್ಯಕ್ತಿಗಳ ವರ್ಣಚಿತ್ರಗಳನ್ನು ಪ್ರದರ್ಶಿಸುತ್ತದೆ.

ಮಸೀದಿಗಳು: ಈ ಕೋಟೆಯು ಎರಡು ಮಸೀದಿಗಳನ್ನು ಹೊಂದಿದೆ. ಅವುಗಳೆಂದರೆ ಸಫಾ ಮಸೀದಿ ಮತ್ತು ಜಾಮಿಯಾ ಮಸೀದಿ. ಸಫಾ ಮಸೀದಿ 1519ರಲ್ಲಿ ಅಸದ್ ಖಾನ್ ಖಾರಿ ಅವರಿಂದ ಪೂರ್ಣಗೊಂಡಿತು. ಮಸೀದಿಯ ಸ್ತಂಭಗಳು ನಗರಿ ಮತ್ತು ಪರ್ಷಿಯನ್ ಶೈಲಿಗಳ ಸಮ್ಮಿಲನದಲ್ಲಿ ಸೊಗಸಾದ ಶಾಸನಗಳನ್ನು ಹೊಂದಿದೆ. ಇಲ್ಲಿನ ಎರಡು ಸ್ತಂಭಗಳು ಹಿಂದೂ ದೇವಾಲಯಗಳಿಂದ ಬಂದಿದ್ದು ನಗಾರಿ ಲಿಪಿಯಲ್ಲಿ ಕನ್ನಡ ಶಾಸನಗಳನ್ನು ಹೊಂದಿವೆ. ಕ್ರಿ.ಶ. 1199ರವರೆಗಿನ ಒಂದು ಕಂಬವನ್ನು ರಟಾ ಕಿಂಗ್ ಕಾರ್ತವೀರಿಯ IV ಮತ್ತು 1261 ಎ.ಡಿ.ನ ಇತರ ಸ್ತಂಭಕ್ಕೆ ಸವಣ ಕೃಷ್ಣನಿಗೆ ಸಲ್ಲುತ್ತದೆ. 1585-86ರ ಅವಧಿಯಲ್ಲಿ ಜಮೀಯಾ ಮಸೀದಿಯನ್ನು ಶೇರ್ ಖಾನ್ ನಿರ್ಮಿಸಿದರು.

ಪುರಡೇಶ್ವರ ದೇವಸ್ಥಾನ: ಚಾಲುಕ್ಯ ಶೈಲಿಯಲ್ಲಿರುವ ಪುರಡೇಶ್ವರ ದೇವಸ್ಥಾನವು ಮೂರು ಅರ್ಧ ಮಂಟಪಗಳು, ಒಂದು ಸಾಮಾನ್ಯ ನವರಾಂಗ ಮತ್ತು ಎರಡು ಮುಖಮಂಟಪಗಳೊಂದಿಗಿನ ತ್ರಿಕುಚಲ. ಗುರ್ಲೋಹೋರು ಚಿದಂಬರ ದೇವಸ್ಥಾನವು ಐತಿಹಾಸಿಕ

03 Pg_035-110 TY200028

ದೇವಾಲಯವಾಗಿದೆ. ಮುಚ್ಚಿದ ಕಿಟಕಿಗಳಿರುವ ಎಲ್ಲಾ ಮೂರು ಗೃಹಗಳು ಶಿವಲಿಂಗಗಳನ್ನು ಹೊಂದಿವೆ. ಕೇಂದ್ರ ಗರ್ಭಗೃಹವು ಕದಂಬ ಶೈಲಿಯಲ್ಲಿದೆ ಮತ್ತು ನವರಾಂಗ ಸ್ತಂಭಗಳನ್ನು ಲೇತ್ ತಿರುಗಿಸಲಾಗಿದೆ. ನವರಾಂಗದ ಗೂಡಿನ ಒಳಭಾಗದಲ್ಲಿ ಪಾರ್ವತಿ ಮತ್ತು ವೀರಭದ್ರ ಚಿತ್ರಗಳನ್ನು ಬಿಡಿಸಲಾಗಿದೆ. ಯುಗಾದಿ ದಿನದಲ್ಲಿ, ಏರುತ್ತಿರುವ ಸೂರ್ಯನ ಕಿರಣಗಳು ಮುಖ್ಯ ಶಿವಲಿಂಗದಲ್ಲಿ ನೇರವಾಗಿ ಬೀಳುತ್ತವೆ. ಹೊರಗಿನ ಗೋಡೆಗಳು ಹಿಂದೂ ಪುರಾಣವನ್ನು ಚಿತ್ರಿಸುವ ಉತ್ತಮವಾದ ಶಿಲ್ಪಕಲೆಗಳನ್ನು ಹೊಂದಿವೆ. ತೆರೆದ ಮುಖಮಂಟಪದ ನಂತರದ ಸೇರ್ಪಡೆಯೂ ಸಹ ಬೃಹತ್ ಸ್ತಂಭಗಳೊಂದಿಗಿನ ಒಂದೇ ಶೈಲಿಯಲ್ಲಿದೆ.

ಕುಂದಾನಗರಿ ಬೆಳಗಾವಿಯು ಕರ್ನಾಟಕದ ವಾಯುವ್ಯ ಭಾಗದ ಗಡಿಯಲ್ಲಿ ನೆಲೆಸಿರುವ ಸುಂದರ ಹಸಿರುಮಯ ಪ್ರದೇಶ. ಮಲೆನಾಡಿನ ಛಾಯೆಯಲ್ಲಿ ಬರುವ ಈ ತಾಣವು ಇತರೆ ಬಯಲು ಸೀಮೆ ಪ್ರದೇಶಗಳಂತಿರದೆ ಸದಾ ತಂಪಾಗಿದ್ದು ಹಿತಕರ ಎನ್ನುವ ವಾತಾವರಣವಿದೆ.

ಗೋಕಾಕ : ಬೆಳಗಾವಿ ನಗರದ ಈಶಾನ್ಯ ಭಾಗಕ್ಕೆ ಸುಮಾರು 67 ಕಿ.ಮೀ. ದೂರದಲ್ಲಿ ನೆಲೆಸಿದೆ ಗೋಕಾಕ್ ಪಟ್ಟಣ. ಗೋಕಾಕ ಪ್ರಖ್ಯಾತವಾಗಿರುವುದು ತನ್ನಲ್ಲಿರುವ ಮೈ ಝುಮ್ಮೆನ್ನಿಸುವ ರುದ್ರಭಯಂಕರ ಜಲಪಾತದಿಂದಾಗಿ. ಈ ಜಲಪಾತವನ್ನು ಗೋಕಾಕ್ ಫಾಲ್ಸ್ ಎಂದೇ ಕರೆಯಲಾಗುತ್ತದೆ. ಘಟಪ್ರಭಾ ನದಿಯಿಂದುಂಟಾದ ಈ ಜಲಪಾತಕ್ಕೆ ಅಡ್ಡಲಾಗಿ ತೂಗು ಸೇತುವೆಯೊಂದಿದ್ದು ಅದರ ಮೇಲೆ ಸಾಗುವಾಗ ರೋಮಾಂಚನ ಪುಳಕವುಂಟಾಗುವುದು. ಇಲ್ಲಿನ ಮತ್ತೊಂದು ಜನಪ್ರಿಯ ಸಿಹಿತಿಂಡಿ ''ಗೋಕಾಕ್ ಕರದಂಟ್''.

ಹಳಸಿ : ಹಳ್ಳಿ ಎಂದೂ ಕರೆಯಲ್ಪಡುವ ಈ ಪುಟ್ಟ ಪಟ್ಟಣವು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನಲ್ಲಿದೆ. ಈ ಪಟ್ಟಣವು ಒಂದೊಮ್ಮೆ ಕದಂಬರ ರಾಜಧಾನಿಯಾಗಿ ಮೆರೆದಿದ್ದು, ತನ್ನಲ್ಲಿರುವ ಅದ್ಭುತ ವಾಸ್ತುಶಿಲ್ಪದ ಭೂವರಾಹ ಲಕ್ಷ್ಮೀ ನರಸಿಂಹ ದೇವಾಲಯದಿಂದ ಪ್ರಖ್ಯಾತವಾಗಿದೆ. ಈ ದೇವಾಲಯದಲ್ಲಿ ಒಂದಕ್ಕೊಂದು ಅಭಿಮುಖವಾಗಿರುವ ಎರಡು ಗರ್ಭಗುಡಿಗಳಿವೆ. ಬಲಬದಿಯ ಗರ್ಭಗುಡಿಯಲ್ಲಿ 4 ಅಡಿ ಎತ್ತರದಲ್ಲಿ ಕುಳಿತಿರುವ ವಿಷ್ಣುವಿನ ವಿಗ್ರಹವಿದೆ. ಅದರ ಹಿಂದೆಯೇ ಲಕ್ಷ್ಮೀ ಹಾಗೂ ಸೂರ್ಯನಾರಾಯಣನ ವಿಗ್ರಹಗಳಿವೆ. ಇನ್ನು ಎಡಬದಿಯ ಗರ್ಭಗುಡಿಯಲ್ಲಿ ಭೂದೇವಿ (ಪೃಥ್ವಿ)ಯನ್ನು ಬಾಯಿಯಲ್ಲಿ ಹಿಡಿದಿರುವ 5 ಅಡಿ ಎತ್ತರದ ವರಾಹ ಸ್ವಾಮಿಯ ವಿಗ್ರಹವನ್ನು ಕಾಣಬಹುದಾಗಿದೆ.

ಹೂಲಿ : ಪ್ರಖ್ಯಾತ ಶ್ರೀಕ್ಷೇತ್ರವಾದ ಸವದತ್ತಿಯಿಂದ ಕೇವಲ 9 ಕಿ.ಮೀ.ಗಳ ಅಂತರದಲ್ಲಿರುವ ಪುರಾತನ ಹಳ್ಳಿಗಳಲ್ಲಿ ಒಂದಾಗಿರುವ ಹೂಲಿ ಹಳ್ಳಿಯು ತನ್ನಲ್ಲಿರುವ ಪಂಚಲಿಂಗೇಶ್ವರ ದೇವಾಲಯದಿಂದಲೇ ಪ್ರಸಿದ್ಧವಾಗಿದೆ.

ಆಕರ್ಷಕ ವಾಸ್ತುಶಿಲ್ಪವನ್ನು ಹೊಂದಿರುವ ಈ ದೇವಾಲಯವನ್ನು ನೋಡುವುದೇ ಒಂದು ಸುಂದರ ಅನುಭವ. ಕಲ್ಲಿನಿಂದಲೇ ನಿರ್ಮಿತವಾಗಿರುವ ಈ ದೇವಸ್ಥಾನವು ಬಿಸಿಲಿನಲ್ಲೂ ತಂಪಾದ ನೆರಳನ್ನು ನೀಡುತ್ತದೆ.

ಸವದತ್ತಿ : ಸವದತ್ತಿಯು ಒಂದು ಯಾತ್ರಾ ಕ್ಷೇತ್ರವಾಗಿದ್ದು, ಬೆಳಗಾವಿಯ ಪೂರ್ವ ದಿಕ್ಕಿಗೆ ಸುಮಾರು 78 ಕಿ.ಮೀ.ಗಳ ದೂರದಲ್ಲಿ ನೆಲೆಸಿದೆ. ಸುಗಂಧವರ್ತಿ, ಸೌಗಂಧಿಪುರ ಎಂದೂ ಕರೆಯಲ್ಪಡುತ್ತಿದ್ದ ಇದು ರಟಾ ವಂಶದ (875-1230) ರಾಜಧಾನಿಯಾಗಿತ್ತು. ಶಕ್ತಿ ದೇವಿಯ ಆರಾಧಕರಿಗೆ ಪವಿತ್ರವಾಗಿರುವ ಶ್ರೀ ರೇಣುಕಾ ದೇವಿ/ ಎಲ್ಲಮ್ಮನ ದೇವಾಲಯ ಇಲ್ಲಿರುವ ಪ್ರಮುಖ ಪ್ರವಾಸಿ ತಾಣ. ಬನದ ಹುಣ್ಣಿಮೆ ಹಾಗೂ ಭಾರತ ಹುಣ್ಣಿಮೆ ದಿನಗಳಂದು ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನ ದೇವಿಯ ದರ್ಶನ ಪಡೆಯುತ್ತಾರೆ. ದೇವಿಗೆ ಭಂಡಾರ ಸೇವೆ, ಹಣ್ಣು-ಕಾಯಿಯ ಸೇವೆಯನ್ನು ಸಲ್ಲಿಸಿ ತಾಯಿ ರೇಣುಕಾ ಮಾತೆಯ, ಪರಶುರಾಮ ದೇವಸ್ಥಾನ, ಜೋಗುಳ ಭಾವಿ, ಏಕನಾಥ ಮತ್ತು ಜೋಗಿನಾಥ ದೇವಾಲಯವನ್ನು ನೋಡಲು ಕರ್ನಾಟಕವಲ್ಲದೆ, ಮಹಾರಾಷ್ಟ್ರ ಹಾಗೂ ಬೇರೆ ಬೇರೆ ರಾಜ್ಯಗಳಿಂದ ಪ್ರವಾಸಿಗರು ಬರುತ್ತಾರೆ.

ಅಂಬೋಲಿ ಘಾಟ್: ಮಹಾರಾಷ್ಟ್ರದ ಸಿಂಧುದುರ್ಗ್ ಜಿಲ್ಲೆಯಲ್ಲಿರುವ ಈ ಪ್ರಸಿದ್ಧ ಘಟ್ಟ ಪ್ರದೇಶವು ಇದಾಗಿದೆ. ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ಬರುವ ಈ ಪ್ರದೇಶವು ಒಂದು ಪ್ರಕೃತಿ ಸಹಜ ಸುಂದರ ತಾಣವಾಗಿದೆ. ಒಂದು ಬದಿ ಆಳವಾದ ಕಣಿವೆ ಇನ್ನೊಂದು ಬದಿ ಎತ್ತರಕ್ಕೆ ಚಾಚಿರುವ ಬೆಟ್ಟ ಅಲ್ಲಲ್ಲಿ ಕವಲೊಡೆದ ಪುಟ್ಟ ಪುಟ್ಟ ಜಲಪಾತಗಳು, ಮಳೆಗಾಲದಲ್ಲಿನ ಸಹಜ ಹಾಗೂ ಆಕರ್ಷಕವಾದ ಮನಮೋಹಕ ದೃಶ್ಯಗಳು.

ಶಿರಸಂಗಿ ಶ್ರೀ ಕಾಳಿಕಾದೇವಿ ದೇವಸ್ಥಾನ : ಶಿರಸಂಗಿ ಸಣ್ಣ ಗ್ರಾಮ. ಇಲ್ಲಿನ ಶ್ರೀ ಕಾಳಿಕಾದೇವಿ ದೇವಾಲಯವು ಪ್ರಸಿದ್ಧವಾಗಿದೆ. ಈ ದೇವಸ್ಥಾನವು ಅತ್ಯಂತ ಪುರಾತನವಾದದ್ದು ಮತ್ತು ಶೃಂಗ ಮಹರ್ಷಿ ಶ್ರೀ ಕಾಳಿಕಾದೇವಿಯನ್ನು ಪೂಜಿಸಿದ ಸ್ಥಳವು ಇದಾಗಿದೆ. ಬಡಿಗೇರ ಸಮುದಾಯದ ಮೂಲದೇವಿಯಾದ ಶ್ರೀ ಕಾಳಿಕಾದೇವಿಯು ಪೂಜಿಸಲ್ಪಡುತ್ತಿದ್ದಾಳೆ.

●

03 Pg_035-110 TY200028

ನೀರು-ನಿಧಿ

ಎಂಜಿಎಂ ನೀರ ನಡಿಗೆ – ಮಳೆ ಪೂರ್ತಿ ಇಳೆಗೆ

✍ **ಶ್ರೇಯಸ್ ಜಿ. ಕೋಟ್ಯಾನ್**, ತೃತೀಯ ಬಿ.ಎ.

ಉಡುಪಿಯ 'ಎಂಜಿಎಂ ಕಾಲೇಜು' ವರ್ಷಕ್ಕೆ ಕನಿಷ್ಠ 5 ಕೋಟಿ ಲೀಟರ್ ನೀರನ್ನು ಸಂಪಾದಿಸುವ ಸಿದ್ಧತೆ ಮಾಡಿಕೊಂಡಿದೆ. ಬಹುಶಃ, ಈ ಮಳೆನೀರ ಸಂಗ್ರಹ ಇಡೀ ರಾಜ್ಯಕ್ಕೆ ದೊಡ್ಡದಿರಬಹುದು. ಮಹಾತ್ಮನ ಹೆಸರಿನ ಕಾಲೇಜು ಗಾಂಧಿಯನ್ನು ಹೆಸರಿನಲ್ಲಿ ಮಾತ್ರವಲ್ಲ, ಕೃತಿಯಲ್ಲೂ ಅನುಷ್ಠಾನಕ್ಕೆ ತರುವ ಪ್ರಯತ್ನ ನಡೆಸಿದೆ. ಭೀಕರ ಬರ ಹಾಗೂ ಮಹಾಪೂರ ಎರಡನ್ನೂ ನಾಡು ಎದುರಿಸುತ್ತಿರುವ ವಿಷಮ ಸನ್ನಿವೇಶದಲ್ಲಿ, ನೀರ ಶೇವಣೆಯ ಇಲ್ಲಿನ ರೋಚಕ ಕಥನ ಈ ಕಾಲಕ್ಕೆ ಅಗತ್ಯವಾದ ಹೊಸ ದಾರಿಗಳನ್ನು ನಮಗೆ ಮನನ ಮಾಡಿಕೊಡುವಂತಿದೆ.

ಶ್ರೀ ಪಡ್ರೆ

ಎಂಜಿಎಂ ಕಾಲೇಜಿನ ಕಚೇರಿ ಕಟ್ಟಡ

ಕಷ್ಟಪಟ್ಟು ಕುಕ್ಕರುಗಾಲಲ್ಲಿ ಕುಳಿತ ಆ ಮಹನೀಯರು ಸ್ವಲ್ಪ ದಪ್ಪಗಿನ ಮಧ್ಯವಯಸ್ಕರು. ಮಕ್ಕಳಂತೆ ಅವರು ಆಗಾಗ ಆ ಬಾವಿಗೆ ಇಣುಕುತ್ತಿದ್ದರು. ತಲೆ ಮೇಲೆತ್ತಿದಾಗ ಮುಖ ಅರಳಿ ದುಂಡಗಾಗಿತ್ತು!

ಬಾವಿಯ 'ಇಣುಕು ಕಿಂಡಿ'ಯ ಮೂಲಕ ಹೊಸ ಜಗತ್ತನ್ನೇ ಕಂಡಂತಿತ್ತು ಅವರ ಮುಖಭಾವ. ಮರುಕ್ಷಣವೇ ಅವರ ಉಚ್ಚಸ್ವರದ ಘೋಷಣೆ ನಮಗೆಲ್ಲರಿಗೂ ಕೇಳುತ್ತದೆ. 'ಬಾವಿ ಪೂರ್ತಿ ತುಂಬಿದೆ; ಇನ್ನೂ ಮಳೆ ಬಂದರೆ ಓವರ್‌ಫ್ಲೋ ಆಗುವುದು ನಿಶ್ಚಯ'.

ಅವಿಭಜಿತ ದ.ಕ. ಜಿಲ್ಲೆಗೇ ಹೆಸರಾಗಿದ್ದ ಶಿಕ್ಷಣ ಸಂಸ್ಥೆ ಎಂಜಿಎಂ ಕಾಲೇಜು. ಆ ಕಾಲೇಜಿನ ಪ್ರಾಂಶುಪಾಲ ಇವರು, ಡಾ. ಎಂ. ಜಿ. ವಿಜಯ್. ಉಡುಪಿ ಮಣಿಪಾಲಗಳ ನಡುವಣ ಕುಂಜಿಬೆಟ್ಟಿನಲ್ಲಿ, ಹೆದ್ದಾರಿಯ ಅಂಚಿನಲ್ಲಿ ಈ ಕಾಲೇಜು ವಿಶಾಲವಾಗಿ ಚಾಚಿಕೊಂಡಿದೆ.

ಮಳೆ ಕುಡಿಯುವ ಬಾವಿ!

ವಿಜಯ್ ಬಗ್ಗಿ ನೋಡಿದ ಬಾವಿ ಅಂತಿಂಥದ್ದಲ್ಲ. ಇಂಗುಬಾವಿ ಅಥವಾ ರೀಚಾರ್ಜ್ ವೆಲ್. ಮಳೆನೀರು ಇಂಗಿಸಲೆಂದೇ ತೋಡುವ ಬಾವಿಯಿದು. ಎಂಜಿಎಂ, ಅಂದರೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಈಚೆಗೆ ಒಂದೆರಡಲ್ಲ, ಐದು ಇಂಗುಬಾವಿ ತೋಡಿಸಿದೆ. ಮಳೆಗಾಲದ ಆರಂಭಕ್ಕೆ ಸಿದ್ಧವಾದ ಇವು ಈಗ ಆರಿಂಚಿನ ಪೈಪಿನಲ್ಲಿ ಇಳಿದು ಬರುವ ಚಾವಣಿ ನೀರನ್ನು ಗಟಗಟನೆ ಕುಡಿಯುತ್ತಿವೆ.

ಕಳೆದ ಬೇಸಿಗೆಯಲ್ಲಿ ಈ ಕಾಲೇಜು ತನ್ನ ಏಳು ದಶಕದ ಚರಿತ್ರೆಯಲ್ಲೇ ಅನುಭವಿಸದಷ್ಟು ನೀರ ಸಂಕಟಕ್ಕೆ ತುತ್ತಾಗಿತ್ತು. ತಕ್ಷಣ ಎಚ್ಚೆತ್ತ ಪ್ರಾಂಶುಪಾಲರು ಮತ್ತು ಆಡಳಿತ ವರ್ಗ 'ಮುಂದೆಂದೂ ಇಲ್ಲಿ ಬರ ಬರಬಾರದು' ಎಂದು ಸಂಕಲ್ಪಿಸಿದೆ. ಈಗ ಭಾರೀ ಪ್ರಮಾಣದ ಮಳೆಕೊಯ್ಲು ಶುರು ಮಾಡಿದ್ದಾರೆ.

ಎಸ್ಟೇಟ್ ಮ್ಯಾನೇಜರ್ ಶ್ರೀಧರ ನಾಯಕ್ ಈಗ ಮಳೆ ಹಿಡಿಯುತ್ತಿರುವ ಇಲ್ಲಿನ ಕಟ್ಟಡಗಳ ಚಾವಣಿಗಳನ್ನು ಅಳೆದಿದ್ದಾರೆ. ಐದಾರು ಕಟ್ಟಡಗಳು ಸೇರಿ ಒಟ್ಟು 1,450 ಚದರ ಮೀಟರ್ ವಿಸ್ತೀರ್ಣ ಇದೆ. ಅಂದರೆ, ವರ್ಷಕ್ಕೆ ಕನಿಷ್ಠ ಐದು ಕೋಟಿ ಲೀಟರ್ ನೀರನ್ನಿವರು ಶೇವಣಿ ಇಡಲಿದ್ದಾರೆ. ಇದು ಹೇಗೆ ? ಒಂದು ಮಿಲಿಮೀಟರ್ ಮಳೆಯನ್ನು ಒಂದು ಮೀಟರ್ ಉದ್ದ, ಅಷ್ಟೇ ಅಗಲದ ಪಾತ್ರೆಯಲ್ಲಿ ತುಂಬಿಕೊಂಡರೆ ಒಂದು ಲೀಟರ್ ಆಗುತ್ತದೆ. ಯಾವುದೇ ಪ್ರದೇಶದ ವಾರ್ಷಿಕ ಮಳೆಯನ್ನು ಮಿಲಿಮೀಟರುಗಳಲ್ಲಿ ತಿಳಿದುಕೊಳ್ಳಿ. ಅಲ್ಲಿನ ಪ್ರತಿ ಚದರಮೀಟರ್ ಜಾಗದ ಮೇಲೆ ವರ್ಷಕ್ಕೆ ಬೀಳುವ ಮಳೆಯ ಲೆಕ್ಕಾಚಾರ ಹಾಕಬಹುದು.

ಉಡುಪಿಯ ವಾರ್ಷಿಕ ಮಳೆ 3,500 ಮಿ.ಮೀ., ಚಾವಣಿಯ ವಿಸ್ತೀರ್ಣ 1,450 ಚ.ಮೀ. ಅಂದರೆ 3,500 x 1,450ರ ಲೆಕ್ಕಾಚಾರದಲ್ಲಿ ಕಾಲೇಜಿನ ಚಾವಣಿಯ ಮೇಲೆ 5,075,000 ಲೀಟರ್ ನೀರು ಸುರಿಯುತ್ತದೆ. ಐದು ಲಕ್ಷ ಎನ್ನಿ. ಇಳೆಗೆ ಇಷ್ಟು ನೀರಿಳಿಸುತ್ತಿರುವ ಈ ಕ್ಯಾಂಪಸ್ ಭವಿಷ್ಯದಲ್ಲಿ ಸದಾ ಬರನಿರೋಧಕ ಆಗಬಹುದು.

ಕಾಲೇಜಿನ ಬೇರೆ ಬೇರೆ ಬ್ಲಾಕುಗಳು, ಕ್ಯಾಂಟೀನ್, ಲೇಡೀಸ್ ಹಾಸ್ಟೆಲು ಸೇರಿದಂತೆ ದಿನಕ್ಕೆ ಸರಾಸರಿ ಕಾಲು ಲಕ್ಷ ಲೀಟರ್ ನೀರು

ಇಂಗುಬಾವಿ ನಿರ್ಮಾಣದ ಮೊದಲ ಹಂತ

ಈ ಕಟ್ಟಡದ ಚಾವಣಿ ನೀರೆಲ್ಲಾ ಪಕ್ಕದ ಇಂಗುಬಾವಿ ಸ್ವಾಹ

ಚೇಂಬರ್ ಮೂಲಕ ಕಸಕಡ್ಡಿ ಪ್ರತ್ಯೇಕಿಸಿದ ಮಳೆನೀರು ಇಂಗುಬಾವಿಗೆ

ಬೇಕು. ಕ್ಯಾಂಪಸ್ಸಿನಲ್ಲಿ ಒಟ್ಟು ನಾಲ್ಕು ತೆರೆದ ಬಾವಿಗಳಿವೆ. ಅದರಲ್ಲಿ ಎರಡು ಬಾವಿಗಳು ಇವರಿಗೆ ಮುಖ್ಯ ನೀರಾಶ್ರಯವಾಗಿದ್ದುವು. ಅವೂ ಈ ಬೇಸಿಗೆಯಲ್ಲಿ ತಳಕ್ಕಿಳಿದು ಒಲ್ಲೆ ಎಂದವು. ಈ ಶಿಕ್ಷಣ ಸಂಸ್ಥೆಯ ಚರಿತ್ರೆಯಲ್ಲೇ ಮೊದಲ ಬಾರಿಗೆ ನೀರಿನ ಟ್ಯಾಂಕರ್ ಕಾಲೇಜಿಗೆ ಬಂತು.

ನೆನೆಯುತ್ತಾರೆ ಶ್ರೀಧರ್ ನಾಯಕ್, ಬರ ಇದ್ದಾಗ ನೀರಿನ ಟ್ಯಾಂಕರಿನ ಶುಲ್ಕವೂ ದುಪ್ಪಟ್ಟು. 2,000 ರೂ. ತೆರಬೇಕು. ಒಂದು ತಿಂಗಳಿಗೂ ಹೆಚ್ಚು ಕಾಲ ನಾವು 20 ಟ್ಯಾಂಕರ್ ತರಿಸಿರಬಹುದು. ಟ್ಯಾಂಕರು ನೀರಿನ ಅವಲಂಬನೆ ಕಾಲೇಜ್ ಆಡಳಿತದಲ್ಲಿ ಆತಂಕ ಹುಟ್ಟಿಸಿತು. ನೀರಿಗಾಗಿ 'ಏನಾದರೂ ಮಾಡಲೇಬೇಕು' ಅನಿಸಿತು.

ಕೊಳವೆಬಾವಿ ಬೇಡ !

ಕಾಲೇಜಿನ ರವೀಂದ್ರ ಮಂಟಪ ಮತ್ತು ಲೇಡೀಸ್ ಹಾಸ್ಟೆಲಿನ ಬಳಿಯ ಎರಡು ಬಾವಿ ಇವರಿಗೆ ಭರವಸೆಯ ಮೂಲಗಳು. ಮೊದಲು ರವೀಂದ್ರ ಮಂಟಪದ ಬಳಿಯ ಬಾವಿಯ ಕೆಸರು ತೆಗೆಸಿದರು. ಸ್ವಲ್ಪ ಕೆಸರು ಮೇಲೆ ಬಂದ ಮೇಲೆ ಹಾಸು ಬಂಡೆ ಸಿಕ್ಕಿತು. 'ಅದನ್ನು ಬ್ಲಾಸ್ಟ್ ಮಾಡಿಸಿ ಆಳ ಮಾಡಿಸಿ' ಎಂಬ ಸಲಹೆ ಬಂತು. ಈ ಬಗ್ಗೆ ತಜ್ಞರನ್ನು ವಿಚಾರಿಸಿದಾಗ 'ಅಲ್ಲಿ ಬ್ಲಾಸ್ಟಿಂಗ್ ಅಪಾಯಕಾರಿ. ಹತ್ತಿರದಲ್ಲಿರುವ ಕಟ್ಟಡಗಳಿಗೆ ಹಾನಿ ಸಂಭಾವ್ಯತೆ ಇದೆ' ಎಂದು ಅವರು ಎಚ್ಚರಿಕೆ ಕೊಟ್ಟರು.

ಇನ್ನೇನು ದಾರಿ ? ಈ ವರೆಗೂ ಇಲ್ಲಿ ಕೊಳವೆಬಾವಿ ಕೊರೆಸಿರಲಿಲ್ಲ. ಕಳೆದ ಬೇಸಿಗೆ ಹುಟ್ಟಿಸಿದ ಆಘಾತದಂತಹ ಸಂದರ್ಭದಲ್ಲಿ ಎಲ್ಲರೂ ಕೊಡುವ ಸಲಹೆ 'ಕೊಳವೆಬಾವಿ ಕೊರೆಸಿ' ಎನ್ನುವುದು. ಇವರಿಗೂ ಅಂಥಸಲಹೆಸಾಕಷ್ಟುಬಂತು. ಆದರೆಪ್ರಾಂಶುಪಾಲರುಹಿಂದೆಮುಂದೆ ನೋಡದೆ ಈ ದಾರಿ ಸ್ವೀಕರಿಸಲಿಲ್ಲ. ಪ್ರಾಂಶುಪಾಲರು ಮತ್ತು ಎಸ್ಟೇಟ್ ಮ್ಯಾನೇಜರರು ಈ ವಿಚಾರವನ್ನು ಮತ್ತೆ ಮತ್ತೆ ಮಂಥನ ಮಾಡಿದರು. 'ಕೊಳವೆಬಾವಿ ತೋಡಿದಾಗ ನೀರು ಸಿಗದಿದ್ದರೆ ಏನು ಮಾಡುವುದು?', 'ಕೊಳವೆಬಾವಿ ಶಾಶ್ವತ ಪರಿಹಾರ ಅಲ್ಲವಲ್ಲ?' – ಈ ಎರಡು ವಾಸ್ತವಿಕತೆಗಳು ಕಾಲಕ್ರಮದಲ್ಲಿ 'ಕೊಳವೆಬಾವಿ ಬೇಡವೇ ಬೇಡ' ಎನ್ನುವ ಅಭಿಪ್ರಾಯಕ್ಕೆ ಪುಷ್ಟಿ ಕೊಟ್ಟವು.

ಹಾಗಾದರೆ ಇನ್ನೇನು ? ಎಂಜಿಎಂ ಕಾಲೇಜಿನಲ್ಲಿ ಈ ಹಿಂದೆ ಹಲವು ಮಳೆಕೊಯ್ಲು ಮಾಹಿತಿ ಕಾರ್ಯಕ್ರಮಗಳು ನಡೆದಿದ್ದವು. ಆಗ ವ್ಯಕ್ತಪಡಿಸಿದ ವಿಚಾರಗಳು ಇಲ್ಲಿ ಹಲವರಲ್ಲಿ ನೆನಪಿತ್ತು. ಮಳೆಕೊಯ್ಲು ಮಾಡೋಣ ಎನ್ನುವ ನಿಶ್ಚಯಕ್ಕೆ ಬಂದರು. ಡಾ. ಎಂ. ಜಿ. ವಿಜಯ್, ಡಾ. ಹೆಚ್. ಎನ್. ಉದಯಶಂಕರ್ ಅವರ ಸಲಹೆ ಕೇಳಿದರು. ಉದಯಶಂಕರ್ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಭೂಗರ್ಭಶಾಸ್ತ್ರ ಪ್ರೊಫೆಸರ್. ಅವರು ಎಂಜಿಎಂ ಕಾಲೇಜಿಗೆ ಭೇಟಿ ಕೊಟ್ಟು ಸ್ಥಳ ಅಧ್ಯಯನ ನಡೆಸಿದರು.

03 Pg_035-110 TY200028

ನೀರು ತುಂಬುವ ಬಾವಿ !

ಆ ಇಡೀ ಪ್ರದೇಶದಲ್ಲಿ 40-45 ಅಡಿ ಆಳದಲ್ಲಿ ಶಿಲಾವಲಯ ಇದೆ. ಅವು ಬಿರುಕೇ ಇಲ್ಲದ ಶಿಲೆಗಳು. ಹಾಗಾಗಿ ನೇರವಾಗಿ ಬಾವಿಗೆ ನೀರುಣಿಸಿದರೆ ಅದು ಹೊರಗಡೆ ಹರಿದುಹೋಗಿ ನಿರೀಕ್ಷಿತ ಫಲ ಸಿಗದು. ಅಲ್ಲಿನ ಮಣ್ಣಿನ ಪದರಗಳು ನೀರು ಹಿಡಿಯುವಂತೆ ಮಾಡಿದರೆ ನೀರಿನ ಲಭ್ಯತೆ ಮೂರು-ನಾಲ್ಕು ತಿಂಗಳ ಕಾಲ ಹೆಚ್ಚಾಗಬಹುದು ಎನ್ನುತ್ತಾರೆ ಉದಯಶಂಕರ್.

ಇಂಗಿಸಲು ಸಿಗುವ ನೀರು ಬೃಹತ್ ಪ್ರಮಾಣದಲ್ಲಿರುವ ಕಾರಣ ಅಲ್ಲಲ್ಲಿ ಚಿಕ್ಕಪುಟ್ಟ ಇಂಗುಗುಂಡಿ ತೋಡುವ ಬದಲು ಐದು ಇಂಗುಬಾವಿಯನ್ನು ಸಲಹೆ ಮಾಡಿದ್ದಾರೆ. ಈ ಬಾವಿಗಳು ಕಾಲೇಜಿನ ನೀರಾಶ್ರಯವಾಗಿರುವ ತೆರೆದ ಬಾವಿಗಳ (ನೀರು ಕೊಡುವ ಬಾವಿ, ಸರ್ವೀಸ್ ವೆಲ್) ಹತ್ತಿರವೇ ಇವೆ.

ಇಲ್ಲಿನ ಸೂರಿನ ನೀರೆಲ್ಲಾ ಈವರೆಗೆ ಅಂಗಳಕ್ಕೆ ಇಳಿದು ಸಿಕ್ಕುಸಿಕ್ಕಲ್ಲಿ ಹರಿದು ಹೋಗಿ ಸಮುದ್ರ ಸೇರುತ್ತಿತ್ತು. ಮಳೆಕೊಯ್ಲಿಗಾಗಿ ಕಾಲೇಜಿನವರು ಮೊದಲು ದೃಷ್ಟಿ ಹಾಯಿಸಿದ್ದು ಚಾವಣಿಯಿಂದ ನೀರಿಳಿಸುವ ಇಳಿ ಪೈಪುಗಳ (ಡೌನ್ ಪೈಪು) ಮೇಲೆ. ಒಂದೂ ಬಿಡದೆ ಈ ಇಳಿ ಪೈಪುಗಳ ಕೆಳತುದಿಗಳಿಗೆ ಈಗ ಹೊಸ ಪೈಪು ಜೋಡಿಸಿದ್ದಾರೆ. ಹೀಗೆ ಜೋಡಿಸಿದ ಪೈಪುಗಳು ಒಂದಕ್ಕೊಂದು ಸೇರಿ ಆರಿಂಚಿನ ದೊಡ್ಡ ಪೈಪಿನ ಮೂಲಕ ನೀರು ಹೊರಬರುವಂತೆ ಮಾಡಿದ್ದಾರೆ.

ಈಗ ಹತ್ತಿರದ ಕಟ್ಟಡಗಳ ಚಾವಣಿ ನೀರೆಲ್ಲಾ ಆಯಾಯ ಇಂಗುಬಾವಿಗಳ ಒಳಕ್ಕೆ ಇಳಿಯುತ್ತದೆ. ಹೀಗೆ ಇಳಿಯುವುದಕ್ಕೆ ಮೊದಲು ಸಿಮೆಂಟಿನ ಚೌಕಾಕಾರದ ಚೇಂಬರ್ ಮಾಡಿದ್ದಾರೆ. ಒಗ್ಗೂಡಿದ ಇಳಿ ಪೈಪು ಈ ಚೇಂಬರಿನೊಳಕ್ಕೆ ನೀರನ್ನು ಕಕ್ಕುತ್ತದೆ. ಹಾಗೆ ಪೈಪಿನಿಂದ ಹೊರಬಂದ ನೀರಿನಲ್ಲಿ ಕಸಕಡ್ಡಿ ಇದ್ದರೆ ಇಲ್ಲಿಯೇ ತಂಗುತ್ತದೆ. 'ಅನ್ಯ' ವಸ್ತುಗಳನ್ನು ಅಲ್ಲೇ ಬಿಟ್ಟ ನೀರು ಚೇಂಬರಿನ ಎದುರುಬದಿಯಿಂದ ಹೋಗಿ ಬಾವಿಗೆ ಇಳಿಯುತ್ತದೆ.

ಇಂಗುಬಾವಿಯ ವ್ಯಾಸ ಐದು ಅಡಿ, ಆಳ ಇಪ್ಪತ್ತು. ಇದಕ್ಕೆ ನಾಲ್ಕಡಿ ವ್ಯಾಸದ ಸಿಮೆಂಟ್ ರಿಂಗುಗಳನ್ನು ತಳದಿಂದಲೂ ಹಾಕುತ್ತಾ ಬಂದಿದ್ದಾರೆ. ಇಂಗುಬಾವಿಯ ಗೋಡೆ ಕುಸಿದು ತೊಂದರೆ ಆಗದಂತೆ ಈ ವ್ಯವಸ್ಥೆ. ಅಪಾಯ ಬಾರದಂತೆ ಬಾವಿಯ ಮೇಲ್ಬದಿಗೆ ಕಾಂಕ್ರೀಟಿನ ಮುಚ್ಚಳ ಹಾಕಿದ್ದಾರೆ. ಇದು ಭಾರವಿದ್ದು ಸುಲಭದಲ್ಲಿ ಒಬ್ಬರೇ ತೆಗೆದಿಡುವ ಹಾಗೆ ಇಲ್ಲ. ಬಾವಿಯ ಒಳಗಿನ ಸ್ಥಿತಿಗತಿ ಅರಿಯಲು ಈ ಮುಚ್ಚಳದ ನಡುವೆಯೇ ಒಂದು ಪಿವಿಸಿ ಪೈಪ್ ಇಟ್ಟು 'ಇಣುಕು ರಂಧ್ರ' ಮಾಡಿಟ್ಟಿದ್ದಾರೆ.

ಕರಾವಳಿಯಲ್ಲಿ ಅಪೂರ್ವ ರಚನೆ

ಅಗಲ ಕಿರಿದಾದ ಬಾವಿ ತೋಡುವುದು ಸ್ವಲ್ಪ ನಾಜೂಕಿನ ಕೆಲಸ. ಇಂಗುಬಾವಿಗಳಲ್ಲಿ ಕನಿಷ್ಠ ವ್ಯಾಸ ಎಂದರೆ ಮೂರಡಿಯದ್ದೂ ತೋಡುವುದಿದೆ. ಬಾವಿ ತೋಡುವ ವೃತ್ತಿಯವರೆಲ್ಲರಿಗೂ ಈ ಕೆಲಸ

ಇಳಿ ಪೈಪುಗಳ ನೀರಿನ್ನು ಇಂಗುಬಾವಿಗೆ

ಸಿದ್ಧಿಸಿರುವುದಿಲ್ಲ. ಇಷ್ಟು ಕಡಿಮೆ ವ್ಯಾಸದ ಬಾವಿ ಈ ಭಾಗದಲ್ಲಿ ಪರಿಚಯ ಇಲ್ಲದ ಕಾರಣ ಇದನ್ನು ತೋಡುವ ತಂಡಗಳು ಇನ್ನಷ್ಟೇ ಅಭಿವೃದ್ಧಿ ಆಗಬೇಕಿದೆ. ಬೆಂಗಳೂರಿನಲ್ಲಾದರೆ ನೂರಾರು ಮಣ್ಣು ವಡ್ಡರ ಕುಟುಂಬ ಇದ್ದು ಅವರೀಗ ಇಂಗುಬಾವಿಯ ಕೆಲಸದಲ್ಲಿ ಪರಿಣತರಾಗಿಬಿಟ್ಟಿದ್ದಾರೆ.

ಈ ಬಾರಿ ಕರಾವಳಿಯಲ್ಲಿ ಸರಿಯಾದ ಮಳೆಗಾಲ ಆರಂಭವಾದದ್ದೇ ಜುಲೈ ತಿಂಗಳಲ್ಲಿ, ಅಂದರೆ, ಮಳೆಯ ಭರ ಆರಂಭವಾಗುವ ಹೊತ್ತಿಗೆ ಐದೂ ಇಂಗುಬಾವಿಗಳು ನೀರು ಕುಡಿಯಲು ಬಾಯ್ತೆರೆದು ನಿಂತಿದ್ದುವು. ಕಾಲೇಜು ಆವರಣ ಒಟ್ಟು ಹದಿನೈದು ಎಕರೆಗಳಿಗೆ ಚಾಚಿ ನಿಂತಿದೆ. ಈ ಇಂಗುಬಾವಿಗಳು ಈಗ ಈ ಕ್ಯಾಂಪಸ್ಸಿನ ದೊಡ್ಡ ಭಾಗದ ನೀರನ್ನು ಹೊಟ್ಟೆಯೊಳಗೆ ತುಂಬಿಕೊಳ್ಳುತ್ತಿವೆ.

ಇಂಗುಬಾವಿಗಳು, ಪೈಪುಗಳ ವೆಚ್ಚ, ಪ್ಲಂಬಿಂಗ್ ಮತ್ತು ಇದಕ್ಕೆ ಸಂಬಧಿಸಿದ ಕಾಮಗಾರಿಗಳು ಎಲ್ಲವೂ ಸೇರಿ ಕಾಲೇಜಿಗೆ ಐದು ಲಕ್ಷ ರೂಪಾಯಿ ವೆಚ್ಚವಾಗಿದೆಯಂತೆ. ಆದರೆ ಇನ್ನು ವರ್ಷ ವರ್ಷವೂ ಮಾಡಬೇಕಾದ ನಿರ್ವಹಣೆಯ ಕೆಲಸ ಏನೂ ಇಲ್ಲ.

ಪೂರ್ತಿ ಫಲಿತಾಂಶಕ್ಕೆ ಮುಂದಿನ ಬೇಸಿಗೆಯವರೆಗೆ ಕಾಯಬೇಕಾದರೂ, ಯಶಸ್ಸಿನ ಸೂಚನೆ ಈಗಲೇ ಕಾಣಹತ್ತಿದೆ

ಏನಿದು ಇಂಗುಬಾವಿ ?

ನೀರಿಂಗಿಸಲೆಂದೇ ಇಂಗುಬಾವಿ ತೋಡುವ ಕ್ರಮ ಆರಂಭವಾದದ್ದು ಚೆನ್ನೈಯಲ್ಲಿ, 90ರ ದಶಕದಲ್ಲಿ. ಅಲ್ಲಿನ ಕಟ್ಟಡ ನಿರ್ಮಾಣ ಸಂಸ್ಥೆ 'ಅಲಾಕ್ರಿಟಿ ಫೌಂಡೇಷನ್' ತನ್ನ ಹೊಸ ಕಟ್ಟಡಗಳ ಬಳಿ ಈ ರಚನೆಯನ್ನು ಮಾಡಿಸಲು ಆರಂಭಿಸಿತು.

ಮುಂದಿನ ದಿನಗಳಲ್ಲಿ ಈ ರಚನೆ ಬೆಂಗಳೂರಿಗೆ ಬಂತು. ಅಲ್ಲಿನ 'ರೈನ್ ವಾಟರ್ ಕ್ಲಬ್' ಇದನ್ನು ತುಂಬ ಜನಪ್ರಿಯಗೊಳಿಸಿತು. ಈಗ ಬೆಂಗಳೂರಿನಲ್ಲಿ ಸುಮಾರು ಒಂದು ಲಕ್ಷ ಇಂಗುಬಾವಿ ಇರಬಹುದೆಂದು ಅಂದಾಜು.

ರೈನ್ ವಾಟರ್ ಕ್ಲಬ್ಬಿನ ಮುಖ್ಯಸ್ಥ ಎಸ್. ವಿಶ್ವನಾಥ್ ಮತ್ತು ಸಮಾನಾಸಕ್ತರು ಈಗ ಬೆಂಗಳೂರಿನಲ್ಲಿ 'ಒಂದು ಮಿಲಿಯ ಇಂಗುಬಾವಿ' ಎಂಬ ಅಭಿಯಾನ ಹುಟ್ಟುಹಾಕಿದ್ದಾರೆ. ಅಷ್ಟು ಬಾವಿಗಳಲ್ಲಿ ಇಂಗಿಸುವಷ್ಟೂ ಮಳೆ ನಗರದಲ್ಲಿದೆ. ದಶಲಕ್ಷ ಇಂಗುಬಾವಿ ಮಾಡಿ ನೀರಿಂಗಿಸಲು ಸಾಧ್ಯವಾದರೆ ಈಗ ಕಾವೇರಿ ಕೊಡುವಷ್ಟೇ ನೀರನ್ನು ಇಲ್ಲೇ ರೂಢಿಸಿಕೊಳ್ಳಲು ಸಾಧ್ಯ ಎನ್ನುತ್ತಾರೆ ವಿಶ್ವನಾಥ್.

ಹೆಚ್ಚು ಮಳೆ ನೀರೊಟ (ರನ್ ಆಫ್) ಇರುವಲ್ಲಿ ದೊಡ್ಡ ಪ್ರಮಾಣದ ನೀರನ್ನು ಕಡಿಮೆ ಅವಧಿಯಲ್ಲಿ ಇಂಗಿಸಲು, ಇಳಿದ ಜಲಮಟ್ಟ ಏರಿಸಲು ಇಂಗುಬಾವಿ ಅತ್ಯುತ್ತಮ. ಬೆಂಗಳೂರಿನಲ್ಲಿ ಮೂರು ಅಡಿ ವ್ಯಾಸ, ಇಪ್ಪತ್ತು ಅಡಿ ಆಳದ ಇಂಗುಬಾವಿಗೆ ಸುಮಾರು 30 ಸಾವಿರ ರೂಪಾಯಿ ವೆಚ್ಚ ಬರುತ್ತದೆ.

ಇಂಗುಬಾವಿ ನಗರದ ಕೃತಕ ನೆರೆ ಕುಗ್ಗಿಸುವ, ಅಂತರ್ಜಲ ಮಟ್ಟ ಏರಿಸುವ – ಎರಡೂ ಕೆಲಸಗಳನ್ನು ಮಾಡುತ್ತದೆ. ನಗರ ಮತ್ತು ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದ ಮಳೆನೀರು ಹರಿದೋಡುವಲ್ಲಿಗೆ ಇದು ಸೂಕ್ತ. ಆದರೆ 'ಮಾಡಿ–ಬೇಡಿ'ಗಳ ಅಧ್ಯಯನ ಮಾಡಿಯೇ ಈ ಕೆಲಸಕ್ಕೆ ಇಳಿಯಬೇಕು.

ಉಡುಪಿ ಜಿಲ್ಲೆಯಲ್ಲೇ ಕೋಟೇಶ್ವರ ಬಳಿಯ ಗುರುಕುಲ ಶಿಕ್ಷಣ ಸಂಸ್ಥೆ ಇದೆ. ಅಲ್ಲಿ 2016ರಲ್ಲಿ ಎರಡು ಇಂಗುಬಾವಿ ನಿರ್ಮಿಸಿದ್ದಾರೆ. ಅವು ಸಂಸ್ಥೆಯ ನೀರ ತಲೆನೋವನ್ನು ನಿವಾರಿಸಿಬಿಟ್ಟಿವೆ. ಬಾವಿ ಎಲ್ಲೆಲ್ಲಿದೆಯೋ ಅಂಥ ಜಾಗಗಳಲ್ಲೆಲ್ಲಾ ಇಂಗುಬಾವಿಯೂ ಪ್ರಸ್ತುತ ಎನ್ನುತ್ತಾರೆ ವಿಶ್ವನಾಥ್. ದುರದೃಷ್ಟ ಎಂದರೆ, ಬೆಂಗಳೂರೇತರ ಕರ್ನಾಟಕಕ್ಕೆ ಇಂಗುಬಾವಿ ಮತ್ತದರ ಮಹತ್ವ ಇನ್ನೂ ಅಪರಿಚಿತ.

ಹಳೆ ಬ್ಲಾಕಿನ ಚಾವಣಿ ನೀರು ಒಟ್ಟುಮಾಡಲು ಸ್ಟೈನ್‌ಲೆಸ್ ಸ್ಟೀಲ್ ದಂಬೆ

ಎನ್ನುತ್ತಾರೆ ಪ್ರಾಂಶುಪಾಲ ಎಂ. ಜಿ. ವಿಜಯ್, ನಮ್ಮ ಸರ್ವೀಸ್ ಬಾವಿಗಳಲ್ಲಿ ಹಿಂದಿನ ಮಳೆಗಾಲಗಳಲ್ಲಿ ಏರದಷ್ಟು ಮಟ್ಟಕ್ಕೆ ನೀರು ಏರಿದೆ. ಈವರೆಗೆ ನಾವು ಗಮನಿಸದೆ ಹೊರಹರಿಯಬಿಟ್ಟ ನೀರನ್ನು ನಾವೇ ಸದುಪಯೋಗ ಮಾಡುತ್ತಿರುವುದರ ಹಿತಾನುಭವ ಬೇರೆಯೇ.

'ಈ ಕೆಲಸವನ್ನು ನಾವೇ ಹಿಂದಿನ ವರ್ಷಗಳಲ್ಲೇ ಮಾಡಬೇಕಾಗಿತ್ತು. ಹಾಗೆ ಮಾಡಿಕೊಂಡಿದ್ದರೆ ಟ್ಯಾಂಕರ್ ನೀರಿಗೆ ಹಣ ಹಾಳು ಮಾಡಬೇಕಾಗಿರಲಿಲ್ಲ', ದನಿಗೂಡಿಸುತ್ತಾರೆ ಶ್ರೀಧರ್ ನಾಯಕ್.

ಮೇಲ್ನೋಟಕ್ಕೆ ಸುಲಭ, ಉತ್ತಮ ಅನಿಸಿದರೂ ಸುಸ್ಥಿರ ಉಪಾಯವಲ್ಲ ಕೊಳವೆಬಾವಿ ಕೊರೆತ. ಅದರ ಬದಲಿಗೆ ವೆಚ್ಚ ತುಸು ಹೆಚ್ಚಾದರೂ ತಮ್ಮ ಸಂಸ್ಥೆ ಬಹು ಸುಸ್ಥಿರ ಪರಿಹಾರದ ಜಾಡು ಹಿಡಿದು ಕೆಲಸ ಪೂರೈಸಿದ ಬಗ್ಗೆ ಪ್ರಾಂಶುಪಾಲರಿಗೆ ಹೆಮ್ಮೆಯಿದೆ. ಈ ಕೆಲಸ ಇವರನ್ನು ಈ ದಾರಿಯಲ್ಲಿ ಇನ್ನೂ ಮುಂದೆ ಹೋಗಲು ಪ್ರೇರೇಪಿಸುತ್ತಿದೆ.

ಇನ್ನಷ್ಟು ಸಾಧ್ಯತೆ

ಈಗ ಎಂಜಿಎಂ ಕಾಲೇಜು ಮಳೆ ಹಿಡಿದ ಕಟ್ಟಡಗಳೆಲ್ಲಾ ಒಂದು ಕಾಲಕ್ಕೆ 'ನ್ಯೂಜೆನ್' ಆಗಿದ್ದಂಥವು. ಕಾಂಕ್ರೀಟ್ ಚಾವಣಿಯವು. ಆದರೆ ಕಾಲೇಜಿನ ಆರಂಭದ ದಿನಗಳ ಬ್ಲಾಕ್ ಒಂದಿದೆ. ಇದು ಮಂಗಳೂರು ಹಂಚಿನ ಚಾವಣಿಯದು. ಈ ಚಾವಣಿ ಈಗ ಪೂರ್ತಿ ಶಿಥಿಲವಾಗಿದ್ದು ಅಲ್ಲಿ ಹೊಸತರ ನಿರ್ಮಾಣವಾಗಬೇಕಿದೆ. ಆ ಚಾವಣಿಯ ನವೀಕರಣಕ್ಕೆ ಉತ್ತಮ ದರ್ಜೆಯ ಟಿನ್ ಶೀಟುಗಳನ್ನು ಈಗಾಗಲೇ ಖರೀದಿಸಿ ತಂದು ಆವರಣದೊಳಗೆ ಪೇರಿಸಿದ್ದಾರೆ. ಇನ್ನು ಅವುಗಳಿಗೆ ಬೇಕಾದ ರೀತಿಯ ಕಬ್ಬಿಣದ ಪಕಾಸು, ಹಂದರ ಜೋಡಿಸಿ ಟಿನ್‌ಶೀಟು ಹೊದೆಸುವುದೊಂದೇ ಬಾಕಿ. ಮಳೆನೀರು ಅಪೂರ್ವ ಸಂಪತ್ತು ಎನ್ನುವುದು ಇಲ್ಲಿನ ಆಡಳಿತಕ್ಕೆ ಮನವರಿಕೆ ಆಗಿದೆ.

03 Pg_035-110 TY200028

ಡಾ. ಎಂ. ಜಿ. ವಿಜಯ್ ಶ್ರೀಧರ್ ನಾಯಕ್

ಟಿನ್ ಶೀಟು, ಹಂಚಿನ ಚಾವಣಿಯ ಮೇಲೆ ಸುರಿಯುವ ಮಳೆಯನ್ನು ಒಟ್ಟು ಮಾಡಬೇಕಾದರೆ ಚಾವಣಿಯ ಕೆಳಗೆ ದಂಬೆ (ದೋಣಿ) ಜೋಡಿಸಿಕೊಳ್ಳಬೇಕು. ಈ ಉದ್ದೇಶಕ್ಕೆ ಹೆಚ್ಚಿನ ಬೆಲೆಯದಾದರೂ ಇವರು ಸ್ಟೈನ್‌ಲೆಸ್‌ಸ್ಟೀಲಿನದನ್ನೇ ತರಿಸಿಕೊಂಡಿದ್ದಾರೆ. ಮಳೆನೀರು ಹಿಡಿಯಬೇಕಾದರೆ ಅನುಕೂಲ ವಾಗಲಿ ಎಂಬ ದೂರಾಲೋಚನೆಯಿಂದ ಹೀಗೆ ಮಾಡಿದ್ದಾರೆ.

ಈಗ ನಾವು ಮಳೆ ಹಿಡಿದದ್ದಕ್ಕಿಂತಲೂ ಬಹುದೊಡ್ಡ ಚಾವಣಿ ಈ ಹಳೆಯ ಬ್ಲಾಕಿನದು ಎನ್ನುತ್ತಾರೆ. ಈ ಅಂದಾಜಿನಂತೆ ಈಗ ಇಂಗಿಸುತ್ತಿರುವುದಕ್ಕೂ ಹೆಚ್ಚಿನ ನೀರು ಇನ್ನು ಇಂಗಿಸಲು ಲಭ್ಯ ಎಂದಾಯಿತು. ಹಿಂದೆಯೇ ಕಟ್ಟಿಸಿಕೊಂಡ ಮೂರು ನಾಲ್ಕು ಸಂಪುಗಳೂ ಇವೆ ಕಾಲೇಜಿನಲ್ಲಿ. ಬೇಸಿಗೆಯಲ್ಲಿ ಬಾವಿಯ ನೀರನ್ನು ಇದಕ್ಕೆ ತುಂಬಿ ಮತ್ತೆ ಬಳಕೆಗೆ/ಓವರ್‌ಹೆಡ್ ಟ್ಯಾಂಕಿಗೆ ಕಳಿಸುವುದು ರೂಢಿ. ಮಳೆಗಾಲವಿಡೀ ಈ ಸಂಪುಗಳು ಬಳಸದೆ ಬಾಕಿ ಇರುತ್ತವೆ. ಹತ್ತಿರದಲ್ಲೇ ಸಿಗುವ ಚಾವಣಿ ನೀರನ್ನು ಫಿಲ್ಟರ್ ಮಾಡಿ ಈ ಸಂಪುಗಳಲ್ಲಿ ತುಂಬಿಸಿಕೊಳ್ಳಬಹುದು.

ಇಳಿ ಪೈಪುಗಳ ಪರಸ್ಪರ ಜೋಡಣೆ

> 'ಎಂಜಿಎಂ ಕಾಲೇಜು ಹಳೆಯ ಬ್ಲಾಕಿನ ನೀರನ್ನೂ ಇದೇ ರೀತಿಯಲ್ಲಿ ಇಂಗಿಸಿದರೆ ತನ್ನ ಸುತ್ತಮುತ್ತಲಿನ ಒಂದು ಕಿಲೋಮೀಟರ್ ಪ್ರದೇಶದ ಜಲಮಟ್ಟ ಏರಿಸಿಕೊಟ್ಟು ಸಮುದಾಯಕ್ಕೆ ಬಹು ಮಹತ್ವದ ಕೊಡುಗೆ ಕೊಟ್ಟಂತಾದೀತು.'
>
> – ಡಾ. ಉದಯಶಂಕರ್

ಮಳೆಗಾಲದಲ್ಲಿ ಮಳೆ ನೀರೇ ಸಾಕು

ಮೂರೂ ಸಂಪ್‌ಗಳ ಒಂದು ದಿನದ ಶೇಖರಣೆ ಕಾಲೇಜಿನ ಮೂರು ಕೆಲಸದ ದಿನಗಳಿಗೆ ಸಾಕು! ಅಂದ ಮೇಲೆ ಮಳೆಗಾಲದ ಮೂರು ನಾಲ್ಕು ತಿಂಗಳು ಬಾವಿಯಿಂದ ನೀರೆತ್ತಲೇಬೇಕಾಗಿಲ್ಲ! ತಾತ್ವಿಕವಾಗಿ ಅಷ್ಟು ಅಂತರ್ಜಲ ಬಾವಿಗಳಲ್ಲೇ ಉಳಿದಂತಾಯಿತು. ನೇರ ಮಳೆನೀರಲ್ಲೇ ಇಷ್ಟು ದೊಡ್ಡ ಸಂಸ್ಥೆಯನ್ನು ಪೂರ್ತಿ ಮಳೆಗಾಲ ನಿಭಾಯಿಸುವುದು ಜಿಲ್ಲೆಗೇ ಮಾದರಿ ಆಗಬಹುದು.

ಬಹುಶಃ ರಾಜ್ಯದಲ್ಲೇ ಎಂಜಿಎಂ ಕಾಲೇಜಿನ ಈ ಮಳೆಕೊಯ್ಲು ದೊಡ್ಡ ಪ್ರಮಾಣದ್ದು ಮತ್ತು ವೈಶಿಷ್ಟ್ಯಪೂರ್ಣವಾದದ್ದು. ನಮ್ಮ ಬಹುತೇಕ ಕಾಲೇಜು, ದೊಡ್ಡ ಆವರಣ ಮತ್ತು ಕಟ್ಟಡ ಹೊಂದಿದ ಸಂಸ್ಥೆಗಳು ಇಲ್ಲಿನ ಮಳೆಕೊಯ್ಲಿನ ಸಾಧನೆಯನ್ನು ಅನುಕರಿಸಬಹುದು. ಆದರೆ ನೆನಪಿಡಬೇಕಾದ ಅಂಶವೆಂದರೆ, ಆಯಾಯ ಜಾಗಕ್ಕೆ ಅತಿ ಸೂಕ್ತವಾದ ವಿಧಾನಗಳನ್ನು ಅಲ್ಲಲ್ಲಿನ ಪರಿಸ್ಥಿತಿ ಹೊಂದಿಯೇ ಆಯ್ದುಕೊಳ್ಳಬೇಕಿದೆ. ಅಲ್ಲಲ್ಲಿನ ಮಳೆಯ ಪ್ರಮಾಣ, ಮಣ್ಣಿನ ವರ್ಗ, ನೀರಿನ ಕೊರತೆಯ ಪ್ರಮಾಣ, ಒಟ್ಟು ನೀರಿನ ಅಗತ್ಯ, ಮಳೆಕೊಯ್ಲಿಗೆ ಇರುವ ಅನುಕೂಲತೆ, ಅನನುಕೂಲತೆ – ಇವುಗಳನ್ನೆಲ್ಲಾ ಒಟ್ಟಾಗಿ ಪರಿಗಣಿಸಿ ಯಾವ ವಿಧಾನ ಉತ್ತಮ ಎಂಬ ತೀರ್ಮಾನಕ್ಕೆ ಬರಬೇಕು.

ಉದಾಹರಣೆಗೆ ಕೆಲವು ಎಡೆಗಳಲ್ಲಿ ಚಾವಣಿ ನೀರನ್ನು ಸೋಸಿ ನೇರ ಬಾವಿಯೊಳಕ್ಕೆ ಇಳಿಸಬಹುದು. ಇಂಗುಗುಂಡಿಗಳ ಮೂಲಕ

ಚಾವಣಿ ರಿಪೇರಿಗೆ ಕಾಯುತ್ತಿರುವ ಮಂಗಳೂರು ಹಂಚಿನ ಚಾವಣಿಯ ಹಳೆ ಬ್ಲಾಕು

ಇಂಗಿಸಿಕೊಳ್ಳಬಹುದು. ಸ್ಟೋರೇಜ್ ಕಮ್ ರೀಚಾರ್ಜ್ (ಸಂಗ್ರಹ ಮತ್ತು ಇಂಗಿಸುವ) ರೀತಿಯ ಕೆಲಸ ಮಾಡಬಹುದು.

ಡಾ. ಉದಯಶಂಕರ್ ತನ್ನ ಕನಸನ್ನು ಬಿಚ್ಚಿಡುತ್ತಾ ಹೇಳುತ್ತಾರೆ. 'ಎಂಜಿಎಂ' ಕಾಲೇಜಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡಿರುವ ಈಗಿನ ಮಳೆಕೊಯ್ಲು ಕ್ಯಾಂಪಸ್ಸಿನ ಸುತ್ತಲಿನ ಜನಸಮುದಾಯಕ್ಕೂ ಪ್ರಯೋಜನ ಕೊಡಬಹದು. ಆಡಳಿತ ಮಂಡಳಿ ತಯಾರಾದರೆ, ಎರಡನೆ ಹಂತದಲ್ಲಿ, ಹಳೆಯ ಬ್ಲಾಕಿನ ನೀರನ್ನೂ ಇದೇ ರೀತಿಯಲ್ಲಿ ಇಂಗಿಸಲು ಸಲಹೆ ಮಾಡಲು ಬಯಸುತ್ತೇನೆ. ಅಷ್ಟು ಕೆಲಸವಾದರೆ ಎಂಜಿಎಂ ಕಾಲೇಜು ತನ್ನ ಸುತ್ತಮುತ್ತಲಿನ ಒಂದು ಕಿಲೋಮೀಟರ್ ಪ್ರದೇಶದ ಜಲಮಟ್ಟ ಏರಿಸಿಕೊಟ್ಟು ಸಮುದಾಯಕ್ಕೆ ಬಹು ಮಹತ್ವದ ಕೊಡುಗೆ ಕೊಟ್ಟಂತಾದೀತು'. ಈ ಕನಸೂ ನನಸಾದರೆ ಅದು ಎಂಜಿಎಂ ಕಾಲೇಜಿನ ಪ್ರತಿಷ್ಠೆಯನ್ನು ಒಂದು ಹೊಸ ಆಯಾಮಕ್ಕೆ ಒಯ್ಯಬಲ್ಲುದು.

ಜಲಸಾಕ್ಷರತೆಯ ಶಿಕ್ಷಣ

ತೃತೀಯ ಬಿ.ಎ. ಪತ್ರಿಕೋದ್ಯಮ ಓದುತ್ತಿರುವ 'ವಿದ್ಯಾರ್ಥಿ ಕಲ್ಯಾಣ ಮಂಡಳಿ'ಯ ಅಧ್ಯಕ್ಷ ಶ್ರೇಯಸ್ ಜಿ. ಕೋಟ್ಯಾನ್ ಅವರಿಗೆ ತನ್ನ ಕಾಲೇಜಿನ ಈ ಜಲಕಾಯಕ ಬಹುದೊಡ್ಡ ಹೆಮ್ಮೆ ಮೂಡಿಸಿದೆ. ಅವರು ಕೇಳುತ್ತಾರೆ, 'ಈಗಿನ ಪರಿಸ್ಥಿತಿ ನೋಡಿದರೆ ಇನ್ನು ಮುಂದೆ ನೀರಿನ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳುವಂತೆಯೇ ಇಲ್ಲ. ನಮ್ಮ ಕಾಲೇಜಿನಲ್ಲಿ ಮಾಡಿದ ಮಳೆಕೊಯ್ಲಿನ ವಿವರಗಳನ್ನು ಇಲ್ಲಿನ ಎಲ್ಲ ವಿದ್ಯಾರ್ಥಿಗಳನ್ನೂ ತಂಡತಂಡವಾಗಿ ಒಯ್ದು ತೋರಿಸಿ ಮನದಟ್ಟು ಮಾಡಿಕೊಡುವ ವ್ಯವಸ್ಥೆ ಮುಂದಿನ ಅಗತ್ಯ. ಇಲ್ಲಿ ಕಲಿತು ಹೊರಹೋಗುವ ಬೇರೆ ಬೇರೆ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಇಷ್ಟು ವರ್ಕಿಂಗ್ ನಾಲೆಜ್ ಸಿಕ್ಕರೆ ಮತ್ತೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವರು ದೊಡ್ಡ ಕೆಲಸ ಮಾಡಲು ದಾರಿ ಮತ್ತು ಪ್ರೇರಣೆ ಸಿಗಬಹುದಲ್ಲ?' ಈ ಪ್ರಸ್ತಾವವನ್ನು ಇವರು ಪ್ರಾಂಶುಪಾಲರೆದುರೂ ಮಂಡಿಸಿದ್ದಾರಂತೆ. ಅವರು ಧನಾತ್ಮಕವಾಗಿ ಸ್ಪಂದಿಸಿದ್ದಾರೆ ಎನ್ನುತ್ತಾರೆ.

ನೀರ ನಿಶ್ಚಿಂತೆಗಾಗಿ ಇಂಥ ಮೈಲಿಗಲ್ಲಿನ ಕೆಲಸ ಮಾಡಿದ ಈ ಸಂಸ್ಥೆ ಇನ್ನೂ ಜಲಜಾಗೃತಿಯ ನಿಟ್ಟಿನಲ್ಲಿ ಶ್ರೇಯಸ್ ಸೂಚಿಸುವುದಕ್ಕೂ ಒಂದು ಹೆಜ್ಜೆ ಮುಂದೆ ಹೋಗಬಹುದು. ಕಾಲೇಜು ಜಿಲ್ಲೆಗೇ ಅರಿವು ಮೂಡಿಸುವ ಪುಟ್ಟ ಮಳೆ ಕೇಂದ್ರವಾದರೆ ಸಮಾಜಕ್ಕೆ ಇನ್ನೂ ದೊಡ್ಡ ಕೊಡುಗೆ ಆಗಬಹುದು.

ಮಳೆ ಕೇಂದ್ರವಾಗಲಿ

'ಜಿಲ್ಲೆಗೊಂದು ಮಳೆ ಕೇಂದ್ರ (ರೈನ್ ಸೆಂಟರ್)' ಎನ್ನುವುದು ಕರ್ನಾಟಕದ ಜಲ ಕಾರ್ಯಕರ್ತರ ದಶಕ ಮೀರಿದ ಆಗ್ರಹ. ನಗರದ ಪರಿಸ್ಥಿತಿಗೆ ಹೊಂದಿ ಚೆನ್ನೈಯ 'ರೈನ್ ಸೆಂಟರ್' – ಇದು ಖಾಸಗಿ ನಿರ್ವಹಣೆಯ ಅಡಿಯಲ್ಲಿದೆ – ಸೊಗಸಾಗಿ ಕೆಲಸ ಮಾಡುತ್ತಿದೆ. ಆಯಾಯ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಕ್ಕೆ ಸೂಕ್ತವಾದ ಪಾರಂಪರಿಕ ಮತ್ತು ಆಧುನಿಕ ನೆಲಜಲ ಸಂರಕ್ಷಣಾ ವಿಧಾನಗಳ ಪ್ರತಿಕೃತಿ, ವಿಡಿಯೋ, ಬಹುಮಾಧ್ಯಮ ದಾಖಲಾತಿ, ಮಳೆಕೊಯ್ಲು ಮಾಡಿ ಗೆದ್ದವರ ಯಶೋಗಾಥೆ, ಸಂಪರ್ಕ ನಂಬರು, ಅಧ್ಯಯನ ಪ್ರವಾಸ, ತರಬೇತಿಗಳ ಸೌಕರ್ಯ – ಎಲ್ಲವೂ ಇಲ್ಲಿರಬೇಕು. ನಮ್ಮ ಬಾಗಲಕೋಟೆ, ವಿಜಯಪುರಗಳಲ್ಲಿ ಸರಕಾರಿ ನಿರ್ಮಿತ ಮಳೆ ಕೇಂದ್ರಗಳಿದ್ದರೂ ಅವನ್ನು ಬೇಕಾದ ರೀತಿಯಲ್ಲಿ ರಚಿಸಿಲ್ಲ; ಅಲ್ಲಿ ನಿರೀಕ್ಷಿತ ಚಟುವಟಿಕೆ ಆಗುತ್ತಲೂ ಇಲ್ಲ.

ಸುಸಜ್ಜಿತ ಮಳೆ ಕೇಂದ್ರ ಬೇಕೆನ್ನುವ ಬೇಡಿಕೆಗೆ ಯಾವ ಸರ್ಕಾರವೂ ಈವರೆಗೆ ಸ್ಪಂದಿಸಿಲ್ಲ. ಸರ್ಕಾರ ಈ ಕೆಲಸ ಮಾಡುತ್ತೋ ಬಿಡುತ್ತೋ, ಏಕೆ ಎಂಜಿಎಂನಂತಹ ಖ್ಯಾತ ಶಿಕ್ಷಣ ಸಂಸ್ಥೆಗಳು ಸಣ್ಣ ರೀತಿಯಲ್ಲಾದರೂ ಈ ಕೆಲಸ ಮಾಡಬಾರದು? ಶಾಲಾ ಕಾಲೇಜುಗಳ ಮಟ್ಟದಲ್ಲಿ ಇದು ಅಂಥ ಹೆಚ್ಚಿನ ಹೊರೆಯೂ ಅಲ್ಲ, ಅಸಾಧ್ಯವೂ ಅಲ್ಲ. ಈ ಕಾಲೇಜಿನಲ್ಲಿ ಸುಸಜ್ಜಿತ ಪತ್ರಿಕೋದ್ಯಮ ವಿಭಾಗವಿದೆ. ಈ ವಿಭಾಗದ ಮೂಲಕ ಮಳೆಕೊಯ್ಲಿನ ಚಿಕ್ಕ ಚಿಕ್ಕ ವಿಡಿಯೋಗಳನ್ನು ಮಾಡಬಹುದು. ಕಾಲೇಜಿಗೆ ಪದಾರ್ಪಣ ಮಾಡುವ ವಿದ್ಯಾರ್ಥಿಗಳು ಮಾತ್ರವಲ್ಲ, ಅಲ್ಪಾವಧಿ ತರಬೇತಿಗೆ ಬರುವ ಎಲ್ಲರಿಗೂ ಈ ವಿಡಿಯೋ ಮತ್ತು ಮಾಡಿದ ಕೆಲಸ ತೋರಿಸಿ ವಿವರಿಸಬಹುದು.

ಕ್ಯಾಂಪಸ್ಸಿನೊಳಗೇನೆ ಸುಸಜ್ಜಿತ 'ಮಳೆಕೊಯ್ಲಿನ ಟೂರ್' ನಡೆಸಲು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತರಬೇತಿ ಕೊಡಬಹುದು. ಬೇಕಾದ ಕರಪತ್ರ, ವಿಧಾನಗಳ ಬಗ್ಗೆ ಮಾಹಿತಿಪತ್ರ, ಮಡಚುಕಾಗದ ಬರೆಯಿಸಿ ಮುದ್ರಿಸಿ ಹಂಚಬಹುದು.

ಒಂದೆಕರೆಯ ಮೇಲೆ ಹತ್ತಿರಹತ್ತಿರ ಒಂದೂವರೆ ಕೋಟಿ ಲೀಟರ್ ಮಳೆ ಬೀಳುವ ಜಿಲ್ಲೆಗಳು ಮಳೆಯ ಸಖ್ಯ ಬೆಳೆಸಿಕೊಂಡರೆ ಸಾಕು, ಬರ ಈ ಕಡೆ ಎಂದೂ ಸುಳಿಯದು. ಕರಾವಳಿ ಜಿಲ್ಲೆಗಳಿಗಿಡೀ ಎಂಜಿಎಂ ಈ ಸರಳವಾದ ನೀರಿನ ಪಾಠ ಹೇಳುವಂತಾಗಲಿ.

ಎಂ. ಜಿ. ವಿಜಯ್ ಅವರ ಸಂಪರ್ಕ ಸಂಖ್ಯೆ : 9844897478

●

ಮಹಾತ್ಮ ಪದವಿ ಮತ್ತು ಗಾಂಧೀಜಿ

✍ **ಶಿವಕುಮಾರ್ ಈಬೇರಿ,** ದ್ವಿತೀಯ ಬಿ.ಎ.

ನಮ್ಮ ಶಾಲಾ ದಿನಗಳಲ್ಲಿ ಮಹಾತ್ಮಾ ಗಾಂಧೀಜಿ ನಮಗೆಲ್ಲಾ ಅಚ್ಚುಮೆಚ್ಚಿನ ಆದರ್ಶರಾಗಿ ಪೂಜ್ಯರಾಗಿದ್ದರು. ಇದಕ್ಕೆ ನಮ್ಮ ಶಾಲೆಯಲ್ಲಿ ಕಲಿಸುತ್ತಿದ್ದ ಪಾಠಗಳೂ ಒಂದು ಕಾರಣವಾಗಿದ್ದವು. ಕಾಲೇಜಿಗೆ ಪ್ರವೇಶಿಸುವ ಹೊತ್ತಿಗೆ ಗಾಂಧೀಜಿ ಬಗ್ಗೆ ಬೇರೆ ಬೇರೆ ರೀತಿಯ ಟೀಕೆ ಟಿಪ್ಪಣಿ ಕೇಳುತ್ತಿದ್ದಂತೆಯೇ ಶಾಲಾ ದಿನಗಳಲ್ಲಿ ಅವರ ಬಗ್ಗೆ ಇದ್ದ ಗೌರವ ಭಾವನೆ ಒಂದು ತರಹದಲ್ಲಿ ಪ್ರಶ್ನಿಸಲ್ಪಟ್ಟಂತೆ ಅನ್ನಿಸುತ್ತಿತ್ತು. ಆದರೆ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ನಾವೆಲ್ಲರೂ ದೇಶಭಕ್ತರನ್ನು ಸದಾ ಗೌರವಿಸುವ ಭಾವನೆಯನ್ನು ಹೊಂದಿದ್ದೆವು. ಕಾಲೇಜ್ ಶಿಕ್ಷಣಕ್ಕಾಗಿ ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿಗೆ ಸೇರಿದಾಗ ಇಲ್ಲಿಯ ಗಾಂಧಿ ಅಧ್ಯಯನ ಕೇಂದ್ರದ ತರಗತಿಗಳ ಮೂಲಕ ಗಾಂಧೀಜಿ ಬಗ್ಗೆ ವಿಮರ್ಶಾತ್ಮಕವಾಗಿ ಓದುವ ಅವಕಾಶ ಉಂಟಾಯಿತು. ಕಾಲೇಜಿನ ಗಾಂಧಿ ಅಧ್ಯಯನ ವಿಭಾಗ ಗಾಂಧಿ ನೂರೈವತ್ತು ವರ್ಷಗಳ ಸಂಭ್ರಮವನ್ನು ಎರಡು ಶೈಕ್ಷಣಿಕ ವರ್ಷಗಳ ಕಾಲ ಆಚರಿಸಿದ ಪರಿಣಾಮ ನಮಗೂ ಗಾಂಧಿ ವಿಚಾರ ದರ್ಶನ ಆಯಿತು.

ಗಾಂಧೀಜಿ ಮಹಾತ್ಮರಲ್ಲ ಎಂದು ಅವರನ್ನು ನಿಂದಿಸುವವರು ಹೇಳುತ್ತಾರೆ ಎಂಬ ಹಿನ್ನೆಲೆಯಲ್ಲಿ ಅವರ ಆತ್ಮಚರಿತ್ರೆ ಓದಿದೆ. ಅದರ ಮುನ್ನುಡಿಯಲ್ಲಿ ಗಾಂಧೀಜಿ ಹೇಳುವ ಮಾತಿನಿಂದ ಅವರು ತಮ್ಮನ್ನು ತಾವು ಎಂದೂ ಮಹಾತ್ಮ ಎಂದು ಭಾವಿಸಿಕೊಂಡಿರಲೇ ಇಲ್ಲ ಎಂಬುದು ಅರ್ಥವಾಗುತ್ತದೆ. ತನಗೆ ಬಂದಿರುವ ''ಮಹಾತ್ಮ'' ಎಂಬ ಬಿರುದು ತನಗೆ ಕಡಿಮೆ ಬೆಲೆಯುಳ್ಳದ್ದು ಎಂದು ಹೇಳುತ್ತಾರೆ. ಈ ಬಿರುದು ತನಗೆ ಅನೇಕ ವೇಳೆ ನೋವುಂಟು ಮಾಡಿದೆ, ಆ ಬಿರುದಿನಿಂದ ತಾನು ಎಂದಿಗೂ ಉಬ್ಬಿಹೋಗಿಲ್ಲ ಎಂದು ಹೇಳಿ ಅದಕ್ಕೆ ಮಹತ್ವವನ್ನು ನೀಡುವುದೇ ಇಲ್ಲ ಎಂಬ ವಿಚಾರ ಓದಿ ತುಸು ಗೊಂದಲ ಉಂಟಾಗಿತ್ತು. ಮುಂದೆ ಗಾಂಧಿ ವಿಚಾರಧಾರೆಗಳನ್ನು ಅಧ್ಯಯನ ಮಾಡುತ್ತಾ ಬಂದಂತೆ ''ಮಹಾತ್ಮ'' ಪದವಿಯ ಬಗ್ಗೆ ಅವರಿಗಿದ್ದ ನೈಜವಾದ ಅನಾಸಕ್ತಿಯ ಬಗ್ಗೆ ಅವರ ಮಾತುಗಳಿಂದಲೇ ತಿಳಿಯಿತು. ಅವು ಹೀಗಿವೆ: ''ಮಹಾತ್ಮ ಪದವಿಗಿಂತಲೂ ಸತ್ಯವು ನನಗೆ ಕೋಟಿಪಾಲು ಪ್ರಿಯ. ಮಹಾತ್ಮ ಪದವಿಯು ನನಗೊಂದು ಭಾರ. ನನ್ನ ಶಕ್ತಿಯ ಮಿತಿಮೇರೆಗಳನ್ನು ನಾನು ಚೆನ್ನಾಗಿ ಬಲ್ಲೆ. ನಾನೊಂದು ಧೂಳಿನ ಕಣ ಎಂಬುದನ್ನು ನಾನರಿತಿರುವೆ. ಆದುದರಿಂದ ಮಹಾತ್ಮ ಎಂಬುದರ ಭಾರವು ನನಗೆ ಸಂಬಂಧಿಸಿದ್ದಲ್ಲ. ಅನೇಕ ಸಾರೆ ಈ ಬಿರುದು ನನ್ನ ಮನಸ್ಸಿಗೆ ತೀವ್ರವಾದ ನೋವನ್ನು ಉಂಟುಮಾಡಿದೆ. ಅದರಿಂದ ನನಗೆ ಎಳ್ಳಷ್ಟು ಆನಂದವಾದ ಒಂದು ಕ್ಷಣವೂ ನನ್ನ ನೆನಪಿಗೆ ಬರುವುದಿಲ್ಲ. ನಾನೊಬ್ಬ ಮಹಾತ್ಮನೆಂದು ನನಗೆ ಅನ್ನಿಸುವುದೇ ಇಲ್ಲ. ಮಹಾತ್ಮ ಪದವಿಯು ನನ್ನ ಬಾಹ್ಯ ಚಟುವಟಿಕೆಗಳ ಮೂಲಕ, ರಾಜಕಾರಣದ ಮೂಲಕ ದೊರೆತಿರಬಹುದಾದ ಬಿರುದು. ಅದು ನನ್ನ ಜೀವಿತದ ಕ್ಷಣಭಂಗುರ ಅಥವಾ ನಶ್ವರ ಭಾಗ. ನನ್ನ ಜೀವನದ ನಿಜವಾದ ತಿರುಳು ಹಾಗೂ ಸನಾತನ ಅಂಶವೆಂದರೆ ಸತ್ಯ, ಅಹಿಂಸೆ, ಬ್ರಹ್ಮಚರ್ಯ ಇವುಗಳ ಬಗ್ಗೆ ಇರುವ ನನ್ನ ಆಗ್ರಹ. ಅವು ನನ್ನಲ್ಲಿ ಅಲ್ಪಾಂಶದಲ್ಲಿಯೇ ಇರಬಹುದು. ಆದರೂ ಅದು ತಿರಸ್ಕರಣೀಯವಲ್ಲ; ಸತ್ಯಾಗ್ರಹವೇ ನನ್ನ ಸರ್ವಸ್ವ. ಆ ಸತ್ಯಾಗ್ರಹ ಮಾರ್ಗದಲ್ಲಿ ನನಗಾದ ಸೋಲು, ಭ್ರಮನಿರಸನ ಇತ್ಯಾದಿಗಳು ಸಹ ನನಗೆ ಅತ್ಯಂತ ಬೆಲೆಬಾಳುವವು. ಅವು ನನ್ನನ್ನು ಗೆಲುವಿನತ್ತ ಒಯ್ಯುವ ಹೆಜ್ಜೆಗಳು. ನಾನು ಸಾಧುವೂ ಅಲ್ಲ, ಪಾಪಿಯೂ ಅಲ್ಲ ನಾನೊಬ್ಬ ಸಾಮಾನ್ಯ ಮನುಷ್ಯ.'' ಹೀಗೆಂದು ತಮ್ಮ ಅಂತರಂಗವನ್ನು ಸಾರ್ವಜನಿಕವಾಗಿ ತೆರೆದಿಟ್ಟ ಗಾಂಧೀಜಿ ಬಗ್ಗೆ ನಮ್ಮ ತಪ್ಪು ಗ್ರಹಿಕೆ ದೂರವಾಗುತ್ತದೆ. ಗೌರವ ಹೆಚ್ಚಾಗುತ್ತದೆ. ಗಾಂಧೀಜಿ ಕರ್ಮವೀರ, ಮಹಾತ್ಮ, ರಾಷ್ಟ್ರಪಿತ ಎಂಬ ಯಾವುದೇ ಬಿರುದುಗಳನ್ನು ಬಯಸಿದವರೇ ಅಲ್ಲ ಎಂದು ತಿಳಿಯುತ್ತದೆ. ಆದರೆ ಆ ಕಾಲದ ಹಲವಾರು ಕವಿಗಳು ಮತ್ತು ಗಣ್ಯರುಗಳು ಅವರಿಗೆ ಅನೇಕ ಬಿರುದುಗಳನ್ನು ಕೊಟ್ಟಿದ್ದರು. ಜನರೂ ಅವರನ್ನು ಪೂಜ್ಯ ಭಾವನೆಯಿಂದ ಮಹಾತ್ಮಾಜಿ ಎಂದು ಕರೆಯುತ್ತಿದ್ದರೂ ಅವರಿಗೆ ''ಬಾಪೂ'' ಎಂಬ ಹೆಸರೇ ಪ್ರಿಯವಾಗಿತ್ತು.

ಈ ಎಲ್ಲಾ ಬಿರುದಾವಳಿಗಳ ವಿಚಾರವಾಗಿ ನಮಗೆ ಪಾಠ ಹೇಳುವ ಗಾಂಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ವಿನೀತ್ ಸರ್ ಅವರೊಡನೆ ಚರ್ಚಿಸಿದಾಗ ಇನ್ನೊಂದು ಸ್ವಾರಸ್ಯಕರ ವಿಚಾರದ ಬಗ್ಗೆ ತಿಳಿಯಿತು. ಆ ಕಾಲದ ಜನರು ಗಾಂಧೀಜಿಯ ಕಾರ್ಯ ಚಟುವಟಿಕೆಗಳನ್ನು ನೋಡಿದವರಾಗಿ ಅವರನ್ನು ಜನಪ್ರಿಯ ದೇವರಾದ ಕೃಷ್ಣನ ಅವತಾರ ಎಂದು ಕರೆಯಲು ಆರಂಭಿಸಿದ್ದರಂತೆ. ಆಗ ಗಾಂಧೀಜಿ ನೇರವಾಗಿ ಇದನ್ನು ತಿರಸ್ಕರಿಸಿದ್ದರಂತೆ. ''ನನ್ನನ್ನು ಶ್ರೀ ಕೃಷ್ಣನ ಅವತಾರ ಎಂದು ತಿಳಿಯುವುದು ದೇವನಿಂದೆಯೇ ಸರಿ. ಆ ದೇವರ ಅನೇಕ ಸೇವಕರಲ್ಲಿ ನಾನೊಬ್ಬ ನಮ್ರ ಸೇವಕನು. ಸೇವಕನ ಮಹಿಮೆ ಬೆಳೆಸುವುದರಿಂದ ಕಾರ್ಯದ ಹಾನಿಯೇ ಆಗಬಲ್ಲದು'' ಎಂದು ನೇರವಾಗಿ ಹೇಳಿದ್ದರಂತೆ. ''ನಾನು ನನ್ನ ಪಥವನ್ನು ಬಲ್ಲೆ. ಅದು ಸರಳ ಹಾಗೂ ಇಕ್ಕಟ್ಟಿನದು. ಅದು ಖಡ್ಗದ ಮೊನೆಯಂತೆ. ಆ

03 Pg_035-110 TY200028

ಧಾರೆಯ ಮೇಲೆ ನಡೆಯಲು ನನಗೆ ಆನಂದ. ಆದರಿಂದ ಜಾರಿದಾಗ ನಾನು ಕಣ್ಣೀರಿಡುವೆ. ಪ್ರಯತ್ನಶೀಲನು ಎಂದೂ ನಾಶ ಹೊಂದಲಾರ ಎಂಬ ದೈವೀ ಆಶ್ವಾಸನೆಯಲ್ಲಿ ಪೂರ್ಣ ನಂಬಿಕೆಯಿದೆ. ಆದುದರಿಂದ ನನ್ನ ದುರ್ಬಲತೆಯ ಮೂಲಕ ಸಾವಿರ ಸಾರಿ ತಪ್ಪಿದರೂ ನನ್ನ ಶ್ರದ್ಧೆಗೆ ಕುಂದಾಗದು. ನಾನು ಪೂರ್ಣ ಸಂಯಮಿಯಾಗುವ ಪ್ರಯತ್ನದಲ್ಲಿ ನನಗೆ ಬೆಳಕು ಕಾಣುವುದು ಎಂಬ ಸದಾಶಯವಿದೆ!'' ಎಂಬ ಗಾಂಧಿ ವಾಣಿಯನ್ನು ಉಲ್ಲೇಖಿಸಿ, ತನ್ನ ಮಾರ್ಗದ ಅರಿವಿನ ಜೊತೆಗೆ ನಮ್ರತೆಯೂ ಗಾಂಧೀಜಿಯಲ್ಲಿತ್ತು ಎನ್ನುತ್ತಾರೆ ನಮ್ಮ ಅಧ್ಯಾಪಕರಾದ ವಿನೀತ್ ರಾವ್ ಅವರು. ಇವೆಲ್ಲವೂ ನನಗೆ ಬಹಳವಾಗಿ ಹಿಡಿಸಿತು.

ಕೊನೆಯದಾಗಿ ಗಾಂಧೀಜಿ ಬರೆದುಕೊಂಡಿದ್ದ ಈ ಕೆಳಗಿನ ವಾಕ್ಯವನ್ನು ಓದಿ ಅವರ ಆತ್ಮಶಕ್ತಿಯ ಅರಿವಾಯಿತು – ''ನನ್ನನ್ನು ಕೊಲ್ಲಬೇಕೆನ್ನುವ ಪ್ರಾಣಘಾತಕ ಪ್ರಯತ್ನಗಳು ಹಲವು ಆಗಿವೆ. ಕೊಲ್ಲಲು ಬಂದವರು ಪಶ್ಚಾತ್ತಾಪ ಪಟ್ಟಿರುವರು. ಆದರೆ ನಾನೊಬ್ಬ ಖಳನೆಂದು ಭಾವಿಸಿ ಯಾರಾದರೂ ಈಗ ಗುಂಡಿಕ್ಕಿದರೆ ಅವರು ತಮ್ಮ ಕಲ್ಪನೆಯಲ್ಲಿನ ಖಳನನ್ನು ಕೊಂದಂತಾಗುವುದೇ ಹೊರತು ನಿಜವಾದ ಗಾಂಧಿಯನ್ನಲ್ಲ!'' ●

ರಾಧಾಕೃಷ್ಣ

ಕಾರ್ಮೋಡ ಕವಿದಿಹುದು ಮನದ ಬಾನಿನಲಿ
ಬೇಸರದ ಬಿಸಿ ಉಸಿರ ಬಿರುಗಾಳಿ ಬರುತಿರಲು
ಬಿರುಗಾಳಿಗೆ ಸಿಲುಕಿದ ಮರದಂತೆ ರಾಧೆಯ ನಯನ ನಲುಗಿರಲು
ಮಳೆಗಾಗಿ ನವಿಲು ಕಾದಂತೆ, ನವಿಲುಗರಿಯ ನಲ್ಲ ರಾಧೆಗಾಗಿ ಕಾಯುತಿರಲು
ಕಾರ್ಮೋಡ ಕರಗಿ ಧಾರೆಯಾಗಿ ಹರಿದು ರಾಧೆಗೆ ದಾರಿ ಮಾಡಿಕೊಡಲು
ಬೇಸರದ ಬಿರುಗಾಳಿ ಬದಲಾಗಿ ಕೇಶವನ ಕೊಳಲ ನಾದ ಇಂಪಾಗಿ ತಂಪಾಗಿ ಬೀಸಲು
ಯಮುನೆಯ ತಟದಲ್ಲಿ ಪ್ರೇಮದ ಸಾಗರದಲ್ಲಿ ರಾಧಾಕೃಷ್ಣ ಒಂದಾಗಲು
ಅಲ್ಲಿಗೆ ವಿರಹವೆಂಬ ಪ್ರಳಯ ಕಳೆದು ಜಗದಲಿ ಪ್ರೇಮ ಸೂರ್ಯ ಉದಯಿಸಿದನು.

ಮುಸ್ಸಂಜೆಯಲ್ಲಿ ಪಡುವಣದ ಬಾನಿನಂಚಿಗೆ ರವಿ ಜಾರುತಿರಲು
ತಂಗಾಳಿಯ ತಂಪಾದ ಗಾಳಿ ರಾಧೆಯ ಮುಂಗುರುಳ ಬಳಸಿ ಸಾಗುತಿರಲು
ಬಾನಾಡಿಗಳು ಜಗವೇ ಮಲಗುತಿಹುದು ಎಂದು ಗೂಡು ಸೇರುತಿರಲು
ದಿನಮಣಿ ಇಲ್ಲದೇ ಬರಿದಾದ ಆಗಸದ ಶೃಂಗರಿಸಲು ಬೆಳ್ಳಿಯ ಚುಕ್ಕಿಗಳು ಬರುತಿರಲು
ಶ್ಯಾಮನ ಮುರಳಿಯ ದನಿಗೆ ಮೂರು ಜಗವು ಕಾಯುತಿರಲು
ಗೋಕುಲದ ಗೋಪಿಯರು ಮೋಹನನ ಮೋಹದಲ್ಲಿ ಮೈಮರೆತಿರಲು
ಕೇಶವ ತನ್ನ ಕೊಳಲಿನ ಮಾಯೆಯಲಿ ಎಲ್ಲರನು ಬಂಧಿಸುತ್ತಾ
ತಾ ರಾಧೆಯಲ್ಲಿ ಲೀನನಾದ ''ರಾಧಾಕೃಷ್ಣ''ನಾದ.

ಪೂಜಾ ರಾವ್, ತೃತೀಯ ಬಿ.ಎ.

03 Pg_035-110 TY200028

ಕೊರೋನಾ ಮಹಾಮಾರಿಯ ಹೊತ್ತಿನಲ್ಲಿ ಗಾಂಧಿ

✍ **ಶರತ್ ಕೆ. ಎಸ್.,** ತೃತೀಯ ಬಿ.ಎಸ್ಸಿ

ಕೋವಿಡ್ – 19 ಎಂಬ ಹೆಸರಿನ ರೋಗವನ್ನು ಆಡು ಭಾಷೆಯಲ್ಲಿ ಕೊರೋನಾ ಮಹಾಮಾರಿ ಎಂದು ಕರೆಯುತ್ತಾರೆ. ಕೊರೋನಾ ವೈರಸ್ ಡಿಸೀಸ್ – 2019 ಎಂಬುವುದು ಕೋವಿಡ್ – 19 ಎಂಬುದರ ವಿಸ್ತೃತ ರೂಪವಾಗಿದೆ. ಇದು ಕೊರೋನಾ ವೈರಾಣು ಪ್ರಭೇದದ ಸಾರ್ಸ್–ಕೋವ್–2 (SARS-CoV-2 ಅಂದರೆ Severe Acute Respiratory Syndrome – Corona Virus -2) ಎಂಬ ವೈರಾಣುವಿನಿಂದ ಉಂಟಾಗುವ ಸೋಂಕಾಗಿದೆ. ಈ ರೋಗವು ಚೀನಾದ ವುಹಾನ್‌ನಲ್ಲಿ ಮೊದಲಿಗೆ ಡಿಸೆಂಬರ್ 2019ರ ಮೊದಲ ವಾರದಲ್ಲಿ ಕಂಡು ಬಂದ ಕಾರಣ ಅದನ್ನು ಚೀನಾ ವೈರಸ್ ಅಥವಾ ವುಹಾನ್ ವೈರಸ್ ಎಂದೂ ಕರೆಯುತ್ತಾರೆ. ಅಲ್ಲಿನ ಸರ್ವಾಧಿಕಾರಿ ಸರಕಾರವು ಈ ರೋಗದ ಬಗ್ಗೆ ಹೊರ ಜಗತ್ತಿಗೆ ಸೂಕ್ತ ಮಾಹಿತಿ ನೀಡದ ಕಾರಣ 2020ರ ಮಾರ್ಚ್ 11ರ ಹೊತ್ತಿಗೆ ಇದು ಜಗದ್ವ್ಯಾಪೀ ಮಹಾಮಾರಿಯಾಗಿ ಘೋಷಿತವಾಗುವಷ್ಟು ಅನಿಯಂತ್ರಿತವಾಗಿ ಎಲ್ಲಾ ಖಂಡಗಳಿಗೆ ಹಬ್ಬುತ್ತಲಿತ್ತು. ಈ ವೈರಾಣು ಕಾಯಿಲೆಯು ವಿಮಾನ ಮತ್ತು ಹಡಗಿನ ಮೂಲಕ ಚೀನಾದಿಂದ ಸಂಚರಿಸಿದವರಿಂದಾಗಿ ಬೇರೆ ದೇಶಗಳಲ್ಲಿ ಹಬ್ಬಿ ವಿಶ್ವವ್ಯಾಪಿಯಾಗಿ ಹಬ್ಬಿತು. ಮೇ ತಿಂಗಳ 11ನೇ ತಾರೀಖು ರಾತ್ರಿಯ ಅಂಕಿ ಅಂಶಗಳ ಪ್ರಕಾರ ವಿಶ್ವದ 187 ದೇಶಗಳ ಒಟ್ಟು 41,42,970 ಜನರಿಗೆ ಈ ಸೋಂಕು ತಗುಲಿದ್ದು, ಅವರಲ್ಲಿ 2,83,861 ಜನರು ಇದಕ್ಕೆ ಬಲಿಯಾಗಿದ್ದಾರೆ. ಅಂತೆಯೇ ಭಾರತದಲ್ಲಿ 70,600 ಜನರಿಗೆ ಸೋಂಕು ತಗುಲಿದ್ದು ಸುಮಾರು 2,290 ಮರಣಗಳು ಇದರಿಂದಾಗಿ ಆಗಿವೆಯಾದರೂ 22,411 ಜನರು ಗುಣಮುಖರಾಗಿದ್ದಾರೆ ಎಂಬುವುದು ಗಮನಾರ್ಹವಾಗಿದೆ. ಕರ್ನಾಟಕದಲ್ಲಿ ಈ ತನಕ 862 ಜನರಿಗೆ ಸೋಂಕು ತಗುಲಿದ್ದು ಇವರಲ್ಲಿ 426 ಜನರು ಗುಣಮುಖರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಹಿಂದೆ ಕಂಡು ಬಂದಿದ್ದ ಒಂದೆರಡು ಪ್ರಕರಣಗಳು ಗುಣಮುಖರಾಗಿ ಸದ್ಯ ಉಡುಪಿ ಕೊರೋನಾ ಮುಕ್ತವಾಗಿದೆ.

ರೋಗ ಲಕ್ಷಣಗಳು :

ಈ ವೈರಾಣು ಸೋಂಕಿತರ ಸೀನು ಅಥವಾ ಎಂಜಲ ಹನಿಗಳ ಮೂಲಕ ಪ್ರಸರಣಗೊಳ್ಳುತ್ತದೆ. ಮಾತಾಡುವಾಗ, ಸೀನುವಾಗ, ಉಗುಳಿದಾಗ ಅಥವಾ ಕೆಮ್ಮಿದಾಗ ಹಾರುವ ಹನಿಗಳಿಂದ ಮತ್ತು ಅವುಗಳ ಸಂಪರ್ಕಕ್ಕೆ ಬಂದ ವಸ್ತುಗಳನ್ನು ಮುಟ್ಟಿ ಆರೋಗ್ಯವಂತ ವ್ಯಕ್ತಿಯು ತನ್ನ ಕಣ್ಣು, ಮೂಗು, ಬಾಯಿ ಮುಟ್ಟಿಕೊಂಡಾಗ ದೇಹವನ್ನು ಸೇರಿ ಶ್ವಾಸಕೋಶಗಳಿಗೆ ಇಳಿಯುತ್ತದೆ. ಇದು ಒಬ್ಬರಿಂದ ಇನ್ನೊಬ್ಬರಿಗೆ ಅರಿವಿಲ್ಲದಂತೆಯೇ ಪ್ರಸಾರವಾಗಿ ಸೋಂಕಿತರಲ್ಲಿ ಸಾಮಾನ್ಯವಾಗಿ ಜ್ವರ, ಕೆಮ್ಮು, ಆಯಾಸ, ಉಸಿರಾಟದ ತೊಂದರೆ, ವಾಸನೆ ಇಲ್ಲದಿರುವಿಕೆಯೇ ಮೊದಲಾದ ಲಕ್ಷಣಗಳನ್ನು ತೋರಿಸುತ್ತದೆ. ಈ ರೋಗ ತೀವ್ರ ಸ್ವರೂಪವನ್ನು ಪಡೆದಲ್ಲಿ ನ್ಯುಮೋನಿಯಾ ಮತ್ತು ಬಹು ಅಂಗಾಂಗಗಳ ವೈಫಲ್ಯ ಉಂಟಾಗಿ ಮಾರಣಾಂತಿಕವಾಗುತ್ತದೆ. ಈ ಹೊಸದಾದ ರೋಗಕ್ಕೆ ಯಾವುದೇ ಲಸಿಕೆ ಮತ್ತು ಔಷಧಿಗಳು ಲಭ್ಯವಿರದ ಕಾರಣದಿಂದ ಇದು ಎಲ್ಲಾ ವ್ಯವಸ್ಥೆಗಳನ್ನು ಸ್ತಬ್ಧಗೊಳಿಸಿದೆ. ಅಲ್ಲಲ್ಲಿ ಈ ಜಾಗತಿಕ ಮಹಾಮಾರಿಯು ಮಹಾ ಸಾಂಕ್ರಾಮಿಕವಾಗಿ ಹರಡುತ್ತಾ ಅಮೇರಿಕಾ, ಚೀನಾ, ರಷ್ಯಾ, ಐರೋಪ್ಯ ರಾಷ್ಟ್ರಗಳ ಸಹಿತವಾಗಿ ಬಲಿಷ್ಠ ರಾಷ್ಟ್ರಗಳನ್ನು ಅಸಹಾಯಕರನ್ನಾಗಿ ಮಾಡಿದೆ.

ಭಾರತದಲ್ಲಿ ಕೊರೋನಾ ಸಮರ :

ಭಾರತದಲ್ಲಿ ಮೂರು ಹಂತದಲ್ಲಿ ಲಾಕ್ ಡೌನ್ ಮೂಲಕ ಎಲ್ಲಾ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿ ಪ್ರಸರಣದ ಸರಪಳಿಯನ್ನು ಕಡಿಯುವ ಪ್ರಯತ್ನ ನಡೆಯಿತು. ಇದರಿಂದಾಗಿ ಒಂದು ಹಂತದ ನಿಯಂತ್ರಣ ಮಾತ್ರ ಸಾಧ್ಯವಾಯಿತು. ಆದರೂ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಮುಂದೆ ಸೂಕ್ತ ಎಚ್ಚರ ವಹಿಸಿ ರೋಗ ಸೋಂಕದಂತೆ ಬದುಕುವ ಸವಾಲಿದೆ. ಮಾಸ್ಕನ್ನು ಕಡ್ಡಾಯವಾಗಿ ಧರಿಸುವುದು, ಸಾಬೂನಿನಿಂದ ಪದೇ ಪದೇ ಕೈಗಳನ್ನು ತೊಳೆಯುವುದು, ಸ್ಯಾನಿಟೈಸರ್ ಬಳಸುವುದು, ಸಾಮಾಜಿಕ ಅಂತರ ಕಾಪಾಡುವುದು, ಸೀನುವಾಗ ಅಥವಾ ಕೆಮ್ಮುವಾಗ ಅಡ್ಡ ಹಿಡಿಯುವುದು, ಎಲ್ಲೆಂದರಲ್ಲಿ ಉಗುಳದಿರುವುದು, ಸ್ವಚ್ಛತೆಯನ್ನು ಕಾಪಾಡುವುದೇ ಮುಂತಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ರೋಗದಿಂದ ದೂರ ಇರಬಹುದಾಗಿದೆ.

ನಮ್ಮ ಅಧ್ಯಯನ :

ಮಾರ್ಚ್ 17 ರಿಂದ ಶಾಲಾ ಕಾಲೇಜುಗಳು ಮುನ್ನೆಚ್ಚರಿಕೆಯ ಕ್ರಮವಾಗಿ ಮುಚ್ಚಿದಾಗಿನಿಂದ ನಮ್ಮ ಶೈಕ್ಷಣಿಕ ವರ್ಷ ಈ ಬಾರಿ ಏರುಪೇರಾಗಿದೆ. ನಾವು ಮನೆಯಲ್ಲಿ ಕುಳಿತು ಅಂತರ್ಜಾಲದ ಮೂಲಕ ಅಧ್ಯಾಪಕರ ಪಾಠಗಳನ್ನು ಕೇಳಬೇಕಾಗಿದೆ. ಜಗತ್ತಿನ ಎಲ್ಲಾ ಧರ್ಮಗಳ ಪ್ರಾರ್ಥನಾ ಸ್ಥಳಗಳು ಮುಚ್ಚಿ ಜಾತ್ರೆಗಳು ರದ್ದಾಗಿವೆ.

03 Pg_035-110 TY200028

ಇಂತಹ ಸನ್ನಿವೇಶವನ್ನು ಅರ್ಥೈಸಿಕೊಳ್ಳಲು ಸಹಕಾರಿಯಾದ ಅಧ್ಯಯನ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ನಮಗೆ ನಮ್ಮ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರವು ಸಾಮಾಜಿಕ ಜಾಲತಾಣದ ಮುಖಾಂತರ ನೀಡಿತ್ತು. ಗಾಂಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ವಿನೀತ್ ರಾವ್ ಅವರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪೀಡಿಸಿದ್ದ ಪ್ಲೇಗ್, ಸಿಡುಬು, ಕಾಲರಾ, ಸ್ಪ್ಯಾನಿಷ್ ಫ್ಲೂ ಮುಂತಾದ ಮಹಾಮಾರಿಗಳ ಸಂದರ್ಭದಲ್ಲಿ ಗಾಂಧೀಜಿ ತೋರಿಸಿಕೊಟ್ಟಿದ್ದ ಪಾಠಗಳು ಈಗಿನ ಕೋವಿಡ್ ಕಾಲದಲ್ಲಿ ಹೇಗೆ ಪ್ರಸ್ತುತವಾಗಬಲ್ಲದು ಎಂಬ ಬಗ್ಗೆ ಅಧ್ಯಯನ ಮಾಡಿದೆವು.

ಗಾಂಧೀಜಿಯ ನೆನಪು :

ಬೇರೆ ಬೇರೆ ಸಾಂಕ್ರಾಮಿಕ ರೋಗಗಳು ಭಾರತೀಯ ಸಮುದಾಯವನ್ನು ಕಾಡಿದಾಗ ಗಾಂಧೀಜಿಯವರು ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಜೊತೆಗೆ ಸ್ವಯಂಪ್ರೇರಿತರಾಗಿ ಜವಾಬ್ದಾರಿಯುತ ಕೆಲಸಗಳನ್ನು ಮಾಡಿದ್ದರು. 1899ರಲ್ಲಿ ಪ್ಲೇಗ್ ರೋಗದ ಬಗ್ಗೆ ಮಾಹಿತಿ ಹಾಗೂ ಮುನ್ನೆಚ್ಚರಿಕೆಯ ಕರಪತ್ರವನ್ನು ದಕ್ಷಿಣ ಆಫ್ರಿಕಾದ ಮಾರಿಟ್ಸ್‌ಬರ್ಗ್ ಪುರಸಭೆಗಾಗಿ ಮಾಡಿದ್ದರು. 1904ರಲ್ಲಿ ಜೋಹಾನ್ಸ್ ಬರ್ಗ್‌ನಲ್ಲಿ ಪ್ಲೇಗ್ ಮಹಾಮಾರಿ ಬಂದಿರುವುದನ್ನು ಗುರುತಿಸಿ ಆರೋಗ್ಯ ಇಲಾಖೆಯ ಗಮನಕ್ಕೆ ಮೊದಲು ತಂದರು. ಅಲ್ಲಿ ಭಾರತೀಯ ಮೂಲದವರಿದ್ದ ಪರಿಸರದಲ್ಲಿ ಭಾರತೀಯ ಮೂಲದ ಸ್ವಯಂ ಸೇವಕರ ಹಾಗೂ ಸಹೃದಯ ವೈದ್ಯರ ಸಹಾಯದಿಂದ ತುರ್ತಾಗಿ ಸೋಂಕಿತರನ್ನು ಪ್ರತ್ಯೇಕಿಸಿಟ್ಟು ಶುಶ್ರೂಷಾ ತಂಡವನ್ನು ರಚಿಸಿಕೊಂಡು ಆರೈಕೆಯ ಕೆಲಸದಲ್ಲಿಯೂ ತೊಡಗಿದರು. ಭಾರತೀಯ ಮೂಲದವರಿಗೆ ಆ ಸಮಯದಲ್ಲಿ ರೋಗದ ಬಗ್ಗೆ ಮಾಹಿತಿ, ರೋಗದಿಂದ ದೂರವಿರಲು ತಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ, ಸ್ವಚ್ಛತೆಯ ಬಗ್ಗೆ, ರೋಗ ಲಕ್ಷಣಗಳನ್ನು ಗುರುತಿಸಿ ಚಿಕಿತ್ಸೆಗೆ ಕಳಿಸುವ ಬಗ್ಗೆ ಅರಿವನ್ನು ಮೂಡಿಸಿದ್ದರು. 1912ರಲ್ಲಿ ದರ್ಬಾನಿನಲ್ಲಿ ಪ್ಲೇಗ್ ಬಂದಾಗ ಅದರ ವಿರುದ್ಧ ಹೋರಾಟದಲ್ಲಿ ಆರೋಗ್ಯ ಇಲಾಖೆಯ ಜೊತೆಗೆ ಕೆಲಸ ಮಾಡಲು ಭಾರತೀಯ ಮೂಲದವರಿದ್ದ ಪ್ಲೇಗ್ ಕಮಿಟಿಯನ್ನು ರೂಪಿಸಿದ್ದರು. ಅದೇ ಸಮಯದಲ್ಲಿ ಸಿಡುಬು ರೋಗ ಸಾಂಕ್ರಾಮಿಕವಾದಾಗಲೂ ಅದರ ಬಗ್ಗೆ ಅರಿವನ್ನು ಮೂಡಿಸಿದ್ದರು. ಅದೇ ಜನವರಿಯಲ್ಲಿ ತಮ್ಮ ಇಂಡಿಯನ್ ಒಪೀನಿಯನ್ ಪತ್ರಿಕೆಯ ಮೂಲಕ ಭಾರತೀಯ ಮೂಲದವರು ಯಾವುದೇ ಕಾರಣಕ್ಕೂ ರೋಗವನ್ನು ಮುಚ್ಚಿಡದಂತೆ ಎಚ್ಚರಿಸಿದ್ದರು. ನಂತರ ಆಗಸ್ಟ್‌ನಲ್ಲಿ ಸಿಡುಬು ಮಹಾಮಾರಿಯ ಎರಡನೇ ಅಲೆಯ ಬಗ್ಗೆಯೂ ಪತ್ರಿಕೆಯ ಮೂಲಕ ಎಚ್ಚರಿಸಿದ್ದರು.

1915ರಲ್ಲಿ ಭಾರತಕ್ಕೆ ಮರಳಿದ ಬಳಿಕ ಇಲ್ಲಿನ ಸಾರ್ವಜನಿಕ ಸ್ವಚ್ಛತೆ ಹಾಗೂ ಸ್ವಾಸ್ಥ್ಯದ ಬಗ್ಗೆ ವಿಶೇಷವಾಗಿ ಗಮನಿಸಿ ಸ್ವಚ್ಛತೆ, ಶಿಸ್ತು, ಆರೋಗ್ಯಪೂರ್ಣ ಜೀವನ, ಸಹೃದಯತೆ, ದಯಾಪರತೆ, ಮುಂಜಾಗ್ರತೆ ಹಾಗೂ ರೋಗ ನಿರೋಧಕ ಶಕ್ತಿಯ ಮಹತ್ವದ ಬಗ್ಗೆ ಒತ್ತಿ ಹೇಳುತ್ತಲೇ ಇದ್ದರು. ಸ್ವಚ್ಛತೆಗೆ ಆದ್ಯತೆಯನ್ನು ನೀಡಿ ಜನರ ವೈಯಕ್ತಿಕ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಅವರದ್ದೇ ಆದ ರೀತಿಯಲ್ಲಿ ಪ್ರತಿಪಾದಿಸಿ ಮಾಡಿ ತೋರಿಸಿದ್ದರು. 1918ರಲ್ಲಿ ಭಾರತವನ್ನು ಸ್ಪ್ಯಾನಿಷ್ ಫ್ಲ್ಯೂ ಮಹಾಮಾರಿ ಕಾಡಿದ ಹೊತ್ತಿನಲ್ಲಿ ಗಾಂಧೀಜಿ ತೀವ್ರತರವಾದ ಡೀಸೆಂಟ್ರಿಗೆ (ಆಮಶಂಕೆಗೆ) ತುತ್ತಾಗಿ ದೀರ್ಘ ಕಾಲದ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಹಾಗಾಗಿ ಅವರಿಗೆ ಆ ಸಂದರ್ಭದಲ್ಲಿ ಕೆಲಸವನ್ನು ಮಾಡಲು ಆಗಿರಲಿಲ್ಲ. ಅವರ ಅನುಯಾಯಿಗಳು ಆಗ ಕೆಲವು ಹಳ್ಳಿಗಳಲ್ಲಿ ಆರೋಗ್ಯ ವ್ಯವಸ್ಥೆಗೆ ನೆರವಾಗಿದ್ದರು. ಈ ಸಂದರ್ಭದಲ್ಲಿ ಅವರು ಜನರ ಸಾವು ನೋವುಗಳನ್ನು ಕಂಡು ದುಃಖಿತರಾಗಿದ್ದರು.

1929ರಲ್ಲಿ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಓದುಗರೊಬ್ಬರ ಪತ್ರಕ್ಕೆ ಪ್ರತಿಕ್ರಿಯೆಗಾಗಿ ಕಾಲರಾ ಹಾಗೂ ಸಿಡುಬು ಸಾಂಕ್ರಾಮಿಕಗಳು ನಮ್ಮಲ್ಲಿರುವ ಅಶುಚಿತ್ವದಿಂದಾಗಿ ಹಾಗೂ ರಕ್ತದಲ್ಲಿನ ಚೈತನ್ಯವು (ರೋಗನಿರೋಧಕ ಶಕ್ತಿ) ಕಡಿಮೆಯಾಗಿ ಬರುವಂತಹವು. ಸಿಡುಬಿನಂತಹ ಮಹಾಮಾರಿಗಳಿಗೆ ಮದ್ದು ಇಲ್ಲವೆಂದು ಜನರು ಮೂಢನಂಬಿಕೆಗಳನ್ನು ಪೋಷಿಸಿಕೊಂಡು ಬಂದು ಹಣವನ್ನು ಪೋಲುಮಾಡಿ ಅಕಾಲಿಕ ಮರಣಕ್ಕೆ ತುತ್ತಾಗುತ್ತಿದ್ದಾರೆ ಎಂದು ಹೇಳಿ, ಅಂತಹ ಮೂಢನಂಬಿಕೆಗಳನ್ನು ನಿವಾರಿಸುವ ಪ್ರಯತ್ನ ಆಗಬೇಕೆಂದು ಹೇಳಿದ್ದರು.

ಗಾಂಧೀಜಿ ಆ ಕಾಲದಲ್ಲಿ ಹೇಳಿದ್ದ ಪಾಠಗಳ ಭಾವವು ಈ ಕಾಲಕ್ಕೂ ಪ್ರಸ್ತುತವಾಗಿದೆ :

1. ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ರೋಗವನ್ನು ಮುಚ್ಚಿಡುವುದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ. ಇದರಿಂದಾಗಿ ಹಾನಿಯೇ ಹೆಚ್ಚು. ಮುಚ್ಚಿಟ್ಟ ವ್ಯಕ್ತಿ ರೋಗದಿಂದ ನರಳುವುದು ಮಾತ್ರವಲ್ಲದೆ ದಂಡನೆಗೂ ಒಳಗಾಗಿ ಕಷ್ಟ ಅನುಭವಿಸಬೇಕಾಗುತ್ತದೆ ಹಾಗೂ ಇದರಿಂದ ಇಡಿಯ ಸಮುದಾಯವೂ ಕಷ್ಟ ಅನುಭವಿಸುವಂತಾಗುತ್ತದೆ.
2. ರೋಗವನ್ನು ಮುಚ್ಚಿಟ್ಟರೆ ರೋಗವೇ ಶತ್ರುವಾಗುತ್ತದೆ.
3. ಯಾರೂ ಕೂಡಾ ಬೀದಿಗಳಲ್ಲಿ ಅಥವಾ ಎಲ್ಲೆಂದರಲ್ಲಿ ಉಗುಳಬಾರದು ಅಥವಾ ಮೂಗನ್ನು ಎಲ್ಲೆಂದರಲ್ಲಿ ಸ್ವಚ್ಛಗೊಳಿಸಬಾರದು. ಇದರಿಂದಾಗಿ ಉಗುಳು, ಕಫ, ಸೀನು, ಸಿಂಬಳ ಮುಂತಾದವುಗಳಲ್ಲಿರುವ ರೋಗಾಣುಗಳು ಇನ್ನೊಬ್ಬರಿಗೆ ಹರಡಿ ಸೋಂಕನ್ನುಂಟು ಮಾಡುತ್ತವೆ.
4. ರಸ್ತೆಯಲ್ಲಿ ಮಲಮೂತ್ರ ವಿಸರ್ಜಿಸುವುದು, ಮೂಗನ್ನು ಸುರಿಯುವುದು, ಉಗುಳುವುದು ಎಲ್ಲಾ ನಾವು ದೇವರ ಹಾಗೂ ಮಾನವತೆಯ ವಿರುದ್ಧ ಎಸಗುವ ಪಾಪಗಳಾಗಿವೆ.

5. ಎಲ್ಲೆಂದರಲ್ಲಿ ಉಗುಳುವುದು ದಂಡನಾರ್ಹವಾದದ್ದು ಎಂದರೂ ತಪ್ಪಾಗದು.
6. ರೋಗಗಳನ್ನು ನಿವಾರಿಸಲು ರೋಗಿಗಳನ್ನು ಪ್ರೀತಿಸಿ, ರೋಗಿಗಳ ಆರೈಕೆಯನ್ನು ದಯಾಪರತೆಯಿಂದ, ಪ್ರೀತಿಯಿಂದ ಹಾಗೂ ಮಾನವೀಯ ಪ್ರಜ್ಞೆಯಿಂದ ಮಾಡಬೇಕು. ರೋಗಿಗಳನ್ನು ಬೆಂಬಲಿಸಿ ಆತ್ಮವಿಶ್ವಾಸ ತುಂಬಬೇಕು. ಯಾವತ್ತಿಗೂ ನಮ್ಮ ಹೋರಾಟ ರೋಗದ ವಿರುದ್ಧವೇ ಹೊರತು ರೋಗಿಯ ವಿರುದ್ಧವಲ್ಲ!

ಕೊರೋನಾ ಅಥವಾ ಕೋವಿಡ್ 19 ಮಹಾಮಾರಿಯ ಸಂದರ್ಭದಲ್ಲಿ ನಾವು ಈ ಅಂಶಗಳನ್ನು ಅರಿತುಕೊಂಡು ಈಗಿನ ಅಗತ್ಯಗಳನ್ನು ಅನುಲಕ್ಷಿಸಿ ಅನ್ವಯಿಸಿಕೊಳ್ಳಬೇಕಾಗಿದೆ.

●

ತಾಳ್ಮೆ

ತಾಳ್ಮೆಯನ್ನು ಎಂದಿಗೂ ಇತರರು
ನಮಗೆ ಕಲಿಸುವುದಿಲ್ಲ
ತಾಳ್ಮೆಯು ಎಂದಿಗೂ ಇತರರಿಂದ
ನಮಗೆ ವರ್ಗಾವಣೆಯಾಗುವುದಿಲ್ಲ
ತಾಳ್ಮೆಯು ಹುಟ್ಟುಗುಣವಲ್ಲ
ತಾಳ್ಮೆಯು ಎಂದಿಗೂ ಸಾಧಿಸಲಾಗದ
ಗುರಿಯಲ್ಲ.
ತಾಳ್ಮೆಯ ಬಗ್ಗೆ ನೂರು ಸಲಹೆಯನ್ನು
ಇತರರು ನೀಡಬಹುದು.
ನೂರು ಮಂತ್ರ ತಂತ್ರ ಅನುಸರಿಸಿ ತಾಳ್ಮೆ
ಸಾಧಿಸು ಎಂದು ನುಡಿಯುವರು
ಆದರೆ ತಾಳ್ಮೆಯ ಮಹತ್ವ, ಅದರ
ಅನುಕರಣೆ, ಅದರ ಆರಾಧನೆ
ಮತ್ತು ಅದರ ಬಳಕೆಯನ್ನು
ಸಮಯದ ಪರೀಕ್ಷೆಯಲ್ಲಿ ಹೇಗೆ
ಮಾಡುವೇ ಎಂಬುದು ನಮ್ಮ
ಜಾಣ್ಮೆಯಲ್ಲಿ ಅಡಗಿದೆ.

ದೀಪ್ತಿ ದಿನೇಶ್, ತೃತೀಯ ಬಿ.ಕಾಂ.

ಗಾಂಧೀಜಿ ಮತ್ತು ಅಹಿಂಸಾ ಸಂದೇಶ

✍ **ಆತ್ಮೀಯ ಎಮ್. ಪಿ.,** ದ್ವಿತೀಯ ಪಿ.ಯು.ಸಿ.

ಗಾಂಧೀಜಿ ರಾಜಕೀಯ ನಾಯಕರಾಗಿ ಈ ನಾಡಿನ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಆದರೆ ನಾಡಿನ ಬಹುಪಾಲು ಅವಿದ್ಯಾವಂತರೂ, ಮುಗ್ಧರೂ, ಸಂಪ್ರದಾಯಬದ್ಧರೂ ಆಗಿದ್ದ ಜನರ ವಿಶ್ವಾಸವನ್ನು ಪಡೆದುಕೊಳ್ಳುವ ಸಲುವಾಗಿ ತಮ್ಮ ರಾಜಕೀಯ ಕಾರ್ಯಕ್ರಮವನ್ನು ಅವರು ಭಗವಂತನ ಸಂಕಲ್ಪದ ಮಾರ್ಗವೆಂದು ಬಣ್ಣಿಸಿ ಅದಕ್ಕೆ ಧಾರ್ಮಿಕ ನಂಬಿಕೆಯ ರೂಪವನ್ನು ನೀಡಿಬಿಟ್ಟಿದ್ದರು. ಜನರ ದೃಷ್ಟಿಯಲ್ಲಿ ಅವರು ಮಹಾತ್ಮನೇ ಆಗಿ ಆಧ್ಯಾತ್ಮಿಕ ಶಕ್ತಿಯುಳ್ಳ ನಾಯಕನೇ ಆಗಿಬಿಟ್ಟರು.

1869ರ ಅಕ್ಟೋಬರ್ 2, ಭಾರತದ ರಾಷ್ಟ್ರಪಿತನ ಜನ್ಮದಿನ. ಗಲಭೆಗೆ ಹೆಸರಾಗಿರುವ ಭೂಕಂಪದ ಕಂಪವನ್ನು ಅನುಭವಿಸಿರುವ ಗುಜರಾತಿನ ಕಾಥೇವಾಡದ ಪೋರ್‌ಬಂದರ್‌ನಲ್ಲಿ ಗಾಂಧೀಜಿ ಅವರ ಜನನವಾಯಿತು. ಇವರ ತಂದೆ ಕರಮ್‌ಚಂದ್ ಗಾಂಧಿ ಹಾಗೂ ತಾಯಿ ಪುತ್ಥಲೀಬಾಯಿ. ಇವರು ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗಲೇ 13ನೇ ವಯಸ್ಸಿನಲ್ಲಿ ಕಸ್ತೂರ್ಬಾ ಅವರೊಡನೆ ವಿವಾಹವಾಗಿದ್ದರು. ಅನಂತರ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿ ಕಾನೂನು ಪದವಿ (ಬ್ಯಾರಿಸ್ಟರ್) ಪಡೆದರು. ಇಂಗ್ಲೆಂಡಿನಿಂದ 1891ರಲ್ಲಿ ಭಾರತಕ್ಕೆ ಬಂದು ರಾಜ್‌ಕೋಟ್ ಮತ್ತು ಮುಂಬೈಯಲ್ಲಿ ವಕೀಲಿ ವೃತ್ತಿ ಮಾಡಿದರು. ಅನಂತರ 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ತೆರಳಿ ಅಲ್ಲಿ 20 ವರ್ಷಗಳಿದ್ದರು. ಈ ಅವಧಿಯಲ್ಲಿ ಅಲ್ಲಿದ್ದ ಭಾರತೀಯರ ಮತ್ತು ಕರಿಯರ ವಿರುದ್ಧದ ವರ್ಣಭೇದ ನೀತಿಯನ್ನು ವಿರೋಧಿಸಿ ಪ್ರಪ್ರಥಮವಾಗಿ ''ಸತ್ಯಾಗ್ರಹ '' ಎಂಬ ಹೊಸ ಅಸ್ತ್ರ ಪ್ರಯೋಗಿಸಿದರು. ಅವರ ಜೀವನ ಸುಧಾರಣೆಗೆ ಪ್ರಯತ್ನಿಸಿದರು.

ಗಾಂಧೀಜಿಯವರು 1915ರಲ್ಲಿ ಭಾರತಕ್ಕೆ ಹಿಂತಿರುಗಿ 1920ರ ನಂತರದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ದೇಶದಾದ್ಯಂತ ಪ್ರವಾಸ ಮಾಡಿ ಆಂಗ್ಲರ ವಿರುದ್ಧ ''ಅಸಹಕಾರ ಚಳುವಳಿ''ಯನ್ನು ಹೂಡಿದರು. 1920ರಿಂದ 1948ರ ಅವಧಿಯನ್ನು ''ಗಾಂಧೀ ಯುಗ '' ಎನ್ನುತ್ತೇವೆ. ಈ ಅವಧಿಯಲ್ಲಿ ಭಾರತೀಯರನ್ನು ಸಂಘಟಿಸಿ ''ಅಸಹಕಾರ ಚಳುವಳಿ'', ''ಕಾಯಿದೆ ಭಂಗ ಚಳುವಳಿ'' (1931), ''ಭಾರತ ಬಿಟ್ಟು ತೊಲಗಿರಿ'' (1942) ಮುಂತಾದ ಚಳುವಳಿಗಳ ನಾಯಕತ್ವ ವಹಿಸಿದರು. ''ಸತ್ಯಾಗ್ರಹ '' ಎನ್ನುವ ವಿಶಿಷ್ಟ ಅಸ್ತ್ರವನ್ನು ಬ್ರಿಟಿಷರ ವಿರುದ್ಧ ಬಳಸಿ ಅವರನ್ನು ಮಣಿಸಿದರು. ಮಾಡು ಇಲ್ಲವೇ ಮಡಿ ಎಂಬ ಮಂತ್ರ ಹಾಡಿ 1947 ಆಗಸ್ಟ್ 15ರಂದು ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಯಶಸ್ವಿಯಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ಕೊನೆಗೊಳಿಸಿದರು.

ಆದರೆ ಭಾರತದ ವಿಭಜನೆಯಿಂದ ಗಾಂಧೀಜಿಯವರಿಗೆ ಬಹಳ ದುಃಖವಾಯಿತು. ಹಿಂದೂ-ಮುಸ್ಲಿಮರಲ್ಲಿ ಐಕ್ಯತೆಗೆ ಅವರು ಪ್ರಯತ್ನಿಸಿದರು. ಆದರೆ ಇದು ಫಲಕಾರಿಯಾಗಲಿಲ್ಲ. 1948 ಜನವರಿ 30ರಂದು ಗಾಂಧೀಜಿಯವರು ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ನಾಥೂರಾಂ ಗೋಡ್ಸೆ ಎಂಬುವವನ ಗುಂಡಿಗೆ ಬಲಿಯಾದರು. ಹೀಗೆ ಮಹಾತ್ಮ ಗಾಂಧೀಜಿಯವರು ಎಲ್ಲರ ಕಲ್ಯಾಣಕ್ಕಾಗಿ ಆತ್ಮಾರ್ಪಣೆ ಮಾಡಿದರು. ಅದಕ್ಕಾಗಿ ಜನ ಪ್ರೀತಿಯಿಂದ ಅವರನ್ನು ''ಬಾಪೂಜಿ'' ಎಂದು ಕರೆದರು.

ಮಾನವ ಕುಲಕ್ಕೆ ಗಾಂಧೀಜಿಯವರ ದೊಡ್ಡ ಕೊಡುಗೆ ಎಂದರೆ ಅಹಿಂಸೆಯ ಬಗ್ಗೆ ಅವರ ಉಪದೇಶ ಮತ್ತು ಅನುಷ್ಠಾನಗಳು. 1920ರಲ್ಲಿಯೇ ಈ ರೀತಿ ಬರೆದಿದ್ದಾರೆ – ''ಹೇಗೆ ಹಿಂಸೆಯು ಕಾಡುಮೃಗಗಳ ನಿಯಮವಾಗಿದೆಯೋ ಹಾಗೇ ಅಹಿಂಸೆಯು ನಮ್ಮ ಮಾನವ ವಂಶದ ನಿಯಮವಾಗಿದೆ. ಅಹಿಂಸೆಯು ಪರಿಪೂರ್ಣ ರಾಜ್ಯವಾಗಿದೆ. ಅದು ಎಲ್ಲಾ ಮಾನವರು ಸಹಜವಾಗಿ ಆದರೆ ಅಪ್ರಜ್ಞಾಪೂರ್ವಕವಾಗಿ ಯಾವುದರೆಡೆಗೆ ಚಲಿಸುತ್ತಿರುವರೋ ಆ ಗುರಿಯಾಗಿದೆ.'' ಅಹಿಂಸೆ ಎಂಬುದು ಕೇವಲ ತತ್ವಜ್ಞಾನವಲ್ಲ, ಹೃದಯಾಂತರಾಳದ ವಿಷಯವಾಗಿದೆ. ಮಹಾತ್ಮ ಗಾಂಧೀಜಿಯವರು ಅಹಿಂಸಾ ತತ್ವದ ಮೂಲ ಪುರುಷ ಅಲ್ಲದಿದ್ದರೂ ರಾಜಕೀಯ ರಂಗದಲ್ಲಿ ಆ ತತ್ವವನ್ನು ಅನುಷ್ಠಾನಗೊಳಿಸಿದ ಮೊದಲಿಗರಾಗಿದ್ದಾರೆ. ಗಾಂಧೀಜಿಯವರಿಗೆ ನಿಜವಾದ ಸ್ವಾತಂತ್ರ್ಯವನ್ನು ತರಬಲ್ಲ ಅಹಿಂಸೆಯ ಪರಿಣಾಮದ ಬಗ್ಗೆ ಬಲವಾದ ನಂಬಿಕೆಯಿತ್ತು.

ಮಹಾತ್ಮ ಗಾಂಧೀಜಿಯವರ ಪ್ರಕಾರ ಸತ್ಯವು ಅಹಿಂಸೆಯ ಮೂಲ ವಿಷಯವಾಗಿದೆ. ಅವರು ಸತ್ಯವನ್ನು ದೇವರೊಂದಿಗೂ, ದೇವರನ್ನು ಸತ್ಯದೊಂದಿಗೂ ಸಮೀಕರಿಸಿದರು. ಈ ಸತ್ಯವು ವ್ಯಕ್ತಿಯ ಮಾತು ಮತ್ತು ಕೃತಿಗಳೆರಡರಲ್ಲೂ ಮೂಡಿ ಬರಬೇಕು. ಹಾಗಾಗಿ ಅಹಿಂಸೆಯು ಸತ್ಯಕ್ಕಾಗಿ ನಡೆಯುವ ಹೋರಾಟವಾಗಿದೆ. ಅದನ್ನು ಸರಿಯಾದ ರೀತಿಯಲ್ಲಿ ಅನುಸರಿಸಿದರೆ ಜಯವನ್ನು ಖಂಡಿತ ಸಾಧಿಸ ಬಹುದು. ಹೋರಾಟದ ಕಾರಣ ಮಾತ್ರ ಸತ್ಯದ್ದಾಗಿರಬೇಕು. ಒಂದು ವೇಳೆ ಹೋರಾಟದ ಹಾದಿಯಲ್ಲಿ ವ್ಯಕ್ತಿಗೆ ತಾನು ಸತ್ಯದ ದಾರಿಯಿಂದ ದೂರ ಸರಿಯುತ್ತಿದ್ದೇನೆಂದು ಮನವರಿಕೆಯಾದರೆ ತನ್ನ ತಪ್ಪನ್ನೂ ಒಪ್ಪಿ ಪಡೆದ ಲಾಭವನ್ನು ತ್ಯಜಿಸುವುದಕ್ಕೆ ಯಾವ ಹಿಂಜರಿಕೆಯೂ ಇರಬಾರದು. ಉದಾಹರಣೆಗೆ ಗಾಂಧೀಜಿಯವರು 1922ರಲ್ಲಿ ತಾನು ತಪ್ಪು ಮಾಡುತ್ತಿದ್ದೇನೆಂದು ಅನಿಸಿದಾಗ ತಮ್ಮ ಸತ್ಯಾಗ್ರಹದ ಹೋರಾಟವನ್ನು ನಿಲ್ಲಿಸಿದರು. ಹೀಗೆ ಜಯಕ್ಕಿಂತಲೂ ಸತ್ಯವೇ

03 Pg_035-110 TY200028

ಶ್ರೇಷ್ಠವಾದುದು ಅಂದರೆ ಅಹಿಂಸೆಯನ್ನು ಎಂದೂ ಹಗುರವಾಗಿ ಪರಿಗಣಿಸಬಾರದು.

ಗಾಂಧೀಜಿಯವರ ಪ್ರಕಾರ ಅಹಿಂಸೆಯು ಧನಾತ್ಮಕವಾದ, ಕ್ರಿಯಾಶೀಲವಾದ ಮತ್ತು ರಚನಾತ್ಮಕ ಶಕ್ತಿಯಾಗಿದೆ, ವಿನಾ ಋಣಾತ್ಮಕವಾದುದಲ್ಲ. ಅದರ ಅರ್ಥ ಶಾಂತಿವಾದವಲ್ಲ ಅಥವಾ ದುಷ್ಟರಿಗೆ ಶರಣಾಗುವುದಲ್ಲ. ಅದು ಆತ್ಮಶಕ್ತಿಯಾಗಿದೆ ಅಥವಾ ಸತ್ಯಾನ್ವೇಷಣೆಯ ಶಕ್ತಿಯಾಗಿದೆ. ಅಂದರೆ ಓರ್ವ ವ್ಯಕ್ತಿ ತನ್ನ ಎಲ್ಲಾ ನೈತಿಕ ಮತ್ತು ಆಧ್ಯಾತ್ಮಿಕ ಬಲದ ಮೂಲ ಕೆಡುಕನ್ನು ವಿರೋಧಿಸುವ ಶಕ್ತಿಯಾಗಿದೆ. ಅದು ವಿದ್ಯುಚ್ಛಕ್ತಿಗಿಂತಲೂ ಹೆಚ್ಚು ಧನಾತ್ಮಕ ಶಕ್ತಿಯಾಗಿದೆ. ''ಅತ್ಯಧಿಕ ಹಿಂಸೆಯನ್ನು, ಅತ್ಯಧಿಕ ಅಹಿಂಸೆಯ ಮೂಲಕ ಎದುರಿಸಬಹುದು'' ಎಂಬುದಾಗಿ ಗಾಂಧೀಜಿಯವರು ಹೇಳಿದ್ದಾರೆ. ಅವರದೇ ಮಾತಿನಲ್ಲಿ ಹೇಳುವುದಾದರೆ, ''ಅದೊಂದು ನಾನು ಜೀವಿಸುವ, ಜೀವಿಸಲು ಬಯಸುವ ಮತ್ತು ಯಾವುದಕ್ಕೋಸ್ಕರ ನಾನು ಸಾಯಲು ಸಿದ್ಧನಾಗಿರುವೆನೋ ಅಂತಹ ತತ್ವವಾಗಿದೆ''. ಹಾಗಾಗಿ ಅವರ ಅಹಿಂಸೆಯನ್ನು ''ಆತ್ಮ ಧೈರ್ಯ'' ಸನ್ಯಾಸಿಯ ಹೋರಾಟ ಮತ್ತು ಪ್ರೀತಿಯ ಸಾಹಸ ಎಂದೆಲ್ಲಾ ಕರೆಯಲಾಗಿದೆ.

ಅಹಿಂಸೆಯನ್ನು ಗಾಂಧೀವಾದ ಹೀಗೆ ವಿವರಿಸುತ್ತದೆ: ''ಅಹಿಂಸೆ ಎಂಬುದು ಆಚರಣೆಯ ಸ್ಥೂಲ ನಿಯಮವೇನೂ ಅಲ್ಲ. ಅದೊಂದು ಮನೋವೃತ್ತಿ. ಯಾವ ಮನೋವೃತ್ತಿಯಲ್ಲಿ ದ್ವೇಷದ ವಾಸನೆಯೂ ಇರುವುದಿಲ್ಲವೋ ಅದನ್ನೇ ಅಹಿಂಸೆ ಎಂದು ಕರೆಯಲಾಗುತ್ತದೆ. ಗಾಂಧೀವಾದದ ಪ್ರಕಾರ ಸತ್ಯವೇ ''ಸಾಧ್ಯ'' ಅಥವಾ ''ಧ್ಯೇಯ''(ಗುರಿ)ವಾಗಿರುತ್ತದೆ ಹಾಗೂ ''ಅಹಿಂಸೆ'' ಆ ಗುರಿಯನ್ನು ಈಡೇರಿಸಿಕೊಳ್ಳುವ ಸಾಧನವಾಗಿರುತ್ತದೆ. ಅಂತೆಯೇ ಅದರ ಪ್ರಕಾರ, ದೂರದೃಷ್ಟಿಯಲ್ಲಿ ಸತ್ಯವೇ ಹಿತಕರವಾದುದು ಅಥವಾ ಭಗವಂತನ ಸಾಕ್ಷಾತ್ಕಾರ ಎಂದೆನಿಸಿಕೊಳ್ಳುತ್ತದೆ. ಹಾಗೂ ಅಹಿಂಸೆ ಆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧನವಾಗಿರುತ್ತದೆ. ಆದರೇ ಇದೇ ಗಾಂಧೀವಾದದ ಪ್ರಕಾರ ಸತ್ಯ ಮತ್ತು ಅಹಿಂಸೆಗಳು ಮನುಷ್ಯನ ಹಾಗೂ ಸಮಾಜದ ಬಾಳುವೆಯನ್ನು ಐಹಿಕವಾಗಿ ಹಾಗೂ ಭೌತಿಕವಾಗಿ ಯಶಸ್ವಿಯಾಗಿಸುವ ಸಾಧನಗಳೇನೂ ಅಲ್ಲ.

ಸತ್ಯ ಮತ್ತು ಅಹಿಂಸೆಗಳು ವ್ಯಕ್ತಿಗಳ ಆಚರಣೆಗೆ ಮಾತ್ರವೇ ಅಲ್ಲದೆ ಗುಂಪುಗಳ, ಸಮಾಜಗಳ ಮತ್ತು ಜನಾಂಗಗಳ ಆಚರಣೆಗೆ ಬರುವಂತೆ ಮಾಡಬೇಕು. ಸತ್ಯ ಮತ್ತು ಅಹಿಂಸೆಗಳು ಋಷ್ಯಾಶ್ರಮದೊಳಗಷ್ಟೇ ಅಡಗಿಕೊಂಡಿರುವ ಸದ್ಗುಣಗಳಲ್ಲ; ಸಾರ್ವಜನಿಕ ನ್ಯಾಯಸ್ಥಾನಗಳಲ್ಲೂ, ಶಾಸನ ಸಭೆಗಳಲ್ಲೂ, ವ್ಯಾಪಾರ ಸ್ಥಳಗಳಲ್ಲಿಯೂ ಪ್ರಯೋಗಿಸಲ್ಪಡುವ ಸದ್ಗುಣಗಳಾಗಿವೆ. ಮಹಾತ್ಮ ಗಾಂಧಿಯವರ ದೃಢವಾದ ನಂಬಿಕೆಯೆಂದರೆ ಹಿಂಸೆಯ ತಳಹದಿಯ ಮೇಲೆ ಬಹುಕಾಲ ನಿಲ್ಲಬಲ್ಲ ಪ್ರಿಯವಾದಂಥದ್ದೇನನ್ನೂ ನಿರ್ಮಿಸಲೂ ಸಾಧ್ಯವಿಲ್ಲ.

ಗಾಂಧೀಜಿಯವರ ಹಿಂಸಾ ತ್ಯಾಗ ತತ್ವಕ್ಕೆ ಭಾರತದ ಅಹಿಂಸಾ ಸಿದ್ಧಾಂತವೇ ಮೂಲವಾಗಿದೆ. ಗಾಂಧೀಜಿಯವರು ಅಹಿಂಸಾ ತತ್ತ್ವದ ವೀರನಾಯಕರಾಗಿದ್ದಾರೆ. ಅವರು ಟಾಲ್‌ಸ್ಟಾಯಿಯವರ ಕೃತಿ ''ದೇವ ಸಾಮ್ರಾಜ್ಯ ನಿನ್ನಲ್ಲಿಯೇ ಇದೆ'' [The kingdom of God within you] ಎಂಬ ಕೃತಿಯಿಂದ ಪ್ರಭಾವಿತರಾಗಿ ಈ ತತ್ತ್ವವನ್ನು ಅನುಸರಿಸಿದರು. ''ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತ್ತಲೇ ಹೋದರೆ ಇಡೀ ಪ್ರಪಂಚವೇ ನಾಶವಾಗುವುದು'' ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ''ನಾನು ಪ್ರಾಣ ತೆರಲು ಸಿದ್ಧರಿರಲಿಕ್ಕೆ ಹಲವಾರು ಕಾರಣಗಳಿವೆ, ಆದರೆ ಪ್ರಾಣ ತೆಗೆಯಲು ಸಿದ್ಧರಿರಲಿಕ್ಕೆ ಯಾವ ಕಾರಣವೂ ಇಲ್ಲ'' ಎಂದು ಗಾಂಧೀಜಿಯವರು ಹೇಳಿದ್ದಾರೆ.

ಭವ್ಯ ಭಾರತದ ವಿಶಿಷ್ಟವಾದ ವೈವಿಧ್ಯಮಯವಾದ ಸಾಮಾಜಿಕ ದರ್ಶನವೇ ಸರ್ವೋದಯ. ಇದು ಗಾಂಧೀಜಿಯವರ ಕನಸಾಗಿತ್ತು. 'ಸರ್ವೇಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು' ಎನ್ನುವಂತೆ ಗಾಂಧೀಜಿ ಬಯಸಿದ್ದು ಸರ್ವರ ಹಿತ, ಸರ್ವರ ಏಳಿಗೆಯ ದಿನ. ಹಲವರ ಏಳಿಗೆಯಲ್ಲಿ, ಸರ್ವೋದಯ ಸಮಾಜದ ಸ್ಥಾಪನೆ ಮಾಡುವ ಸತತ ಪ್ರಯತ್ನ ಅವರದಾಗಿತ್ತು. ಗಾಂಧೀಜಿಯವರ ಪ್ರಮುಖ ಕನಸುಗಳೆಂದರೆ ಗ್ರಾಮ ಸ್ವಚ್ಛತೆ, ಧಾರ್ಮಿಕ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಮೂಲ ಶಿಕ್ಷಣ, ಭಾಷೆ, ಮಾದಕ ವಸ್ತು ಮತ್ತು ಮದ್ಯಪಾನ ನಿಷೇಧ, ಕುಷ್ಠ ರೋಗಿಗಳ ರಕ್ಷಣೆ ಇವರ ಆಶಯವಾಗಿತ್ತು.

ಭಾರತವು ಅಹಿಂಸಾ ಮಾರ್ಗದಲ್ಲಿ ವಿಕಸಿಸಬೇಕಾದರೆ ಅದು ಅನೇಕ ವಿಷಯಗಳಲ್ಲಿ ವಿಕೇಂದ್ರೀಕರಣವನ್ನು ಸಾಧಿಸಬೇಕು. ಕೇಂದ್ರೀಕರಣವು ಸಾಕಷ್ಟು ಬಲವಿಲ್ಲದೇ ತನ್ನನ್ನು ರಕ್ಷಿಸಿಕೊಳ್ಳಲಾರದು ಮತ್ತು ಸ್ಥಿರವಾಗಿ ಉಳಿಯಲಾರದು.

ಇನ್ನು, ಗಾಂಧೀಜಿ ಯಾರು? ಎಂಬ ಪ್ರಶ್ನೆಗೆ ಹಲವು ಉತ್ತರಗಳನ್ನು ಕೊಡಬಹುದು. ಗುಜರಾತಿನ ಕರಮಚಂದ್ ಮತ್ತು ಪುತ್ಥಲೀಬಾಯಿಯವರ ಪುತ್ರ, ಅಹಿಂಸಾ ಮಾರ್ಗದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು. ಮಹಾತ್ಮಗಾಂಧಿ ಅಥವಾ ಮೋಹನದಾಸ ಕರಮಚಂದ ಗಾಂಧಿ, ರಾಷ್ಟ್ರಪಿತ ಗಾಂಧಿ, ಒಬ್ಬ ಪ್ರಕೃತಿ ಚಿಕಿತ್ಸೆಯ ಪ್ರಯೋಗಕಾರ, ಸಸ್ಯ ಆಹಾರದ ಪ್ರಯೋಗಕಾರ, ನಯೀತಾಲಿಂ ವಿದ್ಯಾಭ್ಯಾಸದ ಪ್ರಯೋಗಕಾರ, ಅಸಾಧಾರಣ ಚಾಣಾಕ್ಷ ರಾಜಕಾರಣಿ, ಸತ್ಯ ಮತ್ತು ಅಹಿಂಸೆಯ ಮೇಲೆ ಜೀವನವಿಡೀ ಪ್ರಯೋಗ ಮಾಡಿದ ಸಾಧಕ, ಹರಿಕಾರ, ಆತ್ಮಸಾಧಕ, ಅಪ್ಪಟ ಕರ್ಮಯೋಗಿ, ಆದರೆ ಇದಾವುದೂ ಗಾಂಧೀಜಿ ಯಾರು ಎಂಬ ಪ್ರಶ್ನೆಗೆ ಪೂರ್ಣವಾದ ಉತ್ತರವಾಗು ವುದಿಲ್ಲ. ಏಕೆಂದರೆ ಈ ಉತ್ತರಗಳು ಅವರ ಬಹುಮುಖ ವ್ಯಕ್ತಿತ್ವದ ಸಾಧನೆ. ಪ್ರಯೋಗಗಳನ್ನಾಗಲೀ, ಅವರ ಅಂತಃಸತ್ವವನ್ನಾಗಲೀ, ಅವರ ನಿಜವಾದ ಆಧ್ಯಾತ್ಮಿಕ ವ್ಯಕ್ತಿತ್ವವನ್ನಾಗಲೀ ವಿವರಿಸಲಾರವು. ●

03 Pg_035-110 TY200028

ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ಸಂಘಗಳ ಪಾತ್ರ

✍ **ಚಿನ್ಮಯಿ,** ಪ್ರಥಮ ಬಿ.ಎ.

ಇವತ್ತಿನ LPG ಯುಗದಲ್ಲಿ ಒಂದು ದೇಶದ ಅಭಿವೃದ್ಧಿಯ ಮಟ್ಟವನ್ನು ಆ ದೇಶದ ಆರ್ಥಿಕ ಸ್ಥಿತಿ-ಗತಿಯನ್ನು ನೋಡಿ ನಿರ್ಧರಿಸಲಾಗುತ್ತದೆ. ಒಂದು ದೇಶದ ಆರ್ಥಿಕ ಸ್ಥಿತಿಯ ಅಭಿವೃದ್ಧಿಗೆ ಕೃಷಿ, ಕೈಗಾರಿಕಾ, ಸೇವಾ ವಲಯಗಳು ತಮ್ಮದೇ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಾ ಇವೆ. ಕೃಷಿ, ಸೇವಾ, ಕೈಗಾರಿಕಾ ವಲಯಗಳ ಜೊತೆ ಸಹಕಾರಿ ಸಂಘಗಳು (co-operative societies) ಕೂಡ ಮಹತ್ತರ ಪಾತ್ರ ವಹಿಸುತ್ತವೆ.

ಒಂದು ದೇಶದ ಅಭಿವೃದ್ಧಿಯಾಗಬೇಕೆಂದರೆ ಮೊದಲು ಆ ದೇಶದ ಗ್ರಾಮಗಳ ಅಭಿವೃದ್ಧಿಯಾಗುವುದು ಮುಖ್ಯ. ಗಾಂಧೀಜಿ ಹೇಳಿದಂತೆ ''ಗ್ರಾಮ ಸ್ವರಾಜ್ಯ''ದ ಕಡೆಗೆ ನಮ್ಮ ನಡೆ ಸಾಗಬೇಕು. ಸೇವಾ ಸಹಕಾರಿ ಸಂಘಗಳು ಗ್ರಾಮೀಣ ಜನರಿಗೆ ಸಾಲವನ್ನು ಕೊಡುವ ಮೂಲಕ ಕೃಷಿ ಚಟುವಟಿಕೆಗೆ ಉತ್ತೇಜನ ನೀಡುತ್ತವೆ. ಇದರ ಜೊತೆಗೆ ಸಣ್ಣಪುಟ್ಟ ಗುಡಿಕೈಗಾರಿಕೆಗಳ ಅಭಿವೃದ್ಧಿಗೂ ಸಹಾಯಕವಾಗಿದೆ. ಈ ನಿಟ್ಟಿನಲ್ಲಿ ಗ್ರಾಮಗಳ ಜನರ ಜೀವನಗಳಿಗೆ ಹೊಸ ಬೆಳಕನ್ನು ಚೆಲ್ಲುವ ಮೂಲಕ ದೇಶದ ಕೃಷಿ ವಲಯಕ್ಕೆ ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಿದೆ.

ಸಹಕಾರಿ ಸಂಘಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿವೆ. ಭಾರತದಂತಹ ಜನಸಾಂದ್ರತೆ ಹೆಚ್ಚುಳ್ಳ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯು ಕೂಡ ಅಭಿವೃದ್ಧಿಯ ಪಾತ್ರದಲ್ಲಿ ತೊಡಗಬೇಕಾಗುತ್ತದೆ. ಇದಕ್ಕೆ ಮಹಿಳೆಯರು ಹೊರತಲ್ಲ. ಸೇವಾ ಸಹಕಾರಿ ಸಂಘಗಳು ಮಹಿಳೆಯರನ್ನು ಪ್ರೋತ್ಸಾಹಿಸುತ್ತಾ 'ಮಹಿಳಾ ಸಬಲೀಕರಣ'ಕ್ಕೆ ಸಹಾಯ ಮಾಡುತ್ತಾ ದೇಶದ ಆರ್ಥಿಕತೆಗೆ ಅದರ ಕೊಡುಗೆಯನ್ನು ನೀಡಲು ಸಹಾಯಕವಾಗಿವೆ. ಇದಕ್ಕೆ ನಾವು ಅಮೂಲ್ ಸಹಕಾರಿ ಸಂಘದ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ನಮಗೆ ಸ್ವಾತಂತ್ರ್ಯ ದೊರೆತು 72 ವರ್ಷಗಳು ಕಳೆದರೂ ಭಾರತದಲ್ಲಿ ನಿರುದ್ಯೋಗ ನಿವಾರಣೆ, ಬಡತನ ನಿರ್ಮೂಲನೆ, ಗ್ರಾಮಗಳ ಅಭಿವೃದ್ಧಿಯ ಮಾತು ಕನಸಾಗಿ ಉಳಿದಿದೆ. ಒಂದು ದೇಶದ ಆರ್ಥಿಕ ಸ್ಥಿತಿಯ ಉನ್ನತಿಗೆ ಈ ಸಮಸ್ಯೆಗಳಿಂದ ಹೊರಬರುವುದು ಅಗತ್ಯವಾಗಿದೆ. ಸೇವಾ ಸಹಕಾರಿ ಸಂಘಗಳು ದೇಶದಲ್ಲಿ ಉದ್ಯೋಗವನ್ನು ಸೃಷ್ಟಿಸುತ್ತಾ, ಸಾಮಾಜಿಕ-ಆರ್ಥಿಕ ಜೀವನಕ್ಕೆ ಭದ್ರ ಬುನಾದಿಯನ್ನು ಒದಗಿಸಿವೆ. 'ಶ್ರೀ ಮಹಿಳಾ ಗೃಹ ಉದ್ಯೋಗ ಲಿಜ್ಜತ್ ಪಾಪಡ್' ಎಂಬ ಮಹಿಳಾ ಸಹಕಾರಿ ಸಂಘವು ಇದಕ್ಕೆ ಉತ್ತಮ ನಿದರ್ಶನವಾಗಿದೆ. ಇದು ಸುಮಾರು 42,000 ಮಹಿಳೆಯರಿಗೆ ಉದ್ಯೋಗ ನೀಡುತ್ತಾ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದೆ. ಇದು ದೇಶದ ತಲಾ ಆದಾಯದ ಜೊತೆಗೆ GDPಯನ್ನು ಹೆಚ್ಚಿಸುವುದರಲ್ಲಿ ಸಹಕಾರಿಯಾಗಿದೆ.

ಸಹಕಾರಿ ಸಂಘಗಳು ಸಮಾಜದ ಬಡ ಜನರಿಗೆ ಸಾಲವನ್ನು ನೀಡುತ್ತಾ, ಅವರಲ್ಲಿ ಆರ್ಥಿಕ ಚಟುವಟಿಕೆಯಾದ ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಹೂವಿನ ಮತ್ತು ಹಣ್ಣಿನ ವ್ಯವಸಾಯ, ರೇಷ್ಮೆ ಬೆಳೆಯುವಿಕೆ – ಹೀಗೆ ಹತ್ತು ಹಲವಾರು ಕೃಷಿ ಸಂಬಂಧಿತ ಕೆಲಸಗಳಿಗೆ ಹಣದ ಸಹಾಯ ನೀಡುತ್ತಾ ಕೃಷಿ ವಲಯಕ್ಕೆ ಸಹಕಾರಿಯಾಗಿವೆ. ದೇಶದ ಆರ್ಥಿಕತೆಗೆ ಸೇವಾ ಹಾಗೂ ಕೈಗಾರಿಕಾ ವಲಯಕ್ಕಿಂತ ಕೃಷಿ ವಲಯದ ಕೊಡುಗೆ ಅಪಾರವಾಗಿದೆ. ಕೃಷಿ ವಲಯದ ಈ ಯಶಸ್ಸಿಗೆ ಸಹಕಾರಿ ಸಂಘಗಳು 'ಕಾಣದ ಕೈಯಾಗಿ' ಕೆಲಸ ಮಾಡಿವೆ. ಕೃಷಿ ವಲಯದಲ್ಲಿ ಅಭಿವೃದ್ಧಿಯಾದಂತೆ ಸೇವಾ ಹಾಗೂ ಕೈಗಾರಿಕಾ ವಲಯದಲ್ಲಿ ಉನ್ನತಿಯನ್ನು ಸಾಧಿಸಬಹುದು. ಕೃಷಿ ವಲಯದಲ್ಲಿ ಕಚ್ಚಾ ವಸ್ತುಗಳ ಸರಬರಾಜು ಕೈಗಾರಿಕೆಗೆ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕಾಗ ಕೈಗಾರಿಕೆಗಳ ಅಭಿವೃದ್ಧಿಯು ಕೂಡ ಸಾಧ್ಯವಾಗುತ್ತದೆ. ಹೀಗಾಗಿ ಸೇವಾ ಸಹಕಾರಿ ಸಂಘಗಳು ಪರೋಕ್ಷವಾಗಿ ಕೈಗಾರಿಕೆಗಳ ಅಭಿವೃದ್ಧಿಗೂ ಕಾರಣವಾಗಿದ್ದು, ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸಹಕಾರಿಯಾಗಿದೆ.

ಸೇವಾ ಸಹಕಾರಿ ಸಂಘಗಳು ಪರೋಕ್ಷವಾಗಿ ದೇಶದ ಆರ್ಥಿಕತೆಯನ್ನು ಸದೃಢಗೊಳಿಸುವ ಮೂಲಕ ಭವಿಷ್ಯದಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸುವಲ್ಲಿ ಸಹಕಾರಿಯಾಗುತ್ತದೆ. ಇದು ಕೇವಲ ಕೃಷಿ, ಕೈಗಾರಿಕಾ, ಸೇವಾ ವಲಯದ ಕೊಡುಗೆಯನ್ನು ಹೆಚ್ಚಿಸುವುದಲ್ಲದೆ ದೇಶದ ಸಾಮಾಜಿಕ ಸ್ಥಿತಿಯನ್ನು ಕೂಡ ಸುಧಾರಿಸಿದೆ. ಮುಂದುವರೆಯುತ್ತಿರುವ ರಾಷ್ಟ್ರವಾದ ಭಾರತವನ್ನು ಮುಂದುವರೆದ ದೇಶವಾಗಿ ಮಾಡಲು ಸೇವಾ ಸಹಕಾರಿ ಸಂಘಗಳು ತನ್ನ ಆಜಾನುಬಾಹುವನ್ನು ಚಾಚಿವೆ. ಹೀಗೆ ಸೇವಾ ಸಹಕಾರಿ ಸಂಘಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ತನ್ನದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತಿವೆ. ●

ಒಂದು ಹೊಸ ಚಿಂತನೆ !

✍ **ಶ್ರೇಯಸ್ ಜಿ. ಕೋಟ್ಯಾನ್**, ತೃತೀಯ ಬಿ.ಎ.

ಕಟ್ಟೆಗಳಿರುವುದು ಜೋಡಿಗಳಿಗಷ್ಟೇ ಅಲ್ಲ, ಕಲಿಕೆಯಿರುವುದು ಕ್ಲಾಸಿನೊಳಗಷ್ಟೇ ಅಲ್ಲ... ಕಾಲೇಜಿನ ಕ್ಯಾಂಪಸ್‌ನಲ್ಲಿ ಸೆಲೆಬ್ರಿಟಿಗಳು. ಮರದ ಕಟ್ಟೆಗಳ ಸುತ್ತ ಕೂತ ವಿದ್ಯಾರ್ಥಿಗಳಿಗೆ ಅವರ ಪಾಠ. ಅಲ್ಲಿ ಕ್ಲಾಸ್‌ರೂಮಿನ ಋಣಾತ್ಮಕ ಶಿಸ್ತು ಇಲ್ಲ. ಬೆಂಚು, ಡೆಸ್ಕುಗಳ ಏಕತಾನತೆ ಇಲ್ಲ. ಸೆಮಿನಾರ್ ಹಾಲ್‌ಗಳ ಗಾಂಭೀರ್ಯತೆ ಇಲ್ಲ. ಇದ್ದದ್ದು ಮುಕ್ತ ಮಾತುಕತೆ. ವಿದ್ಯಾರ್ಥಿ ಶಿಕ್ಷಕರು ಸೆಲೆಬ್ರಿಟಿಗಳು ಎಂಬ ವ್ಯತ್ಯಾಸವನ್ನು ಮರೆತ ಲವಲವಿಕೆಯ ಶಿಕ್ಷಣ. ಹೀಗೆ ವಿದ್ಯಾರ್ಥಿ ಕ್ಷೇಮಪಾಲನಾ ಸಂಘ ಈ ಶೈಕ್ಷಣಿಕ ವರ್ಷ ಆಯೋಜಿಸಿದ ಈ ಹೊಸ ಪ್ರಯತ್ನಕ್ಕೆ ಇಟ್ಟ ಹೆಸರೇ 'ಕಟ್ಟೆ ಪಂಚಾತಿಕೆ'.

ಕಾರ್ಯಕ್ರಮ ಎಂದಕೂಡಲೇ ಅಲ್ಲಿ ವಿಚಿತ್ರ ಫಾರ್ಮಾಲಿಟೀಸ್. ನೇರವಾಗಿ ವಿಚಾರಕ್ಕೆ ಬರದೆ ಸ್ವಾಗತ, ಪ್ರಸ್ತಾವನೆ, ಧನ್ಯವಾದ ಸಮರ್ಪಣೆ ಅನ್ನೋ ರೀತಿ-ರಿವಾಜುಗಳು. ಜಗತ್ತೇ ಮುಳುಗಿಹೋಗುತ್ತದೆ ಅನ್ನೋ ಮೌನ. ''ವರ ಉಂತಲೆ''ಎಂಬ ಮನೋಭಾವದಲ್ಲಿ ಕೂತ ವಿದ್ಯಾರ್ಥಿಗಳು. ಈ ಎಲ್ಲಾ ಕಾರಣಗಳಿಂದ ವೇದಿಕೆ ಮತ್ತು ಪ್ರೇಕ್ಷಕರ ನಡುವೆ ಅಂತರವುಂಟಾಗುತ್ತದೆ. ಇದರಿಂದ ಹೊರಗೆ ಬರುವ ಆಲೋಚನೆಯಲ್ಲಿ ಹುಟ್ಟಿಕೊಂಡದ್ದು ಈ ಸರಣಿ ಕಾರ್ಯಕ್ರಮಗಳು.

ಉಡುಪಿಗೆ ಬೇರೆ ಬೇರೆ ಕಾರ್ಯನಿಮಿತ್ತ ಬಂದ ಸೆಲೆಬ್ರಿಟಿಗಳನ್ನು ಕಾಲೇಜಿಗೆ ಕರೆಸಿ ಅವರ ಮಾತುಗಳನ್ನು ಕೇಳುವ ಪ್ರಯತ್ನ. ಎರಡನೇ ಸೆಮ್ಮಿನ ಕಾಲೇಜು ಪ್ರಾರಂಭವಾಗುತ್ತಿದ್ದಂತೆ ಕಟ್ಟೆ ಪಂಚಾತಿಕೆ ಸರಣಿ ಶುರು. ಮೊದಲ ಅತಿಥಿ ಕರ್ನಾಟಕದ ಖ್ಯಾತ ರಂಗನಿರ್ದೇಶಕ ಹಾಗೂ ಚಲನಚಿತ್ರ ನಟ ಮಂಡ್ಯ ರಮೇಶ್. ರಂಗಭೂಮಿ (ರಿ.) ಉಡುಪಿ ಸಂಸ್ಥೆ ಆಯೋಜಿಸಿದ ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಉಡುಪಿಗೆ ಬಂದಿದ್ದ ಅವರನ್ನು ಕಾಲೇಜಿಗೆ ವಿದ್ಯಾರ್ಥಿ ಸಂಘ ಆಹ್ವಾನಿಸಿತು. ಅವರು ಒಪ್ಪಿಕೊಂಡರು. 1951ರಲ್ಲಿ ಅಂದಿನ ಅಷ್ಟಮಠಗಳ ಸ್ವಾಮೀಜಿಗಳು ಓಲ್ಡ್ ಬ್ಲಾಕ್ ಮುಂದೆ ನೆಟ್ಟ ಮಾವಿನ ಮರದ ಬುಡದಲ್ಲಿ ಜನವರಿ ನಾಲ್ಕರಂದು ಮೊದಲ ಕಟ್ಟೆ ಪಂಚಾತಿಕೆ.

ಕ್ಯಾಂಪಸ್‌ನಲ್ಲಿ ಕಾಣಿಸಿಕೊಂಡ ಎರಡನೆ ಸೆಲೆಬ್ರಿಟಿ ವಿಜಯ ರಾಘವೇಂದ್ರ. ಈ ಸರಣಿಗೆ ವಿಶೇಷ ರೀತಿಯಲ್ಲಿ ಪಬ್ಲಿಸಿಟಿ ಕೊಟ್ಟದ್ದು ಈ ಕಾರ್ಯಕ್ರಮ. ಉಡುಪಿಗೆ ಸಿನಿಮಾ ಒಂದರ ಪ್ರಮೋಷನ್‌ಗಾಗಿ ಬಂದಿದ್ದ ಗುಲಾಬ್‌ಜಾಮುನ್ ರಾಘು ಅವರನ್ನು ಕಾಲೇಜಿಗೆ ಆಹ್ವಾನಿಸಲಾಯಿತು. ಮುಖ್ಯದ್ವಾರದ ಬಳಿ ಬರುವ ವಾಲಿಬಾಲ್ ಕೋರ್ಟ್‌ನಲ್ಲಿ ಎರಡನೇ ಕಟ್ಟೆ ಪಂಚಾತಿಕೆ. ಶಿಕ್ಷಣದ ಪ್ರಾಮುಖ್ಯತೆ ಎಂಬ ವಿಚಾರದಿಂದ ಹಿಡಿದು ತಾವು ಜೀವನದಲ್ಲಿ ಕಲಿತ ಪಾಠದವರೆಗೆ ಅನೇಕ ಸಂಗತಿಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಇನ್ನು ಈ ಪಂಚಾತಿಕೆ ಕೇವಲ ಆತ್ಮೀಯತೆಯ ಮಾತುಗಳಿಗೆ ಸೀಮಿತವಾಗದೆ ಹಾಡು ನೃತ್ಯಗಳಿಗೆ ಸಾಕ್ಷಿಯಾಯಿತು.

ಈ ಕಾರ್ಯಕ್ರಮ ನಡೆಯುವಾಗ ಕೆಲವು ವಿಶೇಷತೆಗಳು ನಮ್ಮ ಮುಂದೆ ಕಾಣಿಸಿಕೊಂಡಿತು. ಅಲ್ಲಿ ಬಹುಸಂಖ್ಯೆಯಲ್ಲಿ ಸೇರಿದ ವಿದ್ಯಾರ್ಥಿಗಳು ಹಾಗು ಶಿಕ್ಷಕರು ಒಂದು ಕಡೆ. ಆದರೆ ಅದರ ನಡುವೆ ನಮ್ಮ ಕಣ್ಣಿಗೆ ಬಿದ್ದದ್ದು ಮಂಜಣ್ಣ ಮತ್ತು ಸಂಗಡಿಗರು. ಕಾಲೇಜಿನ ಕ್ಲೀನಿಂಗ್ ಮೈಂಟೆನನ್ಸ್ ನೋಡಿಕೊಳ್ಳುವ ಇವರು ಒಂದು ಹೊತ್ತು ಕೆಲಸ ನಿಲ್ಲಿಸಿ ವಿಜಯ ರಾಘವೇಂದ್ರರ ಮಾತು ಕೇಳುತ್ತಾ ನಿಂತಿದ್ದರು. ಇನ್ನೊಂದು ಕಡೆಯಲ್ಲಿ ಕಾಲೇಜಿನ ಆಫೀಸಿನವರು. ಅವರೆಲ್ಲರ

ಹಿಂದೆ, ದೂರದಲ್ಲಿ ನಿಂತು ರಾಘು ಮಾತಿಗೆ ಕಿವಿ ಆಲಿಸುತ್ತಿದ್ದದ್ದು ಕಾಲೇಜಿನ ಪೌರಕಾರ್ಮಿಕ ಕೆಲಸಮಾಡುವ ಪ್ರೀತಿಯ ಗೌರಿ ಅಕ್ಕ. ಇದಕ್ಕಿಂತ ಮುಂಚೆ ಎಂದೂ ನೋಡಲು ಸಿಗದ ದೃಶ್ಯಗಳಿವು. ಎಲ್ಲಾ ನದಿಗಳು ಸಮುದ್ರವನ್ನು ಸೇರುವ ಹಾಗೆ, ಕಾಲೇಜಿನ ಎಲ್ಲಾ ವರ್ಗ ಈ ಕಾರ್ಯಕ್ರಮದಲ್ಲಿ ಸೇರಿತ್ತು. ಇದಕ್ಕೆ ಕಾರಣವಾದದ್ದು ಸೆಲೆಬ್ರಿಟಿಗಳು ಮತ್ತು ಗೋಷ್ಠಿ ಹೊರ ಆವರಣದಲ್ಲಿ ನಡೆದದ್ದು.

ಚಲನಚಿತ್ರ ನಟರನ್ನು ಕರಿಸೋ ಹಿಂದಿದ್ದ ಉದ್ದೇಶ ವಿದ್ಯಾರ್ಥಿಗಳನ್ನು ಸೇರಿಸುವುದು. ಆದರೆ ಎರಡನೇ ಸಂಚಿಕೆ ಮುಗಿಯುತ್ತಿದ್ದಂತೆ ಈ ಆಲೋಚನೆ ಬದಲಾಯಿತು. ಹೊಸತು ಏನೋ ಬೇಕು ಅಂತ ಅನಿಸಿತು. ಹಾಗಾಗಿ ಮೂರನೇ ಕಟ್ಟೆ ಪಂಚಾತಿಕೆ ಅತಿಥಿ ನಾಗಾಲ್ಯಾಂಡಿನ 17ನೇ ರಾಜ್ಯಪಾಲರಾದ ಸನ್ಮಾನ್ಯ ಪಿ. ಬಿ. ಆಚಾರ್ಯರವರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವುದರ ಜೊತೆಜೊತೆಗೆ ಕಾಲೇಜಿನ notify mgm ಆ್ಯಪ್ ಅನ್ನು ಉದ್ಘಾಟಿಸಿದರು. ಅಲ್ಲಿ ಸೇರಿದ ವಿದ್ಯಾರ್ಥಿಗಳ ಸಂಖ್ಯೆ ಹಿಂದಿನ ಕಾರ್ಯಕ್ರಮಕ್ಕಿಂತ ಜಾಸ್ತಿಯೇ ಇತ್ತು. ಇದರಿಂದ ವಿದ್ಯಾರ್ಥಿಗಳು ಬರುತ್ತಿದ್ದದ್ದು ಕೇವಲ ಸೆಲೆಬ್ರಿಟಿಗಳ ಮುಖ ನೋಡಿ ಅಲ್ಲ ಎಂಬುವುದು ನಮಗೆ ಖಾತ್ರಿ.

ಕಟ್ಟೆ ಪಂಚಾತಿಕೆಯ ವಿಶೇಷತೆಗಳ ಬಗ್ಗೆ ಮಾತನಾಡುವುದಾದರೆ, ಇಲ್ಲಿ ಯಾರಿಗೂ ಒತ್ತಾಯವಿಲ್ಲ. ಮೊದಲ ಪಂಚಾತಿಕೆ ಬಿಟ್ಟರೆ ಉಳಿದ ಎಲ್ಲಾ ಕಾರ್ಯಕ್ರಮಗಳು ನಡೆದದ್ದು ಸಂಜೆ ಕಾಲೇಜು ಬಿಟ್ಟ ನಂತರ. ಹಾಗಾಗಿ ಕೇವಲ ಕ್ಲಾಸ್‌ಬಂಕ್ ಮಾಡಲು ಇಲ್ಲಿಗೆ ಬಂದು ಕೂರುವವರು ಇಲ್ಲ. ಇನ್ನು ಇದು ಹೊರಗೆ ನಡೆಯುವ ಕಾರಣ ಯಾವ ಸಮಯದಲ್ಲಿಯೂ ಎದ್ದು ಹೋಗುವ ಅವಕಾಶ ಇದೆ. ಕುಳಿತುಕೊಳ್ಳಲು ಯಾವುದೇ ಒತ್ತಡವಿಲ್ಲ. ಆದರೂ ವಿದ್ಯಾರ್ಥಿಗಳು ಕೂತಿರುವುದು ಇದರ ಯಶಸ್ಸು ಅಂತಾನೇ ಭಾವಿಸಬಹುದು.

ಈ ಮೇಲಿನ ಯಾವ ಕಾರ್ಯಕ್ರಮಗಳಿಗೂ ತಿಂಗಳುಗಳ ಶ್ರಮವಿಲ್ಲ. ಈ ಎಲ್ಲಾ ಪಂಚಾತಿಕೆ ನಿರ್ಧಾರವಾದದ್ದು ಕೇವಲ ಒಂದು ದಿನದ ಮುಂಚೆ. ಆದರೂ ಇವುಗಳು ಯಶಸ್ವಿಯಾಗಲು ಕಾರಣ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳ ನಾಡಿಮಿಡಿತ ಅರಿತು ಮುಂದೆ ಸಾಗುವ ಪ್ರಾಂಶುಪಾಲರು. ಜೊತೆಯಾಗಿ ಸದಾ ನಿಲ್ಲುವ ಲೆಕ್ಚರರ್‌ಗಳು. ಇನ್ನೂ ಸೂಕ್ಷ್ಮವಾಗಿ ಹೇಳಬೇಕೆಂದರೆ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣ ಎಂಜಿಎಂ ಕಾಲೇಜಿನ ಪರಿಸರ. ಹೊಸತನಕ್ಕೆ ಇಲ್ಲಿದೆ ಯಾವತ್ತೂ ಸ್ವಾಗತ. MGM is just different!

●

ಮೊದಲ ಟೀಚರ್ ಹೇಳಿದ ಮೊದಲ ಕಥೆ... ಮಧುರ ನೆನಪು

✍ **ಅರ್ಚನಾ,** ಪ್ರಥಮ ಎಮ್.ಎಸ್ಸಿ.

ಆಗಷ್ಟೇ ಅಮ್ಮನ ಮಡಿಲಿಂದೆದ್ದು, ಮನೆಯಲ್ಲೇ ಆಡುವ ತುಂಟಾಟಗಳಿಗೆ ಫುಲ್‌ಸ್ಟಾಪ್ ಇಟ್ಟು ಶಾಲೆಗೆ ಸೇರಿದ ಸುದಿನ. ಭವಿಷ್ಯದ ಭವ್ಯ ಅರಮನೆಯ ಅಡಿಪಾಯಕ್ಕೆ ಮೊದಲ ಕಲ್ಲಿಟ್ಟು ಆರಂಭಿಸಿದ ದಿನ. ನಾನೊಬ್ಬಳು ಅಪ್ಪಟ ಕನ್ನಡ ಮೀಡಿಯಂ ಸ್ಟೂಡೆಂಟ್. ತುಂಬಾನೆ ಖುಷಿಯಾಗುತ್ತೆ ಹಾಗೆ ಹೇಳಿಕೊಳ್ಳೋಕೆ. ಜೊತೆಗೆ ಹೆಮ್ಮೆನೂ ಆಗುತ್ತೆ.

ನಾನು ಓದಿದ್ದು ನಮ್ಮೂರಲ್ಲೇ ಇರುವ ಒಂದು ಪುಟ್ಟ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಆ ಶಾಲೆ ಆರಂಭವಾದದ್ದು ಒಂದು ಸಣ್ಣ ಸೂರಿನಡಿಯಲ್ಲಿ. ನನ್ನ ತಂದೆ ಇದೇ ಶಾಲೆಯ ವಿದ್ಯಾರ್ಥಿಯಾಗಿದ್ದರು. ಅವರು ಆ ಶಾಲೆಗೆ ಹೋಗುವಾಗ ಅದು ಕಿರಿಯ ಪ್ರಾಥಮಿಕ ಶಾಲೆ ಆಗಿತ್ತು. ತದನಂತರದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಒಂದು ಭವ್ಯವಾದ ಶಾಲೆಯ ಕಟ್ಟಡವೂ ನಿರ್ಮಾಣವಾಗಿತ್ತು. ''ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್‌ಬೇಲ್ತೂರು'' ಈ ಹೆಸರು ಕೇಳಿದಾಗ ಮುಖದಲ್ಲೊಂದು ಸಣ್ಣ ನಗೆ. ನನ್ನ ಬಾಲ್ಯದ ಮೊದಲ ಶಿಕ್ಷಕರ ಹೆಸರು ಹೇಳಲು ಹೆಮ್ಮೆ ಪಡುತ್ತೇನೆ. ಅವರ ಹೆಸರು ಕೇಶವ ಸರ್. ಎಲ್ಲರ ಜೀವನದಲ್ಲೂ ಮೊದಲ ಶಿಕ್ಷಕ ಅಥವಾ ಶಿಕ್ಷಕಿಯೇ ಗ್ರೇಟ್. ಏನೂ ಅರಿಯದ ಆಗತಾನೇ ಪುಟ್ಟ ಹೆಜ್ಜೆ ಇಟ್ಟು ಬರುವ ಮಕ್ಕಳ ಬದುಕಿಗೆ ಆಶಾಕಿರಣಗಳಾಗುತ್ತಾರಲ್ಲ ಅವರೇ ನಿಜಕ್ಕೂ ಗ್ರೇಟ್. ಏನೇನೂ ಗೊತ್ತಿರದ ಅದೊಂದು ಹೊಸ ಪ್ರಪಂಚ. ಆಕಾರವಿಲ್ಲದ ಶಿಲೆಯನ್ನು ಕೆತ್ತಿ ಅದಕ್ಕೊಂದು ಅದ್ಭುತ ರೂಪ ಕೊಟ್ಟು ಆ ಶಿಲೆಯಲ್ಲಿ ಕಲೆ ಅರಳುವಂತೆ ಮಾಡುವ ಅಪ್ರತಿಮ ಶಿಲ್ಪಿಗಳವರು. ನಾವು ಪಡೆವ ಮುಂದಿನ ಶಿಕ್ಷಣವೆಲ್ಲ ಆ ಶಿಲೆಗೆ ಅಲಂಕರಿಸುವ ಆಭರಣಗಳಷ್ಟೆ.

ಕಥೆ ಹೇಳ್ತೀನಿ ಅಂತ ಹೆಡ್ಡಿಂಗ್ ಬರೆದು ಇದೇನಪ್ಪಾ ಇಷ್ಟೊಂದು ಪೀಠಿಕೆ ಕೊಡ್ತಿದ್ದಾಳೆ ಅನ್ಕೋಬೇಡಿ. ಕಥೆ ಹೇಳ್ಬೇಕು ಅಂತ ಕೂತ್ಕೊಂಡಿದ್ದೇನೋ ನಿಜ. ಆದ್ರೆ ಕಥೆ ಹೇಳಿದ ನನ್ನ ಭವಿಷ್ಯದ ರೂವಾರಿಯಾದ ಆ ಟೀಚರ್ ಬಗ್ಗೆನೂ ಹೇಳ್ಬೇಕಲ್ಲಾ. ಆ ದಿನಗಳೆಲ್ಲಾ ಹೇಳ್ದಿರೊಕ್ಕೆ ಮನಸ್ಸು ಒಪ್ಪಲಿಲ್ಲ ಅಷ್ಟೇ. ಕಥೆ ಈಗ ಶುರುವಾಯ್ತು ನೋಡಿ. ಒಂದೂರಲ್ಲಿ ಇಬ್ಬರು ಆಪ್ತ ಗೆಳೆಯರಿರ್ತಾರಂತೆ. ಒಂದೂರಲ್ಲಿ ಇಬ್ರೇ ಆಪ್ತಮಿತ್ರರಾ? ಅಂತ ನಗ್ಬೇಡಿ. ನಾನು ಐದು ವರ್ಷದವಳಾಗಿದ್ದಾಗ ಕೇಳಿರೋ ಕಥೆ. ಅದೇ ಮುಗ್ಧತೆಯಿಂದ ಒಂದು ಪುಟ್ಟ ಹುಡ್ಗಿ ಕಥೆ ಹೇಳ್ತಿದ್ದಾಳೆ ಅನ್ಕೊಳ್ಳಿ. ಆ ಆಪ್ತ ಗೆಳೆಯರು ಏನ್ ಮಾಡ್ತಾರಂದ್ರೆ ಕೆಲಸ ಹುಡ್ಕೊಳ್ತಾ ದೂರದ ಊರಿಗೆ ಹೋಗೋಣ ಅಂತ ನಿರ್ಧರಿಸುತ್ತಾರೆ. ಹೀಗೆ ನಡೆದ್ರೂ ನಡೆದ್ರೂ, ನಡೆದಷ್ಟೂ ದಾರಿ ಸಾಗ್ತಾ ಹೋಯ್ತು. ಹೀಗೆ ದಾರಿಯಲ್ಲಿ ಹೋಗ್ತಾ ಇರುವಾಗ ಒಂದು ಪುಟ್ಟ ದೇವಸ್ಥಾನ ನೋಡಿದ್ರು ಆಗ ಆ ಇಬ್ರು ಸ್ನೇಹಿತರಲ್ಲಿ ಒಬ್ಬ ಮಾತ್ರ ಬಹಳ ಭಕ್ತಿಯಿಂದ ನಮಸ್ಕರಿಸುತ್ತಾನೆ. ಆದರೆ ಇನ್ನೊಬ್ಬ ದೇವರಿಗೆ ಕೈಮುಗಿಯುವುದು ಇರಲಿ, ಕಣ್ಣೆತ್ತಿ ಸಹ ನೋಡಿದಿಲ್ವಂತೆ. ಅಷ್ಟೇ ಅಲ್ಲದೆ ಕೈ ಮುಗಿದ ತನ್ನ ಸ್ನೇಹಿತನಿಗೂ ಬೈತಾನಂತೆ ಈ ದೇವ್ರು ಅನ್ನೋದೆಲ್ಲಾ ಬರೀ ಸುಳ್ಳು ಅಂತಹ ನಂಬಿಕೆಗಳಿಗೆಲ್ಲಾ ಹುರುಳಿಲ್ಲ. ನಿನಗೆ ಬುದ್ಧಿ ಇಲ್ಲ ಅಂತ. ಆದ್ರೆ ಕೈ ಮುಗಿದ ಆ ಸ್ನೇಹಿತ ಮಾತ್ರ ತನ್ನ ನಂಬಿಕೆಯಲ್ಲಿ ಅಚಲನಾಗಿದ್ದ. ಹೀಗೆ ತುಂಬಾ ದೂರ ಸಾಗಿದಾಗ ದೇವರಿಗೆ ಭಕ್ತಿಯಿಂದ ಕೈಮುಗಿದ ಆ ಸ್ನೇಹಿತನಿಗೆ ಒಂದು ಭಯಂಕರ ಮುಳ್ಳು ಚುಚ್ಚಿತು. ಆದರೆ ದೇವರಿಲ್ಲಾ ಸುಳ್ಳು ಅಂತ ಹೇಳಿದವನಿಗೆ ಒಂದು ರೂ. ನಾಣ್ಯ ಸಿಕ್ಕಿತು. ಈಗ ಸ್ನೇಹಿತ ಹೇಳ್ತಾನೆ ನೋಡಿದ್ಯಾ, ದೇವರಿಲ್ಲಾ ಅನ್ನೋದು ಈಗಲಾದ್ರು ಗೊತ್ತಾಯ್ತಲ್ಲಾ. ಭಕ್ತಿಯಿಂದ ಕೈ ಮುಗಿದ ನಿನಗೆ ಸಿಕ್ಕಿದ್ದು ನೋವು. ಆದ್ರೆ ಏನೂ ಮಾಡದ ನನಗೆ ಒಂದು ರೂ. ನಾಣ್ಯ ಸಿಕ್ಕಿತು. ಹೇಳಿ ಹಂಗಿಸಿ ನಗ್ತಾನೆ. ಹಾಗಾದ್ರೆ ದೇವರಿಲ್ವಾ ಇದ್ರೂ ಯಾರ ಪರ? ಕಥೆ ಇನ್ನೂ ಮುಗಿದಿಲ್ಲ. ಹೀಗೆ ಹಂಗಿಸಿ ಮಾತನಾಡುವ ಆ ಸ್ನೇಹಿತನನ್ನು ನೋಡ್ತಾ ದೇವರಲ್ಲಿ ಅಚಲ ನಂಬಿಕೆಯನ್ನಿಟ್ಟ ಭಕ್ತನ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ಅವನ ಮನಸ್ಸಲ್ಲೂ ಈ ಘಟನೆಯೊಂದು ಯಕ್ಷ ಪ್ರಶ್ನೆಯಾಗಿ ಉಳಿದುಕೊಳ್ಳುತ್ತದೆ. ಹೀಗಾದಾಗ ದೇವರ ಮೇಲೆ ಅಲ್ಪ ಸ್ವಲ್ಪ ಕೋಪ ಬರುವುದು ಸಹಜ ತಾನೆ. ಏನೇ ಆಗಲಿ ಈ ವಿಷಯವನ್ನು ಇಲ್ಲಿಗೆ ಬಿಡದ ಇಬ್ಬರು ಸ್ನೇಹಿತರು ಈ ಪ್ರಶ್ನೆಯನ್ನು ದೇವರಲ್ಲೇ ಕೇಳೋಣ ಬಾ ಅಂತ ವಾಪಸ್ ದೇವರ ಗುಡಿಗೆ ಹೋಗಿ ನಡೆದದ್ದೆಲ್ಲಾ ಸವಿವರವಾಗಿ ಹೇಳುತ್ತಾರೆ. ಹುಂ ಈಗ ದೇವರ ಎಂಟ್ರಿ. ಕಥೆ ಕಣ್ರೀ ಕಥೇಲಿ ದೇವ್ರು ಮಾತಾಡ್ತಾನೆ. ಹಲ್ಲಿ, ಹಾವು, ಚೇಳು ಮಾತಾಡ್ತವೆ. ಅದೇನೆ ಇರಲಿ ಈಗ ಉತ್ತರಿಸಬೇಕಾದದ್ದು ಅವನೇ ತಾನೆ ! ತಕ್ಷಣ ಪ್ರತ್ಯಕ್ಷನಾದ ಆ ಭಗವಂತ ಕೊಟ್ಟ ಉತ್ತರ ಹೀಗಿತ್ತು : 'ನನಗೆ ಭಕ್ತಿಯಿಂದ ಕೈ ಮುಗಿದ ನನ್ನ ಭಕ್ತನಿಗೆ ಮುಳ್ಳು ಚುಚ್ಚಿತು ಕಾರಣ ಆತ ಸಾಗುವ ದಾರಿಯಲ್ಲಿ ಅವನಿಗೆ ಭಯಂಕರ ಸರ್ಪ ಕಚ್ಚುವುದರಲ್ಲಿತ್ತು. ಆದರೆ ಆತನ ಭಕ್ತಿಯಿಂದ ಅದು ಸ್ವಲ್ಪದರಲ್ಲಿ ತಪ್ಪಿ ಕಾಲಿಗೆ ಬರಿ ಮುಳ್ಳು ಚುಚ್ಚಿತು. ನಿಜ ನಂಬಿ ಕೆಟ್ಟವರಿಲ್ಲ. ಇನ್ನು ದೇವರನ್ನು ಹೀಯಾಳಿಸಿದ ಮತ್ತೊಬ್ಬ ಸ್ನೇಹಿತನಿಗೆ ಒಂದು ರೂಪಾಯಿ ನಾಣ್ಯ ಸಿಕ್ಕಿತು. ಒಂದು ವೇಳೆ ಆತ ಆ ಚಿನ್ಮಯಿ ಸ್ವರೂಪಿಯನ್ನು ನಂಬಿ ಕೈ ಮುಗಿದಿದ್ದರೆ ಆತನಿಗೆ ಕೋಟ್ಯಂತರ ರೂಪಾಯಿ ಸಿಗುವ ಸಂಭವವಿತ್ತು. ಆದರೆ ಅವನ

ಅಹಂಕಾರದ ವರ್ತನೆಗೆ ಕೇವಲ ಒಂದು ರೂಪಾಯಿ ಸಿಕ್ಕಿತು ಅಷ್ಟೇ. ಹೀಗಿತ್ತು ದೇವರ ಉತ್ತರ. ಒಬ್ಬನಿಗೆ ಉಸಿರು ಉಳಿದ ಖುಷಿ. ಆದರೆ ಇನ್ನೊಬ್ಬನಿಗೆ ತನ್ನ ದಡ್ಡತನ, ಮನದ ಅಂಧತ್ವದಿಂದ ಕೋಟ್ಯಂತರ ರೂಪಾಯಿ ಕಳೆದುಕೊಂಡ ದುಃಖ. ಹೀಗೆ ಸಿಕ್ಕಿತು ಸಮಸ್ಯೆಗೆ ಪರಿಹಾರ. ಅರೇ ಕಥೆ ಮುಗಿದೇ ಬಿಡ್ತು. 'ಆಗೋದೆಲ್ಲಾ ಒಳ್ಳೇದಕ್ಕೆ' ಅನ್ನೋ ಮಾತು ಅಕ್ಷರಶಃ ಸತ್ಯವಾಗಿದ್ದು ಈ ಸಂದರ್ಭದಲ್ಲಿ.

ನಾನು 16 ವರುಷಗಳ ಹಿಂದೆ ಕೇಳಿದ ಕಥೆಯಿದು. ಐದು ವರುಷದ ಹುಡುಗಿಯಾಗಿದ್ದಾಗ ನನ್ನ ಮೊದಲ ಟೀಚರ್ ಹೇಳಿದ ಕಥೆ ಇದು. ಅವತ್ತು ಆ ಪುಟ್ಟ ಶಾಲೆಯಲ್ಲಿ ಕಣ್ಣರಳಿಸಿ ಕಿವಿಯರಳಿಸಿ ಆಶ್ಚರ್ಯದಿಂದ ಕೇಳಿದ ಕಥೆ ಇದು. ಮನಸಾರೆ ಮೆಚ್ಚಿದ್ದೆ ಕೂಡ. ದೇವ್ರು ನಿಜವಾಗ್ಲೂ ಇದ್ದಾನೆ ಮಕ್ಕೇ ಎಂದು ಅಂದು ನನ್ನ ಟೀಚರ್ ಆಡಿದ ಆ ಮಾತು ತುಂಬಾನೇ ನಾಟಿ ಬಿಟ್ಟಿತು. ತುಂಬಾ ಇಷ್ಟವಾದದನ್ನು ಮನಸ್ಸು ಬೇಗ ಮರೆಯಲ್ವಂತೆ, ಮರೆತರೂ ಮರೆಯಲಾಗದ ಸವಿನೆನಪಿನ ಕಥೆ ನನ್ನಲ್ಲೇ ಶಾಶ್ವತವಾಗಿದೆ. ನನ್ನ ನೆನಪಿನ ಮಳಿಗೆಯಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ.

●

ಸಾಧಿಸು ನೀ

ಕನಸು ನುಚ್ಚು ನೂರಾಯಿತೆಂದು ಮರುಗಬೇಡ
ಮನಸ್ಸು ಛಿದ್ರವಾಯಿತು ಅಂತ ರೋದಿಸಬೇಡ
ಅಪೇಕ್ಷೆ ಈಡೇರಲಿಲ್ಲ ಎಂದು ದುಃಖಿಸಬೇಡ
ಜೀವನ ಕ್ರೂರ ರೂಪ ತಾಳುತ್ತಿದೆ ಎಂದು ಚಿಂತಿಸಬೇಡ
ಸಮಯ ಉತ್ತರ ನೀಡುವುದು... ಸಮಯ ಉತ್ತರ
ನೀಡುವುದು ! ಕತ್ತಲು ಕಳೆದು ನಂತರ ಬೆಳಕು
ಪುನಃ ಮೂಡುವುದು, ಅಲ್ಲಿಯ ತನಕ
ಇರುಳಿನ ಕತ್ತಲಿಗೆ ಕುಗ್ಗಬೇಡ, ಆ ಕತ್ತಲಲ್ಲು
ತಂಪಾದ ಚಂದಿರನು ಕೈ ಹಿಡಿದು ನಡೆಸುವನು
ಬೆಳಗ್ಗಿನ ಬೆಳಕಿಗೆ ಹಿಗ್ಗಬೇಡ ಬೆಳಕಿನಲ್ಲಿಯು
ಬೆಂಕಿಯಂತೆ ಇರುವ ಸೂರ್ಯನು ಪರೀಕ್ಷೆ
ಮಾಡುವನು, ತಾಳ್ಮೆಯಿಂದ ನಿರ್ಲಿಪ್ತತೆಯಿಂದ
ಇವೆರಡನ್ನು ಸ್ವೀಕರಿಸು ಆಗ ನೀ ಸೂರ್ಯನಂತೆ
ಬೆಳಗುವೆ, ಬಾಳು ಚಂದಿರನಂತೆ ಪ್ರಶಾಂತವಾಗುವುದು.

* * *

ಕನಸು

ನಿದ್ದೆಯಲ್ಲಿ ಮನೋರಂಜನೆ, ಕಾಣದ ಲೋಕದ
ವೀಕ್ಷಣೆ, ಅನೇಕ ವಿಚಾರಗಳ ವಿಂಗಡಣೆ
ನನಸಾದಲ್ಲಿ ವಿಜೃಂಭಣೆಯಿಂದ ಅದರ ಆಚರಣೆ
ನುಚ್ಚುನೂರಾದಲ್ಲಿ ನಿರಾಶೆಗೊಂಡು ರೋದನೆ

ದೀಪ್ತಿ ದಿನೇಶ್, ತೃತೀಯ ಬಿ.ಕಾಂ.

03 Pg_035-110 TY200028

ಪರಿಚಯವಿಲ್ಲದ ಕವಿ

ಅಂತರಂಗದ ಭಾವನೆಗಳನ್ನು
ಹೊರಹಾಕದೆ ಒಳಗೊಳಗೆ ನುಂಗಿ
ಹಾಕಿಕೊಂಡೆ ತೆರೆಮರೆಯ ಅಂಗಿ
ನಾ ಯಾರು ಬಲ್ಲಿರಾ?
– ನಾನೊಬ್ಬ ಪರಿಚಯವಿಲ್ಲದ ಕವಿ

ಗಂಧದ ನಾಡಿನಲಿ ಚಂದದಿ ಹುಟ್ಟಿ
ಚಂದ್ರಿಕೆಯ ಮೇಲೆ ಸಾಲುಗಳ ಕಟ್ಟಿ
ಕವನಗಳ ಇಂಪು ಸಾರುವ
ನಾ ಯಾರು ಗೊತ್ತಾ ?
– ನಾನೊಬ್ಬ ಪರಿಚಯವಿಲ್ಲದ ಕವಿ

ಹಾರುವ ಹಕ್ಕಿಗಳ ಕಲರವ ನೋಡಿ
ತೆಕ್ಕನೆ ಮೈ ಮರೆತು ಚೊಕ್ಕದಿ
ಗಾನ ಸುಧೆಯ ಚೆಲ್ಲುತ
ಇಂಪ ಸೂಸುತ ನಲಿವ
ನಾ ಯಾರು ಬಲ್ಲಿರಾ?
– ನಾನೊಬ್ಬ ಪರಿಚಯವಿಲ್ಲದ ಕವಿ

ಅದೆಷ್ಟೊ ದಿನಗಳು ಕಳೆದರೂ
ಈ ಪುಟ್ಟ ಹೃದಯದಿ
ಹೊರಸೂಸುವ ಹನಿಗವನಗಳೆಷ್ಟೊ
ಅವೆಲ್ಲವನ್ನು ನುಂಗಿದ
ನಾ ಯಾರು ಬಲ್ಲಿರಾ?
– ನಾನೊಬ್ಬ ಪರಿಚಯವಿಲ್ಲದ ಕವಿ

✍ **ಸಿದ್ದಪ್ಪ ನಾಯಕ ಎಮ್.,** ತೃತೀಯ ಬಿ.ಎ.

ನಮ್ಮ ಕಾಲೇಜು

ಅದೋ ನೋಡಿ ನಮ್ಮ ಕಾಲೇಜು
ಅದೇ ನಮ್ಮೆಲ್ಲರ ಜ್ಞಾನದ ಖಜಾನೆ
ಓದಿದರಷ್ಟೇ ವಿದ್ಯಾರ್ಜನೆ
ಓದುವುದೇ ನಮ್ಮೆಲ್ಲರ ಹೊಣೆ

ಪ್ರತಿಯೊಂದು ರಂಗದಲ್ಲೂ
ಭಾಗವಹಿಸಬೇಕು
ಲೋಪ ದೋಷದೊಡನೆ ಕಾಳಗ
ಸತತ ಪರಿಶ್ರಮದಿಂದ ಆಗುವುದು
ಉತ್ತಮ ಫಲಿತಾಂಶದ ಯೋಗ

ಈ ವರ್ಷ ಮಾಡುತ್ತೇವೆ ಸಾಧನೆ
ಅದು ಉತ್ತಮ ಭವಿಷ್ಯದ ಸೂಚನೆ
ಹಾಕಿಕೊಂಡಿರುವೆವು ಹಲವಾರು ಯೋಜನೆ
ಯಶಸ್ವಿಯಾಗಲೆಂದು ನಮ್ಮೆಲ್ಲರ ಪ್ರಾರ್ಥನೆ

ವಿದ್ಯಾರ್ಥಿ–ಗುರುಗಳ ಸಹಕಾರ
ಕಾಲೇಜಿನ ಬೆಳವಣಿಗೆಗೆ ಆಧಾರ
ಕಾಲೇಜಿನ ಸಂಬಂಧ ಹೀಗೆಯೇ ಇರಲಿ
ಯಶಸ್ಸು ತುಂಬಿಟ್ಟ ಬುತ್ತಿ ನಿರಂತರ

''ವಿದ್ಯೆ ಆಲಸ್ಯದಿಂದ ಹಾಳಾಗುತ್ತದೆ''

✍ **ನವೀನ್ ಎಸ್.,** ತೃತೀಯ ಬಿ.ಎ.

03 Pg_035-110 TY200028

ಕಾವಲುಗಾರ

✍ **ಪ್ರಜ್ವಲ್ ಸುವರ್ಣ,** ತೃತೀಯ ಬಿ.ಎ.



ಅಕ್ಟೋಬರ್ ತಿಂಗಳಲ್ಲಿ ಗದ್ದೆಯಲ್ಲಿ ಭತ್ತ ಬೆಳೆದು ಕಟಾವಿಗೆ ತಯಾರಾಗುವ ಮೊದಲೇ ವಾನರ ಪಡೆಗಳ ಆಗಮನವಾಗುತ್ತದೆ. ಈ ಮಂಗಗಳನ್ನು ಓಡಿಸಲು ನಮ್ಮ ರೈತರು ಪಡುವ ಪಾಡು ಅಷ್ಟಿಷ್ಟಲ್ಲ.

''ಹುಡಿ ಹುಡಿ... ಹತೋ ಹತೋ...'' ಎಂದು ಬೊಬ್ಬೆ ಹೊಡೆಯುತ್ತಾ ಮಂಗಗಳತ್ತ ಕಲ್ಲೆಸೆದು ಅಟ್ಟಿಸಲು ಹರಸಾಹಸ ಪಡುತ್ತಾರೆ.

ಮನೆಯ ನಾಯಿಗಳನ್ನಂತೂ ಆ ಒಂದು ತಿಂಗಳು ಗದ್ದೆಯ ಬದಿಯಲ್ಲಿಯೇ ಕಟ್ಟಿ ಹಾಕುತ್ತಾರೆ. ಆದರೆ ಮಂಗಗಳು ಕಟ್ಟಿ ಹಾಕಿದ ನಾಯಿಗಳ ದುಃಸ್ಥಿತಿಯನ್ನರಿತು ಕ್ಯಾರೇ ಎನ್ನದೆ ರಾಜಾರೋಷವಾಗಿ ಗದ್ದೆಗೆ ಇಳಿಯುತ್ತವೆ. ಕೆಲವರು ಬಂದೂಕು ತೋರಿಸಿ ಹೆದರಿಸಿದರೆ, ಇನ್ನು ಕೆಲವರು ಪಟಾಕಿ ಸಿಡಿಸಿ ಓಡಿಸುತ್ತಾರೆ. ಆದರೆ ಈ ಎಲ್ಲಾ ಪ್ರಯೋಗಗಳು ಕ್ಷಣ ಮಾತ್ರಕ್ಕಷ್ಟೇ. ಮಂಗಗಳು ದಿಕ್ಕಾಪಾಲಾಗಿ ಓಡಿದವು ಎಂದು ಭಾವಿಸಿ ಮನೆಗೆ ಹಿಂತಿರುಗಿದರೆ, ಅತ್ತ ಗದ್ದೆಯಲ್ಲಿ ಮಂಗಗಳ ಇನ್ನೊಂದು ದಂಡು ಔತಣಕ್ಕೆ ತಯಾರಾಗಿರುತ್ತದೆ.

ಈ ಮಂಗಗಳ ಹಾವಳಿಯನ್ನು ನಿಯಂತ್ರಿಸಲು ನಮ್ಮ ಮತ್ತು ಪಕ್ಕದ ಮೂರು-ನಾಲ್ಕು ಮನೆಯವರು ಗದ್ದೆಗೆ ಒಬ್ಬ ಹೊಸ ಕಾವಲುಗಾರನನ್ನು ನೇಮಿಸಿದರು. ಆ ಕಾವಲುಗಾರ ಬೇರೆ ಯಾರೂ ಅಲ್ಲ... ನಾನೇ...

ನಾನು ಪ್ರೈಮರಿ ಓದುತ್ತಿರುವಾಗಿನ ದಿನವದು. ಅಕ್ಟೋಬರ್ ತಿಂಗಳ ಮಧ್ಯಾವಧಿ ರಜೆ ಶುರುವಾಗಿತ್ತು. ಅಂದು ಮಧ್ಯಾಹ್ನ ಊಟ ಮಾಡಿ ಮಲಗಿದ್ದಾಗ ಏನೋ ಬೊಬ್ಬೆ ಕೇಳಿ ಎಚ್ಚರವಾಯಿತು. ಅಪ್ಪ ಅರಚಾಡುತ್ತಿದ್ದರು. ಧಡಕ್ಕನೆ ಎದ್ದು ಕುಳಿತೆ.

''ಎಲ್ಲಿದ್ದಾನೆ ಅವ'', ಎಂದು ಅಪ್ಪ ಕರೆಯುವುದು ಕೇಳಿತು.

''ಮಲಗಿದ್ದಾನೆ'', ಎಂದರು ಅಮ್ಮ.

''ಅವನಿಗೆ ಇಡೀ ದಿನ ಮಲಗುವುದೇ ಆಯ್ತು. ಗದ್ದೆಯಲ್ಲಿ ನಾಯಿ ಬೊಗಳುವುದು ಕೇಳಿಸಲ್ವಾ. ಮಂಗ ಬಂದಿದೆಯಾ ಅಂತ ನೋಡ್ಲಿಕ್ಕೆ ಕಳಿಸು ಅವನನ್ನು'' ಎಂದರು ಅಪ್ಪ.

ನಾನು ಅಮ್ಮ ಕರೆಯುವ ಮೊದಲೇ ಎದ್ದು ಗದ್ದೆಯ ಬಳಿ ಓಡಿದೆ. ಅಲ್ಲಿಗೆ ಹೋಗುವಷ್ಟರಲ್ಲಿ ಮಂಗಗಳು ಭೋಜನ ಶುರು ಹಚ್ಚಿಕೊಂಡಿದ್ದವು.

ನಾನು ''ಹುಡಿ... ಹತೋ...'' ಎನ್ನುತ್ತಾ ಕಲ್ಲು ಮಣ್ಣನ್ನು ಕೈಯಲ್ಲಿ ಮುಷ್ಟಿ ಹಿಡಿದು ಅವುಗಳತ್ತ ಪ್ರಯೋಗಿಸಿದೆ. ಸುಮಾರು ಅರ್ಧ ಗಂಟೆಗಳ ಕಾಲ ಕಾರ್ಯಾಚರಣೆ ನಡೆದು ಕೊನೆಗೂ ವಾನರ ಪಡೆಯನ್ನು ಹಿಮ್ಮೆಟ್ಟಿಸಿದೆ.

ಸುಸ್ತಾಗಿ ಬಂದು ಅಲ್ಲೇ ಮರಕ್ಕೆ ಕಟ್ಟಿ ಹಾಕಿದ್ದ ನಮ್ಮ ಮನೆಯ ನಾಯಿಯ ಪಕ್ಕದಲ್ಲಿ ಕುಳಿತೆ. ಪಾಪ, ಅದು ಇಡೀ ದಿನ ಭಯದಿಂದ ಕಾಡಿನಲ್ಲಿ ಒಂಟಿಯಾಗಿ ಕೂಗುತ್ತಿತ್ತು. ಸೊಳ್ಳೆ ಕಾಟ ಬೇರೆ. ನಮ್ಮ ಎಲ್ಲಾ ಗದ್ದೆಗೂ ಮಂಗಗಳು ಬರುವುದಿಲ್ಲ. ಮನೆಯಿಂದ ಅರ್ಧ ಕಿ.ಮೀ. ದೂರದಲ್ಲಿ ಒಂದು ಎಕರೆ ಹೊಲವಿದೆ. ಅದರ ಒಂದು ಬದಿಯಲ್ಲಿ ಕಾಡು ಆರಂಭವಾಗುತ್ತದೆ. ಮಂಗಗಳು ಆಗಮಿಸುವುದು ಇದೇ ಕಾಡಿನಿಂದ. ಅದಕ್ಕಾಗಿಯೇ ನಾಯಿಯನ್ನು ಆ ಕಾಡಿನ ಬದಿಯಲ್ಲಿ ಕಟ್ಟಿದ್ದರು. ನಾನು ಸ್ವಲ್ಪ ಹೊತ್ತು ನಾಯಿಗೆ ಸಮಾಧಾನ ಮಾಡಿ ಮನೆಗೆ ಬಂದೆ.

ಮನೆಗೆ ಪಕ್ಕದ ಮನೆಯ ದಿನೇಶಣ್ಣ ಬಂದಿದ್ದರು. ಮಂಗಗಳನ್ನು ಓಡಿಸುವ ಬಗ್ಗೆ ಮಾತುಕತೆಯಾಗುತ್ತಿತ್ತು. ನನಗೆ ದಿನೇಶಣ್ಣ ಬಂದಿದ್ದು ಗೊತ್ತಿರಲಿಲ್ಲ. ನಾನು ಹೊರಗಿನಿಂದಲೇ...,

''ನಾನು ಹೋಗಿದ್ದೇ ತಡ, ಮಂಗಗಳೆಲ್ಲ ಮಂಗ ಮಾಯ'', ಎಂದೆ.

''ಇವನಿಗೆ ರಜೆಯಾ ಈಗ?'', ಕೇಳಿದರು ದಿನೇಶಣ್ಣ.

''ಹೌದು'' ಎಂದರು ಅಪ್ಪ.

''ಹಾಗಾದ್ರೆ ಇನ್ನು ಮಂಗ ಓಡಿಸ್ಲಿಕ್ಕೆ ಇವ ಇದ್ದಾನಲ್ವಾ...''

''ನಾನೇ ಯಾಕೆ ಹೋಗ್ಬೇಕು...? ನೀವಿಲ್ವಾ...?'' ಎಂದು ಕೇಳಿದೆ.

ಅಲ್ಲೇ ಇದ್ದ ಅಕ್ಕ ಮಧ್ಯಕ್ಕೆ ಬಂದು ನಗುತ್ತಾ,

''ಅದು ಯಾಕಂದ್ರೆ, ಮುಳ್ಳನ್ನ ಮುಳ್ಳಿಂದಲೇ ತೆಗೀಬೇಕಲ್ವಾ... ಅದ್ಕೆ'', ಎಂದಳು.

''ನಿಮ್ಮರ್ಥದಲ್ಲಿ ನಾನು ಮಂಗನಾ...?'' ಎಂದು ಸಿಟ್ಟಿನಲ್ಲಿ ನೋಡಿದೆ.

''ಅವಳದ್ದು ನೀನು ಕೇಳ್ಬೇಡ. ಇಲ್ಲಿ ಮಂಗನನ್ನು ಓಡಿಸುವ ತಾಕತ್ತು ಇರೋದು ನಿನ್ನತ್ರ ಮಾತ್ರ. ನಾವು ಹೋದ್ರೆ ಅವುಗಳು ಕದಲಲ್ಲ. ಹಾಗಾಗಿ ನೀನೇ ಗದ್ದೆಗೆ ಕಾವಲು ನಿಲ್ಲು ಆಯ್ತಾ...'' ಎಂದರು ದಿನೇಶಣ್ಣ.

ಅವರ ಹೊಗಳಿಕೆ ಕೇಳಿ ನಾನು ಉಬ್ಬಿಹೋದೆ.

''ಹಾಗಾದ್ರೆ ಆಯ್ತು'' ಎಂದು ಒಪ್ಪಿದೆ.

ಅಪ್ಪನ ಬಳಿ ಹಣ ಕೇಳಿ ಒಂದು ಪ್ಯಾಕೆಟ್ ಪಟಾಕಿ ಖರೀದಿಸಿದೆ. ಅಂದಿನಿಂದ ಶುರುವಾಯಿತು ಮಂಗಗಳನ್ನೂ ಮೀರಿಸಿದ ಕಪಿಚೇಷ್ಟೆ...

ಬೆಳಿಗ್ಗೆ ಎದ್ದು ಮೊದಲು ಗದ್ದೆಯ ಪಕ್ಕದಲ್ಲಿ ನಾಯಿ ಕಟ್ಟಿ ಬರುತ್ತಿದ್ದೆ. ನಂತರ ತಿಂಡಿ ತಿಂದು ನನ್ನ ಅಸ್ತ್ರಗಳನ್ನು ಹಿಡಿದು ಕಾಡಿನತ್ತ ಹೆಜ್ಜೆ ಹಾಕಿದೆ. ಪಟಾಕಿ, ಅಗರಬತ್ತಿ, ಬೆಂಕಿಪೊಟ್ಟಣ, ಬೋರಾದಾಗ ಓದಲು ತುಂತುರು ಪುಸ್ತಕ, ಒಂದು ಬಾಟಲ್ ನೀರು. ಇವೇ ನನ್ನ ಅಸ್ತ್ರಗಳು.

ಅಂದು ಮಧ್ಯಾಹ್ನವಾದರೂ ಮಂಗಗಳು ಬಂದಿರಲಿಲ್ಲ. ಮನಸ್ಸು ತಡೆಯಲಿಲ್ಲ. ಅಗರಬತ್ತಿ ಹಚ್ಚಿ ನಾಲ್ಕೈದು ಪಟಾಕಿ ಸಿಡಿಸಿದೆ. ನಿಜ ಹೇಳಬೇಕೆಂದರೆ ನಾನು ಪಟಾಕಿ ಕೊಂಡದ್ದು ಮಂಗ ಓಡಿಸಲು ಅಲ್ಲ ಬದಲಾಗಿ ಪಟಾಕಿಯ ಹುಚ್ಚಿನಿಂದ. ಮನೆಯ ಅಂಗಳದಲ್ಲಿ ಬೈ ಹುಲ್ಲಿನ ರಾಶಿ ಇರುವುದರಿಂದ ದೀಪಾವಳಿಗೂ ಪಟಾಕಿ ಸಿಡಿಸಲು ಕಷ್ಟ. ಆದ್ದರಿಂದ ಸಿಕ್ಕಿದ್ದೇ ಚಾನ್ಸ್ ಎಂದು ಮಂಗ ಅಟ್ಟಿಸುವ ನೆಪ ಹಾಕಿ ಕಾಡಿಗೆ ಬಂದಿದ್ದೆ.

ಹೀಗೆ ಪಟಾಕಿ ಸಿಡಿಸಿದ ಖುಷಿಯಲ್ಲಿ ಮನೆಗೆ ಊಟಕ್ಕೆ ಹೋಗಿ ಹಿಂದೆ ಬರುವಷ್ಟರಲ್ಲಿ ಕಪಿಸೇನೆಯು ನನ್ನನ್ನು ಸ್ವಾಗತಿಸಿದವು. ನಾನು ಪಟಾಕಿ ಉರಿಸಿ ಮಂಗಗಳತ್ತ ಎಸೆದೆ. ಕೆಲವು ಮಂಗಗಳು ಮರದ ತುದಿಗೇರಿದರೆ ಇನ್ನು ಕೆಲವು ಪರಾರಿಯಾದವು. ನನಗೆ ಪಟಾಕಿ ಎಸೆಯುವ ಭರದಲ್ಲಿ ತಲೆಯ ಮೇಲೆ ಮರದ ಗೆಲ್ಲುಗಳಿರುವುದು ಹೊಳೆಯಲೇ ಇಲ್ಲ. ಒಂದು ಪಟಾಕಿ ಆ ಗೆಲ್ಲಿಗೆ ಅಪ್ಪಳಿಸಿ ಸೀದಾ ನನ್ನತ್ತಲೇ ಬಂತು. ನಾನು ಓಡಲು ಕಾಲ್ತೆಗೆಯುವ ಮುಂಚೆಯೇ ನನ್ನ ಹೆಗಲಿನ ಮೇಲೆ 'ಢಮಾರ್' ಎಂದು ಹೊಡೆಯಿತು. ಮುಖವನ್ನು ಇನ್ನೊಂದು ದಿಕ್ಕಿಗೆ ತಿರುಗಿಸಿದ್ದರಿಂದ ಸದ್ಯ ಕಣ್ಣಿಗೇನೂ ಅಪಾಯವಾಗಲಿಲ್ಲ. ಆದರೆ ನನ್ನ ಕಿವಿ ಬಲಿಯಾಯಿತು. ಆ ದಿನವಿಡೀ ಕಿವಿ ''ಡುಂಯೀ'' ಅನ್ನುತ್ತಿತ್ತು. ಅಂದಿನಿಂದ ಪಟಾಕಿಯನ್ನು ನೆಲದಲ್ಲಿಟ್ಟೇ ಸಿಡಿಸತೊಡಗಿದೆ.

ಅಂದು ತುಂತುರುವಿನಲ್ಲಿ ಗ್ರೀಕ್ ಪುರಾಣದ ಮಾನವ ದೇವತೆಯಾದ ಹೆರಾಕ್ಲಿಸ್‌ನ ವೀರ ಸಾಹಸ ಕಥನವನ್ನು ಓದುತ್ತಿದ್ದೆ. ಮರದ ರೆಂಬೆಯಲ್ಲಿ ಕೂತರೆ ಕಂಬಳಿ ಹುಳಗಳ ಕಾಟ ಎಂದು ಮರದ ಕೆಳಗೆ ಅಗಲವಾದ ಬೇರಿನ ಮೇಲೆ ಕುಳಿತಿದ್ದೆ. ಕತೆಯಲ್ಲಿ ಬರುವ ದೈತ್ಯ ರಾಕ್ಷಸರು, ಮಹಾಸರ್ಪಗಳು, ಡ್ರ್ಯಾಗನ್‌ಗಳ ಕುರಿತು ಓದುವುದರಲ್ಲಿ ಮಗ್ನನಾಗಿದ್ದೆ. ಆದರೆ ಈ ಪ್ರಸಂಗದ ನಡುವೆ ಹಿಂದಿನಲ್ಲಿ ಬಂದ ಕೇರೆ ಹಾವಿನ ಪರಿವೆಯೇ ಇಲ್ಲ. ನಾನು ಗಮನಿಸಿದ್ದು ಹತ್ತಿರ ಬಂದ ನಂತರವೇ. ಅದು ಹೇಳುವಷ್ಟು ದೊಡ್ಡದಾಗಿಲ್ಲದಿದ್ದರೂ ಈ ಕತೆಗಳ ನಡುವೆ ನನ್ನ ಕಣ್ಣಿಗೆ ಅದು ಮಹಾಸರ್ಪದ ಹಾಗೆಯೇ ಕಂಡಿತು.

ನಾನು ಕುಳಿತಿದ್ದ ಮರದ ಬುಡದಲ್ಲಿಯೇ ಒಂದು ಕಪ್ಪೆಯು ಆಶ್ರಯ ಪಡೆಯುತ್ತಿತ್ತು. ಹಾವು ತನ್ನ ಬೇಟೆಗಾಗಿಯೇ ಬರುತ್ತಿತ್ತು. ಆದರೆ ನಾನು ಅದು ನನ್ನನ್ನೇ ಕಚ್ಚಲು ಬರುತ್ತಿದೆ ಎಂದು ಭಾವಿಸಿ ಅಷ್ಟು ದೂರಕ್ಕೆ ಹಾರಿ ಬಿದ್ದೆ. ಅಷ್ಟರಲ್ಲಿ ಚೀಂವ್-ಕೀಂವ್ ಎಂದು ಕಪ್ಪೆಯ ಕೊನೆಯ ಆರ್ತನಾದ ಕೇಳಿಸಿತು. ಅಷ್ಟೇ... ಅಲ್ಲಿಂದ ಕಾಲ್ಕಿತ್ತಿದೆ.

ಹೀಗೆಯೇ ಒಂದು ದಿನ ಅಕ್ಕನ ಬಳಿ,

''ಅಕ್ಕಾ, ನಂಗೆ ಗದ್ದೆ ಬದಿಯಲ್ಲಿ ಬೋರಾಗುತ್ತೆ. ಪದ್ಯ ಕೇಳೋಕೆ ನಿಂದು Earphone ಕೊಡು'' ಎಂದೆ.

ಯಾವತ್ತೂ ಇಲ್ಲ ಅನ್ನುವವಳು ಆವತ್ತು ಯಾಕೋ ಹಿಂದೆ ಮುಂದೆ ನೋಡದೆ ತೆಗೆದು ಕೊಟ್ಟಳು. ಮನೆಯಲ್ಲಿ ಒಂದು ಹಾಳಾದ ಕೀಪ್ಯಾಡ್ ಮೊಬೈಲ್ ಇತ್ತು. F.M. ಕೇಳಲು ಆಗುತ್ತಿತ್ತು ಬಿಟ್ಟರೆ ಬೇರಾವುದಕ್ಕೂ ಉಪಯೋಗವಿರಲಿಲ್ಲ. ಅದನ್ನು ಹಿಡಿದುಕೊಂಡು ಗದ್ದೆಗೆ ಬಂದೆ. ಅಂದು ಮಂಗಗಳು ಬಂದಿರಲಿಲ್ಲ. ಈ ಬಾರಿ ಕೂರಲು ಸೂಕ್ತ ಜಾಗ ಆಯ್ಕೆ ಮಾಡಿ ಕಿವಿಗೆ ಇಯರ್‌ಫೋನ್ ಏರಿಸಿ FM ಆನ್ ಮಾಡಿದೆ.

ನಾನು ಹಾಡಿನಲ್ಲಿ ತಲ್ಲೀನನಾಗಿದ್ದೆ. ''ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ...'' ಎನ್ನುವ ಹಾಡು ಕೇಳುತ್ತಾ ಕಣ್ಣು ಮುಚ್ಚಿ ನಾನೂ ಹಾಡನ್ನು ಗುನುಗುತ್ತಿದ್ದೆ. ಆದರೆ ಆ ಹಾಡಿನ ನಡುವೆ ಏನೋ ಕರ್ಕಶ ಅಪಸ್ವರ ಕೇಳಿಸಿತು. FMಗೆ ರೇಂಜ್ ಸಿಗುತ್ತಿಲ್ಲ ಅಂದುಕೊಂಡೆ.

ಪುನಃ ಅದೇ ಕರ್ಕಶ ಸ್ವರ ಕೇಳಿಸಿತು. ಕಣ್ಣು ತೆರೆದು ಹಿಂದೆ ತಿರುಗಿ ನೋಡಿದರೆ ಮಂಗಗಳ ಎಲ್ಲಾ ದಂಡು ಗದ್ದೆಯಲ್ಲಿದ್ದವು. ಅಷ್ಟು ಮಾತ್ರವಲ್ಲ ಅವುಗಳ ನಡುವೆ ಅಪ್ಪ ಮಂಗಗಳನ್ನು ಅಟ್ಟಿಸುತ್ತಿದ್ದರು. ಅಂದರೆ ಮಂಗ ಬಂದಿರುವುದನ್ನು ನೋಡಿ ನಾಯಿ ಬೊಗಳಿತ್ತು. ಆದರೆ ನನಗೆ ಅದರ ಅರಿವೇ ಇಲ್ಲ.

ನನ್ನ ಅದೃಷ್ಟವೋ ದುರಾದೃಷ್ಟವೋ ತಿಳಿಯದು. ಅಂದು ಅಪ್ಪ ಅಲ್ಲೇ ಗದ್ದೆಯ ಬದಿಯ ಹುಲ್ಲು ಕೆತ್ತುತ್ತಿದ್ದರಿಂದ ಅವರ ಕಣ್ಣಿಗೆ ಸಿಕ್ಕಿ ಬಿದ್ದೆ.

''ನಿಂಗೇನು...? ಕಣ್ಣು, ಕಿವಿ ಎರಡೂ ಪೊಟ್ಟಾ...? ಇಲ್ಲಿ ಮಂಗ ಬಂದಿದ್ದೂ ಕಾಣಿಸಲ್ವಾ... ನೀನೆಂತ ಚೆಂದ ನೋಡ್ಲಿಕ್ಕೆ ಇಲ್ಲಿ ಕೂತದ್ದಾ... ಆಗದಿಂದ ಬೊಬ್ಬೆ ಹೊಡೆತಿದ್ದೇನೆ'' ಎಂದು ಅಪ್ಪ ಬೈಗುಳದ ಮಳೆ ಸುರಿಸಿದರು. ತಟ್ಟನೇ ಎದ್ದು ಮಂಗಗಳನ್ನು ಅಟ್ಟಿಸಲು ಓಡಿದೆ. ಆದರೆ ಅಪ್ಪನ ಭಯದಿಂದ ಸ್ವರ ಬರಬೇಕೇ...

ಕೆಲವು ದಿನಗಳ ನಂತರ ಭತ್ತದ ಕಟಾವು ಮಾಡಲಾಯಿತು. ಕೊನೆಗೂ ನನಗೆ ಹಾಗೂ ನಮ್ಮ ನಾಯಿಗೆ ಸಮಾಧಾನವಾಯಿತು. ಆದರೆ ಅಪ್ಪನ ಬೈಗುಳ ತಪ್ಪಲಿಲ್ಲ.

''ಮಂಗಗಳನ್ನು ಅಟ್ಟಿಸಲು ಮಂಗನನ್ನು ಕಳುಹಿಸಿದ ಹಾಗಾಯ್ತು. ನಿನ್ನನ್ನು ಗದ್ದೆ ಕಾಯಲು ಬಿಟ್ಟರೆ ನಮ್ಮ ಹೊಟ್ಟೆಗೆ ಕಲ್ಲು ಬೀಳುವುದು ಗ್ಯಾರಂಟೀ...'' ಎಂದು ಬೈಯ್ಯುತ್ತಿದ್ದರು.

ನಾನು ಕೇಳಿಯೂ ಕೇಳದ ಹಾಗೆ ನಟಿಸಿ ಆಡುವುದರಲ್ಲಿಯೇ ಮಗ್ನನಾದೆ.

•

ಕರಗುವಿಕೆಯು...

✍ **ರಮ್ಯಶ್ರೀ ಡಿ.,** ಪ್ರಥಮ ಬಿ.ಎ.

ಚಿಕ್ಕ ಚಿಕ್ಕ ಗಾತ್ರದ ಹನಿ ಹನಿಯಿಂದ ಕೂಡಿರುವ ಮಂಜಿನ ಹನಿ. ಚಳಿ ಚಳಿ ಎಂದು ಚೌಕ ಆಕಾರದ ಒಲೆ ಮುಂದೆ ಕುಳಿತ ಬೆಂಕಿಯ ಭಕ್ತಾದಿಗಳು, ನವಿಲು ನರ್ತನ ಆ ಸುಂದರ ಹೊಲದಲ್ಲಿ, ಅದರ ಹತ್ತಿರದಲ್ಲೇ ಇದ್ದು ನೃತ್ಯ ನೋಡಬೇಕೆಂದು ಕುಣಿಯುತ್ತಿರುವ ಚಿಂಟು-ಪಿಂಟುಗಳು, ಬಾನಿನಲ್ಲಿ ಕರೆ ನೀಡುತ್ತಿರುವ ಸೂರ್ಯನ ನಗೆ, ಪರಿಮಳವನ್ನರಸುತ್ತಾ ಹೊರಟ ದುಂಬಿ, ಆಹಾರವನ್ನರಸುತ್ತಾ ಹೊರಟ ಕೋಳಿ, ಜಿಂಕೆಯ ಕಳ್ಳ ನೋಟ, ಮಂಜಿನ ಹನಿಯನ್ನು ಅಪ್ಪಿ ಹಿಡಿದ ಗಿಡಗಳು, ಒಂದು ರೌಂಡ್ ವಾಕ್ ಹೋಗಿ ಬರುವ ಎಂದು ಬಾಲ ಅಲ್ಲಾಡಿಸುತ್ತಾ ಹೊರಟ ನಾಯಿ ಮತ್ತದರ ಮರಿ ಸೈನ್ಯ. ಇಷ್ಟೆಲ್ಲಾ ಸೌಂದರ್ಯ ತುಂಬಿಕೊಂಡು, ವರ್ಣಿಸಲು ಬಾಯಿ ತೆರೆಯದಂತೆ ಮಾಡಿದ ಊರೇ ಕೆಳಗೂರು.

ಆ ಊರಲ್ಲಿ ಮೇಲ್ಜಾತಿ, ಕೀಳು ಜಾತಿ ಎಂಬ ವಿಂಗಡನೆ ಅಳಿಯಲಿಲ್ಲ. ಆದರೆ, ಅಲ್ಲಿ ಒಬ್ಬೊಬ್ಬರು ಸಹಾಯಕಾರಿಗಳು. ಪ್ರೀತಿ, ಬಾಂಧವ್ಯದ ಕೊರತೆ ಇಲ್ಲ. ಸೋಮ ನಾಯಕರು ಎಂಬುವವನು ಅಲ್ಲಿಯ ಯಜಮಾನ, ಆ ಊರಿನ ಹಿರಿಯ, ಆತನ ಸತಿ ದೀಪಾ. ತನ್ನ ಪತಿಯ, ಮನೆಯ ಜವಾಬ್ದಾರಿ ಹೊತ್ತವಳು. ಆ ಊರಿನ ಪ್ರತಿಯೊಬ್ಬರ ಸಮಸ್ಯೆಗೆ ತೀರ್ಪು ನೀಡಿ ''ನಾಯಕ ಅಂದರೆ ನಾಯಕ ಅದು ಸೋಮ ನಾಯಕರು'' ಎಂಬ ಘೋಷ ವಾಕ್ಯಕ್ಕೆ ಹೆಸರುವಾಸಿಯಾದವರು. ದಣಿದು ಬಂದ ಜೀವಕ್ಕೆ ಬದಲು ಅನ್ನಪೂರ್ಣೇಶ್ವರಿಯಾದವರು ದೀಪಾ. ''ನ್ಯಾಯ ಅಂದರೆ ನ್ಯಾಯ ಸೋಮ ನಾಯಕರ ನ್ಯಾಯ'' ಎಂದು ಹೆಸರುಗಳಿಸುವರಿಗೆ ಒಂದು ಮುದ್ದಾದ, ದುಂಡು ಮುಖದ, ಸೌಂದರ್ಯದ, ಅಹಂಕಾರದಿಂದ ಮೆರೆಯುತ್ತಿರುವ ಆತನ ಮಗಳು. ಅವಳೇ ಚೈತ್ರ.

ಮಗಳಿಗೆ ಪರೀಕ್ಷೆಗೆ ಓದಲು, ತರಗತಿಗಳಿಗೆ ಹೋಗಲು ತೊಂದರೆ ಆಗದಂತೆ ಅವಳನ್ನ ಪರಿಚಯಸ್ಥರ ಮನೆಯಲ್ಲಿ ಬಿಟ್ಟಿದ್ದರು. ''ಅಹಂಕಾರ ನೆತ್ತಿಗೆ ಏರಿದಾಗ, ಯಾರೊಬ್ಬರ ಬುದ್ಧಿವಾದವೂ ಕಿವಿಗೆ ಬೀಳುವುದಿಲ್ಲ.'' ಅದರಂತೆ ಚೈತ್ರಳು ಆದಳು. ಗೆಳೆಯರೊಂದಿಗೆ ಚಲನಚಿತ್ರ, ಶಾಪಿಂಗ್ ಅಂತಾ ತಿರುಗಲು ಶುರುಮಾಡಿದಳು. ಆ ಮನೆಯವರು ಏನೋ ಹುಡುಗಿ, ಆಸೆ-ಗೀಸೆ ಇರುತ್ತದೆ ಅಲ್ವಾ? ಅವಳಿಗೂ ಅಂತ ಹೇಳಿ ಏನೊಂದೂ ಪ್ರಶ್ನೆ ಎತ್ತುತ್ತಿರಲಿಲ್ಲ. ಕ್ರಮೇಣ ದಿನಕ್ಕೊಂದು ಹುಡುಗರೊಟ್ಟಿಗೆ ತಿರುಗಾಡಲು ಶುರುಮಾಡಿದಳು. ಅದು ಬಿಟ್ಟರೆ, ಫೋನು ಸಿಕ್ಕ ಸಿಕ್ಕ ಹುಡುಗರೊಟ್ಟಿಗೆ ಚಾಟ್ ಮಾಡುವುದು. ಪರಿಣಾಮ ಅವಳ ಅಂಕ ಕಡಿಮೆ ಆಗುತ್ತಾ ಬಂತು.

ಅವರು ಒಂದು ದಿನ ಚೈತ್ರಾಳನ್ನು ಮುಖಕ್ಕೆ ಬಟ್ಟೆ ಅಡ್ಡ ಹಿಡಿದು ಒಬ್ಬ ಹುಡುಗನ ಒಟ್ಟಿಗೆ ತಿರುಗುವುದನ್ನು ನೋಡಿದರು. ಮತ್ತೊಂದು ದಿನ ಇನ್ಯಾರೋ ಡ್ರಗ್ಸ್ ಸೇವಿಸೋ ಹುಡುಗನ ಒಟ್ಟಿಗೆ ನೋಡಿ, ನೇರಾ ಮನೆಯವರಿಗೆ ಕರೆ ಮಾಡಿ ಬರಬೇಕು ಕಾಲೇಜ್‌ಗೆ ನಾಳೆ ಎಂದು ತಿಳಿಸಿದರು. ಸೋಮ ನಾಯಕರ ಬಳಿ ವಿಷಯವನ್ನು ತಿಳಿಸಿ, ಮಗಳಿಗೆ ಸ್ವಲ್ಪ ಬುದ್ಧಿವಾದ ಹೇಳಿ, ಅವಳ ಬಾಳು ಹಾಳಾಗುವುದಕ್ಕೆ ನಾವೇ ಹೊಣೆ ಆಗಬೇಕಾಗುತ್ತದೆ ಎಂದರು.

ಚೈತ್ರಾಳು ಅಪ್ಪಾಜಿ, ಅವರಿಗೆ ನನ್ನ ಕಂಡರೆ ಆಗೋಲ್ಲ, ಅದಕ್ಕೆ ಸುಳ್ಳು ಹೇಳುತ್ತಿದ್ದಾರೆ ಎಂದು ಸುಳ್ಳನ್ನು ಹೇಳಿ ಅವರನ್ನು ಊರಿಗೆ ಕಳುಹಿಸಿ ಕೊಟ್ಟಳು.

ಒಂದು ಚೂರೂ ಬದಲಾವಣೆ ಅವಳಲ್ಲಿ ಆಗಲಿಲ್ಲ. ಅವಳು ಪದವಿ ಮುಗಿಸಿ, ಅಲ್ಲಿಯೇ ಅಲೆಯುತ್ತಾ ಇದ್ದಳು. ಒಂದು ದಿನ ವೇಶ್ಯಾವಾಟಿಕೆ ನಡೆಯುತ್ತಿದೆ ಹೋಟೇಲ್ ರಮಣಿಯಲ್ಲಿ ಎಂದರಿತು ರವಿಯವರು ಬಂದು ರೈಡ್ ಮಾಡಿ ಅದಕ್ಕೆ ಬೀಗ ಜಡಿಯುತ್ತಾರೆ. ಆ ಗುಂಪಿನಲ್ಲಿ ಚೈತ್ರಾಳು ಇರುತ್ತಾಳೆ. ಜೈಲುವಾಸ ಅನುಭವಿಸಿದ ನಂತರ, ನಾಲ್ಕು - ಐದು ವರುಷಗಳ ಕಾಲ ಆ ಊರಿಗೆ ಅವಳ ಮುಖದರ್ಶನ ಲಭಿಸುವುದಿಲ್ಲ.

ಒಂದು ದಿನ ಅಲ್ಲಿಯ ಪೊಲೀಸ್ ಅಧಿಕಾರಿಯಾಗಿ ಚೈತ್ರಾಳು ಬರುತ್ತಾಳೆ. ಇಡೀ ಊರಿಗೇ ಊರೇ ಆಶ್ಚರ್ಯದ ಮಣೆಯನ್ನು ಹೊತ್ತಿರುತ್ತದೆ. ಆ ಊರಲ್ಲಿ ನಡೆಯುತ್ತಿದ್ದ ಡ್ರಗ್ಸ್-ಮಾಫಿಯಾ, ವೇಶ್ಯಾವಾಟಿಕೆಯನ್ನು ತಡೆಯಲು ನಾನಾ ಯೋಜನೆಗಳನ್ನು ರೂಪಿಸುತ್ತಾಳೆ. ಯುವಜನತೆಯಲ್ಲಿ ''ಪೊಲೀಸ್ ಅಂದರೆ ಭಯವಲ್ಲ, ಗೆಳೆಯರು'' ಎಂದು ತಿಳಿ ಹೇಳಿ ಅದೆಷ್ಟೋ ಮಂದಿಯ ವಿದ್ಯಾಭ್ಯಾಸಕ್ಕೆ ನೆರವಾದಳು. ಬಡಮಕ್ಕಳ, ಕೂಲಿ ಕಾರ್ಮಿಕರ ಹೊಟ್ಟೆಯ ಹಸಿವನ್ನು ತಗ್ಗಿಸಲು ಅನ್ನಕ್ರಾಂತಿಯ ರೂವಾರಿ ಆಗುತ್ತಾಳೆ. ತನ್ನ ಸಹೋದ್ಯೋಗಿಗಳಿಗೆ ಒಂದು ರೂಪಾಯಿಗೆ ಅನ್ನ, ತಿಂಡಿ ಸಿಗಲು ಸ್ಟೇಷನ್ ಪಕ್ಕದಲ್ಲೇ ಹೋಟೇಲ್ ತೆರೆಸುತ್ತಾಳೆ. ''ಕೂಡಿ ಬಾಳಿದರೆ ಸ್ವರ್ಗ ಸುಖ'' ಎಂಬಂತೆ ತನ್ನ ಸಹೋದ್ಯೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ದರೋಡೆಕೋರರ ಮನಸ್ಸನ್ನು ಬದಲಿಸಿ, ಸಮಾಜಕ್ಕೆ ಒಳ್ಳೆದನ್ನು ಮಾಡಿ ಎಂದು ತಿಳಿ ಹೇಳುತ್ತಾಳೆ. ಇನ್ನೂ ಹೀಗೆ ಹತ್ತಾರು ಕಾರ್ಯಕ್ರಮಗಳ ಯೋಜನೆಯಲ್ಲಿ ತನ್ನ ಜೀವನ ಕಳೆಯಲು ಪ್ರಯತ್ನಿಸುತ್ತಿದ್ದಾಳೆ. ಹೆಣ್ಣು ಮಕ್ಕಳ ರಕ್ಷಣೆ-ಸ್ಕ್ವಾಡ್ ರಚನೆ ಅದಕ್ಕಾಗಿ ಹೀಗೆ ತನ್ನ ಕಾಲೆಳೆಯುವವರ ಮುಂದೆ ಎತ್ತರೆತ್ತರವಾಗಿ ನಿಲ್ಲುತ್ತಿದ್ದಾಳೆ.

ಇಷ್ಟೆಲ್ಲಾ ಬದಲಾವಣೆಗೆ ಕಾರಣರಾದವರು ಅಲ್ಲಿನ ಪೊಲೀಸ್ ಅಧಿಕಾರಿ ರವಿ. ಅವಳ ಮೇಲೆ ಅಷ್ಟೇ ಅಲ್ಲಾ, ಉಳಿದ ಹೆಣ್ಣು ಮಕ್ಕಳಿಗೂ ಕರುಣೆ ತೋರಿಸಿ, ಕೇಸ್ ಕ್ಲೋಸ್ ಮಾಡುತ್ತಾರೆ. ಆದರೆ, ಅವರ ಯಜಮಾನರನ್ನಲ್ಲ. ಆ ಹೆಣ್ಣು ಮಕ್ಕಳಿಗೆ ನೀವೆಲ್ಲಾ ಹುಟ್ಟಿದ್ದು ಈ ಹೀನಾಯ ಕೆಲಸ ಮಾಡಲಿಕ್ಕಾಗಿಯೇ? ನಿಮ್ಮ ಭವಿಷ್ಯ ಇದುವೇ? ನೀವು ಹುಟ್ಟುವಾಗ ಒಬ್ಬರೇ, ಬರೀ ಕೈಯಲ್ಲಿ ಬಂದಿರಿ. ಹೋಗೋವಾಗ ನಿಮ್ಮ ಸಾಧನೆ ಇದೆಯೇ? ಸಾಯುವಾಗ ನಾಲ್ಕು ಜನರು ಹೊಗಳುವ ಹಾಗೇ ಸಾಯಬೇಕು. ನಿಮ್ಮ ಬಗ್ಗೆ ಅಸಹ್ಯದ ಮಾತುಗಳನ್ನಾಡಿ, ನಿಮ್ಮ ಮನೆಯವರ ಹೆಸರನ್ನು ಬೀದಿಗೆ ತರಲು ಅಲ್ಲಾ. ನಿಮ್ಮ ಓದಿಗೆ ನಾನು ಸಹಾಯ ಮಾಡುವೆ. ಒಳ್ಳೆಯ ಅಧಿಕಾರಿಯಾಗಿ, ದೇಶಕ್ಕೆ ಸೇವೆ ಸಲ್ಲಿಸಿ, ಬಡವರ-ದೀನ ದಲಿತರ ರಕ್ಷಕರಾಗಿ, ಭಕ್ಷಕರಾಗಿ ಅಲ್ಲ, ನಿಮ್ಮ ಒಳಿತಿಗೆ ಏನು ಸಹಾಯ ಬೇಕೋ ಅದನ್ನು ನಾನು ಮಾಡುವೆ. ''ಸ್ವಾಮಿ ವಿವೇಕಾನಂದರ ಆದರ್ಶದ ಜೀವನ, ಮದರ್ ತೆರೇಸಾರ ಸೇವೆ, ದೇಶ ಭಕ್ತಿಯ ಸ್ಫೂರ್ತಿ ಭಗತ್ ಸಿಂಗ್, ರಾಮಕೃಷ್ಣರ ಭಕ್ತಿ ನಿಮ್ಮಲ್ಲಿ ಉದಯಿಸಲಿ''. ''ಏಳೀ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ''. ಅಣ್ಣನಾಗಿ ಸದಾ ನಿಮ್ಮೊಂದಿಗೆ ನಾ ಇರುವೆನು. ಇನ್ನು ನಿಮ್ಮ ಕರ್ಮ ನಿಮಗೆ ಫಲವನ್ನು ಒದಗಿಸುತ್ತದೆ. ಆದದ್ದರ ಪಾಠ ಮರೆಯದೆ, ಘಟನೆಯ ಮರೆತು ಸಾಗಿಸಿ ಜೀವನ. ನಿಮ್ಮ ಬದುಕೇ ಸಾವಿರ ಜನರ ಚೇತನವಾಗಲಿ. ಆದದ್ದು ಆಗಿ ಹೋಯಿತು. ಇನ್ನು ಅದರ ಚಿಂತೆಯ ಬಿಟ್ಟು, ಅಂಜಿಕೆಯಿಲ್ಲದೆ ಹುಲಿಯ ಹಾಗೇ ಹೆಜ್ಜೆ ಇಡಿ ಕಳ್ಳ ಬೆಕ್ಕಂತೆ ಅಲ್ಲಾ.

ಹೌದು, ಇದೇ ಮಾತು ಅವಳ ಬದುಕನ್ನು KAS ಪರೀಕ್ಷೆಗೆ ಒಳಪಡಿಸಿ ರ‍್ಯಾಂಕ್ ಬಂದು, ಟ್ರೈನಿಂಗ್ ಪಡೆದು ತನ್ನ ಸೇವೆಗೆ ತೆರಳುವಂತೆ ಮಾಡಿದ್ದು. ಅವಳು ಒಂದು ಮಾದರಿ ಅಷ್ಟೇ. ಇನ್ನೂ ಈ ಬ್ರಹ್ಮಾಂಡದಲ್ಲಿ ಎಷ್ಟೋ ಜನ ಸಾಯಲು ತೆರಳುವವರಿದ್ದಾರೆ ಕಷ್ಟ ಎಂದು. ಜೀವನ ಚಿಕ್ಕದು, ನಿಮ್ಮ ಕರ್ಮದ ಫಲ ನಿಮಗೆ, ಸಮಾಜಕ್ಕೆ ಬೈಯ್ಯುವ ಬದಲು ನಮ್ಮಲ್ಲಿಯೇ ಪರಿವರ್ತನೆ ಆಗಬೇಕಿದೆ. ಒಂದು ಬದಲಾವಣೆ, ಕ್ರಾಂತಿಯ ರೂಪ, ಕ್ರಾಂತಿ-ಶಾಂತಿನೂ ಆಗಬಹುದು. ಸಮಾಜದಲ್ಲಿ ಅದೆಷ್ಟೋ ವಿದ್ಯಾಭ್ಯಾಸದಿಂದ ವಂಚಿತರಾದವರಿಗೆ ಮಾರ್ಗದರ್ಶನದ ಅಗತ್ಯವಿದೆ. ಭಾರತದ ಪ್ರಗತಿ ನಮ್ಮ ಪ್ರಗತಿ.

''ನಮ್ಮ ಇಚ್ಛೆ ನಮ್ಮೆಲ್ಲರ ಗೆಲವು.''

●

ವರುಣರಾಜ

ಆಹಾ! ಎಂಥ ನಿನ್ನಯ ಸೊಬಗು
ನೋಡಲೆಷ್ಟು ಮನೋಹರ ನನ್ನೀ ವರುಣ
ಕಿವಿಗಳಿಗೆ ಮುದನೀಡೋ ನಿನ್ನಯ ದನಿಯ
ಹಂಬಲಿಸಿದೆ ನಾ ಪ್ರತಿ ಗಳಿಗೆಯಲ್ಲೂ
ಸುಂದರ ಪ್ರಕೃತಿಗೆ ನೀನೇ ಹರ್ಷಧಾರೆ
ಸುಡುತಿಹ ಭೂಮಿಯ ತಣಿಸುವ ಜಲಧಾರೆ
ಕಾಮನಬಿಲ್ಲಿನ ಮನಮೋಹಕ ದೃಶ್ಯ
ಬಿಸಿಲಿನೊಡನೆ ನೀ ಬೆರೆತ ವರ್ಣನೆ
ತಂಪು ತಂಗಾಳಿಯೊಂದಿಗೆ ಮನತಣಿಸುವ ನೀ
ತೋರುವೆ ಗುಡುಗು ಮಿಂಚಿನ ನರ್ತನ
ನಿನ್ನ ಅಗಲಿ ಉಳಿಯಲಾರೆವು ನಾವು
ಭೇಟಿ ಮಾಡು ಕಾಲಚಕ್ರದ ದಿನಗಳಲಿ.

ಪೂರ್ಣಿಮಿ ಕಿರಣ್, ದ್ವಿತೀಯ ಎಮ್.ಎಸ್ಸಿ

ಸಿನಿಮಾ ಮತ್ತು ಧಾರಾವಾಹಿ

✍ **ಗೌತಮ್**, ತೃತೀಯ ಬಿ.ಎ.

ಸಿನಿಮಾ ಮತ್ತು ಧಾರಾವಾಹಿ ಎರಡು ಮನೋರಂಜನೆಯ ಮಾರ್ಗಗಳು. ಒಂದು ಬೆಳ್ಳಿತೆರೆ ಇನ್ನೊಂದು ಕಿರುತೆರೆ. ಈ ಬೆಳ್ಳಿತೆರೆಗೂ ಕಿರುತೆರೆಗೂ ಅಜಗಜಾಂತರ ವ್ಯತ್ಯಾಸವಿದೆ. ಹಾಗೇ ಇವೆರಡರ ನಡುವೆ ಒಂದು ಸೇತುವೆ ಇದೆ. ಕಿರುತೆರೆಯಲ್ಲಿ ಅಭಿನಯಿಸಿ ಬೆಳ್ಳಿತೆರೆಯಲ್ಲಿ ಜೀವನ ಕಟ್ಟಿಕೊಂಡವರು ಅದೆಷ್ಟೋ ಮಂದಿ ಇದ್ದಾರೆ. ಈ ಸಿನಿಮಾ ಮತ್ತು ಧಾರಾವಾಹಿ ಎರಡೂ ಅದರದೇ ಆದ ಪ್ರೇಕ್ಷಕರನ್ನು ಒಳಗೊಂಡಿದೆ. ಧಾರಾವಾಹಿಗಳು ಮನೆಯ ಗೃಹಿಣಿಯರನ್ನು ಆಕರ್ಷಿಸಿದರೆ ಸಿನಿಮಾಗಳು ಯುವಕ-ಯುವತಿಯರನ್ನು, ಯುವಪೀಳಿಗೆಯನ್ನು, ಮಕ್ಕಳನ್ನು ಹಾಗೂ ಎಲ್ಲಾ ವರ್ಗದ ಜನರನ್ನು ಆಕರ್ಷಿಸುತ್ತವೆ.

ಮೊದಲಿಗೆ ಸಿನಿಮಾ ನಡೆದು ಬಂದ ಹಾದಿ ಅವು ಪ್ರಭಾವಿಸಿದ ಅಂಶಗಳು ಹಾಗೂ ಅಲ್ಲಿರುವ ತೊಂದರೆಗಳ ಕಡೆ ನೋಡಿದರೆ

ಕನ್ನಡದ ಮೊದಲ ವಾಕ್ ಚಿತ್ರವಾಗಿ 1934ರಲ್ಲಿ ಸಿನಿಮಾ ಮಾಧ್ಯಮದಲ್ಲಿ ತನ್ನ ಅಸ್ತಿತ್ವವನ್ನು ಹುಡುಕಲು ಪ್ರಾರಂಭಿಸಿದ ಕನ್ನಡ ಚಿತ್ರರಂಗ 70-80ರ ದಶಕದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿದರೂ ಆನಂತರದ ಎರಡು ದಶಕಗಳಲ್ಲಿ ಮತ್ತೆ ಮತ್ತೆ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪ್ರಯೋಗಗಳ ಜೊತೆಗೆ ರಿಮೇಕ್‌ನ ಮೊರೆ ಹೋಗಲೇಬೇಕಾದ ಅನಿವಾರ್ಯತೆಯನ್ನು ಸದಾ ಎದುರಿಸುತ್ತಿದೆ.

''ನಾಂದಿ'' ಸಿನಿಮಾ ಬರುವವರೆಗೆ ಸಿನಿಮಾ ಎಂದರೆ ಸಿನಿಮಾ ಅಷ್ಟೆ ಅಲ್ಲಿ ಜನಪ್ರಿಯ ಕಲಾತ್ಮಕ ಅಥವಾ 'ಹೊಸ ಅಲೆ' ಚಿತ್ರಗಳೆಂಬ ವಿಭಜನೆ ಇರಲಿಲ್ಲ. ಈಗಿನ ಕಲಾತ್ಮಕ ಹಣೆಪಟ್ಟಿ ಹೊತ್ತು ಬರುವ ಸಿನಿಮಾಗಳು ಪ್ರಶಸ್ತಿಗಾಗಿಯೇ ನಿರ್ಮಾಣಗೊಂಡಿರುವವು ಎಂಬ ಅಪರಾಧ ಇದೆ. ಈ ಸಿನಿಮಾಗಳು ಸಾರ್ವಜನಿಕರನ್ನು ತಲುಪುವಲ್ಲಿ ವಿಫಲವಾಗಿವೆ ಎನ್ನಬಹುದು. ಈ ಸಿನಿಮಾಗಳು ಥಿಯೇಟರಿಗೆ ಬಂದರೆ ಒಂದೆರಡು ದಿನಗಳಲ್ಲೇ ಜಾಗ ಖಾಲಿ ಮಾಡಿರುತ್ತವೆ.

'ಮುಂಗಾರು ಮಳೆ' ಸಿನಿಮಾನ ಕನ್ನಡ ಚಿತ್ರರಂಗದ ಮರುಹುಟ್ಟು ಎಂದೇ ಹೇಳಲಾಗುತ್ತದೆ. ಅದಕ್ಕೂ ಮುಂಚೆ ಕನ್ನಡ ಚಿತ್ರರಂಗ ಸತ್ತುಹೋಗಿತ್ತು ಎಂಬುದಲ್ಲಾ. ಮುಂಗಾರು ಮಳೆಗೂ ಮುನ್ನ ಒಂದೆರಡು ವರ್ಷಗಳ ಕಾಲ ಲಾಂಗು ಮಚ್ಚಿನದೇ ದರ್ಬಾರು. ಅದಕ್ಕೆ ಕಾರಣ 'ಕರಿಯ' ಮತ್ತು 'ಜೋಗಿ'. ಈ ಸಿನಿಮಾಗಳ ಯಶಸ್ಸಿನಿಂದಾಗಿ ಹೆಚ್ಚಾಗಿ ಅದೇ ರೀತಿಯ ಕನ್ನಡ ಸಿನಿಮಾಗಳು ಬರುತ್ತಿದ್ದವು. ನಂತರ ಬಂದ 'ಮುಂಗಾರು ಮಳೆ' ಮತ್ತು 'ದುನಿಯಾ' ಸಿನಿಮಾಗಳ ಸಕ್ಸಸ್‌ನಿಂದಾಗಿ ಅದರ ಫಾರ್ಮುಲಾ ಇಟ್ಟುಕೊಂಡು ಸುಮಾರು ಸಿನಿಮಾಗಳು ಬಂದವು. ಇದೆಲ್ಲದರ ಪರಿಣಾಮ ನೇರವಾಗಿ ತಟ್ಟುವುದು ಸಿನಿಮಾ ನಿರ್ಮಾಣ ಮಾಡುವುದರ ಮೇಲೆ. ಹಳೆಯ ಗೆಲುವನ್ನೇ ಬೆನ್ನಿಗೆ ಕಟ್ಟಿಕೊಂಡು ಇನ್ನೊಂದು ಸಿನಿಮಾ ಮಾಡಿ ಆ ಸಿನಿಮಾದ ಕಥೆ ಚಿತ್ರಕಥೆಗೆ ಗಟ್ಟಿ ತಳಪಾಯವಿಲ್ಲದೆ ಬಿಡುಗಡೆಯಾದ ಮರುದಿನವೇ ಎತ್ತಂಗಡಿಯಾಗಿ ಮತ್ತೊಂದು ಸಿನಿಮಾ ಬಂದು ಕೂರುತ್ತದೆ. ಆಗಿನ ಸಿನಿಮಾ ತಂತ್ರಜ್ಞರಿಗೆ ಸಿನಿಮಾ ಅಂದರೆ ಬರಿ ಹಣ ಮಾಡುವುದಲ್ಲ, ಸಿನಿಮಾ ಅಂದರೆ ದೇವರು, ಉಸಿರು ಎಲ್ಲಾ ಆಗಿತ್ತು. ಹಿಂದಿನ ಸಿನಿಮಾಗಳೆಲ್ಲಾ ಪ್ರೇಕ್ಷಕ ಸ್ಪಂದಿಸುವಂತೆ ಕಥೆಯನ್ನು ಒಳಗೊಂಡಿರುತ್ತಿತ್ತು. ಸಮಾಜಕ್ಕೊಂದು ಸಂದೇಶವಿರುತ್ತಿತ್ತು. ಆದರೆ ಈಗಿನ ಸಿನಿಮಾದ ಕಥೆಗಳು ಪ್ರಾರಂಭವಾಗುವುದೇ ಶೀರ್ಷಿಕೆಯಿಂದ. ಸಾಮಾನ್ಯವಾಗಿ ಕಥೆಯಾದ ಮೇಲೆ ಶೀರ್ಷಿಕೆ ಹುಟ್ಟುತ್ತಿತ್ತು. ಈಗ ಶೀರ್ಷಿಕೆ ಹುಟ್ಟಿ ನಂತರ ಕಥೆ ರೂಪುಗೊಳ್ಳುತ್ತದೆ. ಇಂದಿನ ಸಿನಿಮಾಗಳಲ್ಲೆಲ್ಲಾ ಅಶ್ಲೀಲತೆ, ಪಾತಕ ಲೋಕದ ಚಿತ್ರಣವೇ ಹೆಚ್ಚು. ಇಂತಹ ಸಿನಿಮಾಗಳಿಂದಲೇ ಅದೆಲ್ಲೋ ಒಬ್ಬ ಸಿನಿಮಾದಲ್ಲಿನ ದರೋಡೆಯ ಶೈಲಿಯನ್ನು ಅನುಕರಿಸಿ ದರೋಡೆ ಮಾಡಿದನಂತೆ. ಇನ್ಯಾವುದೋ ಭಯಾನಕ ಸಿನಿಮಾ ನೋಡುತ್ತಾ ಸತ್ತೇ ಹೋದನಂತೆ. ಇವೆಲ್ಲಾ ಇಂದಿನ ಸಿನಿಮಾಗಳು ತಂದೊಡ್ಡುವ ಫಜೀತಿಗಳು.

ಬರೀ ಕೆಡುಕುಗಳೇ ಅಂದುಕೊಳ್ಳಬೇಡಿ. ಅದೆಷ್ಟೋ ಒಳಿತುಗಳು ಸಿನಿಮಾಗಳಲ್ಲಿ ಒಳಗೊಂಡಿವೆ. ಯಜಮಾನ ಸಿನಿಮಾದಿಂದ ಅದೆಷ್ಟೋ ಒಡೆದ ಕುಟುಂಬಗಳು ಸಾಮರಸ್ಯದ ಅವಿಭಕ್ತ ಕುಟುಂಬಗಳಾಗಿವೆ. 'ಉಪ್ಪಿದಾದಾ MBBS' ಚಿತ್ರದಿಂದ ಅದೆಷ್ಟೋ ಡಾಕ್ಟರ್‌ಗಳು ರೋಗಿಗಳೆಡೆಗೆ ಪ್ರೀತಿ ತೋರಿದ್ದಾರೆ. ಬರೀ ಸಿನಿಮಾದ ಕಥೆಗಳಷ್ಟೆ ಅಲ್ಲ 'ಮುಸ್ಸಂಜೆ ಮಾತು' ಚಿತ್ರದ ಏನಾಗಲಿ ಮುಂದೆ ಸಾಗು ನೀ ಎಂಬ ಹಾಡು ಜೀವನದಲ್ಲಿ ಕುಗ್ಗಿದವರಿಗೆ ಸ್ಫೂರ್ತಿ ನೀಡುತ್ತದೆ.

ಸಿನಿಮಾದಲ್ಲಿ ರಿಮೇಕ್ ಎಂಬ ಭೂತದೊಂದಿಗೆ ಅನೇಕ ನಿರ್ದೇಶಕರು, ನಿರ್ಮಾಪಕರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದ್ಯಾವ ಭಾಷೆಯಲ್ಲೋ ಹಿಟ್ಟಾದ ಚಿತ್ರದೆದುರಿಗೆ ಮಂಡಿಯೂರಿ ಇನ್ನೊಂದು ಚಿತ್ರತಂಡ ಅದರ ಹಕ್ಕನ್ನು ಪಡೆದುಕೊಳ್ಳುತ್ತದೆ. ಅಲ್ಲಿಯ ಯಥಾವತ್ ರೂಪ ಇದ್ದರೂ ಇಲ್ಲಿಯ ನೇಟಿವಿಟಿಗೆ ಬದಲಾಯಿಸಿಕೊಂಡಿದ್ದೇವೆ ಎಂದು ಸುಳ್ಳು ಮಾತನಾಡುತ್ತಾರೆ.

ಜಪಾನಿನ ಸಿನಿಮಾವೊಂದನ್ನು ಕನ್ನಡದ ನೆಲಗಟ್ಟಿಗೆ ಹೊಂದುವಂತೆ ಭಾವಾನುವಾದಿಸಿ ಚಿತ್ರಕಥೆ ರಚಿಸಿ, ಕಾರ್ನಾಡರು ನಿರ್ದೇಶಿಸಿದ

03 Pg_035-110 TY200028

ಚಿತ್ರ 'ಒಂದಾನೊಂದು ಕಾಲದಲ್ಲಿ'. ಇದು ಭಾವಾನುವಾದವಾದರೆ ಇಂದಿನ ಸಿನಿಮಾಗಳೆಲ್ಲಾ ಬರೀ ಭಾಷಾಂತರವಷ್ಟೆ. ಚಿತ್ರರಂಗದ ಇಷ್ಟೆಲ್ಲಾ ಏಳುಬೀಳುಗಳ ನಡುವೆ ಚಿತ್ರರಂಗದಲ್ಲಿ ಸಾಧಿಸಲು ಹೊಸ ಪ್ರಯತ್ನಗಳ ಕನಸುಗಳನ್ನು ಹೊತ್ತು ಅನೇಕ ಯುವಕರು ತಮ್ಮ ಮೌನ ಪ್ರಯತ್ನ ಮಾಡುತ್ತಿರುವುದೇ ಸಂತಸದ ಸಂಗತಿಯಾದರೂ ಇಷ್ಟೆಲ್ಲಾ ಒಳರಾಜಕೀಯದ ಮೇಲಾಟದಲ್ಲಿ ಈ ಯುವಪೀಳಿಗೆಯ ನಿರ್ದೇಶಕರು, ಕಥೆಗಾರರು ಹೇಗೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಾರೆ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಇಷ್ಟೆಲ್ಲಾ ಸಿನಿಮಾ ಎಂಬ ಬಣ್ಣದ ಲೋಕವಾದರೆ ಧಾರಾವಾಹಿಗಳು, ಈಗಿನ ಕಾಲಕ್ಕೆ ಹೇಳುವುದಾದರೆ ಬರೀ ಸುಳ್ಳುಗಳು, ಬಾಲಿಶಗಳನ್ನೊಳಗೊಂಡ ಲೋಕವೇ ಈ ಧಾರಾವಾಹಿ ಲೋಕ.

ಧಾರಾವಾಹಿ ಎಂಬ ಈ ಕಿರುತೆರೆಯ ಲೋಕ ಗೃಹಿಣಿಯರು ಹಾಗೂ ಕೆಲ ಹಿರಿಯ ವರ್ಗದ ಪ್ರೇಕ್ಷಕರನ್ನು ಒಳಗೊಂಡಿದೆ. ಅದೆಷ್ಟು ಜನರು ಕಿರುತೆರೆಯಲ್ಲಿ ಅಭಿನಯಿಸಿ ಬೆಳ್ಳಿತೆರೆಯಲ್ಲಿ ಒಳ್ಳೆಯ ಬದುಕನ್ನು ಕಟ್ಟಿಕೊಂಡಿದ್ದಾರೆ. ಆದರೆ ಈ ಧಾರಾವಾಹಿಗಳು ಇದೀಗ ಸುಳ್ಳುಗಳ ಕಂತೆಯಾಗಿದೆ. ಅದೆಷ್ಟು ಅರ್ಥಹೀನವೆಂದರೆ ಒಂದು ಕಥೆಯ ಸಂಪೂರ್ಣ ಅರ್ಥವೇ ಹೋಗಿ ಒಂದು ಮನೆಯನ್ನು ಒಡೆಯುವಂತಾಗಿದೆ ಇದರ ಕಥೆಗಳು. ಈಗಿನ ಅನೇಕ ಧಾರಾವಾಹಿಗಳು ಹಿಂಸಾಚಾರದ ದೃಶ್ಯ, ಮಹಿಳೆಯರ ಮೇಲೆ ನಡೆದ ಅತ್ಯಾಚಾರವಾಗಲಿ, ಕೋಮು ಗಲಭೆಗಳಾಗಲಿ ನೋಡುಗನ ಮನದಲ್ಲಿ ಎಲ್ಲೋ ಒಂದು ಕಡೆ ಖಂಡಿತ ದುಷ್ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ. ಪ್ರತಿ ಬಾರಿಯೂ ಅದನ್ನು ಮರು ಪ್ರಸರಿಸುತ್ತಾ ತಮ್ಮ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವ ಅನೇಕ ಚಾನಲ್‌ಗಳು ಕೂಡ ಇವೆ.

ಇಂದಿನ ಧಾರಾವಾಹಿಗಳಲ್ಲಿ ಹೆಣದ ಮುಂದೆ ವಿಕಾರವಾಗಿ ಅಳುವುದು, ತನ್ನ ಗಂಡನೊಬ್ಬನನ್ನು ಬಿಟ್ಟು ಬೇರೆಲ್ಲಾ ಗಂಡಂದಿರನ್ನು ಪ್ರೀತಿಸುವುದು ಇಂತಹ ಕೆಟ್ಟ ಸನ್ನಿವೇಶಗಳನ್ನು ಕಾಣಬಹುದು.

ಸಾಹಿತ್ಯ ಪ್ರಕಾರವಾದ ಕಥೆ, ಕವನ, ಕಾದಂಬರಿ ಯಾವುದೇ ಇರಲಿ ಆರಂಭವಿದ್ದಂತೆ ಅಂತ್ಯವು ಇದ್ದೇ ಇರುತ್ತದೆ. ಆದರೆ ಕಿರುತೆರೆಯ ಇಂದಿನ ಈ ಧಾರಾವಾಹಿಗಳು ಅಂತಹ ಚೌಕಟ್ಟನ್ನು ಹಾಕಿಕೊಂಡಿಲ್ಲ. ಆರಂಭದಲ್ಲಿ ಒಂದು ಕಥಾಹಂದರ ಬಿಟ್ಟುಕೊಂಡು ಹುಟ್ಟುವ ಧಾರಾವಾಹಿ ಬೆಳೆಯುತ್ತಾ ಟಿ.ಆರ್.ಪಿ. ಎಂಬ ಆರೈಕೆಗೆ ಸಿಕ್ಕಿ ಕೊಂಬೆಗಳು ಮಾತ್ರ ಬಲಿಷ್ಠವಾಗುತ್ತಾ ಉಳಿದವು ಸೊರಗುತ್ತಾ ಕೊನೆಗೊಮ್ಮೆ ಇಲ್ಲದಂತಾಗಿ ಬಿಡುತ್ತಾ ಬೆಳೆದ ಕೊಂಬೆ ಟಿಸಿಲೊಡೆದು ಕೊನೆಗೆ ಅದರ ಬೇರು ಅಂದರೆ ಧಾರಾವಾಹಿಯ ಮೂಲ ಕಥೆ ಎಲ್ಲಿತ್ತೆಂಬುದೇ ಮರೆತು ಹೋಗುತ್ತದೆ.

ಮೊದಲು ಇಬ್ಬರು ಮಕ್ಕಳಿದ್ದ ದಂಪತಿಗಳು 700ನೇ ಕಂತಿಗೆ ನಮಗಿರೋಳು ಒಬ್ಬಳೇ ಮಗಳು ಎನ್ನುತ್ತಾರೆ. ಮನೆಯವರ ಒಳಿತಿಗೆ ಯಾವ ತ್ಯಾಗಕ್ಕೂ ಸಿದ್ಧಳಾಗಿದ್ದ ತಾಯಿ 850ನೇ ಸಂಚಿಕೆಯಲ್ಲಿ ತನ್ನ ಸಾಕು ಮಗನನ್ನು ಉಳಿಸಲು ನಾದಿನಿಯ ಮೇಲೆ ಕತ್ತಿ ಮಸೆಯುತ್ತಿರುತ್ತಾಳೆ. ಹೀಗೆ ಅಸಮಂಜಸವಾಗಿ ಅರ್ಥಿಕವಾಗಿ ಕೆಲವೊಮ್ಮೆ ಅನೈತಿಕವಾಗಿ ಧಾರಾವಾಹಿಯ ಕಥೆಗಳು ಸಾಗುತ್ತವೆ. ನಾನು ತಿಳಿದಂತೆ ಜನ ಕೇವಲ ಅಭ್ಯಾಸದಿಂದ ನೋಡುತ್ತಿರುತ್ತಾರೆ ಹೊರತು ಆನಂದಿಸಿ ಅಲ್ಲ. ಯಾವುದೇ ಧಾರಾವಾಹಿಗೂ ನಿಯಮಿತ ಸಂಚಿಕೆ ಇದ್ದು ಅಂತ್ಯವಿದ್ದರೆ ಆಸಕ್ತಿದಾಯಕವೆನಿಸುತ್ತದೆ.

ಹಾಗಂತ ಬರುವ ಧಾರಾವಾಹಿಗಳೆಲ್ಲಾ ಕೆಟ್ಟದ್ದು ಅಂತ ಹೇಳುತ್ತಿಲ್ಲ. ವಿಭಿನ್ನ ಕಥೆಯನ್ನು ಒಳಗೊಂಡು ಪ್ರೇಕ್ಷಕರ ಮನಮುಟ್ಟುವಂತೆ ಸಮಾಜಕ್ಕೆ ಸಂದೇಶವನ್ನು ನೀಡುವಂತೆ ಅದೆಷ್ಟೊ ಧಾರಾವಾಹಿಗಳು ಬಂದಿವೆ. ಹೀಗೆಂದಾಗ ಮೊದಲಿಗೆ ನೆನಪಾಗುವುದು ಟಿ. ಎನ್. ಸೀತಾರಾಮ್ ಅವರ 'ಮುಕ್ತಾ ಮುಕ್ತಾ' ಧಾರಾವಾಹಿ. ಹಾಗೆ ಅದೆಷ್ಟೋ ಧಾರಾವಾಹಿಗಳು ಸಿನಿಮಾ ಶೈಲಿಯಂತೆ ಪತ್ತೇದಾರಿಯ ಶೈಲಿಯಂತೆ ಬಂದು ಧಾರಾವಾಹಿಯನ್ನು ಇಷ್ಟಪಟ್ಟು ನೋಡುವಂತೆ ಮಾಡಿದೆ. ಅಂತಿಮವಾಗಿ ನನ್ನ ಅನಿಸಿಕೆಯೊಂದೇ ಧಾರಾವಾಹಿಗೆ ಆರಂಭವಿದ್ದಂತೆ ಅಂತ್ಯವಿರಬೇಕು. ಪ್ರತೀ ಕಥೆಯು ಹಿಂದಿನದಕ್ಕಿಂತ ಭಿನ್ನವಾಗಿರಬೇಕು. ಹಾಗೆ ಪ್ರತೀ ಧಾರಾವಾಹಿ ಸಾಮಾಜಿಕ ಸಮಸ್ಯೆಯೊಂದನ್ನು ಇಟ್ಟುಕೊಂಡು ಅದರ ಮೇಲೆ ಬೆಳಕು ಚೆಲ್ಲುವಂತಿರಬೇಕು. ನಿಜ ಜೀವನದ ವಾಸ್ತವಕ್ಕೆ ಹತ್ತಿರವಾಗಿರಬೇಕು. ಒಟ್ಟಾರೆಯಾಗಿ ಧಾರಾವಾಹಿಗಳು ಸಮಾಜಕ್ಕೊಂದು ಒಳ್ಳೆಯ ಸಂದೇಶವನ್ನು ನೀಡುವಂತಿರಬೇಕು. ಅದೇ ರೀತಿ ಸಿನಿಮಾ ಕೂಡ ಮನೋರಂಜನೆಯನ್ನು ಒಳಗೊಂಡು ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುವಂತೆ ಮಾಡಿ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸದಭಿರುಚಿಯ ಸಿನಿಮಾಗಳು ಬರಬೇಕು.

ಹೀಗೆ ಸಿನಿಮಾ ಮತ್ತು ಧಾರಾವಾಹಿ ಒಂದನ್ನೊಂದು ಬಿಟ್ಟಿರದ ಮನರಂಜನೆಯ ಮಾಧ್ಯಮ.

ಧಾರಾವಾಹಿ ನಿಜ ಜೀವನಕ್ಕೆ ಹಿಡಿದ ಕೈಗನ್ನಡಿ. ಅದೇ ರೀತಿ ಸಿನಿಮಾ ನಿಜ ಜೀವನದೊಂದಿಗೆ ಕಲ್ಪನೆಗೆ ಅವಕಾಶ ಒದಗಿಸುವ ದೊಡ್ಡ ಮಾಧ್ಯಮ. ●

ಸಕಾರಾತ್ಮಕ ಮನೋಭಾವ

✍ **ಸಾಧನ,** ಪ್ರಥಮ ಪಿ.ಯು.ಸಿ.

ಜಗತ್ತಿನ ಜೀವಿಗಳಲ್ಲಿ ಮಾನವನಿಗೆ ವಿಶಿಷ್ಟ ಸ್ಥಾನವಿದೆ. ಹಾಗಾಗಿಯೇ ಅವನನ್ನು ವಿಚಾರವಂತ ಪ್ರಾಣಿ ಎನ್ನಲಾಗುತ್ತದೆ. ಮನುಷ್ಯನು ತನಗಿರುವ ಅಪೂರ್ವ ಮೇಧಾಶಕ್ತಿಯಿಂದಾಗಿ ಇತರ ಜೀವರಾಶಿಗಳಿಗಿಂತ ಭಿನ್ನವಾಗಿ ಬದುಕುತ್ತಿದ್ದಾನೆ. ಜೀವನ ಎಂಬುದು ಒಂದು ಆಯ್ಕೆಗಳ ಸರಮಾಲೆ. ಕ್ಷಣ ಕ್ಷಣಕ್ಕೂ ಜೀವನಕ್ಕೆ ಯಾವುದು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ತೀರ್ಮಾನಿಸಿ ಸ್ವೀಕರಿಸುವ ಸವಾಲು ಎದುರಾಗುತ್ತಿದೆ. ಬದುಕನ್ನು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಒಳ್ಳೆಯ ಹಾಗೂ ಕೆಟ್ಟ ವಿಚಾರಗಳನ್ನು ಪರಾಮರ್ಶಿಸಿ ಆಯ್ಕೆ ಮಾಡುವ ಒಂದು ವಿವೇಚನಾ ಶಕ್ತಿ ಮನಸ್ಸಿನ ಶುದ್ಧಿಗೆ ಕಾರಣವಾಗಿದೆ ಎಂದು ಪ್ರಾಜ್ಞರು ಹೇಳುತ್ತಾರೆ. ಮನುಷ್ಯನು ಸುವಿಚಾರಗಳಿಂದ ಸುರನೂ, ದುರ್ವಿಚಾರಗಳಿಂದ ಅಸುರನೂ ಆಗಬಹುದು. ಒಳ್ಳೆಯ ಹಾಗೂ ಕೆಟ್ಟ ವಿಚಾರಗಳಿಂದ ತುಂಬಿದ ಬದುಕಿನಲ್ಲಿ ನಮ್ಮಲ್ಲಿರುವ ಒಳ್ಳೆತನದಿಂದ ಕೆಟ್ಟತನವನ್ನು ಸೋಲಿಸುವ ಕರ್ತವ್ಯ ನಮ್ಮ ಪಾಲಿಗಿದೆ. ಪ್ರತಿಯೊಬ್ಬನೂ ತನಗಿಂತ, ತನ್ನ ಕುಟುಂಬಕ್ಕಿಂತ, ಮಾನವ ಸಮೂಹ ದೊಡ್ಡದು ಎಂಬ ವಿಶಾಲ ತಳಹದಿಯ ಮೇಲೆ ಬದುಕನ್ನು ರೂಪಿಸಬೇಕಾಗುತ್ತದೆ.

ದೇವರು ಒಬ್ಬೊಬ್ಬರಿಗೆ ಒಂದೊಂದು ಬಗೆಯ ವಿಶಿಷ್ಟ ಗುಣಗಳನ್ನು ನೀಡಿದ್ದಾನೆ. ಒಬ್ಬನಿಗೆ ಸೌಂದರ್ಯವಿದ್ದರೆ, ಇನ್ನೊಬ್ಬನಿಗೆ ಸದ್ಗುಣವಿರುತ್ತದೆ. ಮತ್ತೊಬ್ಬನಿಗೆ ಅಸಾಧಾರಣ ಬುದ್ಧಿಮತ್ತೆ ಇರುತ್ತದೆ. ಒಬ್ಬರಲ್ಲಿ ಇರುವುದು ಇನ್ನೊಬ್ಬರಲ್ಲಿ ಇಲ್ಲದಿರಬಹುದು. ಪರರಲ್ಲಿ ಇರುವ ಹಾಗೂ ನಮ್ಮೊಳಗೆ ಇರದ ಒಳ್ಳೆಯ ಗುಣಗಳನ್ನು ನಾವು ಗೌರವಿಸುತ್ತ, ಸಾಧ್ಯವಾದರೆ ಅವುಗಳನ್ನು ನಾವೂ ನಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ನಮ್ಮ ಬಯಕೆಗಳು ಸದಿಚ್ಛೆಯಿಂದ ಕೂಡಿದ್ದರೆ, ಅದಕ್ಕೊಂದು ಶಕ್ತಿ ಪ್ರಾಪ್ತವಾಗುತ್ತದೆ. ಬಯಕೆಗಳನ್ನು ನೇರ ಮಾರ್ಗದಲ್ಲಿ ಹಂತ ಹಂತವಾಗಿ ಈಡೇರಿಸಿಕೊಳ್ಳುವಾಗ ಅದರಲ್ಲಿ ಆರೋಗ್ಯಪೂರ್ಣ ಹಿತವನ್ನು ನಾವು ಕಾಣಬಹುದು. ಸಾರ್ವತ್ರಿಕ ಹಿತದೃಷ್ಟಿಯ ಬಯಕೆಗಳು ಹೆಚ್ಚು ಅಪೇಕ್ಷಿತ ಮತ್ತು ಅದರಲ್ಲಿ ಮನುಷ್ಯನ ಕಲ್ಯಾಣಗುಣ ಅಡಗಿದೆ ಎಂಬುದು ಬಲ್ಲವರ ಮಾತು.

ಕವಿ ಡಿ.ವಿ.ಜಿ. ಅವರ ನುಡಿ ಹೇಳುವಂತೆ ; ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆ ಆಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ, ಎಲ್ಲರೊಳು ಒಂದಾಗು ಮಂಕುತಿಮ್ಮಾ ! ಇದು ಸಕಾರಾತ್ಮಕ ಮನೋಭಾವದ ಅರ್ಥಪೂರ್ಣ ಉಪಮೆಯಾಗಿದೆ. ಬದುಕಿನಲ್ಲಿ ಸುಖ ಬಂದಾಗ ಅತಿಯಾಗಿ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಸಮಭಾವದಿಂದ ಬಾಳ ಪಥವನ್ನು ಕ್ರಮಿಸುವ ಮನೋಭಾವ ನಮ್ಮದಾಗಬೇಕು.

ಮನುಷ್ಯನು ವಿಕೃತಿಯಿಂದ ಪ್ರಕೃತಿಯತ್ತಲೂ ಪ್ರಕೃತಿಯಿಂದ ಸಂಸ್ಕೃತಿಯತ್ತಲೂ ಸಂಸ್ಕೃತಿಯಿಂದ ಸಾಧನೆಯತ್ತಲೂ ಸಾಗುವ ಮನೋಭಾವ ರೂಢಿಸಿಕೊಂಡಾಗ ಬಾಳಿನಲ್ಲಿ ಸತ್ಯ, ಪ್ರೀತಿ, ದಯೆ, ಅಹಿಂಸೆ ಮುಂತಾದ ಉದಾತ್ತ ಗುಣಗಳು ವೃದ್ಧಿಯಾಗುತ್ತವೆ ಎಂಬುದು ಸಾಧುಸಂತರ ನುಡಿಯಾಗಿದೆ.

ಒಂದು ಸುಂದರವಾದ ಚಿತ್ರವನ್ನು ನಾವು ಬಣ್ಣದಲ್ಲಿ ಬರೆದು ಇಲ್ಲವೇ ಒಂದು ಚೆಲುವಿನ ಮೂರ್ತಿಯನ್ನು ಕಲ್ಲಿನಿಂದ ಕೆತ್ತಿ ಸೌಂದರ್ಯವನ್ನು ಹೊಮ್ಮಿಸುವುದು ಒಂದು ವಿಶಿಷ್ಟ ಕಲೆ. ಆದರೆ, ನಾವು ಜೀವಿಸುವ ಸೃಷ್ಟಿಯಲ್ಲಿ ನಮ್ಮ ಇರುವಿಕೆಯಿಂದ ಸುತ್ತಲಿನ ವಾತಾವರಣವನ್ನು ಸುಖಮಯವಾಗಿ, ಸಂತೋಷದಿಂದ ತುಂಬಿರುವಂತೆ ಮಾಡುವುದು ಎಲ್ಲಕ್ಕಿಂತ ಮಿಗಿಲಾದ ಶ್ರೇಷ್ಠ ಕಲೆಯಾಗಿದೆ. ಅಂಥ ಸಾಧನೆ ಮಾಡಲು ನಮ್ಮೊಳಗಿನ ಸಕಾರಾತ್ಮಕವಾದ ಮನೋಭಾವದಿಂದ ಮಾತ್ರ ಸಾಧ್ಯ ಎಂಬುದು ಅಕ್ಷರಶಃ ಸತ್ಯ. ಈ ಮಾತನ್ನು ಪುಷ್ಟೀಕರಿಸುವಂತೆ ಆಂಗ್ಲ ಕವಿಯೊಬ್ಬ ಈ ರೀತಿ ಬರೆಯುತ್ತಾನೆ:''ಹೊಡೆಯಲೆಂದು ಎತ್ತಿದ ಕೈ, ಹೇಗೆ ಹೊಡೆಯಲಿ; ಶತ್ರುವಿನ ಕೈಯಲ್ಲಿ ಹೂವಿರುವಾಗ?'' ಇಂತಹ ಮನೋಭೂಮಿಕೆ ಸಿದ್ಧವಾಗುವುದು ಸಕಾರಾತ್ಮಕವಾದ ಚಿಂತನೆಗಳಿಂದ ಮಾತ್ರ. ಕೆಡುಕರಿಗೆ ಸುಲಭವಾಗಿ ಇನ್ನಷ್ಟು ಕೆಡುಕನ್ನು ಮಾಡಬಹುದು. ಆದರೆ, ಕೆಟ್ಟದ್ದನ್ನು ಮಾಡಿದವರಿಗೆ ಒಳ್ಳೆಯದನ್ನು ಮಾಡಲು ಯಾವ ವ್ಯಕ್ತಿ ಸಕಾರಾತ್ಮಕವಾದ ಮನೋಭಾವ ಹೊಂದಿರುತ್ತಾನೋ ಅವನಿಗೆ ಮಾತ್ರ ಸಾಧ್ಯ. ಸಕಾರಾತ್ಮಕವಾದ ಮನೋಭಾವದಿಂದ ಕೆಡುಕಿನ ಮೇಲೆ ಜಯ ಸಾಧಿಸುವುದೇ ನಿಜವಾದ ಗೆಲುವು ಮಾತ್ರವಲ್ಲ ಅದು ಸಾರ್ವಕಾಲಿಕವೂ ಆಗಿರುತ್ತದೆ.

(ಸಂಗ್ರಹ)

03 Pg_035-110 TY200028

ಸಾಧಕನಿಗೆ ಗೆಲ್ಲಲು ಏಕಾಗ್ರತೆಯೆ ಮೂಲಮಂತ್ರ

✍ **ಹೆಚ್. ಬಿ. ಸಂಧ್ಯಾ,** ತೃತೀಯ ಬಿ.ಸಿ.ಎ.

ಆಧುನಿಕ ಪ್ರಪಂಚದಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಅಧ್ಯಯನ, ಏಕಾಗ್ರತೆಯತ್ತ ಹೊರಳಿಸುವುದು ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ. ವಿದ್ಯಾರ್ಥಿಗಳ ಭವಿಷ್ಯವನ್ನು ತೀರ್ಮಾನ ಮಾಡುವಲ್ಲಿ ಈ ಏಕಾಗ್ರತೆಯು ಬಹಳ ಮುಖ್ಯವಾದ ಅಂಶ. ಸಿನಿಮಾ ನೋಡುವಾಗ, ಸಿನಿಮಾ ಹಾಡುಗಳನ್ನು ಕೇಳುವಾಗ ಇರುವಂತಹ ಶ್ರದ್ಧೆ, ಏಕಾಗ್ರತೆ ಪಾಠ ಕೇಳುವಾಗ, ಒಳ್ಳೆಯ ವಿಚಾರಗಳನ್ನು ತಿಳಿದುಕೊಳ್ಳುವಾಗ ಇರುವುದಿಲ್ಲ. ಹೀಗಾಗಿ ಅದೆಷ್ಟೋ ವಿದ್ಯಾರ್ಥಿಗಳು ಎಷ್ಟೇ ಓದಿದರೂ, ಬರೆದರೂ ತಲೆಗೆ ಹೋಗುವುದೇ ಇಲ್ಲವೆಂದು ತಮ್ಮ ಅಳಲನ್ನು ತೋಡಿಕೊಳ್ಳುವುದುಂಟು. ಹಾಗಾಗಿ ಮನಸ್ಸಿನಲ್ಲಿ ಗೊಂದಲವಿರುವ, ಏಕಾಗ್ರತೆಯನ್ನು ಗಳಿಸುವುದು ಹೇಗೆಂಬ ಚಿಂತೆಯಲ್ಲಿರುವರು.

''ನಾಸ್ತಿ ಬುದ್ಧಿರಯುಕ್ತಸ್ಯ ನಚಾಯುಕ್ತಸ್ಯ ಭಾವನಾ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಮ್॥''

ಶ್ರೀಮದ್ಭಗವದ್ಗೀತೆಯ ಸಾಂಖ್ಯಯೋಗದ 66ನೇ ಶ್ಲೋಕದಲ್ಲಿ ಶ್ರೀಕೃಷ್ಣ ಪರಮಾತ್ಮ ನಮ್ಮ ಏಕಾಗ್ರತೆ ಮತ್ತು ಧ್ಯಾನ ಹೇಗಿರಬೇಕೆಂಬುದನ್ನು ಮನದಟ್ಟು ಮಾಡಿದ್ದಾನೆ. ಯಾರ ಮನ ಇಂದ್ರಿಯಗಳು ಸಂಯಮಿತವಾಗಿಲ್ಲವೋ, ಅಂತಹ ಮನುಷ್ಯನಿಗೆ ವ್ಯವಸಾಯತ್ಮಿಕಾ ಬುದ್ಧಿಯು ಇರುವುದಿಲ್ಲ ಮತ್ತು ವ್ಯವಸಾಯತ್ಮಿಕಾ ಬುದ್ಧಿಯು ಇಲ್ಲದಿರುವ ಆ ಅಯುಕ್ತ ಮನುಷ್ಯನಲ್ಲಿ ನಿಷ್ಕಾಮಭಾವ ಅಥವಾ ಕರ್ತವ್ಯ ಪರಾಯಣತೆಯ ಭಾವವಿರುವುದಿಲ್ಲ. ನಿಷ್ಕಾಮಭಾವವಿಲ್ಲದಿರುವುದರಿಂದ ಅವನಿಗೆ ಶಾಂತಿಯು ಸಿಗುವುದಿಲ್ಲ ಮತ್ತು ಶಾಂತಿರಹಿತ ಮನುಷ್ಯನಿಗೆ ಸುಖವು ಹೇಗೆ ಸಿಗಬಲ್ಲದು? ಎಂದು ಶ್ರೀಮದ್ಭಗವದ್ಗೀತೆಯಲ್ಲಿ ವಿವರಿಸಲಾಗಿದೆ.

ಏಕಾಗ್ರತೆಯನ್ನು ಗಳಿಸುವುದು ಹೇಗೆಂಬ ಚಿಂತೆಯಲ್ಲಿರುವ ವಿದ್ಯಾರ್ಥಿಗಳು ಒಮ್ಮೆ ವಿವೇಕಾನಂದರ ಜೀವನವನ್ನು ಅಧ್ಯಯನ ಮಾಡಿದಾಗ ಏಕಾಗ್ರತೆಯನ್ನು ಗಳಿಸಿಕೊಳ್ಳುವುದು ಹೇಗೆಂಬುದು ತಿಳಿಯುವುದು, ಸ್ವಾಮೀಜಿಯವರ ಏಕಾಗ್ರತೆಯ ಬಗ್ಗೆಯೂ ತಿಳಿಯುವುದು. ಸ್ವಾಮಿ ವಿವೇಕಾನಂದರ ಜೀವನ, ಉಪದೇಶಗಳಲ್ಲಿ ಕಂಡುಬರುವ ಏಕಾಗ್ರತೆಯ ವಿಚಾರಗಳನ್ನು ಗ್ರಹಿಸುವ ಮೂಲಕ ಏಕಾಗ್ರತೆಯ ಮೂಲಮಂತ್ರದ ಸವಾಲನ್ನು ಸಮರ್ಥವಾಗಿ ಎದುರಿಸಬಹುದು.

ಸ್ವಾಮಿ ವಿವೇಕಾನಂದರು ನರೇಂದ್ರನಾಗಿದ್ದಂತಹ ಸಂದರ್ಭದಲ್ಲಿ ತನ್ನ ಸಹಪಾಠಿಗಳ ಜೊತೆಗೆ ಕೂಡಿಕೊಂಡು ಆಟಕ್ಕಾಗಿ ದೇವರ ಪೂಜೆ, ಭಜನೆ ಮಾಡಿ ಧ್ಯಾನಕ್ಕೆ ಕುಳಿತರು. ಕುಳಿತ ಹಲವು ಹುಡುಗರು ತಮ್ಮ ಕಣ್ಣನ್ನು ಮುಚ್ಚಿದರೂ ಅವರುಗಳ ಪ್ರಜ್ಞೆಯೆಲ್ಲಾ ಸುತ್ತ-ಮುತ್ತಲಿನ ವಸ್ತುವಿನ ಕಡೆಗೆ ಹರಿದಾಡುತ್ತಿದ್ದವು. ಆದರೆ ನರೇಂದ್ರ ಮಾತ್ರ ತನ್ನನ್ನು ಸಂಪೂರ್ಣವಾಗಿ ಮರೆತು ಕುಳಿತಿದ್ದ. ಆ ಸಮಯದಲ್ಲಿ ಬಂದ ಹಾವನ್ನು ಕಂಡು ನರೇಂದ್ರನ ಸಹಪಾಠಿಗಳು ದೂರ ಓಡಿ ನರೇಂದ್ರನಿಗೆ, ''ಓ ನರೇಂದ್ರ, ಹಾವು ಬಂದಿದೆ, ನಿನ್ನ ಹತ್ತಿರಕ್ಕೆ ಬರುತ್ತಿದೆ, ಎದ್ದು ಓಡು'' ಎಂದು ಚೀರಿದರೂ ಕೂಡ ನರೇಂದ್ರನಿಗೆ ಮಾತ್ರ ಏನೂ ಕೇಳಿಸದು, ಏನೂ ತಿಳಿಯದು, ಏನೂ ಕಾಣದು, ಏಕೆಂದರೆ ಆತ ತನ್ನ ಅಂತರಂಗಕ್ಕೆ ಇಳಿದುಬಿಟ್ಟಿದ್ದ. ಇದೇ ನಿಜವಾದ ಏಕಾಗ್ರತೆ, ಇದೇ ನಿಜವಾದ ಧ್ಯಾನ. ಇಲ್ಲಿ ನಾವು ಸೂಕ್ಷ್ಮವಾಗಿ ಈ ಘಟನೆಯನ್ನು ಅವಲೋಕಿಸಿ ಸಾಕಷ್ಟು ಕಲಿಯಬೇಕಾಗಿರುವುದು ಕಂಡುಬರುತ್ತದೆ.

ಸ್ವಾಮಿ ವಿವೇಕಾನಂದರು ಧ್ಯಾನಕ್ಕೆ ಕುಳಿತುಕೊಳ್ಳುವಾಗ ಆತನ ಜೊತೆಗಾರರೂ ಸಹ ಧ್ಯಾನಕ್ಕೆ ಕುಳಿತರು. ನರೇಂದ್ರನ ಜೊತೆಗಾರರು ಆಟಕ್ಕಾಗಿ ದೇವರ ಮೂರ್ತಿ, ಪೂಜೆ, ಭಜನೆ ಎಂಬ ಅಸ್ತ್ರಗಳನ್ನು ಉಪಯೋಗಿಸಿದರು. [ವಿದ್ಯಾರ್ಥಿಗಳು ಪುಸ್ತಕ, ಪೆನ್ನು ಎಂಬ ಅಸ್ತ್ರಗಳನ್ನು ಉಪಯೋಗಿಸುತ್ತಾರೆ.] ಎಲ್ಲರೂ ಧ್ಯಾನ ಮಾಡುವಾಗ ನರೇಂದ್ರನೊಬ್ಬನನ್ನು ಬಿಟ್ಟು ಉಳಿದವರು ಕಣ್ಣು ಮುಚ್ಚಿದರೂ ಅವರ ಪ್ರಜ್ಞೆ ಸುತ್ತ-ಮುತ್ತ ಇದ್ದ ವಸ್ತುಗಳ ಕಡೆಗೆ ಹರಿದಾಡುತ್ತಿತ್ತು.

[ಇಲ್ಲಿ ಹಾಗೆಯೇ, ಶಾಲೆಯಲ್ಲಿ ಗುರುಗಳು ಪಾಠ ಮಾಡುವಾಗ ಹಲವಾರು ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತರೂ ಸಹ ಅವರ ಪ್ರಜ್ಞೆಯು ಊಟ, ಸಿನಿಮಾ, ಕ್ರಿಕೆಟ್ ಇತ್ಯಾದಿ ಪ್ರಾಪಂಚಿಕ ವಿಚಾರಗಳ ಕಡೆಗೆ ಹರಿದಾಡುತ್ತಿರುತ್ತದೆ.]

ಆದರೆ ನರೇಂದ್ರನೊಬ್ಬ ಮಾತ್ರ ತನ್ನನ್ನು ತಾನು ಮರೆತು ತಾನು ಸಾಧಿಸಬೇಕಿದ್ದ ಅಂತರಂಗದೊಳಗೆ ಮಗ್ನವಾಗಿ ಕುಳಿತ. [ಇದೇ ರೀತಿಯಾಗಿ ಶಾಲೆಯಲ್ಲಿರುವ ಸಾವಿರಾರು ವಿದ್ಯಾರ್ಥಿಗಳಲ್ಲಿ ನರೇಂದ್ರನಂತಹ ಒಬ್ಬರೋ ಅಥವಾ ಇಬ್ಬರೋ ತಮ್ಮ ಎಲ್ಲಾ ಪ್ರಾಪಂಚಿಕ ಆಲೋಚನೆ, ಕೆಟ್ಟ ವಿಚಾರಗಳನ್ನು ಬಿಟ್ಟು ತಮ್ಮ ಓದಿನ ಕಡೆಗೆ ಮಾತ್ರ ಮಗ್ನರಾಗಿರುತ್ತಾರೆ ಮತ್ತು ಗುರುಗಳು ಹೇಳಿದ ವಿಚಾರಗಳ ಕಡೆಗೆ ಅವರ ಮನಸ್ಸಿರುತ್ತದೆ.] ಇದೇ ನಿಜವಾದ

03 Pg_035-110 TY200028

ಏಕಾಗ್ರತೆ, ಇದೇ ನಿಜವಾದ ಸಾಧನೆ. ಇಂತಹವರೇ ಯುವನಾಡಿನ ಸಾಧಕರು.

ಸ್ವಾಮಿ ವಿವೇಕಾನಂದರ ಜೀವನದಲ್ಲಿ ಮತ್ತೊಂದು ಘಟನೆಯನ್ನು ನೋಡಿದಾಗ ಅವರಲ್ಲಿ ಏಕಾಗ್ರತೆ ಎಷ್ಟಿತ್ತೆಂಬುದನ್ನು ಅರಿಯಬಹುದಾಗಿದೆ. ಮೀರತ್‌ನ ಸಾರ್ವಜನಿಕ ಗ್ರಂಥಾಲಯದಲ್ಲಿ ಸರ್ ಜಾನ್ ಕೆಲಬೆಕ್ ಎಂಬ ವ್ಯಕ್ತಿ ಬರೆದಿರುವ ಗ್ರಂಥಗಳನ್ನು ಎರವಲು ಪಡೆದು ಒಂದೇ ದಿನದಲ್ಲಿ ಮುಗಿಸಿ ಅದನ್ನು ವಾಪಸ್ಸು ಕೊಡಲು ಹೋದಾಗ ಆ ಲೈಬ್ರೇರಿಯನ್ ಕೇಳುತ್ತಾರೆ ''ನೀವು ನಿಜವಾಗಿಯೂ ಇದನ್ನು ಓದಿರುವಿರೋ ಅಥವಾ ಒಳಗಿನ ಚಿತ್ರಗಳನ್ನು ನೋಡಿ ಕೊಡುತ್ತಿರುವಿರೋ'' ಎಂದು. ಆಗ ಸ್ವಾಮೀಜಿಯವರ ಉತ್ತರ ಹೀಗಿತ್ತು. ''ಆ ಪುಸ್ತಕದ ಯಾವ ವಿಷಯವನ್ನಾದರೂ ಕೇಳಿ. ಅದು ಯಾವ ಪುಟದಲ್ಲಿದೆ ಎಂಬುದನ್ನು ಮತ್ತು ಅದರ ವಿಷಯವನ್ನು ಸ್ಪಷ್ಟವಾಗಿ ತಿಳಿಸುತ್ತೇನೆ'' ಎಂದರು. ಆತನಿಗೆ ಇವರ ಮಾತಿನ ಮೇಲೆ ನಂಬಿಕೆ ಬಾರದೆ ಪ್ರಶ್ನೆಯನ್ನು ಕೇಳಿದಾಗ, ಸ್ವಾಮೀಜಿ ಆ ಪುಸ್ತಕದ ವಾಕ್ಯವನ್ನೇ ಹೇಳುತ್ತಾ ಆ ಲೈಬ್ರೇರಿಯನ್‌ರ ಪ್ರಶ್ನೆಗೆ ಉತ್ತರಿಸಿದರು. ಇದಲ್ಲವೇ ನಿಜವಾದ ಏಕಾಗ್ರತೆ?

ಇಂತಹ ಏಕಾಗ್ರತೆ ಇದ್ದರೆ ನರೇಂದ್ರನಂತಹ ಸಾಧಕರಾಗ ಬಹುದು. ತಮ್ಮ ಜೀವನವನ್ನು ಉಜ್ವಲ ಭವಿಷ್ಯದೆಡೆಗೆ ಕೊಂಡೊಯ್ಯಲು ಏಕಾಗ್ರತೆ ಮೂಲ ಹಾದಿ ಎನ್ನಬಹುದು.

●

ಮಾತು ಮುತ್ತಿನಂತಿರಬೇಕು
ಮನಸು ಹೂವಿನಂತಿರಬೇಕು
ಹೃದಯ ವಜ್ರದಂತಿರಬೇಕು
ಕೇಳುವ ಕಿವಿ ಚೂಪಾದ ಕತ್ತಿಯಂತಿರಬೇಕು
ಮುಖ ಹೊಳೆಯುವ ಸೂರ್ಯನ ಕಿರಣದಂತಿರಬೇಕು
ನಗು ಬಿಳಿ ನಕ್ಷತ್ರದಂತೆ ಮಿರಿಮಿರಿ ಮಿಂಚಬೇಕು
ಕಣ್ಣು ಆಕರ್ಷಣೀಯವಾಗಿರಬೇಕು
ನಡೆ ನುಡಿ ಕ್ರಿಯೆ ಎಲ್ಲರೂ ಮೆಚ್ಚುವಂತಿರಬೇಕು
ಎಲ್ಲೇ ಹೋದರೂ ಗೆಲುವನ್ನು ಸಾಧಿಸಬೇಕು
ಗುರಿಯ ಕಡೆ ನಮ್ಮ ಹೆಜ್ಜೆಯಾಗಿರಬೇಕು
ಮೌನ ತಂಗಾಳಿಯಂತಿರಬೇಕು
ಗುಣ ಅರಳುವ ಕಮಲದಂತಿರಬೇಕು
ತಪ್ಪುಗಳನ್ನು ತಿದ್ದಿ ಸರಿಹೊಂದುವ ಬುದ್ಧಿವಂತಿಕೆ ನಮ್ಮದಾಗಿರಬೇಕು
ಗುರು ಹಿರಿಯರ ಪ್ರೀತಿ ಆಶೀರ್ವಾದಕ್ಕೆ ಬಾಧ್ಯರಾಗಬೇಕು.

ಏಂಜಲ್, ಪ್ರಥಮ ಬಿ.ಎ.

03 Pg_035-110 TY200028

ಸಮಯದ ಗೊಂಬೆ

✍ **ಪೂಜಾ ರಾವ್**, ತೃತೀಯ ಬಿ.ಎ.

ಸಮಯದೊಂದಿಗೆ ಓಡುತ್ತಾ, ಗುರಿ ಮೊದಲು ತಲುಪುವವನೇ ಇತರರಿಗೆ ಆದರ್ಶನಾಗುತ್ತಾನೆ. ಆ ಆದರ್ಶ ವ್ಯಕ್ತಿ ಸಮಾಜದ ಮುಖ್ಯವಾಹಿನಿಯಲ್ಲಿ ಜೀವನದ ಗುರಿ ತಲುಪುವುದು ಹೇಗೆ ಎಂಬುದನ್ನು ತಿಳಿಹೇಳಲು ಆರಂಭಿಸುತ್ತಾನೆ. ಸಮಯದೊಂದಿಗೆ ಓಡಿದ ಆತ, ಕೇವಲ ಗುರಿ ತಲುಪಿರುತ್ತಾನೆಯೇ ಹೊರತು ಜೀವನವನ್ನು ಜೀವಿಸಿರುವುದಿಲ್ಲ. ತನ್ನ ಸ್ನೇಹಿತರು ಕುಟುಂಬಸ್ಥರೊಂದಿಗೆ ಕೂತು ಕ್ಷಣವನ್ನು ಕಳೆದಿಲ್ಲ ಎಂದರೆ ಆತ ಸಾಧಿಸಿದ್ದು ಎಂದಿಗೂ ಸಾಧನೆ ಅಲ್ಲ. ಇಂದಿನ ಪುಟ್ಟ ಮಕ್ಕಳನ್ನು ಕೇಳಿದರೆ ಸಮಯವಿಲ್ಲ, ಬ್ಯುಸಿ ಎಂಬುದು ಕೇಳುತ್ತೇವೆ. ಎಲ್ಲರ ಜೀವನ ಯಾಂತ್ರಿಕವಾಗುತ್ತಿದೆ. ರಸ್ತೆಗಳಲ್ಲಿ ಸಮಯವಿಲ್ಲ ಎಂದು ಓಡುತ್ತಿರುವ ವಾಹನಗಳೇ ಇರುತ್ತವೆ. ಈ ತರಹನ ಯಾಂತ್ರಿಕ ಜೀವನ ನಾನು ನಡೆಸುತ್ತಿಲ್ಲವಾದರೂ, ಒಮ್ಮೆ ''ಸಮಯವಿಲ್ಲ'' ಎಂಬುದರಿಂದ ಆದ ಅನುಭವ ಎಂದಿಗೂ ನನಗೆ ಸಮಯವಿಲ್ಲ ಎಂದು ಹೇಳಬಾರದು ಎಂಬ ಪಾಠ ನೀಡಿದೆ. ಅಂದು ಕಾಲೇಜಿಗೆ ಹೊರಡುವ ತರಾತುರಿಯಲ್ಲಿದ್ದಾಗ ನನ್ನ ಬಳಿ ಬಂದ ನನ್ನ ಮುದ್ದಿನ ಬೆಕ್ಕು ನನ್ನ ಮಡಿಲಲ್ಲಿ ಮಲಗುವ ಇಂಗಿತ ತೋರ್ಪಡಿಸಿತು. ಮೊದಲೇ ಹೇಳಿದಂತೆ ಸಮಯವಿಲ್ಲ ಈಗ, ಸಂಜೆ ಸಿಗುತ್ತೇನೆ ಎಂದು ಮನಸ್ಸಿನಲ್ಲೇ ಅಂದುಕೊಂಡು ಹೊರಟೇ ಬಿಟ್ಟೆ. ಆದರೆ ಸಮಯ ನನಗೆ ಪಾಠ ಕಲಿಸಲು ಸಿದ್ಧವಾಗಿತ್ತು. ಸಂಜೆ ಮನೆಗೆ ತೆರಳಿದಾಗ ನನ್ನ ಬಿಡುವಿನ ಸಮಯ ಪ್ರೀತಿಯ ಬೆಕ್ಕಿನೊಂದಿಗೆ ಕಳೆಯುವ ಎಂದುಕೊಂಡಾಗ, ಆ ಮೂಕಪ್ರಾಣಿಯ ಸಮಯ ಮೀರಿಹೋಗಿತ್ತು. ನನ್ನ ಮಡಿಲಲ್ಲಿ ಮಲಗಲು ಹಾತೊರೆದ ಜೀವ ಭೂಮಿ ತಾಯಿಯ ಮಡಿಲಲ್ಲಿ ಬೆಚ್ಚನೆ ಶಾಶ್ವತವಾಗಿ ಮಲಗಿತ್ತು.

ನಿಮ್ಮನ್ನು ಪ್ರೀತಿಸುವವರು ಯಾರೇ ಆಗಿರಲಿ ತಂದೆ-ತಾಯಿ, ಗೆಳೆಯರು, ಸಹೋದರ-ಸಹೋದರಿಯರು, ಸಾಕಿರುವ ಮೂಕ ಪ್ರಾಣಿಗಳು, ಯಾರಿಗೂ ಎಂದಿಗೂ ಸಮಯವಿಲ್ಲ ಎಂದು ಹೇಳಿ ಓಡಬೇಡಿ. ಏಕೆಂದರೆ ಯಾವಾಗ ಅವರ ಅಥವಾ ನಿಮ್ಮ ಸಮಯ ಮುಗಿಯುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಸಮಯದ ಕೈಗೊಂಬೆಯಾಗಿ ಬದುಕಬೇಡಿ ಸಮಯವ ಸ್ವಾದಿಸಿ ಬದುಕಿ, ಬದುಕು ಸಾರ್ಥಕಗೊಳಿಸಿ. ●

ಮನಸ್ಸನ್ನು ಮುಟ್ಟಲು ಬಯಸುವ ಮಾತುಗಳು

✍ **ಏಂಜಲ್**, ಪ್ರಥಮ ಬಿ.ಎ.

ಒಳ್ಳೆಯದನ್ನು ಮಾಡುವವನಿಗೆ ಹೆಚ್ಚಾಗಿ ಪ್ರೋತ್ಸಾಹಿಸಬೇಕು. ಕೆಟ್ಟದು ಮಾಡುವವನನ್ನು ತಿದ್ದುವ ಮೊದಲು ಪ್ರೀತಿಯಿಂದ ಬುದ್ಧಿ ಹೇಳಬೇಕು. ಮೊದಲು, ಹೇಳುವವರು ಮಾದರಿಯಾಗಿರಬೇಕು. ಸೋತು ಹೋದವನಿಗೆ ಗೆಲ್ಲುವುದು ಹೇಗೆ ಎಂಬುದು ಹೇಳಬೇಕು ಹಿಂದೆ ಬಿದ್ದವನನ್ನು ಮುಂದೆ ಹೇಗೆ ಬರುವಂತೆ ಮಾಡುವುದು ಎಂಬ ಚಿಂತೆ ನಮ್ಮದಾಗಿರಬೇಕು. ಸಮಾನವಾಗಿ ಎಲ್ಲದರಲ್ಲೂ ಇರುವವನಿಗೆ ಅನುಸರಿಸಿ ಹೋಗುವುದನ್ನು ಕಲಿಸಬೇಕು. ನಕಾರಾತ್ಮಕ ಮಾತುಗಳನ್ನು ಬಿಟ್ಟು ಸಕಾರಾತ್ಮಕ ಮಾತುಗಳನ್ನು ಆಡಬೇಕು, ಕೆಸರಲ್ಲಿ ಬಿದ್ದವರನ್ನು ಶುದ್ಧ ನೀರಿನಿಂದ ತೊಳೆಯುವವರು ನಾವುಗಳಾಗಿರಬೇಕು. ಎಡವಿ ಮುಗ್ಗರಿಸಿದವರನ್ನು ತಕ್ಷಣ ಎತ್ತುವವರು ಇಲ್ಲವೇ ಬೀಳುವ ಮೊದಲು ಕೈಹಿಡಿಯುವವರು ನಾವಾಗಿರಬೇಕು. ಪ್ರಯತ್ನಪಡುವವರಿಗೆ ನಾವು ಸಹಕಾರಿಗಳಾಗಿರಬೇಕು. ಒಳ್ಳೆ ಮಾತು ಸದ್ಗುಣಗಳಿಂದ ಜನರನ್ನು, ಅವರ ಪ್ರೀತಿಯನ್ನು ಸಂಪಾದಿಸಬಹುದು. ಕಪಟ ಪ್ರೀತಿ, ಮಾತು ಇದ್ದರೆ ನಿಜ ಬಣ್ಣ ಒಂದು ದಿನ ಬಯಲಾಗುತ್ತದೆ. ●

03 Pg_035-110 TY200028

ಮರಳಿ ಬಾರದೆ ಬಾಲ್ಯ!

✍ **ಚೈತ್ರಾ ಭಂಡಾರಿ,** ತೃತೀಯ ಬಿ.ಎ.

ಬಾಲ್ಯ ಎಂದರೆ, ಇಂದಿಗೂ ನಮ್ಮ ಮನಸ್ಸು ಮತ್ತೆ ಮತ್ತೆ ಅದೇ ಬಾಲ್ಯಕ್ಕೆ ಹೋಗಬೇಕೆನ್ನುವಷ್ಟು ಹಾತೊರೆಯುವ ನೆನಪಿನ ಬುತ್ತಿಯಾಗಿದೆ. ಬಾಲ್ಯದ ಆಟ-ತುಂಟಾಟ ನೆನಪಾದರೆ ಮನಸ್ಸಿನ ಖುಷಿಯ ಜೊತೆಗೆ ಮುಖದಲ್ಲಿ ಸಣ್ಣದೊಂದು ನಗು ಮೂಡುತ್ತದೆ. ಬಾಲ್ಯಕ್ಕೆ ಅಂತಹ ಅದ್ಭುತ ಶಕ್ತಿಯಿದೆ. ಶ್ರೀಮಂತ-ಬಡವ ಎಂಬ ಭೇದ ಭಾವ ಬಾಲ್ಯಕ್ಕಿಲ್ಲ. ಮಳೆಗಾಲ ಬಂತೆಂದರೆ ಸಾಕು ದೋಣಿ ಮಾಡಿ ಬಿಡುವ ಖುಷಿಯೇ ಬೇರೆ! ಲಗೋರಿ, ಗೋಲಿ, ಚಿಣ್ಣಿ ದಾಂಡು, ಕಣ್ಣಾಮುಚ್ಚಾಲೆ, ಕಳ್ಳ-ಪೊಲೀಸ್ ಮತ್ತು ಹುಲಿ-ದನ ಮುಂತಾದ ನಮ್ಮದೇ ಕಲ್ಪನೆಯ ಆಟಗಳನ್ನು ಆಡುವ ಸಂತೋಷವೇ ಬೇರೆ.

ಹಗಲು-ರಾತ್ರಿ ಎಂಬ ಪರಿವೇ ಬಾಲ್ಯಕ್ಕಿರುವುದಿಲ್ಲ. ಗಾಳಿ-ಮಳೆ ಬಂತೆಂದರೆ ಸಾಕು ಎಲ್ಲಿಲ್ಲದ ಖುಷಿ. ಯಾಕೆಂದರೆ ಮರುದಿವಸ ಶಾಲೆಗೆ ರಜೆ ಎನ್ನುವ ಭ್ರಮೆ ನಮ್ಮನ್ನು ಆವರಿಸಿಕೊಂಡಿರುತ್ತದೆ. ಮಣ್ಣು, ಕಲ್ಲುಗಳು ನಮಗೆ ಆಟದ ವಸ್ತುಗಳೇ ಆಗಿತ್ತು. ಕೈ, ಕಾಲು, ಮೈಯ್ಯನ್ನೆಲ್ಲ ಗಾಯ ಮಾಡಿಕೊಂಡು, ಅಮ್ಮನ ಬಳಿ ಉಗಿಸಿಕೊಳ್ಳುವ ಕ್ಷಣಗಳನ್ನು ವರ್ಣಿಸಲು ಪದಗಳೇ ಸಾಲದು.

ಈಗಿನ ಕಾಲದ ಮಕ್ಕಳ ದಿನಚರಿ ಸದಾ ಬ್ಯುಸಿ! ಬೆಳಗ್ಗೆ ಶಾಲೆಗೆ ಹೋಗುವ ತಯಾರಿ ಒಂದೆಡೆಯಾದರೆ, ಸಂಜೆ ಮನೆಗೆ ಬಂದಾಗ ಟ್ಯೂಷನ್ ಕ್ಲಾಸ್ ಇನ್ನೊಂದೆಡೆ. ಹೀಗೆ ನಾನಾ ತರದ ಕ್ಲಾಸ್‌ಗಳನ್ನು ಇತ್ತೀಚೆಗೆ ನೋಡಬಹುದು. ಮಕ್ಕಳಿಗೆ ಬಿಡುವೆಂಬ ಪದವೇ ಇಲ್ಲ. ಇದ್ದರೂ ಕೂಡ ಮೊಬೈಲ್, ಗೇಮ್, ಟಿವಿ ನೋಡುವುದರಲ್ಲೇ ಸಮಯ ವ್ಯರ್ಥ ಮಾಡುತ್ತಾರೆ. ಮಣ್ಣಿನಲ್ಲಿ ಆಟವಾಡುವುದಿರಲಿ, ಅದನ್ನು ಮುಟ್ಟಿದರೆ ಏನೋ ಆಗುತ್ತದೆ ಎಂಬ ರೀತಿಯಲ್ಲಿ ಮನೆಯವರು ಇರುತ್ತಾರೆ. ಹೀಗೆ ಎಣಿಸಿದರೆ ನನ್ನ ಅಮ್ಮನೇ ಗ್ರೇಟ್! ಮಕ್ಕಳು ಶಾಲೆಗೆ ಹೋಗಿ ಬುದ್ಧಿವಂತರಾಗಬೇಕು, ಒಳ್ಳೆ ಅಂಕ ಗಳಿಸಬೇಕು ಎಂಬ ಭಾವನೆ ಪೋಷಕರದ್ದು. ಅಂಕವಿಲ್ಲದಿದ್ದರೆ ಸಮಾಜದಲ್ಲಿ ಬೆಲೆ ಇಲ್ಲ ಎಂಬುದನ್ನು ತಲೆಗೆ ತುಂಬುತ್ತಾರೆ. ಆಚಾರ-ವಿಚಾರಗಳು ಮೂಲೆಗುಂಪಾಗಿವೆ. ಮಕ್ಕಳು ಈಗಿನ ಜೀವನ ಶೈಲಿಗೆ ಒಗ್ಗಿಕೊಂಡು ಹೋಗಿದ್ದಾರೆ. ಹಿರಿಯರ ಜೊತೆ ಕುಳಿತು ಕಥೆ ಕೇಳುವ ತಾಳ್ಮೆ ಇಲ್ಲ. ತಂದೆ-ತಾಯಿಗೆ ಬುದ್ಧಿ ಹೇಳುವಷ್ಟು ಮಕ್ಕಳು ಬುದ್ಧಿವಂತರಾಗಿದ್ದಾರೆ.

ತಂದೆ-ತಾಯಿಯ ಅತಿಯಾದ ಕಾಳಜಿಯೇ ಇಂದು ಮಕ್ಕಳ ಬಾಲ್ಯಕ್ಕೆ ಕುತ್ತು ತರುತ್ತಿದೆ. ಸುಂದರವಾದ ಪ್ರಕೃತಿಯ ಮಡಿಲಲ್ಲಿ ಆಟವಾಡಬೇಕಾದ ಮಗು ಇಂದು ನರ್ಸರಿ ಎಂಬ ನಾಲ್ಕು ಗೋಡೆಯ ಮಧ್ಯದಲ್ಲಿ ತನ್ನ ಬಾಲ್ಯ ಕಳೆದುಕೊಳ್ಳುತ್ತಿದೆ ಎಂಬುದು ವಿಷಾದನೀಯ.

ಅಬ್ಬಾ! ಆಧುನೀಕತೆಯ ಬಾಲ್ಯವನ್ನು ನೆನೆದರೆ ನನ್ನ ಬಾಲ್ಯವೇ ನನಗೆ ಅತಿ ಮಧುರ. ಅಂಗಡಿಯಲ್ಲಿ ಒಂದು ರೂಪಾಯಿಗೆ ಹತ್ತು ಚಾಕಲೇಟ್ ಚೀಪುತ್ತಾ ಮನೆ ಸೇರಿದ್ದು, ಅಮ್ಮನ ಆಜ್ಞೆಯ ಮೇರೆಗೆ ದೇವರಿಗೆ ಬೆಳಗ್ಗೆ ಸಂಜೆ ನಮಸ್ಕಾರಗಳು. ಬರೆಯುವ ಮನಸ್ಸಿಲ್ಲದೆ ಅಮ್ಮನ ಕೈಯಲ್ಲಿ ಪೆಟ್ಟು ತಿಂದದ್ದು, ಪರೀಕ್ಷೆ ಸಮಯದಲ್ಲಿ ಅಮ್ಮನ ಕೈಯಲ್ಲಿ ಕೋಲು ಖಾಯಂ.

ನಮ್ಮೆಲ್ಲರ ಪುಟ್ಟ ಮರಿ ಸೈನ್ಯ, ಮಾವಿನ ಮರ, ಗೇರು ಮರದಡಿಯಿಂದ ಸಂಜೆಯ ವೇಳೆಗೆ ಮನೆಯ ದಾರಿ ನೆನಪಾಗುತ್ತಿತ್ತು. ತುಂಟಾಟದ ಕ್ಷಣಗಳನ್ನು ನೆನೆಸಿಕೊಂಡರೆ ತುಟಿ ಅಂಚಲ್ಲಿ ನಗು ಮೂಡಿ ಮಾಯವಾಗುತ್ತದೆ. ''ಮರಳಿ ಬರಬಾರದೇ ಬಾಲ್ಯ'', ಆ ಬಾಲ್ಯದ ಒಡನಾಡಿಗಳು ಎಂದೆನಿಸುತ್ತದೆ. ●

ಚಿರನಿದ್ರೆ

ಭಾವಗಳ ಅಲೆ ಬೀಸುತಿರಲು
ಮನಸ್ಸೆಂಬ ನದಿಯು ಸೇರುವ ತವಕದಲ್ಲಿರಲು
ಸುಯ್ಯನೆ ಗಾಳಿ ಬೀಸಿ
ಹಡಗ ಮುಳುಗಿಸಿತು ಚಿರನಿದ್ರೆಯಲಿ

ರಮ್ಯಶ್ರೀ ಡಿ., ದ್ವಿತೀಯ ಬಿ.ಎ.

03 Pg_035-110 TY200028

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ

✍ **ನವೀನ್ ಎಸ್.,** ತೃತೀಯ ಬಿ.ಎ.

''ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ'' ಎಂಬ ಸಾಕ್ಷರತ ಆಂದೋಲನದ ಘೋಷ ವ್ಯಾಖ್ಯಾನ ಅಕ್ಷರಶಃ ಸತ್ಯ. ಈ ಸತ್ಯವನ್ನು ಎಲ್ಲಾ ಶಿಕ್ಷಣ ತಜ್ಞರು, ಸಮಾಜ ವಿಜ್ಞಾನಿಗಳು ಮನಗಂಡು ಉದ್ಘೋಷಿಸಿದ್ದಾರೆ. ನಿಜವಾಗಿಯೇ ಗಂಡೊಬ್ಬ ಕಲಿತರೆ ಆ ವ್ಯಕ್ತಿ ಮಾತ್ರ ವಿದ್ಯಾವಂತನಾಗುತ್ತಾನೆ. ಆದರೆ ಹೆಣ್ಣೊಬ್ಬಳು ಕಲಿತರೆ ಆ ಒಂದು ಕುಟುಂಬವಿಡೀ ವಿದ್ಯಾವಂತವಾಗುತ್ತದೆ. ಆ ನಿಟ್ಟಿನಲ್ಲಿ ಹೆಣ್ಣೊಬ್ಬಳು ಪಡೆದ ವಿದಾಭ್ಯಾಸದ ಉಪಯೋಗಗಳನ್ನು ಆ ಇಡೀ ಕುಟುಂಬ ಮತ್ತು ಸಮುದಾಯ ಅನುಭವಿಸುತ್ತದೆ. ಅಲ್ಲದೇ ಮುಂದಿನ ತಲೆಮಾರಿಗೂ ಆ ಸೌಲಭ್ಯದ ಸತ್ಪರಿಣಾಮ ಒತ್ತರಿಸುತ್ತದೆ. ಹಾಗಾಗಿ ಎಲ್ಲಿಯವರೆಗೆ ಗಂಡು-ಹೆಣ್ಣು ಸಮಾನ ಅಭ್ಯಾಸದ ಅವಕಾಶವನ್ನು ಪಡೆಯುವುದು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಾಮಾಜಿಕ ಸ್ವರೂಪ ಬದಲಾಗುವುದಿಲ್ಲ. ಹೀಗಾಗಿ ಯಾವುದೇ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಗತಿಗೂ ಸ್ತ್ರೀ ಶಿಕ್ಷಣಕ್ಕೂ ಒಂದು ಅಂತರ ಸಂಬಂಧವಿದೆ.

ಹೆಚ್ಚೇಕೆ ಇದನ್ನು ಅರ್ಥೈಸಲು ಎರಡು ಕುಟುಂಬಗಳನ್ನು ಮಾದರಿಯಾಗಿ ಪರಿಗಣಿಸೋಣ. ಮೊದಲ ವರ್ಗದ ಕುಟುಂಬದಲ್ಲಿ ತಾಯಿ ವಿದ್ಯಾವಂತೆ. ಅವಳಿಗೆ ಶಿಕ್ಷಣದ ಮಹತ್ವದ ಅರಿವಿದೆ. ಹಾಗಾಗಿ ತನ್ನ ಕುಟುಂಬದ ಎಲ್ಲಾ ಸಂಘರ್ಷದ ಸವಾಲುಗಳ ನಡುವೆಯೂ ಆಕೆ ತನ್ನ ಮಕ್ಕಳ ಶಿಕ್ಷಣದ ಬಗ್ಗೆ ತುಂಬಾ ಕಾಳಜಿ ಹೊಂದಿದ್ದಾಳೆ. ಅದಕ್ಕಾಗಿ ಸೂಕ್ತ ಕಾರ್ಯ ಯೋಜನೆಯನ್ನು ರೂಪಿಸಿದ್ದಾಳೆ. ಒಟ್ಟಿನಲ್ಲಿ ಶಿಕ್ಷಣದಿಂದ ಆ ಕುಟುಂಬಕ್ಕೆ ಒಂದು ವಿಶೇಷವಾದ ಸಾಮಾಜಿಕ ಅಂತಸ್ತು, ಗೌರವ ಪ್ರಾಪ್ತವಾಗಿದೆ. ಅವರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಜೀವನಮಟ್ಟ ಹೆಚ್ಚಿದೆ ಮಾತ್ರವಲ್ಲ ಅವರ ಜೀವನದಲ್ಲಿ ಹೊಸ ಭದ್ರತೆ ಮತ್ತು ಭರವಸೆ ಹುಟ್ಟುವಂತಾಗಿದೆ. ಇದೆಲ್ಲಾ ವಿದ್ಯಾವಂತ ಕುಟುಂಬದ ಸ್ಥಿತಿಗತಿ.

ಆದರೆ ಅವಿದ್ಯಾವಂತ ಕುಟುಂಬದ ಸ್ಥಿತಿಗತಿ ಇದಕ್ಕಿಂತ ಸಂಪೂರ್ಣ ಭಿನ್ನ.

ಎರಡನೇ ವರ್ಗ ಕುಟುಂಬದಲ್ಲಿ ತಾಯಿ ಅವಿದ್ಯಾವಂತೆ. ವರ್ಷ ವರ್ಷವೂ ಹೆರಿಗೆ, ಕುಟುಂಬದಲ್ಲಿ ಎಂಟ್ಹತ್ತು ಮಕ್ಕಳು. ಮೂರು ಹೊತ್ತಿನ ತುತ್ತಿಗೆ ಪರದಾಟ, ಹೊಟ್ಟೆಯ ಹಿಟ್ಟಿಗಾಗಿ ಕಾಡುವ ಎಳೆ ಕೂಸುಗಳ ದುಡಿತ. ಆಹಾರ ಕೊರತೆಯಿಂದಾಗಿ ಅನಾರೋಗ್ಯ, ಹಸಿವು ಸಾವು ಬದುಕಿನ ಪ್ರಶ್ನೆಯಾಗಿ ಕಾಡುವ ದುಃಸ್ಥಿತಿ, ಇನ್ನು ಶಿಕ್ಷಣ ಕುರಿತು ಯೋಜನೆಗೆ ಇಲ್ಲಿ ಅವಕಾಶ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಶೈಕ್ಷಣಿಕ ಭವಿಷ್ಯ ಕತ್ತಲೆಯೇ ಸೈ.

ಶಿಕ್ಷಣವಿಲ್ಲದಿರುವುದರಿಂದ ಹೆಚ್ಚಿಕೊಳ್ಳುವ ಮೂಢ ನಂಬಿಕೆ, ನಡವಳಿಕೆಗಳು, ದುಶ್ಚಟಗಳು ಕುಟುಂಬದವರನ್ನು ದುರಂತದ ಹಾದಿಗೆ ಕೊಂಡೊಯ್ಯುತ್ತದೆ. ಆದರೆ ಕುಟುಂಬದಲ್ಲಿ ಹೆಣ್ಣು ಕಲಿತವಳಾದರೆ ಎಂತಹ ಸಂಕಷ್ಟದಲ್ಲೂ ವೈಚಾರಿಕವಾಗಿ ಚಿಂತಿಸಿ ಪರಿಹಾರ ಕಂಡುಕೊಳ್ಳಬಲ್ಲಳು ಮತ್ತು ಆಕೆ ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬಲ್ಲಳು. ಹೀಗಾಗಿ ಒಂದು ಹೆಣ್ಣು ಕಲಿತರೆ ಆ ಒಂದು ಇಡೀ ಕುಟುಂಬ ವಿದ್ಯಾವಂತರಾಗುವುದೆಂದರೆ ಅಲ್ಲಿ ಒಂದು ಶಾಲೆ ತೆರೆದಂತೆಯೇ ಆಗುತ್ತದೆ. ಅದು ಅಲ್ಲಿನ ಪರಿಸರವನ್ನು ಪ್ರಭಾವಿಸುತ್ತದೆ. ಹೀಗೆ ಒಂದು ಪರಿಸರದಲ್ಲಿ ಶಾಲೆಯೊಂದು ಮಾಡುವ ಪ್ರಭಾವ, ಪರಿಣಾಮಗಳು ಒಬ್ಬ ಮಹಿಳೆಯಿಂದ ಸಾಧ್ಯವಾಗುತ್ತದೆ. ಅವಳ ಶಿಕ್ಷಣದ ಅರಿವಿನ ದೀಪ ನೂರಾರು ಸಾವಿರ ಹಣತೆಗಳನ್ನು ಹಚ್ಚುತ್ತದೆ. ಆ ಸಾವಿರ ಹಣತೆಗಳಿಂದ ಹೊರಟ ಬೆಳಕು ಅಜ್ಞಾನದ ಅನಕ್ಷರತೆಯ ಕತ್ತಲನ್ನು ಕರಗಿಸಿ ನಲಿವು ಗೆಲುವಿನ ಹೊಸ ಬೆಳಕಿನ ಲೋಕದ ಬಾಗಿಲನ್ನೇ ತೆರೆಯುವಂತಾಗುತ್ತದೆ.

ತಾಯಿ ಮತ್ತು ಮಗುವಿನ ಬಾಂಧವ್ಯ ಅತೀ ಪವಿತ್ರವಾದುದು ಮತ್ತು ಆಪ್ತವಾದುದು. ಮಗು ಈ ನೆಲೆಯಲ್ಲಿ ಪ್ರತಿಯೊಬ್ಬ ತಾಯಿರೂಪ ಒಬ್ಬ ಪ್ರತಿಭಾವಂತ ಗುರುವೇ ಆಗಿದ್ದಾಳೆ. ಅದಕ್ಕೆಂದೇ ''ಮನೆಯೇ ಮೊದಲ ಪಾಠ ಶಾಲೆ ಜನನಿ ತಾನೇ ಮೊದಲ ಗುರುವು'' ಎನ್ನುವುದು.

●

03 Pg_035-110 TY200028

ಸಮುದ್ರ ಮತ್ತು ಮೊನಾಲಿಸಾ

✍ **ದೀಪ್ತಿ ದಿನೇಶ್,** ತೃತೀಯ ಬಿ.ಕಾಂ.

‘‘ಸಮುದ್ರ ಬದಿ ಹೋಗೋಣ ಬನ್ನಿ’’ ಅಂತ ಯಾರಾದರೂ ನಮ್ಮನ್ನು ಕರೆದರೆ ಸಾಕು ನಮ್ಮ ಮನವು ಜಿಗಿಯುತ್ತದೆ. ಈ ಸಮುದ್ರ ಶಬ್ದದ ಮಾಯೇನೆ ಹಾಗೆ ಏನೋ ಒಂದು ರೀತಿಯ ಉತ್ಸಾಹ! ಅಲೆಗಳ ಜೊತೆ ಆಟವಾಡಲು ಹಂಬಲಿಸುವುದು ಮನ. ಅಷ್ಟಕ್ಕೂ ಈ ಸಮುದ್ರಕ್ಕೂ ಹಾಗೂ ಮೊನಾಲಿಸಾಗೆ ಏನು ಸಂಬಂಧ.

ಲಿಯೊನಾರ್ಡೊ ಡಾ ವಿನ್ಸಿ ರಚಿಸಿದ ‘‘ಮೊನಾಲಿಸಾ’’ ಚಿತ್ರಕಲೆಗೆ ಶತಮಾನಗಳು ಕಳೆದರೂ. ಇನ್ನೂ ಎಷ್ಟೋ ರಹಸ್ಯಗಳು ಆಕೆ ತನ್ನಲ್ಲಿ ಬಚ್ಚಿಟ್ಟುಕೊಂಡಿರುವಳು. ಇವತ್ತಿಗೂ ಈ ಚಿತ್ರಕಲೆ ಮೇಲೆ ಸಂಶೋಧನೆಗಳು ನಡೆಯುತ್ತಿವೆ. ಮೂಲ ಚಿತ್ರಕಲೆಯ ಪರಿಧಿ ಕೇವಲ 77x54 cm ಮತ್ತು ಇದು ಫ್ರಾನ್ಸ್ ಸರ್ಕಾರದ ಒಡೆತನದಲ್ಲಿದೆ. ನವೋದಯ ಕಾಲದಲ್ಲಿ ಅಂದರೆ ಸುಮಾರು 14 ರಿಂದ 16 ನೇ ಶತಮಾನದಲ್ಲಿ ರಚನೆಯಾದ ಈ ಚಿತ್ರಕಲೆಯಲ್ಲಿ ಯುವತಿ ಇರುವಳು ಮತ್ತು ಆಕೆಯ ಹಿಂದೆ ಪರ್ವತ ಭೂದೃಶ್ಯ ಇರುವುದು. ‘ಮೊನಾ’ ಅಂದರೆ ಇಟಾಲಿಯನ್ ಭಾಷೆಯಲ್ಲಿ ಮೇಲ್ವರ್ಗದ ಮಹಿಳೆಯರನ್ನು ಗೌರವ ನೀಡಿ ಕರೆಯುವಾಗ ಬಳಕೆ ಮಾಡುತ್ತಾರೆ. ಇಂಗ್ಲೀಷ್‌ನಲ್ಲಿ ‘ಮೇಡಂ’ ಇದ್ದ ಹಾಗೆ ಮತ್ತು ಲೀಸಾ ಯುವತಿಯ ಹೆಸರು. ಅದಕ್ಕಾಗಿ ಕೆಲವು ಸಂಶೋಧಕರು ಈ ಚಿತ್ರಕಲೆಯು ನವೋದಯ ಕಾಲದಲ್ಲಿ ನೆಲೆಸಿದ ಉದಾತ್ತ ಮಹಿಳೆ ‘ಲಿಸಾ ಗೆರಾರ್ಡಿನಿಯ’ ಭಾವಚಿತ್ರ ಎಂದು ವಾದ ಮಂಡಿಸಿದ್ದಾರೆ. 1962ರಲ್ಲಿ ನೂರು ಮಿಲಿಯನ್ ಡಾಲರ್ ಮೊತ್ತದ ವಿಮೆಯನ್ನು ಹೊಂದಿದ್ದ ಕಾರಣದಿಂದಾಗಿ ಇತಿಹಾಸದಲ್ಲಿ ಅತಿ ಹೆಚ್ಚು ವಿಮಾ ಮೊತ್ತ ಮಾಪನಕ್ಕಾಗಿ ಗಿನ್ನಿಸ್ ವಿಶ್ವ ದಾಖಲೆಯನ್ನು ಹೊಂದಿದೆ.

ಎರಡು ಮೂರು ವರ್ಷಗಳ ಹಿಂದೆ ಒಂದು ನ್ಯೂಸ್ ಚಾನೆಲ್ ನಲ್ಲಿ ‘‘ಮೊನಾಲಿಸಾ’’ ಚಿತ್ರಕಲೆ ಬಗ್ಗೆ ಒಂದು ಕಾರ್ಯಕ್ರಮ ಪ್ರಸಾರವಾಗಿತ್ತು. ಆ ಕಾರ್ಯಕ್ರಮದಲ್ಲಿ ಒಂದು ವಿಶಿಷ್ಟ ಮಾಹಿತಿ ನೀಡಿದರು. ಅದೇನೆಂದರೆ ‘‘ಮೊನಾಲಿಸಾಳನ್ನು ನಾವು ಯಾವುದೇ ಭಾವನೆಯಿಂದ ನೋಡಿದರೂ ಆಕೆಯು ಅದೇ ಭಾವನೆಯನ್ನು ಹೊರಹಾಕುತ್ತಾಳೆ.’’ ಉದಾಹರಣೆಗೆ ನಾವು ಖುಷಿಯಿಂದ



ಮೊನಾಲಿಸಾಳನ್ನು ಕಂಡರೆ ಆಕೆಯು ಕೂಡಾ ಸಂತೋಷದಲ್ಲಿ ಇದ್ದಾಳೆ ಎಂದು ಅನಿಸುವುದು, ಹಾಗೆ ದುಃಖದಿಂದ ನೋಡಿದರೆ ಆಕೆಯು ದುಃಖದಲ್ಲಿ ಇದ್ದಾಳೆ ಎಂದು ಅನಿಸುವುದಂತೆ. ಈ ಚಿತ್ರಕಲೆಯು ನಿಜಕ್ಕೂ ಎಲ್ಲಾ ರೀತಿಯಲ್ಲಿ ವಿಶಿಷ್ಟತೆ ಹಾಗೂ ವಿಸ್ಮಯವನ್ನು ತನ್ನಲ್ಲಿ ಅವಿತುಕೊಂಡಿರುವುದು.

ಆ ಸೃಷ್ಟಿಕರ್ತ ಎಂಬ ಚಿತ್ರಗಾರ ರಚಿಸಿದ ಈ ಸಮುದ್ರ ಎಂಬ ಚಿತ್ರಕಲೆಯು ಒಂದು ರೀತಿಯ ಮೊನಾಲಿಸಾ ಚಿತ್ರಕಲೆ ತರಹಾನೆ ಅಲ್ಲವೇ? ಸಮುದ್ರ ದಡದಲ್ಲಿ ಒಂದು ಕ್ಷಣ ಮೌನವಾಗಿ ನಿಂತಾಗ ನಿಮಗೆ ಗೊತ್ತಿಲ್ಲದೇ ಆ ಸಮುದ್ರ ನಮ್ಮ ಮನಸ್ಸಿಗೆ ದರ್ಪಣ ಹಿಡಿಯುವುದು. ಖುಷಿಯಿಂದ ಕಡಲನ್ನು ನೋಡಿದರೆ, ಆ ಅಲೆಗಳು ಮುಂದೆ ಬರುವ ಸಂತೋಷದ ದಿನಗಳು ಎಂದು ಮನವು ಅರಳುವುದು, ಆದರೆ ದುಃಖದಿಂದ ನೋಡಿದರೆ, ಅದೇ ಅಲೆಗಳು ಆಗಾಗ ಎದುರಾಗುತ್ತಿರುವ ಕಷ್ಟದ ದಿನಗಳು ಎಂದು ಮನವು ರೋದಿಸುವುದು – ಹೀಗೆ ನಮ್ಮ ಬದುಕು. ಈ ಬದುಕನ್ನು ನಾವು ಯಾವ ರೀತಿಯಲ್ಲಿ ನೋಡುತ್ತೇವೆ ಅದು ಅದೇ ದಿಕ್ಕಿನಲ್ಲಿ ಸಾಗುವುದು. ನಮ್ಮ ಜೀವನದ ಚಿತ್ತಾರಕ್ಕೆ ಋಣಾತ್ಮಕದ ಬಣ್ಣವನ್ನು ತುಂಬುತ್ತೇವಾ ಅಥವಾ ಸಕಾರಾತ್ಮಕದ ಬಣ್ಣವನ್ನು ತುಂಬುತ್ತೇವಾ ಇದು ನಮ್ಮ ಜಾಣ್ಮೆಯಲ್ಲಿ ಅಡಗಿದೆ.

●

03 Pg_035-110 TY200028

ಮನೆ ತೊರೆದು ಬಂದಂತಹ ರೈತನ ಒಳಗುದಿ

✍ **ಮಂಜುನಾಥ್ ಸಾಂತ್‌ಗೇರಿ**, ಪ್ರಥಮ ಬಿ.ಎ.

ಒಂದು ದಿನ ನಾನು ಯಾವುದಾದರು ಒಂದು ಹೊರ ರಾಜ್ಯಕ್ಕೆ ಭೇಟಿ ನೀಡಬೇಕೆಂದು ಉಡುಪಿಯಿಂದ ಉತ್ತರ ದಿಕ್ಕಿನತ್ತ ಸಾಗುವ ಉಗಿ ಬಂಡಿ ಹತ್ತಿ ಹೊರಟೆ. ಮಡಗಾಂವ್ ತಲುಪಲು ಸುಮಾರು 4–5 ತಾಸು ಬೇಕಾಗುತ್ತದೆ ಎಂದು ಹೇಳುತ್ತಿದ್ದರು. ಆದರೆ ಉಗಿಬಂಡಿಯಲ್ಲಿ ಸುಮ್ಮನೆ ಕೂರುವ ಮನ ಎನ್ನದಲ್ಲ ಅದರಲ್ಲೂ ಮಡಗಾಂವ್ ಹೋಗುವವರು ಎಲ್ಲರೂ ಹಿಂದಿ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು. ಆದರೆ ಎನಗೆ ಶುದ್ಧ ಹಿಂದಿ ಭಾಷೆ ಬರಲ್ಲ ಆದರೂ ಹಸಿಬಿಸಿಯಾಗಿ ಮಾತು ಶುರು ಮಾಡಿದೆ ನನ್ನ ಪಕ್ಕದ ಸೀಟಿನಲ್ಲಿರುವವರ ಬಳಿ ಮಡಗಾಂವ್, ಗೋವಾದ ಕುರಿತು ವಿಚಾರಿಸಲು ಪ್ರಾರಂಭಿಸಿದೆ. ಒಬ್ಬೊಬ್ಬರ ಒಂದೊಂದು ರೀತಿಯ ಮಾತಿಗೆ ಸ್ವಲ್ಪ ಸಂತಸವಾಯಿತು ಹಾಗೆ ಗೋವಾದಲ್ಲಿ ಇಳಿದು ಮತ್ತೆ ವಾಪಾಸ್ ಊರಿಗೆ ಹಿಂತಿರುಗಿ ಹೋಗುವಷ್ಟು ಭಯ ಹುಟ್ಟಿಕೊಳ್ಳಲಾರಂಭಿಸಿತು. ನಂತರ ಅವರನ್ನು ವಿಚಾರಿಸುವುದನ್ನು ನಿಲ್ಲಿಸಿ ಉಗಿಬಂಡಿಯ ಬಾಗಿಲಿನ ಬಳಿ ಹೋಗಿ ಮೆಟ್ಟಿಲ ಬಳಿ ನಿಂತು ಹೊರಗೆ ದೃಷ್ಟಿಗೆ ಹಾದು ಹೋಗುವ ಪ್ರಕೃತಿಯ ಹಸಿರನ್ನು ನೋಡುತ್ತಾ ನಿಂತೆ. ಆಗ ಹಿಂದಿ ಭಾಷೆಯೆ ಹೆಚ್ಚಾಗಿ ಕೇಳುತ್ತಿರುವ ಆ ಟ್ರೈನಿನಲ್ಲಿ ಯಾರೋ ಕನ್ನಡ ಮಾತನಾಡುವುದು ಕೇಳಿಸಿತು. ಹಿಂತಿರುಗಿ ನೋಡಿದೆ, ಆಗ ಹಣ್ಣು ಹಣ್ಣಾಗಿರುವ ಒಬ್ಬಾತ ಬಿಳಿಯಂಗಿ ತೊಟ್ಟು, ಹಸಿರು ವಸ್ತ್ರವನ್ನ ಹೆಗಲ ಮೇಲೆ ಹಾಕೊಂಡ ಮುದುಕ ಅಂಗವಿಕಲತೆಗೆ ಬಲಿಯಾದಾತನನ್ನು ಪರಿಚಯಿಸಿಕೊಂಡು ಮಾತು ಹುಟ್ಟಿಸಿದ್ದ, ನನ್ನ ನೋಡಿ ಸುಮ್ಮನೆ ಅಲ್ಲೇ ಕೂತು ಆ ಮುದುಕ ಮನೆ ತೊರೆದು ಬಂದ ತನ್ನ ನೋವನ್ನು ಹಂಚಿಕೊಳ್ಳುತ್ತಿರುವುದನ್ನು ನಾನು ಆಲಿಸಿ ಆಲಿಸಿ ಕೊನೆಗೆ ಕೇಳಿಯೇ ಬಿಟ್ಟೆ ಯಾವ ಊರು ತಾತ ನಿಮ್ಮದು ಎಂದು. ಆಗ ಮುದುಕ ಉತ್ತರಿಸಿದ್ದು ಊರು ಮೈಸೂರು, ನಾನೊಬ್ಬ ರೈತ, ಇಬ್ಬರು ಹೆಣ್ಣುಮಕ್ಕಳಿದ್ದಾರೆ... ಮದುವೆ ಮಾಡಿಸಿಕೊಟ್ಟಿದ್ದೇನೆ. 2 ವರ್ಷದ ಹಿಂದೆ ಹೆಂಡತಿಯು ಅನಾರೋಗ್ಯದಿಂದ ತೀರಿಹೋದಳು. ಬೆಳೆ ನಂಬಿಕೊಂಡು ಸಾಲ ಮಾಡಿ ಬೆಳೆದೆ. ಆದರೆ ಬೆಳೆ ನಾಶದಿಂದ ಫಲ ಸಿಗಲಿಲ್ಲವಪ್ಪ. ಸಾಲ ತೀರಿಸಲು ಆಗಲಿಲ್ಲ. ಬ್ಯಾಂಕ್‌ನವರು ಇದ್ದ ಭೂಮಿಯನ್ನು ವಶಪಡಿಸಿಕೊಂಡರು. ಆದ್ದರಿಂದ ಇನ್ನು ಊರು ಬಿಟ್ಟು ಹೋಗಿ ದುಡಿದು ಸಂಪಾದಿಸಿಕೊಂಡು ಬದುಕಬೇಕೆಂದು ಕೆಲಸಕ್ಕೆಂದು ಮಂಗಳೂರಿಗೆ ಹೋದೆ. ನನ್ನ ವಯಸ್ಸು ನೋಡಿ ಯಾರೂ ಕೆಲಸ ಕೊಡಲಿಲ್ಲ. ನಂತರ ಅವರಿವರ ಬಳಿ ಕೈಯೊಡ್ಡಿ ಬೇಡಿ ಒಂದು ಹೊತ್ತು ಊಟ ಮಾಡಿಕೊಂಡು ಮಂಗಳೂರಿನ ರೈಲು ನಿಲ್ದಾಣದಿಂದ ಕಾರವಾರಕ್ಕೆ ಬಂದೆ. ಅಲ್ಲಿಯಾದರೂ ಕೆಲಸ ಸಿಗಬಹುದೇನೊ ಎಂದು ಅಂದುಕೊಂಡು ಅಲ್ಲಿಯೂ ಕೂಡ ಒಂದು ವಾರ ಕೆಲಸಕ್ಕೆಂದು ಪರದಾಡಿದೆ. ನನ್ನಲ್ಲಿ ಉಟ್ಟ ಒಂದು ಜೊತೆ ಬಟ್ಟೆ ಬಿಟ್ಟರೆ ಬೇರೆ ಏನು ಇಲ್ಲಪ್ಪ, ಅದೂ ತುಂಬಾ ಕೊಳೆಯಾಗಿರುವುದರಿಂದ ಯಾರೂ ಕೆಲಸ ಕೊಡಲು ಮುಂದಾಗುತ್ತಿರಲಿಲ್ಲ. ಆದ್ದರಿಂದ ಅಲ್ಲಿಂದ ಮತ್ತೆ ಕಾರವಾರದ ರೈಲು ನಿಲ್ದಾಣಕ್ಕೆ ಬಂದಾಗ ಈ ಉಗಿಬಂಡಿ ನಿಂತಿತ್ತು. ಹತ್ತಿದ್ದೇನೆ ಎಲ್ಲಿಗೆ ಹೋಗುತ್ತದೆ ಎಂಬುದು ಆ ಮುದುಕನಿಗೆ ಗೊತ್ತಿಲ್ಲ, ಕೊನೆಯ ನಿಲ್ದಾಣದಲ್ಲಿ ಇಳಿದು ಭಿಕ್ಷೆ ಬೇಡುತ್ತಾ ಜೀವನ ಸಾಗಿಸುತ್ತೇನೆ ಎಂದು ಆ ಮುದುಕ ಆಕಾಶವೇ ತಲೆಯ ಮೇಲೆ ಬಿದ್ದಂತೆ ತನ್ನ ಆ ನೋವು ತುಂಬಿರುವ ಜೀವನದ ಕಥೆ ಹಂಚಿಕೊಂಡ. ನನ್ನ ಮನ ನೊಂದು ಯಾಕೆ ತಾತ ನಿನ್ನ ಹೆಣ್ಣು ಮಕ್ಕಳ ಮನೆಗೆ ಹೋಗಿ ಇರಬಹುದಲ್ಲ ಎಂದೆ. ಆಗ ಆ ಮುದುಕ ತಲೆ ಅಲ್ಲಾಡಿಸಿ ಇಲ್ಲಪ್ಪ ಅವರನ್ನು ನಾವು ಹೊರಗೆ ಕೊಟ್ಟಿರುತ್ತೇವೆ ಹಾಗಿರುವಾಗ ನಾನು ಹೋಗಿ ಅವರೊಂದಿಗಿರುವುದು ಸರಿಯಲ್ಲ ಎಂದು ಆ ರೈತ ಮುದುಕ ತನ್ನ ಒಳಗುದಿಯನ್ನು ವ್ಯಕ್ತಪಡಿಸಿದ... ಬದುಕಿನ ಬಗ್ಗೆ ನನ್ನಲ್ಲಿ ಅನೇಕ ಪ್ರಶ್ನೆಗಳೇ ಮೂಡತೊಡಗಿತು.

●

ಬಡವನ ಕೂಗು...

✍ **ಸುಬ್ರಹ್ಮಣ್ಯ,** ಪ್ರಥಮ ಬಿ.ಎ.

ಬಡತನವನ್ನು ಜಗತ್ತಿನಲ್ಲಿ ಯಾರಾದರೂ ಪ್ರೀತಿಸಿದ್ದುಂಟೆ? ಆಶಿಸಿದ್ದು ಉಂಟೆ? ಬಡತನ ಎಂಬ ಪ್ರೇತವನ್ನು ಓಡಿಸಲಿಕ್ಕಾಗಿ ಮನುಷ್ಯ ಸದಾ ಹೋರಾಟ ಮಾಡುತ್ತಿರುತ್ತಾನೆ ಎಂಬುದು ವಿಸ್ಮಯದ್ದೇ ಸಂಗತಿ. ಬಡತನ ಮನುಷ್ಯ ಆಶಿಸಿ ದಕ್ಕಿಸಿಕೊಂಡ ವಸ್ತುವಲ್ಲ. ಅದು ನಮ್ಮ ಜೀವನಕ್ರಮದಲ್ಲಿ ತಾನೇ ತಾನಾಗಿ ಬಂದು ಅನಪೇಕ್ಷಿತವಾಗಿ ನಮ್ಮನ್ನು ಮುತ್ತಿ ಸತಾಯಿಸುತ್ತಿರುವ ಒಂದು ಗತಿ–ಸ್ಥಿತಿ ಎನ್ನಬಹುದು. ಬಡತನದಲ್ಲಿ ಜೀವಿಸುವವನನ್ನು ''ಬಡವ'' ಎನ್ನುತ್ತೇವೆ.

ಬಡತನ ಅನುಭವಿಸುತ್ತಿರುವವರಲ್ಲಿ ಕೊರತೆಯ ಪಟ್ಟಿ ಹನುಮಂತನ ಬಾಲದಂತೆ ಉದ್ದವಿರುತ್ತದೆ. ದುಃಖ, ದಾರಿದ್ರ್ಯ, ಸಂಕಟ, ಹಸಿವು, ರೋಗ ಪ್ರಾಪ್ತಿ – ಇವೆಲ್ಲ ಬಡವರ ಭಾರೀ ಸಂಪತ್ತಾಗಿ ಸದಾ ಅದರ ವಿಕ್ರೂರ ಪೀಡನೆಯಲ್ಲಿ ಬಳಲುತ್ತಿರುತ್ತಾರೆ. ವಾಸ್ತವದಲ್ಲಿ ''ಬಡವ''ರೆಂಬ ವರ್ಗದವರಲ್ಲಿ ಐಕ್ಯತೆ, ಸ್ಪರ್ಧಾತ್ಮಕ ಯುಗದಲ್ಲಿ ಗೆಲ್ಲುವ ಶಕ್ತಿ ಕಳೆದುಕೊಂಡಿರಲು ಹತ್ತಾರು ಕಾರಣಶಕ್ತಿ ಇದೆ. ಬರಿಯ ಹಣಕಾಸಿನ ಸ್ಥಿತಿಯೊಂದೇ ಅಲ್ಲ; ಶಿಕ್ಷಣದ ಕೊರತೆ, ಅನುಭವ ಜ್ಞಾನ, ಪರಿಸರದ ಪ್ರಭಾವ, ಪ್ರೋತ್ಸಾಹ, ಸೋಲಿನ ಭಯ, ಅಪಾಯದ ಭೀತಿ, ಅಸಹಕಾರದ ಸನ್ನಿವೇಶ, ಜಾತಿ, ಧರ್ಮ, ದೇವರ ಭಯ, ಸಮಾಜವನ್ನು ಎದುರಿಸಿ ಮುನ್ನಡೆಯುವ ಆತ್ಮಸ್ಥೈರ್ಯ ಕಳೆದುಕೊಂಡಿರುತ್ತಾರೆ. ಬೇಕಾದ ವಸ್ತುವನ್ನು ಖರೀದಿಸುವಲ್ಲಿನ ಅಸಾಮರ್ಥ್ಯವೇ ಬಡತನಕ್ಕೆ ನಿದರ್ಶನ ಎನ್ನುತ್ತಾರೆ.

ಹುಟ್ಟಿದ ಮನುಷ್ಯ ಚಟ್ಟ ಏರುವವರೆಗೆ ಅವನ ಆಶಾಭಿಲಾಶೆಗೆ ಮಿತಿ ಎಂಬುದೆಲ್ಲಿದೆ!? ಅಂತ ಪ್ರಶ್ನಿಸುತ್ತಾರೆ ಸಮಾಜಶಾಸ್ತ್ರಜ್ಞರು. ಬಡತನವನ್ನು 'ಅಕ್ಟೋಪಸ್' ಎಂದು ಎಂಟು ಕೈಗಳುಳ್ಳ ಮೀನು ಜಾತಿಗೆ ಸೇರಿದ ರುದ್ರಜೀವಿ ಪ್ರಾಣಿಗೆ ಹೋಲಿಸುತ್ತಾರೆ. ಬಡವರ ಜೀವನ ಒಂದು ಸಂತೋಷದ ಜೀವನವಾಗಿರುತ್ತದೆ. ಯಾಕೆಂದರೆ ಅವರಿಗೆ ಎಷ್ಟೇ ಕಷ್ಟ ಇದ್ದರೂ ಕೂಡ ಅವರ ಮುಖದಲ್ಲಿ ನಗುವಿನ ಒಂದು ಅಂಶವನ್ನು ನೋಡಬಹುದಾಗಿದೆ. ಅವರಿಗೆ ಸಮಾಜದ ಬಗ್ಗೆ ಹೆಚ್ಚಾಗಿ ಭಯ ಇರುತ್ತದೆ. ಎಷ್ಟೇ ಸಮಸ್ಯೆ ಬಂದರೂ ಅವರು ಯಾರ ಬಳಿಯಲ್ಲಿ ಹೇಳದೆ ಅವರೇ ಅದನ್ನು ಜಯಿಸುತ್ತಾರೆ. ಬಡವರಲ್ಲಿ ಸ್ವಾಭಿಮಾನ, ಪ್ರೀತಿ, ಕರುಣೆಯ ವಿಪುಲ ಸಂಪತ್ತಿರುತ್ತದೆಂಬ ಸತ್ಯಾಂಶವನ್ನು ನಾವು ತಿಳಿಯಲೇಬೇಕು.

ಹೀಗೆ ವ್ಯಕ್ತಿಗೆ ಒಂದರ ಬೆನ್ನ ಹಿಂದೆ ಮತ್ತೊಂದರ ಅವಶ್ಯಕತೆಯು ಇದ್ದಿದ್ದಕ್ಕೇ, ಆ ಆಶಾಬಳ್ಳಿ ಬಾಡುವುದಿಲ್ಲ; ಬಗ್ಗುವುದಿಲ್ಲ; ಬದಲು ಬೆಳೆಯುತ್ತಲೇ ಹೋಗುತ್ತದೆ. ಜೀವನ ಕೊರತೆಗಳ ಬೀಡು; ಗಳಿಕೆಗಾಗಿ 'ಮಿತಿ'ಯ ಗೂಡು ಎಂದಿದ್ದಕ್ಕೇ ವ್ಯಕ್ತಿ ತನ್ನ ಗಳಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ತನ್ನ ಬದುಕಿನಲ್ಲಿ ವ್ಯವಸ್ಥೆಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ.

ಬಡವನನ್ನು ಜಗತ್ತು ಎಂದೂ ಪ್ರೀತಿಸುವುದಿಲ್ಲ, ಬದಲು ಕ್ಷಮಿಸುತ್ತದೆ. ಅಷ್ಟೇ ವೇಗದಲ್ಲಿ ದೂರ ಇಡಲಿಕ್ಕೂ ಪ್ರಯತ್ನಿಸುತ್ತದೆ. ಬಡತನವು ಹಸಿವು, ದುಃಖ, ನಿರಾಶೆ, ನಿಷ್ಫಲ, ಅಜ್ಞಾನ, ಅಸಾಮರ್ಥ್ಯ, ಕಣ್ಣೀರು, ನಿರಾಕರಣೆಗಳೆಂಬ ಎಂಟು ಪಾದಗಳ ಅರ್ಥಾತ್ ಅಕ್ಟೋಪಸ್‌ನ ವಿಕ್ರೂರ ಹಿಡಿತದಲ್ಲಿ ದಿಕ್ಕೆಡಿಸಿ ಬಿಡುತ್ತದೆ. ಬದುಕು ದುರ್ಭರಗೊಳಿಸುತ್ತದೆ. ಲೋಕದ ಕಣ್ಣಿಗೆ ತಾತ್ಸಾರದ ಬಿರುಗಾಳಿ ಎಬ್ಬಿಸಿಬಿಡುತ್ತದೆ. ಅನೇಕ ಸಂದರ್ಭದಲ್ಲಿ 'ಬಡತನ'ವು ತಮ್ಮದೇ ಪೂರ್ವಾರ್ಜಿತ ಕರ್ಮಫಲ–ಪ್ರಾರಬ್ಧ ಎಂದು ತೀರ್ಮಾನಿಸಿ ಬಾಯಿಮಾತಿನ ಅನುಕಂಪಧಾರೆ ಉದುರಿಸಿಬಿಡುತ್ತದೆ.

ಬಡವರ ಬಗ್ಗೆ ಕರುಣೆ–ಅನುಕಂಪಾದಿ ದಯಾಭಾವ ಪ್ರಕಟಿಸಿ ಕೃತಾರ್ಥರಾಗುವ ಮಂದಿಯೇ ಹೆಚ್ಚು. ಸಹಜವಾಗಿ ಮಾನಸಿಕವಾಗಿಯೋ–ಶಾರೀರಿಕವಾಗಿಯೋ ಬಡವರು ಕೃಶರಾಗಿಯೇ ಬದುಕುತ್ತಾರೆ. ಅವರು ಅನುಭವಿಸುವ ಹಸಿವು, ಕಷ್ಟ–ಕಾರ್ಪಣ್ಯಗಳ ಬಗೆಗೆ ಸಿರಿವಂತರ ಪಾಲಿಗದು ಅಲರ್ಜಿಯೆ!

ಉಪಕರಿಸಿ ಸಹಾಯಗೈಯ್ಯುವ ಆರ್ಥಿಕ ಬಲ ಇದ್ದ ಸಿರಿವಂತರಲ್ಲೂ ಸಹ ಕರುಣಾರಸದ ಆರ್ದ್ರತೆ ಬತ್ತಿ ಹೋಗುವುದೇ

ಹೆಚ್ಚು. ಬಡವರ ಬಗೆಗೆ ಬಾಯ್ತುಂಬಾ ಕೃತಕ ಕನಿಕರದ ಮುತ್ತು ಉದುರಿಸುವ ಶ್ರೀಮಂತರ ಎದೆ ಕಲ್ಲಾಗಿರುತ್ತದೆ ಎಂಬ ಕಟುಸತ್ಯ ಬಡವರಿಗೆ ಅರ್ಥವಾಗುವುದೆಲ್ಲಿದೆ?

ಭಾರತದಲ್ಲಿ ಎರಡು ಹೊತ್ತಿನ ಊಟಕ್ಕೆ, ವಾಸಕ್ಕೆ, ಸಾಕಷ್ಟು ಖರ್ಚಿಗೆ ಎಂತಾ ಉಳ್ಳವರು ಶೇ. 23.50 ಎಂದು ಅಧಿಕೃತ ಸಂಖ್ಯೆ ಹೇಳುತ್ತದೆ. ಇದರಲ್ಲೇ ಶ್ರೀಮಂತರ ವರ್ಗ ಕೂಡಿದ್ದಾಗಿದ್ದು ಅದು ಶೇ. 10 ರಷ್ಟು ಮೀರುವುದಿಲ್ಲ ಎಂಬುದು ಮತ್ತೊಂದು ವಾಸ್ತವಾಂಶ. ಅರ್ಥಾತ್ ಊಟಕ್ಕಿಂತ ಅಂದರೆ ಊಟಕ್ಕಿದ್ದರೆ ವಸ್ತ್ರಕ್ಕಿಲ್ಲ ಎಂಬುವವರ ಸಂಖ್ಯೆ ಈ ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಶೇ. 5 ರಷ್ಟು ಹೆಚ್ಚಿದ್ದು ಅದು ಒಟ್ಟು ಜನಸಂಖ್ಯೆಯ 1/4 ಭಾಗವನ್ನೂ ದಾಟಿಲ್ಲ ಎಂಬುದೂ ವಿಷಾದನೀಯಾಂಶವಾಗಿದೆ. ಬಡವರ ಬಗ್ಗೆ ಅವರ ಬಡತನದ ಬಗ್ಗೆ ಹೇಳುವುದಾದರೆ ಅದು ಸಾಧ್ಯವಿಲ್ಲ. ಅವರ ಜೀವನದ ಬಗ್ಗೆ ನಮ್ಮ ಜೀವನದಲ್ಲಿ ತಿಳಿದುಕೊಂಡರೆ ಅದು ಎಂತಹ ಜೀವಿತ ಎಂದು ತಿಳಿಯಲು ಸಾಧ್ಯ. ●

ಕೃಷ್ಣನಗರಿಯಿಂದ ರಾಜಪಥದೆಡೆಗೆ

✍ ಸ್ಮಿತಾ ಎಸ್. ಬಿ.

ಬದುಕು ಎಂದರೆ ನದಿಯ ಹಾಗೆ ಕೊನೆ ಇಲ್ಲದ ಪಯಣ. ಅಲ್ಲಿ ಯಾರೂ ಶಾಶ್ವತವೂ ಅಲ್ಲ ಯಾರೂ ಉಳಿಯುವುದೂ ಇಲ್ಲ. ಉಳಿಯುವುದು ಒಂದೇ ಹೃದಯ ತಟ್ಟಿದ ನೆನಪುಗಳು ಮಾತ್ರ. ಆ ನೆನಪುಗಳಲ್ಲಿ ಒಂದು ನನ್ನ ಆರ್. ಡಿ. ಕನಸು.

ಅಂದು ಡಿಸೆಂಬರ್ 28, 2019. ಮನೆಯಿಂದ ಒಂದು ತಿಂಗಳಿಗೆ ಬೇಕಾದ ಬಟ್ಟೆಬರೆಗಳನ್ನು ತುಂಬಿಸಿ ಸುಸ್ತಾಗಿತ್ತು. ಒಂದಲ್ಲ, ಎರಡಲ್ಲ ಬರೋಬ್ಬರಿ ನಾಲ್ಕು ಬ್ಯಾಗುಗಳನ್ನು ತುಂಬಿಸಿ ನಾನು ಮತ್ತು ಅಮ್ಮ ಉಡುಪಿ ಬಸ್ ನಿಲ್ದಾಣ ತಲುಪಿದೆವು. ಒಮ್ಮೆ ಉಡುಪಿಯನ್ನು ಕಣ್ತುಂಬ ನೋಡಿಕೊಂಡೆ ಇನ್ನೂ ಒಂದು ತಿಂಗಳು ಬಿಟ್ಟು ಇರಬೇಕಲ್ಲ ಅಂತ.

ಅದಾಗಲೇ ನಮ್ಮ ಕಾಲೇಜಿನ ಸ್ನೇಹಿತರು, ಅಣ್ಣಂದಿರೆಲ್ಲರು ನನ್ನನ್ನು ಬೀಳ್ಕೊಡಲು ಬಂದಿದ್ದರು. ಅವರನ್ನು ಮಾತನಾಡಿಸಿ ಇನ್ನೇನು ಕಣ್ತುಂಬಿಕೊಳ್ಳುವಷ್ಟರಲ್ಲಿ ಬಾಯ್ ಎಂದು ಹೇಳಿ ಬಸ್ ಹತ್ತೇಬಿಟ್ಟಿದ್ದೆ. ಅಲ್ಲಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಹೊರಟೆ. ಅಲ್ಲಿ ನನ್ನ ಉಳಿದ ಮಿತ್ರರು ಇದ್ದರು. ಅಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಯೋಜಕರಾದ ನಾಗರತ್ನ ಮೇಡಂರವರನ್ನು ಮಾತನಾಡಿಸಿ ನಮ್ಮ ಅರ್ಜಿ ಸಲ್ಲಿಸಿದೆವು. ಎಲ್ಲಾ ಆದ ನಂತರವೂ ಹೊತ್ತು ಮುಳುಗಿ ರಾತ್ರಿಯಾದರೂ ನಾವು ನಾಲ್ಕು ಜನ ವಿ.ವಿ. ಆವರಣದೊಳಗೇ ಇದ್ದೆವು. ಅಷ್ಟರ ಹೊತ್ತಿಗೆ ನಮ್ಮ ಹಳೆಯ ಸಂಯೋಜಕಿ ಆದಂತಹ ವಿನಿತ ಮೇಡಂ ಬಂದರು. ಅವರು ನಮ್ಮನ್ನ ಒಂದು ಹೊಟೇಲಿಗೆ ಕರೆದುಕೊಂಡು ಹೋಗಿ ವಿಭಿನ್ನ ತಿನಿಸುಗಳನ್ನು ತೆಗೆದುಕೊಟ್ಟರು. ಅಲ್ಲಿ ಒಂದಿಷ್ಟು ಮಾತುಕತೆ ನಡೆಸಿದೆವು. ಆ ತಿನಿಸುಗಳನ್ನು ನೋಡಿ ಒಬ್ಬರ ಮುಖ ಇನ್ನೊಬ್ಬರು ನೋಡಿ ಮನಸ್ಸಿನಲ್ಲೇ ನಗುತ್ತಿದ್ದೆವು. ಯಾಕೆಂದರೆ ಕನ್ನಡದಲ್ಲೊಂದು ಗಾದೆ ಮಾತಿದೆ... ''ರೋಗಿ ಬಯಸಿದ್ದು ಹಾಲು, ವೈದ್ಯ ಕೊಟ್ಟದ್ದು ಹಾಲು'' ಅದೇ ರೀತಿಯಾಗಿತ್ತು. ಅಲ್ಲಿಂದ ಟ್ಯಾಕ್ಸಿ ಕರೆಸಿ ಮೇಡಂ ನಮ್ಮನ್ನ ಬೆಂಗಳೂರಿಗೆ ಹೋಗುವ ಬಸ್ಸಿಗೆ ಬಿಟ್ಟರು.

ಅಲ್ಲಿಂದ ನಮ್ಮ ಪ್ರಯಾಣ ಮಂಗಳೂರಿನಿಂದ ಬೆಂಗಳೂರಿಗೆ ಆರಂಭವಾಯಿತು. ಅಂತೂ-ಇಂತೂ ಬೆಂಗಳೂರು ತಲುಪಿದೆವು. ಬಸ್ಸಿನಲ್ಲಿ ಇಳಿದಾಗ ಆದ ಅನುಭವ ನನ್ನ ಜೀವನದಲ್ಲಿ ಜುಗುಪ್ಸೆ ಹುಟ್ಟಿಸಿತ್ತು. ಅದು ಬೆಳಗಿನ ಮೈ ಕೊರೆಯುವ ಚಳಿ. ಒಂದು ಕಡೆ ಲೋಡುಗಟ್ಟಲೆ ಬ್ಯಾಗುಗಳು, ಇನ್ನೊಂದು ಕಡೆ ಗಾಂಧಿ ಭವನಕ್ಕೆ ಹೋಗಲು ಟ್ಯಾಕ್ಸಿ ಹುಡುಕುವ ಯೋಚನೆ. ಇನ್ನೂ ಆ ಆಟೋ ಚಾಲಕರ ಕಿರಿಕಿರಿ ಇದೆಲ್ಲಾ ಪರಿಸ್ಥಿತಿ ಅನುಭವಿಸಿದಾಗ ಅದು ಬೆಳಗಿನ ಜಾವ 5 ಗಂಟೆ, ಆ ಸಂದರ್ಭದಲ್ಲಿ ಎಂತಹ ಮನುಷ್ಯನಿಗೂ ಕೋಪ ನೆತ್ತಿಗೇರದೆ ಬಿಡುವುದಿಲ್ಲವೇ...? ಅಂತೂ ಓಲಾ ಸಿಕ್ಕೇಬಿಟ್ಟಿತು. ಆಮೇಲೆ ಗಾಂಧಿ ಭವನಕ್ಕೆ ತಲುಪಿದೆವು. ಆದರೆ ಅಲ್ಲಿ ಹೋದರೆ ಇನ್ನೊಂದು ಅನುಭವ. ನಾವು ಹೋದಾಗ ಕೇವಲ ಗಾಂಧೀಜಿ ಪ್ರತಿಮೆ ಹಾಗೂ ಗಾಂಧಿ ಭವನ ಮಾತ್ರ ಎಚ್ಚರದಲ್ಲಿತ್ತು. ಉಳಿದವರೆಲ್ಲರೂ ನಿದ್ರಾಲೋಕದಲ್ಲಿದ್ದರು. ನಮಗೆ ಏನು ಮಾಡಬೇಕು ಎಂದು ಅರ್ಥವಾಗಲಿಲ್ಲ. ಕೂಡಲೇ ಬೆಂಗಳೂರಿನ ಎನ್.ಎಸ್.ಎಸ್.

03 Pg_035-110 TY200028

ಆಫೀಸರ್‌ಗೆ ಕರೆ ಮಾಡಿದೆವು. ಅವರು ಬರುವತನಕ ಅಲ್ಲೇ ಮೆಟ್ಟಿಲುಗಳಲ್ಲಿ ಕುಳಿತು ವಿಶ್ರಾಂತಿ ಪಡೆದೆವು. ಆಮೇಲೆ ಯಾರೋ ಒಬ್ಬರು ಬಂದು ನಮ್ಮನ್ನು ಕೊಠಡಿಗೆ ಬಿಟ್ಟರು. ನಮಗೆ ಸ್ವರ್ಗ ಸಿಕ್ಕ ಹಾಗೆ ಭಾಸವಾಯಿತು. ಅಂತೂ-ಇಂತೂ ಬ್ಯಾಗುಗಳನ್ನು ಬದಿಗಿಟ್ಟು ಮಲಗಿದ್ದೇ ಮಲಗಿದ್ದು. ಎಚ್ಚರವಾದಾಗ ಬೆಳಗ್ಗೆ 10.30 ಗಂಟೆ. ಆಮೇಲೆ ಅಲ್ಲೇ ಭವನದ ಹೊಟೇಲಿಗೆ ಹೋದೆವು.

ಇನ್ನೇನು ಹಸಿವಿನ ಚಿಟ್ಟೆ ಹಾರುತಿದೆ ಎನ್ನುವಷ್ಟರಲ್ಲಿ ಆರ್ಡರ್ ಮಾಡಲು ಹೊರಟೆವು. ಅಲ್ಲಿ ನಮಗೆ ಬೇಕಾದ ಆಹಾರ ನಾವೇ ಆರ್ಡರ್ ಮಾಡಿ ನಾವೇ ತರಬೇಕಿತ್ತು. ಹಾಗೋ ಹೀಗೋ ದೋಸೆ ಆರ್ಡರ್ ಮಾಡಿ ತರುವಾಗ ಅಲ್ಲಿಯ ಸ್ವಚ್ಛತಾ ಸಿಬ್ಬಂದಿ ಒಬ್ಬಾಕೆ ಮಹಿಳೆಗೆ ಗೊತ್ತಿಲ್ಲದೆ ಸಾಂಬರ್ ನೆಲಕ್ಕೆ ಚೆಲ್ಲಿದ್ದಕ್ಕೆ ಬೆಂಗಳೂರು ಭಾಷೆಯಲ್ಲಿ ಬೈದೇ ಬಿಟ್ಟಿದ್ದಳು. ಹೊಟೇಲ್ ಮಾಲೀಕರು ಹೇಳಿದಾಗ ಅವರಿಗೂ ಬೈದೇ ಬಿಟ್ಟಳು. ಅವರನ್ನು ನೋಡಿ ಭಯದಿಂದ ನಮ್ಮ ತಟ್ಟೆ ನಾವೇ ಹಾಕಿದೆವು. ನಂತರ ಗಾಂಧಿ ಭವನಕ್ಕೆ ಹಿಂತಿರುಗಿದೆವು. ಅಲ್ಲಿ ಹೋದಾಗ ಉಳಿದ ಮಿತ್ರರು ಬಂದಿದ್ದರು. ಅವರೊಂದಿಗೆ ಹಾಡಿ, ಕುಣಿದು ಹಿಂದಿನ ಶಿಬಿರದ ಸವಿನೆನಪುಗಳನ್ನು ಮೆಲುಕು ಹಾಕಿದೆವು. ಅಲ್ಲಿಂದ ರಾಜ್ಯದ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳ ಸಮಾರೋಪಕ್ಕೆ ತೆರಳಿದೆವು. ಅಲ್ಲಿ ಟ್ರ್ಯಾಕ್ ಸೂಟ್ ವಿತರಿಸಿದರು. ಟೀಮ್ ಕರ್ನಾಟಕ ಎನ್.ಎಸ್.ಎಸ್.ಆರ್.ಡಿ. 2020 ಅಂತ ಬರೆದ ಹೊಸ ಟ್ರ್ಯಾಕ್‌ನೊಂದಿಗೆ ಫೋಟೋ ತೆಗೆದು ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು. ಸಮಯ ಕಳೆದದ್ದು ಗೊತ್ತೇ ಆಗಲಿಲ್ಲ. ನನ್ನ ಮನಸ್ಸಿನಲ್ಲಿ ಇದು ನನ್ನ ಗಾಂಧಿ ಭವನದ ಕೊನೆಯ ದಿನ ಅನ್ನೋದು ಬೇಸರ ಮೂಡುತ್ತಿತ್ತು.

ಅಲ್ಲಿಂದ ಪೂರ್ಣಿಮಾ ಜೋಗಿ ಮೇಡಂ ಹಾಗೂ ಇತರ ಅಧಿಕಾರಿಗಳು ನಮ್ಮನ್ನು ಓಲಾ ಮೂಲಕ ಯಶವಂತಪುರ ರೈಲ್ವೆ ನಿಲ್ದಾಣಕ್ಕೆ ಕಳುಹಿಸಿಕೊಟ್ಟಿದ್ದರು. ಓಲಾದಿಂದ ಇಳಿದು ಪಟ್ಟ ಕಷ್ಟ ಅದು ಯಾರಿಗೂ ಬರೋದು ಬೇಡ ಅನ್ನುವ ಸಂಕಲ್ಪ ಕೂಡ ಮನಸ್ಸಿಗೆ ಬರುತ್ತಿತ್ತು. ಆ ಬ್ಯಾಗುಗಳು, ಕಾಮಗಾರಿಯಲ್ಲಿರುವ ನಿಲ್ದಾಣ, ಅದನ್ನೆತ್ತಿ ಕೊಂಡು ಹೋಗುವಷ್ಟರಲ್ಲಿ ನನ್ನ ಜೀವನದ ಅರ್ಧ ಯಾತ್ರೆ ಮುಗಿಯಿತು ಎನ್ನುವ ರೀತಿಯಲ್ಲಿ ಭಾಸವಾಯಿತು. ಹಾಗೋ ಹೀಗೋ ಕಷ್ಟವಿದ್ದರೂ ಇಷ್ಟಪಟ್ಟು ತಲುಪಿದೆವು. ಯಾಕೆಂದರೆ ಕಣ್ಣೆದುರು ಕಾಣುತ್ತಿದ್ದದ್ದು ಆ ರಾಜಪಥ. ಇನ್ನೂ ಅಸಲಿ ಆಟ ಶುರು... ಅದೇ ಎರಡು ದಿನಗಳ ರೈಲು ಪ್ರಯಾಣ. ಅಂತೂ-ಇಂತೂ ಇಕ್ಕಟ್ಟಿನಲ್ಲಿ ಬ್ಯಾಗ್‌ಗಳನ್ನು ರೈಲಿನ ಒಳಗೆ ಇಟ್ಟು ವಿಶ್ರಾಂತಿ ಪಡೆದೆವು.

ಅದೇನೋ ಗೊತ್ತಿಲ್ಲ ನನ್ನ ಜೀವನದ ಅರ್ಧ ಆಯಸ್ಸು ರೈಲಿನಲ್ಲೇ ಮುಗಿಯಿತು ಎಂದು ಅನಿಸುತ್ತಿತ್ತು. ದುಪ್ಪಟ್ಟು ವೆಚ್ಚದಲ್ಲಿ ದೊರೆಯುವ ತಿನಿಸುಗಳು, ವೆಜ್ ಬಿರಿಯಾನಿ... ಚಿಕನ್ ಬಿರಿಯಾನಿ... ಅಂಡ ಬಿರಿಯಾನಿ... ಅಗ್ರಕ್ವಾಲಿ ಚಾಯ್... ಕಾಫೀ... ತಂಬಾಕು ಅಂತ ತಮ್ಮದೇ ಧ್ವನಿಯಲ್ಲಿ ಓಡಾಡುವ ವ್ಯಾಪಾರಿಗಳು, ನೂರು ಸಲ ಆಚೆ ಈಚೆ ತಿರುಗುವ ಮಂಗಳಮುಖಿಯರು. ಕೆಲವೊಮ್ಮೆ ಅವರಿಂದ ತಪ್ಪಿಸಿಕೊಳ್ಳಲು ನಿದ್ರೆ ಬಾರದಿದ್ದರೂ ನಿದ್ರೆ ಬಂದಂತೆ ನಟಿಸುತ್ತಿದ್ದೆವು. ಇನ್ನು ಮಧ್ಯಭಾರತ ದಾಟಿದ ತಕ್ಷಣ ಶುರುವಾದ ಚಳಿ ನನಗೆ ನನ್ನ ಉಡುಪಿಯೆ ಸಾಕು ಎನ್ನುವಷ್ಟು ಭಾಸವಾಯಿತು. ಅಂತೂ ಇಂತೂ ಎರಡು ದಿನಗಳ ರೈಲು ಪ್ರಯಾಣದ ನೆನಪಿನೊಂದಿಗೆ ದೆಹಲಿಯ ನಿಜಾಮುದ್ದೀನ್ ರೈಲ್ವೇ ಸ್ಟೇಷನ್ ತಲುಪಿದೆವು. ಅಲ್ಲಿಂದ ಅಂತಾರಾಷ್ಟ್ರೀಯ ಯೂತ್ ಹಾಸ್ಟೆಲ್‌ಗೆ ಪ್ರಯಾಣ- ಅದು ಸುಮಾರು ರಾತ್ರಿ 8.00 ಗಂಟೆ. ಕೊಠಡಿ ಸಂಖ್ಯೆ 113ರಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ, ಶಿಬಿರ ನಾಳೆಯಿಂದ ಶುರು ಎಂದು ಏನು ಮಾಡುವುದು. ಅದಲ್ಲದೆ 2019 ಕಳೆದು 2020 ಬರುವ ದಿನ. ಆಚರಣೆ ಮಾಡುವ, ಆದರೆ ಎಲ್ಲಿ ಮಾಡುವುದು, ಹೇಗೆ ಮಾಡುವುದು ಎಂದು ಯೋಚನೆ ಮಾಡುತ್ತಿದ್ದಾಗ, ಯಾರೋ ಒಬ್ಬರು ಬಂದು ಬನ್ನಿ, ನಾವು New Year Celebration ಮಾಡುತ್ತಿದ್ದೇವೆ. ನೀವೂ ಸೇರಿಕೊಳ್ಳಿ ಅಂತ ಹೇಳಿ ಹೊರಟೇಬಿಟ್ಟರು. ಏನಿರಬಹುದು ಎಂದು ವಿಚಾರಿಸಲು ಹೋದಾಗ ಬಂದ ಉತ್ತರ ಪಂಜಾಬ್ Volunteer ಅವರು ತಮ್ಮ ತಮ್ಮ ಸಣ್ಣ Sound Systemನಲ್ಲಿ ಪಂಜಾಬ್ ಹಾಡು ಹಾಕಿ ನೃತ್ಯ ಮಾಡುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ರಕ್ಷಣಾ ಸಿಬ್ಬಂದಿ ಬಂದರು. ಅವರನ್ನು ಕಂಡು ಕೂಡಲೇ ಕೊಠಡಿಗೆ ಹೋಗಿ ಹೊದಿಕೆ ಹಾಕಿ ನಿದ್ರೆ ಬಂದಂತೆ ನಾಟಕ ಮಾಡಿದೆವು. ಮೊದಲನೇ ದಿನ ಬೇರೆ ಸಿಲುಕಿಕೊಳ್ಳುವುದು ಬೇಡ ಅಂತ.

ಹೀಗೆ ಪ್ರತಿದಿನ ಬೆಳಗ್ಗೆ ಬೇಗ ಏಳಬೇಕಾದರೆ ಜೀವನದಲ್ಲಿ ಜುಗುಪ್ಸೆ ಬಂದಂತಾಗುತ್ತಿತ್ತು. ಹೊಸ ಊರು, ಹೊಸ ವಾತಾವರಣ, ಹೊಸ ಜನ, ಹೊಸ ಭಾಷೆ, ಮೈ ಕೊರೆಯುವ ಚಳಿ ಇದೆಲ್ಲದಕ್ಕೆ ಹೊಂದಿಕೊಳ್ಳುವುದೇ ಒಂದು ದೊಡ್ಡ ಸವಾಲಾಗಿತ್ತು. ಹಾಗೆ ಪ್ರತಿದಿನ ಪ್ರಾರ್ಥನೆ, ಒಂದು ಕಿಲೋಮೀಟರ್‌ನಷ್ಟು Jogging, ಯೋಗ, ಉಪಾಹಾರ ಆಮೇಲೆ ಪರೇಡ್ ಅಭ್ಯಾಸ ಮತ್ತೆ ವಿಶ್ರಾಂತಿ, ಊಟ, ಶೈಕ್ಷಣಿಕ ಕಾರ್ಯಕ್ರಮ, ಉಪಾಹಾರ ಮತ್ತೆ ಸಂಜೆ ಪರೇಡ್ ಅಭ್ಯಾಸ, ಸಾಂಸ್ಕೃತಿಕ ತಯಾರಿ, ಕಾರ್ಯಕ್ರಮ, ರಾತ್ರಿ ಭೋಜನ ಆಮೇಲೆ ಸ್ವಲ್ಪ ಗೆಳೆಯರೊಂದಿಗೆ ಮೋಜು ಮಸ್ತಿ... ಪ್ರತಿ ದಿನ ನಮ್ಮ ಸಮಯ ಹೀಗೆ ಕಳೆಯುತ್ತಿದ್ದೆವು.

ಅಂದು ನಮ್ಮ ಜವಾನರು ಅಂದರೆ drill ಇನ್ಸ್‌ಪೆಕ್ಟರ್ ಮೊದಲನೇ ಸುತ್ತಿನ ಆಯ್ಕೆ ಪ್ರಕ್ರಿಯೆ ನಡೆಸಿದರು. ಇದು ಕೇವಲ ಟ್ರೈಲರ್ ಮಾತ್ರ, ಪ್ರತಿದಿನ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದವು. ಮೊದಲನೇ ಸುತ್ತಿನಲ್ಲೇ ಆಯ್ಕೆಯಾದವರು ಸ್ವಲ್ಪ ದಿನಗಳ ನಂತರ troopನಿಂದ ಹೊರಬೀಳುತ್ತಿದ್ದರು. ಹೀಗೆ ಯಾರ ಜಾಗವು ಸ್ಥಿರವಲ್ಲ. ಅಂದು ನಮಗೆ ಕೊಟ್ಟ ಕದಂತಾಲ್ ಇಂದಿಗೂ ಕಣ್ಣೆದುರು ಬರುತ್ತದೆ. ಹುಡುಗರು ಮತ್ತು ಹುಡುಗಿಯರಿಗೆ ಸ್ಪರ್ಧೆ ನಡೆಸಿದರು. ಆ ದಿನ

ಕಾಲಿನ ತೊಡೆಗಳು ಸೀಳಿ ಹೋದಂತೆ ಅನುಭವವಾಗಿತ್ತು. ಒಬ್ಬರು 'ಸಾಕು ನಿಲ್ಲಿಸಿ' ಅಂತ ಹೇಳುತ್ತಿದ್ದರೆ, ಇನ್ನೊಂದೆಡೆ ನೋವಿನಿಂದ ಕಣ್ಣಲ್ಲಿ ನೀರು ಧಾರಾಕಾರವಾಗಿ ಬೀಳುತ್ತಿತ್ತು. ಇನ್ನು ಕೆಲವರು ಜವಾನರು ಆದೇಶ ಪಾಲಿಸುತ್ತಾ ಏಕ್ ದೋ ಏಕ್ ಅಂತ ಸೈನಿಕರ ಹಾಗೆ ಎತ್ತರದ ಧ್ವನಿಯಲ್ಲಿ ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದರು. ಅತ್ತ ಕಡೆ ಒಬ್ಬೊಬ್ಬರೇ ತಲೆ ತಿರುಗಿ ಬೀಳುತ್ತಿದ್ದರೂ ಕೇರೆ ಅನ್ನದ drill instructor, how is the josh ಅಂತ ಮತ್ತೆ ಮತ್ತೆ ಕೇಳುತ್ತಿದ್ದರು. High ಸಾರ್ ಅಂತ ಕಿರುಚಿದ ಕ್ಷಣ ಇನ್ನೂ ನನಗೆ ನೆನಪಿದೆ. ಆ ದಿನ ನನಗೆ ಸೈನಿಕರ ಜೀವನದ ದರ್ಶನವಾಗಿತ್ತು. ಸಂಕಟ ಬಂದಾಗ ವೆಂಕಟರಮಣ ಎಂದಂತೆ, ಕಷ್ಟ ಬಂದಾಗ, ತುಂಬಾ ನೋವಾದಾಗ ಅಮ್ಮನ ನೆನಪಾಗುತ್ತದೆ. ರೂಮ್‌ಗೆ ಹೋದ ತಕ್ಷಣವೇ ಅಮ್ಮನಿಗೆ ಕರೆ ಮಾಡಿದೆ. ಆದರೆ ನಾನು ಅತ್ತರೆ ಆಕೆಯೂ ಅಳುತ್ತಾಳೆ ಎಂದು ಅವಳ ಕ್ಷೇಮ ವಿಚಾರಿಸಿ ಫೋನ್ ಇಟ್ಟಿದ್ದೆ. ಹೀಗೆ ದಿನಗಳು ಕಳೆಯುತ್ತಿದ್ದಂತೆ ನಮ್ಮಲ್ಲಿ ಒಬ್ಬ ಯೋಧ ಜಾಗೃತನಾಗಿದ್ದ. ನೋವುಗಳೆಲ್ಲಾ ನಮ್ಮ ಆತ್ಮಶಕ್ತಿಯಾಗಿ ಬದಲಾಗಿತ್ತು.

ಅಂದು ಮೊದಲನೆಯ ಬಾರಿಗೆ ರಾಜಪಥದೆಡೆ ಕರೆದೊಯ್ದರು. ಮೊದಲ ಬಾರಿ ರಾಜಪಥ ನೋಡಿ ಖುಷಿಯಾಗಿತ್ತು. ಸುತ್ತಲೂ ದಾರಿದೀಪಗಳಿಂದ ಕಂಗೊಳಿಸುತ್ತಿತ್ತು. ರಾಷ್ಟ್ರಪತಿ ಭವನದಿಂದ ಪರೇಡ್ ಮಾಡುತ್ತಾ ಮುಂದೆ ಮುಂದೆ ಸಾಗಿದೆವು. 4–5 ಕಿಲೋ ಮೀಟರ್ ಪರೇಡ್ ಮಾಡುತ್ತಾ ಮುಂದಕ್ಕೆ ಹೋದಾಗ ಕಾಣಿಸಿದ್ದು ಮಂಜುವಿನ ಮಧ್ಯೆ ಎತ್ತರಕ್ಕೆ ಬೆಳೆದು ನಿಂತ 'ಇಂಡಿಯಾ ಗೇಟ್'. ಆ ಕ್ಷಣದಲ್ಲಿ ಆದ ಆನಂದ, ಖುಷಿ, ಕಣ್ಣಲ್ಲಿ ಹರಿದ ನೀರು, ಅದನ್ನು ವಿವರಿಸಲು ಅಸಾಧ್ಯ. ಅದನ್ನು ಅನುಭವಿಸಿದರೆ ಮಾತ್ರ ಅನುಭವವಾಗುತ್ತದೆ. ಹೀಗೆ ಪ್ರತಿ ಸಲ ರಾಜಪಥ ಹೋಗಬೇಕಾದರೆ ಏನೋ ಒಂದು ಖುಷಿ. ಅಂದು ದಿನಾಂಕ 23, ರಾಜಪಥಕ್ಕಿಂತ ಒಂದು ಕಿಲೋ ಮೀಟರ್ ಹಿಂದೇನೆ ಇಳಿದು ನಮ್ಮ ಚೆಕಿಂಗ್ ಪೂರೈಸಿ ಒಳ ಹೋದೆವು. ಅಲ್ಲಿ ಎಲ್ಲಾ ಸೈನಿಕ ರಕ್ಷಣಾ ತಂಡಗಳ ಅಭ್ಯಾಸ ನಡೆಯುತ್ತಿತ್ತು. ಅಂದು ನಮ್ಮ ಕೊನೆಯ ಪ್ರದರ್ಶನ ಅಭ್ಯಾಸ. ಅಂತೂ–ಇಂತೂ ಆ ದಿನ ಸುಮಾರು 6 ಕಿಲೋ ಮೀಟರ್ ಪರೇಡ್ ಮಾಡಿ ನಿವಾಸಕ್ಕೆ ಮರಳಿದೆವು. ಮಾರನೆಯ ದಿನ ಪ್ರಧಾನಿ ನಿವಾಸದಲ್ಲಿ ಅವರ ಸಮಕ್ಷಮದಲ್ಲಿ ರಾಜನಾಥ್ ಸಿಂಗ್ ಮತ್ತು ಇತರ ಮಂತ್ರಿಗಳ ಮುಂದೆ ಕರಾವಳಿಯ ಗಂಡುಕಲೆ 'ಯಕ್ಷಗಾನ 'ವನ್ನು ಪ್ರದರ್ಶಿಸಿದ ಹೆಮ್ಮೆ ನನಗಿದೆ. ಇನ್ನೇನು...?? ಮಾರನೇ ದಿನ ವಿಶ್ರಾಂತಿ, ಯುದ್ಧಕ್ಕೆ ಸಿದ್ಧರಾದ ಸೈನಿಕರಿಗೆ ಮುಂಚಿನ ದಿನ ವಿಶ್ರಾಂತಿ ನೀಡುತ್ತಾರಲ್ಲ ಹಾಗೆ. ಇಷ್ಟು ದಿನ ಕಾದ ಘಳಿಗೆ ಬಂದೇ ಬಿಟ್ಟಿತು ಅಂತ ಮೋಜು–ಮಸ್ತಿನಿಂದ ಕೊನೆಯ ದಿನ ನಾಳೆ ಇಳಿಯಬೇಕಿದೆ ಎಂದು ನೆನಪಿನಲ್ಲಿಟ್ಟು ಆ ದಿನ ಮಲಗಿದೆವು.

ಅದು ಇಡೀ ದೇಶಕ್ಕೆ ಒಂದು ಮಹತ್ವಪೂರ್ಣ ದಿನ. ಪ್ರತಿವರ್ಷ ಈ ದಿನ ನಾವು ನಮ್ಮ ಶಾಲೆಯಲ್ಲಿ, ಕಾಲೇಜಿನಲ್ಲಿ ಆಚರಿಸುತ್ತಿದ್ದೆವು. ಆದರೆ ಮುಂದೊಂದು ದಿನ ಇಡೀ ವಿಶ್ವವೇ ತನ್ನ ಕಾರ್ಯ ಮರೆತು ನೋಡುವ ರಾಜಪಥದಲ್ಲಿ ಪಥಸಂಚಲನ ಮಾಡುತ್ತೇನೆ ಎಂದು ಯೋಚಿಸಿರಲಿಲ್ಲ. ಆ ಖುಷಿಯಲ್ಲಿ ರಾತ್ರಿ ಸರಿಯಾಗಿ ನಿದ್ದೆಯೂ ಬಂದಿರಲಿಲ್ಲ.

ಒಂದು ಗಂಟೆಗೆ ಎದ್ದು ಸಮವಸ್ತ್ರ ಧರಿಸಿ ರಾಜಪಥ ನೋಡಬೇಕಾದರೆ ಎಲ್ಲಾ ಸೇನೆಯ ಜವಾನರು ಕೂಡ ಪರೇಡ್‌ಗೆ ನಿಂತಿದ್ದರು. ನಮ್ಮ ಪರೇಡ್ ಸುಮಾರು 9.54ಕ್ಕೆ ಹೊರಡಬೇಕು ಎಂದಿತ್ತು. ಅದೇ ಸಮಯಕ್ಕೆ ಹೊರಟೆವು. ಸೇನೆಯ ಸಮಯಪ್ರಜ್ಞೆ ಬಗ್ಗೆ ನಿಮಗೆ ಗೊತ್ತೇ ಇದೆಯಲ್ಲ. ಅಷ್ಟೊತ್ತಿಗೆ ಬಾನೆತ್ತರದಲ್ಲಿ ಭಾರತದ ರಾಷ್ಟ್ರಧ್ವಜ ಹಾರಿಸಿಕೊಂಡು ಯುದ್ಧವಿಮಾನ, ಹೆಲಿಕಾಪ್ಟರ್‌ಗಳು ಹೋದವು. ಪ್ರಧಾನಮಂತ್ರಿಗಳ ಕಾರು, ರಾಷ್ಟ್ರಪತಿ ಹಾಗೂ ಅತಿಥಿಗಳೂ ಹೋದರು. ಅವರ ಹಿಂದೆ ಒಂದರ ಹಿಂದೆ ಒಂದರಂತೆ ಸೈನ್ಯ ಪರೇಡ್ ಮಾಡಲು ಆರಂಭಿಸಿದರು. ಅವರ ಹಿಂದೆ ನಮ್ಮ ಎನ್.ಎಸ್.ಎಸ್. ಸ್ವಯಂಸೇವಕರು ಕೂಡ ನಿಗದಿಪಡಿಸಿದ ಸಮಯಕ್ಕೆ ಪರೇಡ್ ಮಾಡುತ್ತಾ ರಾಷ್ಟ್ರಧ್ವಜದ ಹತ್ತಿರ ಹೋದಂತೆ ದೈನೇ ದೇಖ್ ಎನ್ನುವ ಆಜ್ಞೆ ಬಂತು. ಎಲ್ಲರೂ ಒಂದೇ ರೀತಿಯಲ್ಲಿ ಬಲಕ್ಕೆ ತಿರುಗಿ ಸೆಲ್ಯೂಟ್ ನೀಡಿ ಗೌರವಿಸಿದೆವು. ಹಾಗೆಯೇ ಮುಂದೆ ಸಾಗುತ್ತಿದ್ದಂತೆ ಅಮರರಾದ ಜವಾನರಿಗೂ ಗೌರವ ನೀಡಿದೆವು.

ಪರೇಡ್ ಮುಗಿಯುತ್ತಿದ್ದಂತೆ ಎಲ್ಲರೂ ಮೊಣಕಾಲೂರಿ ಅತ್ತೇ ಬಿಟ್ಟಿದ್ದರು. ಇನ್ನು ಪರೇಡ್ ಮಾಡುವ ಅವಕಾಶ ಇಲ್ಲವಲ್ಲ, ಇಲ್ಲಿನ ಋಣ ತೀರಿತಲ್ಲ ಅಂತ. ಅದು ಅಲ್ಲಿನ ಮಹತ್ವ. ರಾಜಪಥ ಕೇವಲ ಒಂದು ಮಾರ್ಗವಲ್ಲ ಭಾವನೆಗಳ ಪ್ರತೀಕ, ಸ್ವಾತಂತ್ರ ಹೋರಾಟಗಾರರ ಪ್ರತೀಕ, ವೀರ ಮರಣದ ಪ್ರತೀಕ, ವೀರಯೋಧರ ಪ್ರತೀಕ, ಇಷ್ಟೆಲ್ಲ ಪ್ರತೀಕ ಇರುವ ರಾಜಪಥದಲ್ಲಿ ಮಾಡಲು ಅವಕಾಶ ದೊರಕಿದ್ದು ಹೆಮ್ಮೆಯೇ ಸರಿ. ಜೊತೆಗೆ ಪ್ರಧಾನಮಂತ್ರಿ, ರಾಷ್ಟ್ರಪತಿ, ಉಪರಾಷ್ಟ್ರಪತಿಗಳನ್ನ ಮಾತನಾಡಿಸಿದೆವು. ಅಲ್ಲದೆ ನವದೆಹಲಿಯ ಕೆಂಪುಕೋಟೆ, ಕುತುಬ್ ಮಿನಾರ್, ತಾಜ್‌ಮಹಲ್, ರಾಜ್ ಘಾಟ್ ಮೊದಲಾದ ಪ್ರವಾಸಿ ತಾಣಕ್ಕೆ ಭೇಟಿ ನೀಡಿದೆವು. ಒಂದು ಕಾಲದಲ್ಲಿ ಇವೆಲ್ಲಾ ನನ್ನ ಕನಸಾಗಿತ್ತು. ಇದನ್ನು ನನಸಾಗಿಸಿದ್ದು ನನ್ನ ಎನ್.ಎಸ್.ಎಸ್.

ಒಂದು ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ನಾನು ಇಂದು ಇಷ್ಟು ಎತ್ತರದ ಬೆಟ್ಟಕ್ಕೆ ತಲುಪಿದ್ದೇನೆ. ಇದಕ್ಕಾಗಿ ಆ ದೇವರಿಗೆ ನನ್ನ ನಮನ.

●

03 Pg_035-110 TY200028

ಮಳೆ ನೀರು ಕೊಯ್ಲು

✍ **ನಯನ,** ತೃತೀಯ ಬಿ.ಸ್ಸಿ

ಬೇಸಿಗೆ ಬಂದಿದ್ದೇ ತಡ! ಎಲ್ಲರ ಬಾಯಲ್ಲೂ ಒಂದೇ ಉದ್ಗಾರ! ನೀರಿಲ್ಲ... ನೀರಿಲ್ಲ ... ಏತಕೆ ನೀರಿಲ್ಲ?! ಕಾರಣ ಮಳೆಯಿಲ್ಲ. ಎಲ್ಲರಿಗೂ ಗೊತ್ತಿರುವ ವಿಚಾರ – ನಮ್ಮ ಇಳೆಗೆ ನೀರು ಬರುವುದೇ ಮಳೆಯಿಂದ. ಬೆಳೆ ಸೊಂಪಾಗಿ ನಳನಳಿಸುವುದೇ ಮಳೆಯಿಂದ. ಹಾಗಾದರೆ ಈ ವರ್ಷಧಾರೆಯ ಬಗ್ಗೆ ಏಕಿಷ್ಟು ನಿರ್ಲಕ್ಷ್ಯ. ತನ್ನ ಪಾಡಿಗೆ ತಾನು ಹರಿದುಹೋಗುವ ಮಳೆ ನೀರನ್ನು ತಡೆದು, ವ್ಯವಸ್ಥಿತವಾಗಿ ಬಳಸಿಕೊಳ್ಳಬಾರದೆ?!

''ಇಳೆಗೆ ಸುರಿದ ಮಳೆಯನ್ನು ಹರಿಯಲು ಬಿಡಿ...
ಹರಿಯುವ ಮಳೆ ನೀರನ್ನು ಇಂಗಲು ಬಿಡಿ...''
ಇದೇ ಮಳೆ ನೀರು ಕೊಯ್ಲಿನ ಮೂಲತತ್ವ.

ಸುರಿಯುವ ವರ್ಷಧಾರೆಯನ್ನು ಭವಿಷ್ಯದ ಬಳಕೆಗಾಗಿ ಸಂಗ್ರಹಿಸುವುದು, ಸುಮ್ಮನೇ ಹರಿದು ಹೋಗುವ ಮಳೆ ನೀರನ್ನು ಭೂಮಿಯಲ್ಲಿ ಇಂಗಿಸುವುದೇ ಮಳೆ ನೀರು ಕೊಯ್ಲು.

ಇದನ್ನು ಎಲ್ಲಾ ಸ್ತರಗಳಲ್ಲೂ ಮಾಡಬಹುದು. ಬೃಹತ್ ಮಟ್ಟದಲ್ಲಿ ಸರಕಾರ, ಸರಕಾರೇತರ ಸಂಸ್ಥೆಗಳು, ಶಾಲಾ ಕಾಲೇಜುಗಳಲ್ಲಿ ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಬಹುದು. ಹಾಗೆಯೇ ಸಣ್ಣ ಮಟ್ಟದಲ್ಲಿ, ಎಲ್ಲಾ ಮನೆಗಳಲ್ಲಿ ಮಳೆ ನೀರು ಕೊಯ್ಲನ್ನು ಮಾಡಬಹುದು. ಈ ರೀತಿಯಲ್ಲಿ, ವ್ಯರ್ಥವಾಗಿ ಹರಿದುಹೋಗುವ ಮಳೆ ನೀರನ್ನು ಭವಿಷ್ಯಕ್ಕಾಗಿ ಸಂಗ್ರಹಿಸಬಹುದು. ಹರಿಯುವ ನೀರನ್ನು ಇಂಗಿಸುವುದರಿಂದ, ಕೇವಲ ಆ ಪ್ರದೇಶದಷ್ಟೇ ಜಲಮಟ್ಟ ಜಾಸ್ತಿಯಾಗದೇ, ಸುತ್ತಮುತ್ತಲಿನ ಪ್ರದೇಶದ ನೀರಿನ ಸಮಸ್ಯೆಯೂ ಕಡಿಮೆಯಾಗುವುದು.

ಹೇಗೆ ಮಾಡುವುದು?

ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಅನೇಕ ಸರಳ ವಿಧಾನಗಳನ್ನು ಇಲ್ಲಿ ಹೆಸರಿಸಲಾಗಿದೆ.

ವಿಧಾನಗಳು :

1) **ಛಾವಣಿ ವಿಧಾನ :**

ಮೊಟ್ಟಮೊದಲನೆಯದಾಗಿ ಎಲ್ಲರೂ ಇಷ್ಟಪಡುವ ವಿಧಾನವೇ ಛಾವಣಿ ವಿಧಾನ. ಹೆಸರೇ ಹೇಳುವಂತೆ ಮನೆಯ ಛಾವಣಿ/ ತಾರಸಿಯನ್ನೇ ಬಳಸಿಕೊಂಡು ಮಳೆ ನೀರು ಕೊಯ್ಲು ಮಾಡುವುದು ಇದರ ಮೂಲ ಉದ್ದೇಶ. ಈಗ ಹೆಚ್ಚಿನವರು ತಾರಸಿ ಮನೆಯಲ್ಲಿ ಜೀವಿಸುವುದು ಸರ್ವೇಸಾಮಾನ್ಯವಾಗಿದೆ. ಹೆಂಚಿನ ಮನೆಗಳಾದರೆ, ನೀರು ಹಾಗೇ ಹರಿದು ಭೂಮಿ ಸೇರುತ್ತದೆ. ತಾರಸಿಗಳಲ್ಲಿ ಸುಮಾರು 1 ಲಕ್ಷ ಲೀಟರ್ ನಿಲ್ಲುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ನೀರು ಸುಮ್ಮನೇ ಪೈಪ್‌ಗಳ ಮೂಲಕ ಹರಿದು ಹೋಗುವುದನ್ನು ತಡೆದು ಭವಿಷ್ಯದ ಬಳಕೆಗಾಗಿ ಉಪಯೋಗಿಸಬಹುದು. ಪೈಪ್‌ನ ಒಳಗೆ ಮೊದಲನೇ ಹಂತದ ಫಿಲ್ಟರ್, ಎರಡನೇ ಹಂತದ ಫಿಲ್ಟರ್ ಅನ್ನು ಕ್ರಮಬದ್ಧವಾಗಿ ಜೋಡಿಸಿ ಪೈಪ್‌ನ ಕೊನೆಯನ್ನು ತೊಟ್ಟಿಗೆ ಜೋಡಿಸಬಹುದು. ಫಿಲ್ಟರ್‌ಗಳ ಅಳವಡಿಕೆ ತುಂಬಾ ಮಹತ್ವದ್ದು. ಹಾಗೆಯೇ ತೊಟ್ಟಿಗಳ ಸ್ವಚ್ಛತೆ ಕಡೆಗೂ ಗಮನ ವಹಿಸಬೇಕು.

2) **ಇಂಗು ಗುಂಡಿ :**

ಛಾವಣಿ ವಿಧಾನದಿಂದ ಅತ್ಯಧಿಕ ನೀರು ಸಂಗ್ರಹವಾದರೆ, ಉಳಿದ ನೀರನ್ನು ಇಂಗು ಗುಂಡಿ ನಿರ್ಮಿಸಿ ಭೂಮಿಯಲ್ಲಿ ಇಂಗುವಂತೆ ಮಾಡಬಹುದು. ಇದರಿಂದ ಸುತ್ತಮುತ್ತಲಿನ ಪ್ರದೇಶದ ಜಲಮಟ್ಟ ಹೆಚ್ಚುತ್ತದೆ. ಮನೆಯ ಸುತ್ತ ಸಣ್ಣ ಮಟ್ಟದಲ್ಲಿ ಇಂಗು ಗುಂಡಿ ಮಾಡಬೇಕಾದರೆ, ಹೆಚ್ಚಾಗಿ ಬಳಸುವ ಗುಂಡಿಯ ಅಳತೆ $2 \times 3 \times 3$ ಅಡಿ. ಜಲ್ಲಿ ಕಲ್ಲುಗಳ ಪದರ ಮತ್ತು ಮರಳನ್ನು ಬಳಸಿ ಸರಳವಾಗಿ ನೀರನ್ನು ಇಂಗಿಸಬಹುದು. ಕಲ್ಲಿದ್ದಲುಗಳ ಪದರವನ್ನು ಹಾಕುವುದರಿಂದ ನೀರು ಶುದ್ಧವಾಗಿಯೇ ಇಂಗುತ್ತದೆ. ದೊಡ್ಡ ಮಟ್ಟದಲ್ಲಿ ಇಂಗು ಗುಂಡಿ ನಿರ್ಮಿಸಬೇಕಾದರೆ ಬಳಸಬಹುದಾದ ಅಳತೆ $8 \times 8 \times 8$ ಅಡಿ.

ಇತ್ತೀಚೆಗೆ ರೈತರ ಆತ್ಮಹತ್ಯೆಯಂತಹ ಸಮಸ್ಯೆಗಳು ತೀರಾ ಉಲ್ಬಣಗೊಂಡಿವೆ. ಇದಕ್ಕೆ ಕಾರಣ ನೀರಿಲ್ಲ! ಬೋರ್‌ವೆಲ್‌ಗಳಲ್ಲಿ ನೀರು ಬತ್ತಿ ಹೋದರೆ, ಮತ್ತೊಂದು ಬೋರ್‌ವೆಲ್ ತೋಡುವುದು ಮೂರ್ಖತನದ ಕೆಲಸ. ಅದರ ಬದಲಾಗಿ ಇರುವ ಬೋರ್‌ವೆಲ್ ಸುತ್ತಲೂ ಇಂಗು ಗುಂಡಿ ತೋಡಿ, ಬೋರ್‌ವೆಲ್ ನೀರು ಮರುಪೂರಣೆ ಮಾಡಬಹುದು. ಇಂಗು ಗುಂಡಿಯನ್ನು 20 ಮಿ.ಮೀ. ಕಲ್ಲುಗಳು, 40 ಮಿ.ಮೀ. ಕಲ್ಲುಗಳು, ಜಲ್ಲಿಕಲ್ಲುಗಳ ಪದರ, ಜಾಲರಿಗಳು, ಮರಳಿನ ಪದರ ಹಾಕಿ ಮುಚ್ಚಬೇಕು. ಬೋರ್‌ವೆಲ್‌ನ ಕೇಸಿಂಗ್ ಪೈಪ್‌ನ ರಂಧ್ರಗಳನ್ನೂ ಶುದ್ಧವಾದ ಜಾಲರಿಗಳಿಂದ ಮುಚ್ಚಬೇಕು.

03 Pg_035-110 TY200028

3) ಮಳೆ ತಟ್ಟೆ :

ಹಿಂದಿನ ಕಾಲದಲ್ಲಿ ಪೂರ್ವಿಕರು ಅವರದೇ ರೀತಿಯಲ್ಲಿ ಮಳೆನೀರು ಕೊಯ್ಲು ಮಾಡುತ್ತಿದ್ದರು. ಶುದ್ಧವಾದ ಸೀರೆ/ಬಟ್ಟೆಯ ತುದಿಯನ್ನು ನಾಲ್ಕು ಕಂಬಗಳಿಗೆ ಸಿಕ್ಕಿಸಿ, ತಳದಲ್ಲಿ ಪಾತ್ರೆಯನ್ನಿಟ್ಟು, ಆಗಸದ ಅಮೃತಧಾರೆ ನೇರವಾಗಿ ಬೀಳುವಂತೆ ಮಾಡುತ್ತಿದ್ದರು. ಈ ನೀರನ್ನು ಎಷ್ಟೋ ಕಾಲ ಬಳಸುತ್ತಿದ್ದರು. ಇದೇ ವಿಧಾನಕ್ಕೆ ಆಧುನಿಕ ಸ್ಪರ್ಶ ಕೊಟ್ಟಿದ್ದೇ ಮಳೆ ತಟ್ಟೆ ವಿಧಾನ. ಇಲ್ಲಿ ಅಗಲವಾದ ಪ್ಲಾಸ್ಟಿಕ್/ಫೈಬರ್ ತಟ್ಟೆಗಳನ್ನು, ಬ್ಯಾರಲ್‌ಗಳಿಗೆ ಜೋಡಿಸಬೇಕು. ಮಧ್ಯದಲ್ಲಿ ಜಾಲರಿಗಳನ್ನಿಡಬೇಕು. ತೆರೆದ ತಟ್ಟೆಯ ಮೇಲೆ ಬೀಳುವ ಮಳೆ ನೀರು ಜಾಲರಿಯ ಮೂಲಕ ಒಳನುಗ್ಗಿ, ಶುದ್ಧವಾಗಿಯೇ ಬ್ಯಾರಲ್ ಅನ್ನು ಸೇರುತ್ತದೆ. ಈ ನೀರನ್ನು ಬಹುಕಾಲ ಬಳಸಬಹುದು.

ಜಲಾಶಯಗಳು :

ದೊಡ್ಡ ಮಟ್ಟದಲ್ಲಿ ಮಳೆ ನೀರನ್ನು ಸಂಗ್ರಹಿಸಬೇಕೆಂದರೆ ಜಲಾಶಯಗಳು ತೀರಾ ಅಗತ್ಯ. ಇದಕ್ಕೆ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಜನ ಸಾಮಾನ್ಯರ ಸಹಕಾರ ಬೇಕು. ಭಾರತದಲ್ಲಿ ಕ್ರಿಸ್ತಪೂರ್ವದಿಂದಲೇ ಜಲಾಶಯಗಳ ನಿರ್ಮಾಣ ನಡೆಯುತ್ತಿತ್ತು. ಅನೇಕ ರಾಜ–ಮಹಾರಾಜರು ಕೆರೆ–ಕಟ್ಟೆ–ಜಲಾಶಯಗಳನ್ನು ಕಟ್ಟುತ್ತಿದ್ದರು. ಜನ ಸಾಮಾನ್ಯರಿಗೂ ಜಲ ಸಾಕ್ಷರತೆಯ ಅರಿವು ಮೂಡಿಸುತ್ತಿದ್ದರು. ಒಂದು ಮಹಾನ್ ಉದಾಹರಣೆ ಹೊಯ್ಸಳ ವಂಶದ ದೊರೆ ಮಹಾರಾಜ ವಿಷ್ಣುವರ್ಧನ. ಈತನ ಕಾಲದಲ್ಲಿ ಜಲಾಶಯಗಳ ರಚನೆಗೆ ಅತ್ಯಂತ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ತನ್ನ ದಂಡನಾಯಕನಿಗೆ ಯುದ್ಧ ಗೆದ್ದುದಕ್ಕೆ ಉಡುಗೊರೆ ಕೊಡುವುದಕ್ಕಾಗಿ ಆತನ ಊರಿಗೇ ಜಲಾಶಯವನ್ನು ನಿರ್ಮಿಸಿದ್ದ.

ಮುಕ್ತಾಯ :

ಮಳೆ ನೀರು ಕೊಯ್ಲಿನಿಂದ ನೀರಿನ ಮಟ್ಟ ಪರಿಣಾಮಕಾರಿಯಾಗಿ ಹೆಚ್ಚುತ್ತದೆ, ಖರ್ಚೂ ಕಡಿಮೆ. ಹಾಗಾಗಿ ಇದರ ಬಗ್ಗೆ ಎಲ್ಲರಿಗೂ ಅರಿವಿರಬೇಕು. ನೀರಿನ ಬಗ್ಗೆ ನಮ್ಮ ಪೂರ್ವಿಕರಿಗಿದ್ದ ಜ್ಞಾನ ಎಲ್ಲರಿಗೂ ಪ್ರೇರಣೆಯಾಗಲಿ. ಜಲ ಸಾಕ್ಷರತೆ ಎಂಬುದು ನಿನ್ನೆ–ಮೊನ್ನೆ ಉದ್ಭವವಾದ ವಿಷಯವಲ್ಲ. ಅದು ಕ್ರಿಸ್ತಪೂರ್ವದಿಂದಲೇ ಭಾರತೀಯರ ಮನದಲ್ಲಿ ಹಾಸುಹೊಕ್ಕಾಗಿತ್ತು ಎಂಬುದು ಗಮನಾರ್ಹ ಸಂಗತಿ.

ಜನಸಾಮಾನ್ಯರ, ಸಂಘ ಸಂಸ್ಥೆಗಳ ಸಹಾಯದಿಂದ ನೀರನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಬಹುದು. ಇದಕ್ಕೆ ಉದಾಹರಣೆ ನಮ್ಮ ಕಾಲೇಜಿನಲ್ಲಿ ನಡೆದ ಬೃಹತ್ ಮಟ್ಟದ ಮಳೆ ನೀರು ಕೊಯ್ಲು. ಇದರಿಂದ ನಮ್ಮ ಕಾಲೇಜು ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ನಮಗೆಲ್ಲರಿಗೂ ಇದರ ಬಗ್ಗೆ ಹೆಮ್ಮೆಯಿದೆ. ಎಲ್ಲರಿಗೂ ಮಳೆ ನೀರು ಸಿಗುವಂತಾಗಲಿ. ಇದೇ ನಮ್ಮ ಉದ್ದೇಶ.

''ಜಲ ಸಂರಕ್ಷಣೆ, ನಮ್ಮೆಲ್ಲರ ಹೊಣೆ''

ಜಲಸಾಕ್ಷರ

✍ **ಸಮೀಕ್ಷಾ,** ತೃತೀಯ ಬಿ.ಎ.

ನೀರಿನ ಅಭಾವವನ್ನು ಕಡಿಮೆಗೊಳಿಸುವ ಉದ್ದೇಶದೊಂದಿಗೆ ಪ್ರತಿಯೊಬ್ಬರೂ ನೀರು ಸಂರಕ್ಷಣೆಯ ಕಾಳಜಿ ಸೃಷ್ಟಿಯಾಗಬೇಕು ಎಂಬ ದೃಷ್ಟಿಯಿಂದ 'ಉದಯವಾಣಿ' ಆರಂಭಿಸಿರುವ 'ಜಲಸಾಕ್ಷರ' ಅಭಿಯಾನದ ಮಾಹಿತಿ ಕಾರ್ಯಾಗಾರ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಶನಿವಾರ ಜರಗಿತು. ಉದಯವಾಣಿ, ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಿರ್ಮಿತಿ ಕೇಂದ್ರ, ಎಂಜಿಎಂ ಕಾಲೇಜಿನ ಸಹಯೋಗದಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ಜಲತಜ್ಞ ಶ್ರೀಪಡ್ರೆಯವರು ಜಲಸಂರಕ್ಷಣೆಯ ಮಾಹಿತಿಯನ್ನು ನೀಡಿದರು.

ನೀರಿನ ಜಾಗೃತಿ ಅತೀ ಅಗತ್ಯವಾಗಿದ್ದು, ದಕ್ಷಿಣ ಭಾರತದಲ್ಲಿ ಜಲಜಾಗೃತಿ ಆಗಬೇಕಿದೆ. 2019ರ ಬರದಿಂದ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ದುರಂತ ಎದುರಾಗಬಹುದು. ಪ್ರತಿಯೋರ್ವರ ಮೇಲೂ ಈ ಜವಾಬ್ದಾರಿಯಿದ್ದು ಮನೆಮನೆಯಲ್ಲೂ ನೀರನ್ನು ಎಚ್ಚರದಿಂದ ಬಳಸುವ ಪರಿಪಾಠ ಬೆಳೆಸಿಕೊಳ್ಳಬೇಕು. ಒಂದು ಚದರ ಮೀ. ಜಾಗದ

03 Pg_035-110 TY200028

ಮೇಲೆ ಒಂದು ಮಿ.ಮೀ. ಮಳೆ ಬಿದ್ದರೆ 1 ಲೀಟರ್ ಆಗುತ್ತದೆ. ಕರಾವಳಿ ಕರ್ನಾಟಕದಲ್ಲಿ ಪ್ರತಿ ಚದರ ಅಡಿಯ ಮೇಲೆ 3.5 ಸಾವಿರ ಮಿ.ಮೀ. ಮಳೆ ಸುರಿಯುತ್ತದೆ. ನೀರಿನ ಬಗ್ಗೆ ಈ ಎಲ್ಲ ಲೆಕ್ಕ ಹಾಕದಿರುವುದು ಇಂದಿನ ದುರಂತಕ್ಕೆ ಕಾರಣವಾಗಿದೆ ಎಂದು ಜಲತಜ್ಞರಾದ ಶ್ರೀಪಡ್ರೆ ಹೇಳಿದರು. ಮಳೆ ಕೊಯ್ಲು ಕಾರ್ಯಾಗಾರದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಕೆರೆಗಳಲ್ಲಿ ಕಟ್ಟಡ :

ನೀರು ಮತ್ತು ಮಣ್ಣು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಜನಜೀವನ ಸುಗಮವಾಗಿರಲು ಮೂರರಲ್ಲಿ ಒಂದರಷ್ಟು ಅರಣ್ಯವಿರಬೇಕು. ಹುಲ್ಲಿನ ಹಾಸುಗಳಿದ್ದಲ್ಲಿ ಮಣ್ಣಿನ ಸವಕಳಿ ಉಂಟಾಗುವುದಿಲ್ಲ. ಇದನ್ನು ನಾವು ಕಾಪಾಡಿಕೊಂಡು ಬರಬೇಕು. ಇಂದು ರಾಜ್ಯದಲ್ಲಿ ಕೆರೆಗಳಲ್ಲೇ ಕಟ್ಟಡ ಕಟ್ಟುತ್ತಿರುವ ಘಟನೆಗಳು ನಮ್ಮ ರಾಜ್ಯದ ದುಃಸ್ಥಿತಿಗೆ ಕಾರಣ. ಕಾಡು ನಾಶವಾದರೆ ಮಣ್ಣಿನ ಸವಕಳಿ ಉಂಟಾಗುತ್ತದೆ ಎಂದರು.

ನೀರಿನ ಪೋಲು ಸಾಮಾಜಿಕ ಅಪರಾಧ :

ನಳ್ಳಿಯಲ್ಲಿ ಒಂದು ಸೆಕೆಂಡಿಗೆ ಒಂದು ಹನಿಯಷ್ಟು ನೀರು ಸೋರಿ ಹೋದರೂ ದಿನಕ್ಕೆ 50 ಲೀ. ನೀರು ವ್ಯಯವಾಗುತ್ತದೆ. ನೀರನ್ನು ಪೋಲು ಮಾಡುವುದು ಸಾಮಾಜಿಕ ಅಪರಾಧವಾಗಿದ್ದು, ಈ ಬಗ್ಗೆ ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಬೇಕು ಎಂದರು.

ಹೀಗೊಂದು ಲೆಕ್ಕಾಚಾರ :

ವಾರ್ಷಿಕವಾಗಿ 3,500 ಮಿ.ಮೀ. ಮಳೆ ಸುರಿಯುತ್ತದೆ ಎಂದಾದರೆ 1 ಚ.ಮೀ. ಮೇಲೆ 3,500 ಲೀ. ನೀರು, ಒಂದು ಎಕರೆ ಜಾಗದ ಮೇಲೆ 1.4 ಕೋ.ಲೀ. ನೀರು ಶೇಖರಣೆ ಮಾಡಲು ಸಾಧ್ಯವಿದೆ. ಆದರೆ ರಾಜ್ಯದಲ್ಲಿ ಬೀಳುವ ಮಳೆಯಲ್ಲಿ 8ರಿಂದ 10 ಶೇ. ನೀರು ಮಾತ್ರ ಭೂಮಿ ಸೇರುತ್ತಿದೆ. ಈ ಬಗ್ಗೆ ಪ್ರತಿಯೊಬ್ಬರು ಗಮನಹರಿಸಿ ನೀರನ್ನು ಉಳಿಸುವ ಜಾಣ್ಮೆಯನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ನೀರನ್ನು ಶೇಖರಿಸಿಡಬೇಕು ಎಂದರು.

ಕಣ್ಮರೆಯಾದ ಮದಗಗಳು :

ಮದಗಗಳು ನೀರು ಇಂಗಿಸುವ ಕೆಲಸ ಮಾಡುತ್ತವೆ. ಇವುಗಳ ಪುನರುಜ್ಜೀವನ ಆಗಬೇಕು. ಭತ್ತದ ಬೆಳೆ ಕಣ್ಮರೆಯಾದಾಗಿನಿಂದ ಕರಾವಳಿ ಭಾಗದಲ್ಲಿ ಮದಗಗಳ ಸಂಖ್ಯೆ ಕಡಿಮೆಯಾಗುತ್ತಿದೆ, ಹಾಗೆಯೇ ಇಳಿಮುಖವಾಗುತ್ತಿದೆ ಎಂದರು. ಇದರ ಜೊತೆಗೆ ಲಭ್ಯವಿರುವಂತಹ ಕೆರೆಗಳಲ್ಲಿ ಹೂಳು ತುಂಬಿದ್ದು ಇವುಗಳನ್ನು ತೆಗೆಯುವಂತಹ ಕೆಲಸ ಆಗಬೇಕು. ಹರಿಯುವ ನೀರಿಗೆ ಮರಳು ಚೀಲಗಳಿಂದ ಕಟ್ಟಗಳನ್ನು ಮಾಡಬಹುದು. ಇದರಿಂದ 15ರಿಂದ ಒಂದು ತಿಂಗಳಿನಷ್ಟು ಕಾಲ ನೀರು ಹೆಚ್ಚುವರಿ ಉಳಿತಾಯವಾಗಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಹೆಪ್ಸಿಬಾರಾಣಿ ಕೊರ್ಲಪಾಟಿ ಉದ್ಘಾಟಿಸಿದರು. ಜಿ.ಪಂ. ಸಿಇಒ ಸಿಂಧೂ ಬಿ. ರೂಪೇಶ್, ಜಿ.ಪಂ. ಅಧ್ಯಕ್ಷ ದಿನಕರಬಾಬು, ಜಿ.ಪಂ. ಉಪಾಧ್ಯಕ್ಷ ಶೀಲಾ ಕೆ. ಶೆಟ್ಟಿ, ನಿರ್ಮಿತಿ ಕೇಂದ್ರದ ನಿರ್ದೇಶಕ ಅರುಣ್ ಕುಮಾರ್, ಎಂ.ಜಿ.ಎಂ. ಕಾಲೇಜಿನ ಪ್ರಾಂಶುಪಾಲ ಡಾ। ಎಂ. ಜಿ. ವಿಜಯ್ ಉಪಸ್ಥಿತರಿದ್ದರು.

ಜಲಸಂರಕ್ಷಣ ಆಸಕ್ತರು, ಉಡುಪಿ ನಗರದ ಎಂ.ಜಿ.ಎಂ. ಕಾಲೇಜು, ಪೂರ್ಣಪ್ರಜ್ಞ ಕಾಲೇಜು, ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಅಜ್ಜರಕಾಡು ಸರಕಾರಿ ಮಹಿಳಾ ಕಾಲೇಜು, ಶಾರದಾ ರೆಸಿಡೆನ್ಶಿಯಲ್ ಸ್ಕೂಲ್, ಹಿರಿಯಡಕ ಸರಕಾರಿ ಪದವಿ ಕಾಲೇಜು, ಕರ್ನಾಟಕ ಕಾನೂನು ವಿ.ವಿ. ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಮಾಹಿತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

●

ನಗುವು

ನಗುವು ಮನಸ್ಸಿನ ಭಾವನೆಗಳನ್ನು ಹೇಳುತ್ತದೆ
ನನ್ನದೊಂದು ನಗು ನಿನಗಾಗಿ
ಕಾಯುತ್ತಿರುತ್ತದೆ...!
ನಗುವು ಕನಸಿನ ಆಸೆಗಳನ್ನು ಪೂರೈಸುತ್ತದೆ
ನನ್ನದೊಂದು ನಗು ಆಸೆಗಳಿಗಾಗಿ
ಕಾಯುತ್ತಿರುತ್ತದೆ...!
ನಗುವು ಜೀವನದ ಒತ್ತಡಗಳನ್ನು ಮರೆಸುತ್ತದೆ
ನನ್ನದೊಂದು ನಗು ನಿನ್ನ ಒತ್ತಡಕ್ಕಾಗಿ
ಕಾಯುತ್ತಿರುತ್ತದೆ...!
ನಗುವು ಪ್ರೀತಿಯ ನೆನಪುಗಳಾಗಿ ಉಳಿಯುತ್ತದೆ
ನನ್ನದೊಂದು ನಗು ನಿನ್ನ ಪ್ರೀತಿಗಾಗಿ
ಕಾಯುತ್ತಿರುತ್ತದೆ...!

ಸದಾಶಿವ ಬಿ. ಎನ್., ದ್ವಿತೀಯ ಬಿ.ಎ.

ಭಾರತದ ಕನಸಿನ ಕೂಸು ಸಾಕಾರಗೊಳ್ಳುವುದೇ?

✍ **ಪ್ರಮೋದ್ ಆರ್. ನಾಯಕ್,** ದ್ವಿತೀಯ ಪಿ.ಯು.ಸಿ.

ಏನಿದು ''ರಾಷ್ಟ್ರೀಯ ನದಿ ಜೋಡಣೆ ಯೋಜನೆ''?

ಒಂದು ನದಿಪಾತ್ರದಲ್ಲಿರುವ ಹೆಚ್ಚುವರಿ ನೀರನ್ನು ಕೊರತೆ ಇರುವ ಇನ್ನೊಂದು ನದಿಪಾತ್ರಕ್ಕೆ ಪೂರೈಸುವುದನ್ನು ನದಿ ಜೋಡಣೆ ಎಂದು ಕರೆಯುತ್ತಾರೆ. ಭಾರತದಲ್ಲಿ ರಾಷ್ಟ್ರೀಯ ನದಿ ಜೋಡಣೆ ಯೋಜನೆಯನ್ನು 3 ಪ್ರಮುಖ ಭಾಗಗಳಾಗಿ ವಿಭಜಿಸಲಾಗಿದೆ. 1. ಹಿಮಾಲಯ ಭಾಗ, 2. ಪೆನಿನ್ಸುಲಾರ್ (ಪರ್ಯಾಯ) ದ್ವೀಪ, 3. ಆಂತರಿಕ ನದಿ ಘಟಕಗಳು. ಈ ಯೋಜನೆಯನ್ನು ಭಾರತದ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ (NWDA) ಯು ಜಲ ಸಂಪನ್ಮೂಲ ಸಚಿವಾಲಯದ ಅಡಿಯಲ್ಲಿ ನಿರ್ವಹಿಸುತ್ತದೆ. ಹಿಮಾಲಯನ್ ಘಟಕಕ್ಕಾಗಿ 14 ಅಂತರ-ಜೋಡಣೆ ಯೋಜನೆಗಳು ಮತ್ತು 37 ನದಿಗಳ ಸಂಪರ್ಕದ ಯೋಜನೆಗಳನ್ನು NWDA ರೂಪಿಸಿದೆ. ಮಾನ್ಸೂನ್ ಮಳೆ ನೀರಿನ ಸಂಪತ್ತನ್ನು ಸಂರಕ್ಷಿಸಿ, ಜಲಾಶಯಗಳಲ್ಲಿ ಶೇಖರಿಸುವುದು, ಮತ್ತು ಈ ನೀರನ್ನು ನದಿಗಳು ಹಾಗೂ ಅಂತರ-ಸಂಪರ್ಕ ಕಾಲುವೆಗಳ ಮೂಲಕ ದೇಶದ ಉದ್ದಗಲಕ್ಕೂ ವಿತರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಗಾಗಿ ಬ್ಯಾರೇಜ್, ಚೆಕ್‌ಡ್ಯಾಮ್, ಜಲಾಶಯ ಸೇರಿದಂತೆ 3,000 ಸಂಗ್ರಹಾಗಾರಗಳನ್ನು ನಿರ್ಮಿಸಬೇಕಾಗುತ್ತದೆ. ಜೋಡಣೆಯ ಕಾಲುವೆಗಳು 50 ರಿಂದ 100 ಮೀ. ಅಗಲ ಮತ್ತು 6 ಮೀ. ಆಳವಿರುತ್ತದೆ. ಈ ಕಾಲುವೆಯ ಒಟ್ಟು ಉದ್ದ 3,000 ಕಿ.ಮೀ. ಆಗಬಹುದು. 35-37 ದಶಲಕ್ಷ ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದರೊಂದಿಗೆ 34,000 ದಶಲಕ್ಷ ಕಿಲೋವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿರುವ ಈ ಯೋಜನೆಯ ಒಟ್ಟು ವೆಚ್ಚ 5,60,000 ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿದೆ.

ಹಾಗೆ ನೋಡಿದರೆ, ಬ್ರಿಟಿಷರ ಕಾಲದಲ್ಲಿಯೇ ಭಾರತದಲ್ಲಿ ನದಿ ಜೋಡಣೆಯ ಕಲ್ಪನೆ ಚಿಗುರಿತ್ತು. 1838ರಲ್ಲಿ ಖ್ಯಾತ ಬ್ರಿಟೀಷ್ ಸಿವಿಲ್ ಇಂಜಿನಿಯರ್ ಸರ್ ಎ. ಆರ್ಥರ್ ಕಾರ್ಟನ್ ದಕ್ಷಿಣ ಭಾರತದ ನದಿಗಳನ್ನು ಜೋಡಿಸುವ ಪ್ರಸ್ತಾವ ಮುಂದಿಟ್ಟಿದ್ದರು. ಅನಂತರ ಸರ್ ಎಂ. ವಿಶ್ವೇಶ್ವರಯ್ಯ ಕೂಡಾ ಈ ಕುರಿತು ಚಿಂತನೆ ನಡೆಸಿದ್ದರು. 1972ರಲ್ಲಿ ಡಾ. ಕೆ. ಎಲ್. ರಾವ್ ಅವರು ಗಂಗಾ ಮತ್ತು ಕಾವೇರಿ ನದಿ ಜೋಡಣೆಯ ಪ್ರಸ್ತಾವ ಮುಂದಿಟ್ಟಿದ್ದರು.

ಆದರೆ ಈ ಎಲ್ಲಾ ಪ್ರಸ್ತಾವನೆಗಳನ್ನು ಸರ್ಕಾರಗಳು ಹಲವು ಕಾರಣಗಳಿಂದ ತಿರಸ್ಕರಿಸಿದವು. 1972ರಲ್ಲಿ ಅಂದಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ರಾಷ್ಟ್ರೀಯ ಜಲ ಅಭಿವೃದ್ಧಿ ಏಜನ್ಸಿಯನ್ನು ರಚಿಸಿ ಹಿಮಾಲಯ ಹಾಗೂ ಪೆನಿನ್ಸುಲಾರ್ ನದಿಗಳ ಜೋಡಣೆ ಯೋಜನೆ ರೂಪಿಸಿದರು. ಆದರೆ 9 ಮತ್ತು 10ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಯೋಜನೆಯ ಪ್ರಸ್ತಾಪವೇ ಬರಲಿಲ್ಲ. ಅನಂತರ ಕಾರ್ಯಸಾಧ್ಯತೆ ಪರಾಮರ್ಶೆ, ಪರಿಸರದ ಸಾಧಕ-ಬಾಧಕಗಳ ಅವಲೋಕನ ಮೊದಲಾದ ದೀರ್ಘಕಾಲಿಕ ಅಧ್ಯಯನದ ಪ್ರಕ್ರಿಯೆಯಿಂದಾಗಿ ಯೋಜನೆ ಅನುಷ್ಠಾನವಾಗಲಿಲ್ಲ. ಮುಂದೆ 2002ರಲ್ಲಿ ಆಗಿನ ರಾಷ್ಟ್ರಪತಿ ಎ. ಪಿ. ಜೆ. ಅಬ್ದುಲ್ ಕಲಾಂ ನದಿ ಜೋಡಣೆಯ ಬಗ್ಗೆ ಭಾಷಣದಲ್ಲಿ ಉಲ್ಲೇಖಿಸಿದರು. 2002ರ ಅಕ್ಟೋಬರ್‌ನಲ್ಲಿ ನದಿ ಜೋಡಣೆಯ ಕಾರ್ಯ ಆರಂಭಿಸಬೇಕೆಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತು. ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸಂಸತ್ತಿನಲ್ಲಿ ಯೋಜನೆಯನ್ನು ಘೋಷಿಸಿದರು. ಆದರೆ ಯೋಜನೆ ಕೈಗೆತ್ತಿಕೊಳ್ಳುವ ಮೊದಲೇ ಅಟಲ್ ಸರ್ಕಾರದ ಅವಧಿ ಮುಗಿದ ಕಾರಣ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ. ನಂತರದ ಯುಪಿಎ ಸರ್ಕಾರ ಯೋಜನೆಯ ಕುರಿತು ಆಸಕ್ತಿ ವಹಿಸಲಿಲ್ಲ. ಈಗ ಪುನಃ ಬಿಜೆಪಿ ಸರ್ಕಾರ ಬಂದಿರುವುದರಿಂದ ಆಸೆ ಮತ್ತೆ ಚಿಗುರಿದೆ.

ಹಂತ ಹಂತವಾಗಿ ಪ್ರತಿ ರಾಜ್ಯಗಳಲ್ಲಿ ಅಲ್ಲಿಯ ಚಿಕ್ಕಪುಟ್ಟ ನದಿ ಜೋಡಣೆಗಳ ಜೊತೆಗೆ ರಾಷ್ಟ್ರದ ಪ್ರಮುಖ ನದಿಗಳನ್ನು ಜೋಡಿಸಿದರೆ ಮುಂದಿನ 10-15 ವರ್ಷಗಳಲ್ಲಿ ರಾಷ್ಟ್ರದಲ್ಲಿರುವ ಎಲ್ಲಾ ಪ್ರಮುಖ ನದಿಗಳ ಜೋಡಣೆಯಾಗಿ ದೇಶದ ಕೃಷಿ ವ್ಯವಸ್ಥೆ ಸುಭದ್ರವಾಗುತ್ತದೆ.

ನದಿ ಜೋಡಣೆಯ ಅವಶ್ಯಕತೆ

1) ಬರ ಮತ್ತು ಪ್ರವಾಹದ ನಿರ್ವಹಣೆ

ಭಾರತ ಪ್ರತೀ ವರ್ಷ ಸುಮಾರು 4,000 ಕ್ಯೂಬಿಕ್ ಕಿ.ಮೀ. ಮಳೆ ಪಡೆಯುತ್ತದೆ, ಅಥವಾ ಪ್ರತೀ ವರ್ಷ ಸುಮಾರು 1 ಮಿಲಿಯನ್ ಗ್ಯಾಲನ್‌ಗಳಷ್ಟು ತಾಜಾ ನೀರನ್ನು ಪಡೆಯುತ್ತದೆ. ಆದರೆ ಈ ಮಳೆ ದೇಶದ ತುಂಬೆಲ್ಲ ಸಮ ಪ್ರಮಾಣದಲ್ಲಿ ಆಗದು. ಹೀಗಾಗಿ ಹಿಮಾಲಯ ಮತ್ತು ಘಟ್ಟ ಪ್ರದೇಶಗಳಲ್ಲಿ ವಿಪರೀತ ಮಳೆಯಾದರೆ ಬಯಲುಸೀಮೆ ಮಳೆಯ ಕೊರತೆಯನ್ನು ಅನುಭವಿಸುತ್ತದೆ. ಹಿಮಾಲಯದಿಂದ ಹರಿದು ಬರುವ

ನದಿಗಳು ಉತ್ತರ ಭಾರತದಲ್ಲಿ ಪ್ರವಾಹ ಸೃಷ್ಟಿಸಿದರೆ, ದಕ್ಷಿಣ ಭಾರತದ ಬಯಲುಸೀಮೆಯ ಪ್ರದೇಶ ನೀರಿಲ್ಲದೇ ನರಕ ಯಾತನೆ ಅನುಭವಿಸುತ್ತದೆ. ರಾಷ್ಟ್ರೀಯ ನದಿ ಜೋಡಣೆ ಇದಕ್ಕೆ ಪರಿಹಾರವಾಗುತ್ತದೆ.

2) ಜನಸಂಖ್ಯೆ ಹಾಗೂ ಆಹಾರ ಭದ್ರತೆ

ದೇಶದಲ್ಲಿ ಪ್ರತೀ ವರ್ಷ 10 ರಿಂದ 15 ದಶಲಕ್ಷದಷ್ಟು ಜನಸಂಖ್ಯೆ ಏರಿಕೆಯಾಗುತ್ತದೆ. ಹೀಗಾಗಿ ಆಹಾರ ಭದ್ರತೆಗಾಗಿ ದೇಶದ ಒಟ್ಟು 140 ಮಿಲಿಯನ್ ಹೆಕ್ಟೇರ್‌ನಷ್ಟು ಕೃಷಿಯೋಗ್ಯ ಭೂಮಿಗೆ ನೀರಾವರಿಯ ಅವಶ್ಯಕತೆ ಇದೆ. ಈ ಕೃಷಿ ಚಟುವಟಿಕೆಗಳಿಗೆ ಅವಶ್ಯವಿರುವ ನೀರನ್ನು ಒದಗಿಸಲು ಈ ಯೋಜನೆಯು ಸಫಲವಾಗುವ ನಿರೀಕ್ಷೆ ಇದೆ.

ರಾಷ್ಟ್ರೀಯ ನದಿ ಜೋಡಣೆ ಯೋಜನೆಯಲ್ಲಿ ರಾಜ್ಯ ಸರ್ಕಾರಗಳು ಕೇಂದ್ರದೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸಿದರೆ ನಿರೀಕ್ಷಿತ ಪರಿಣಾಮ ಸಾಧ್ಯ. ●

ಆರ್ಯಭಟ

✍ **ಭಾಗ್ಯಶ್ರೀ ಡಿ. ಬಿ.,** ದ್ವಿತೀಯ ಬಿ.ಎ.

ಭಾರತದ ಮೊತ್ತಮೊದಲ ಕೃತಕ ಉಪಗ್ರಹ ಯಾವುದು ಎಂದು ಕೇಳಿದರೆ ಥಟ್ಟನೆ ನಾವು ಆರ್ಯಭಟ ಎಂದು ಹೇಳುತ್ತೇವೆ. ಅದ್ಯಾಕೆ ಆ ಹೆಸರು ಇಟ್ಟರು, ಮೂಲತಃ ಅದು ಯಾರ ಹೆಸರು ಎಂದು ನಮಗೆ ತಿಳಿದಿಲ್ಲ. ಆರ್ಯಭಟ ಎಂಬವ ಭಾರತದ ಪ್ರಾಚೀನ ಗಣಿತಜ್ಞ. ನಮ್ಮ ದೇಶದಲ್ಲಿ ಗಣಿತವನ್ನು ಸರಳೀಕರಿಸಿ ಅದರ ರೂಪುರೇಷೆಗಳನ್ನು ಹಾಕಿಕೊಟ್ಟವ. ಆತನ ನೆನಪಿಗಾಗಿಯೇ ಮೊದಲ ಉಪಗ್ರಹಕ್ಕೆ ಆರ್ಯಭಟ ಹೆಸರು ಇಡಲಾಗಿದೆ.

ಆರ್ಯಭಟ ಹುಟ್ಟಿದ್ದು ಕೇರಳದಲ್ಲಿ, ಬೆಳೆದು ಓದಿದ್ದು ಪಾಟಲೀಪುತ್ರದಲ್ಲಿ. ಈತ ಬರೆದ ಶ್ಲೋಕವೊಂದರಲ್ಲಿ ತಾನು ಹುಟ್ಟುವಾಗ ಮಹಾಭಾರತ ಯುದ್ಧವಾಗಿ 3600 ವರ್ಷಗಳಾಗಿದ್ದವೆಂದು ಹೇಳಿಕೊಂಡಿದ್ದಾನೆ. ಅದರ ಪ್ರಕಾರ ಆರ್ಯಭಟ ಜನಿಸಿದ್ದು ಕ್ರಿ.ಶ. 476ರಲ್ಲಿ ಎಂದು ಊಹಿಸಲಾಗಿದೆ. ಈತ ಪಾಟಲೀಪುತ್ರದ ನಳಂದಾ ವಿಶ್ವವಿದ್ಯಾಲಯದಲ್ಲಿ ಓದಿ, ಖಗೋಳಶಾಸ್ತ್ರ ವಿಭಾಗದ ಮುಖ್ಯಸ್ಥನಾಗಿಯೂ ಕೆಲಸ ಮಾಡಿದ್ದಾನೆ.

ಈತನ ಕೃತಿ 'ಆರ್ಯಭಟೀಯ', ಇದು 121 ಶ್ಲೋಕಗಳನ್ನೊಳಗೊಂಡ ಸಣ್ಣಗ್ರಂಥ, ಇದನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಆರಂಭದ ದೇವತಾ ಪ್ರಾರ್ಥನೆ ಹಾಗೂ ಪರಿಸಮಾಪ್ತಿಯ ಮೂರು ಶ್ಲೋಕಗಳು, 'ದಶಗೀತಿಕಾ' ಎಂಬ 10 ಶ್ಲೋಕಗಳು ಹಾಗೂ 'ಆರ್ಯಾಷ್ಟಶತ'ವೆಂಬ 108 ಶ್ಲೋಕ. ಕೊನೆಯ ಆರ್ಯಾಷ್ಟಶತದಲ್ಲಿ ಮೂರು ಉಪವಿಭಾಗಗಳಿವೆ. ಕೇವಲ ಗಣಿತಕ್ಕೆ ಮೀಸಲಾದ 'ಗಣಿತಪಾದ'ದಲ್ಲಿ 33, ಕಾಲಮಾನಕ್ಕೆ ಸಂಬಂಧಿಸಿದ 'ಕಾಲಕ್ರಿಯಾ'ದಲ್ಲಿ 35 ಶ್ಲೋಕಗಳು, ಖಗೋಲಶಾಸ್ತ್ರ ಕುರಿತಾದ 'ಗೋಲ'ದಲ್ಲಿ 50 ಶ್ಲೋಕಗಳು.

ಈತ ಸೂತ್ರಗಳನ್ನು ಸಂಕ್ಷಿಪ್ತವಾಗಿ ಬರೆದಿರುವುದರಿಂದ ಟಿಪ್ಪಣಿಗಳಿಲ್ಲದೆ ಅರ್ಥೈಸಿಕೊಳ್ಳುವುದು ಕಷ್ಟ. ಆರ್ಯಭಟನೆ ಇದಕ್ಕೊಂದು ಟಿಪ್ಪಣಿ ಬರೆದಿರಬಹುದು. ಆದರೆ ಅದು ಈಗ ಲಭ್ಯವಿಲ್ಲ. ಕ್ರಿ.ಶ. 15ನೆಯ ಶತಮಾನದಲ್ಲಿ ಮಹೇಶ್ವರ ಎಂಬ ಭಾಷಾಕಾರನೊಬ್ಬ 'ಭಟ ದೀಪಿಕಾ' ಎಂಬ ಅಮೂಲ್ಯವಾದ ಟಿಪ್ಪಣಿ ಬರೆದಿದ್ದಾನೆ. ಆರ್ಯಭಟನ ಬಳಿಕ ಬಂದ ಬ್ರಹ್ಮಗುಪ್ತ, ಭಾಸ್ಕರಾಚಾರ್ಯ ಮೊದಲಾದವರೂ ಈತನ ಹೆಸರನ್ನು ನೆನಪಿಸಿಕೊಳ್ಳುತ್ತಾರೆ.

ಭೂಮಿ ದುಂಡಗಿದೆ, ತನ್ನದೇ ಕಕ್ಷೆಯಲ್ಲಿ ಇದು ಸುತ್ತುತ್ತದೆ, ಎಲ್ಲಾ ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆ ಎಂದು ಮೊದಲು ಹೇಳಿದ ವಿಜ್ಞಾನಿ ಈತ. ಸೂರ್ಯ, ಚಂದ್ರ, ನಕ್ಷತ್ರಗಳು ಭೂಮಿಯ ಸುತ್ತ ಸುತ್ತುತ್ತಿವೆ ಎಂದು ನಂಬಿಕೊಂಡಿದ್ದ ಕಲ್ಪನೆಯನ್ನು ದೂರ ಮಾಡಿದ. ಸೂರ್ಯೋದಯದಿಂದ ದಿನ ಆರಂಭವಾಗುತ್ತದೆ ಎಂದೂ ತಿಳಿಸಿದ. ವರ್ಷಕ್ಕೆ 365 ದಿನಗಳಿವೆ ಎಂದ. ಚಂದ್ರನ ಬೆಳದಿಂಗಳು ಸೂರ್ಯನ ಕೊಡುಗೆ ಎಂದೂ ವಿವರಿಸಿದ. ಹೀಗಾಗಿ ಆತನ ಸಿದ್ಧಾಂತಗಳನ್ನು ಸೂರ್ಯಕೇಂದ್ರಿತ ಎಂದು ಹೇಳುತ್ತಾರೆ.

ರಾಹು ಎಂಬ ರಾಕ್ಷಸ ಸೂರ್ಯನನ್ನು ನುಂಗಿದಾಗ ಗ್ರಹಣವಾಗುತ್ತದೆ ಎಂದು ಜನ ನಂಬಿದ್ದರು. ಆರ್ಯಭಟೀಯ ಗ್ರಂಥದಲ್ಲಿ ಆತ ಸೂರ್ಯಗ್ರಹಣ ಚಂದ್ರನ ನೆರಳಿನಿಂದಲೂ, ಚಂದ್ರಗ್ರಹಣ ಭೂಮಿಯ ನೆರಳಿನಿಂದಲೂ ಆಗುತ್ತದೆ ಎಂದು ವಿವರಿಸಿದ. ದೋಣಿಯಲ್ಲಿ ಪಯಣಿಸುವಾಗ ಸುತ್ತಮುತ್ತಲಿನ ಪರಿಸರವೆಲ್ಲಾ ಹಿಂದಕ್ಕೆ ಹೋದಂತೆ ಭಾಸವಾಗುತ್ತದೆ, ಅದರಂತೆ ಸ್ಥಿರವಾಗಿರುವ ನಕ್ಷತ್ರಗಳು ವಿರುದ್ಧ ದಿಕ್ಕಿನಲ್ಲಿ ಹೋಗುವಂತೆ

ನಮಗನಿಸುತ್ತದೆ ಎಂದ. ಇದೇ ವಾದವನ್ನು ಅದೆಷ್ಟೋ ವರ್ಷಗಳ ಬಳಿಕ ವಿದೇಶಗಳಲ್ಲಿ ಗೆಲಿಲಿಯೋ ಮಂಡಿಸಿದ್ದ.

ಗಣಿತ ಲೋಕಕ್ಕೆ ಈತ ನೀಡಿದ ಕೊಡುಗೆ ಅಪಾರ. ಪೈ ಮೌಲ್ಯ 3.1416 ಎಂದು ವಿವರಿಸಿದ ಮೊದಲಿಗ ಆರ್ಯಭಟ. ಇದು ಆರ್ಕಿಮಿಡೀಸ್ ಬಳಸುತ್ತಿದ್ದ ಪದ್ಧತಿಗಿಂತಲೂ ಹೆಚ್ಚು ನಿಖರವಾಗಿತ್ತು. ತ್ರಿಕೋನಮಿತಿಯ ಕೋಷ್ಟಕವನ್ನು ಪರಿಚಯಿಸಿದ. ಈತ ನೀಡಿದ $ax - by = c$ ಎಂಬ ಸೂತ್ರವನ್ನು ನೀಡಿದ.

ಸ್ಥಾನ ಮೌಲ್ಯ ಪದ್ಧತಿಯನ್ನು ಪರಿಚಯಿಸಿದ ಹೆಗ್ಗಳಿಕೆಗೂ ಆರ್ಯಭಟ ಪಾತ್ರನಾಗಿದ್ದಾನೆ. ಅಂದರೆ, ಅಂಕೆಯ ಬೆಲೆ ಇಷ್ಟೇ ಎಂದು ನಿರ್ದಿಷ್ಟವಾಗಿ ನಿಗದಿಪಡಿಸಲಾಗದು, ಅದು ಅದರ ಸ್ಥಾನವನ್ನು ಅವಲಂಬಿಸಿರುತ್ತದೆ ಎಂದು ಪ್ರತಿಪಾದಿಸಿದ. ಉದಾ: 8ರ ಮೌಲ್ಯ, 48ರಲ್ಲಿ ಎಂಟನ್ನೂ, 480ರಲ್ಲಿ 80ನ್ನೂ, 4840ರಲ್ಲಿ 800ನ್ನೂ ಸೂಚಿಸುತ್ತದೆ. ಹೀಗಾಗಿ ಸಂಖ್ಯೆಗಿಂತ ಸ್ಥಾನವೇ ಮುಖ್ಯ ಎನ್ನುತ್ತದೆ ಸ್ಥಾನಮೌಲ್ಯ ಪದ್ಧತಿ. ದೊಡ್ಡ ಸಂಖ್ಯೆಗಳನ್ನೂ ಅಕ್ಷರ ರೂಪದಲ್ಲಿ ಬರೆಯಬಹುದು ಎಂಬುದನ್ನು ತೋರಿಸಿಕೊಟ್ಟ (ಉದಾ: 1,00,000,000,000). ಖಗೋಲಶಾಸ್ತ್ರ ಲೆಕ್ಕಾಚಾರ ಗಳೊಂದಿಗೆ ಜ್ಯಾಮಿತಿ, ಸ್ಕ್ವೇರ್‌ರೂಟ್, ಕ್ಯೂಬ್‌ರೂಟ್ ಮೊದಲಾದವುಗಳನ್ನು ಇಲ್ಲಿ ವಿವರಿಸಿದ. ಸೊನ್ನೆಯನ್ನು ಚಿಹ್ನೆಯ ಮೂಲಕ (0) ಬರೆಯಬಹುದು ಎಂಬುದನ್ನು ತೋರಿಸಿಕೊಟ್ಟವನು.

ಈತನ ಇನ್ನೊಂದು ಕೃತಿ 'ಆರ್ಯ ಸಿದ್ಧಾಂತ'. ಇದು ಖಗೋಲಶಾಸ್ತ್ರದ ದಿನನಿತ್ಯದ ಲೆಕ್ಕಾಚಾರಗಳಿಗೆ ಪಠ್ಯಪುಸ್ತಕದಂತಿದೆ. ವಿವಿಧ ಮಂಗಲಕಾರ್ಯಗಳ ಮುಹೂರ್ತ ನಿಗದಿಪಡಿಸಲು ಮಾರ್ಗದರ್ಶಿಯಾಗಿದೆ. ಆರ್ಯಭಟ ತನ್ನ 74ನೆಯ ವಯಸ್ಸಿನಲ್ಲಿ ಅಂದರೆ ಕ್ರಿ.ಶ. 550ರಲ್ಲಿ ಕೊನೆಯುಸಿರೆಳೆದ.

ಆರ್ಯಭಟ ಮಂಡಿಸಿದ್ದ ಎಲ್ಲಾ ಸಿದ್ಧಾಂತಗಳನ್ನು ಇಂದು ಜಗತ್ತು ಬೆರಗುಗಣ್ಣಿನಿಂದ ನೋಡುತ್ತಿದೆ. ಇಂದಿನ ವಿಜ್ಞಾನಿಗಳು ತಮ್ಮದೆಂದು ಹೇಳಿಕೊಂಡು ಬೀಗುತ್ತಿರುವ ಅದೆಷ್ಟೋ ಗಣಿತಶಾಸ್ತ್ರದ ಸೂಕ್ಷ್ಮಗಳನ್ನು ಆರ್ಯಭಟ ಅಂದೇ ಹೇಳಿ ಮುಗಿಸಿದ್ದ. ಇಂದಿಗೂ ಹಿಂದೂ ಧರ್ಮೀಯರು ಪಂಚಾಂಗ ತಯಾರಿಸುವಾಗ ಆರ್ಯಭಟ ಅಂದು ಹೇಳಿದ್ದ ಪದ್ಧತಿಯನ್ನೇ ಬಳಸಲಾಗುತ್ತಿದೆ. ●

ಏ – ಭ್ರಮೆ

ಮಸುಕು ಮುಂಜಾನೆಯಲ್ಲಿ ಮುಗುಳ್ನಗುತ್ತಿರುವ ಏ ಹಸಿರೇ !
ರವಿಯ ರಶ್ಮಿಗೆ ಮನಸೋತು ನಾಚಿ ನೀರಾಗುವ ಓ ಇಬ್ಬನಿಯೇ !
ಪ್ರಕೃತಿಯನ್ನೇ ಉಸಿರಾಗಿಸಿಕೊಂಡು ಸದಾಕಾಲ ಅಪ್ಪಿಕೊಂಡಿರುವ ತಂಗಾಳಿಯೇ !
ಕ್ಷಣ ಮಾತ್ರದಲ್ಲಿ ಎಲ್ಲವೂ ಕನಸೆಂಬಿಸುವ ನಿಮಗೆ ಸ್ಫೂರ್ತಿ ಯಾರೆಂದು ತಿಳಿಯುವ ತವಕ ನನಗೆ...

ಮೊಗ್ಗೆಂಬ ಮನಸ್ಸನ್ನು ಹೂವಾಗಿಸಬೇಕಿದೆ ಕ್ಷಣಮಾತ್ರದಲ್ಲಿ
ನಿಂತಿರುವ ಜೀವನದ ತುತ್ತತುದಿಯಲ್ಲಿ
ಸೋತು ಗೆದ್ದೆನೋ, ಗೆದ್ದು ಸೋತೆನೋ ಈ ಬಾಳೆಂಬ ನೌಕೆಯ ಪಯಣದಲಿ
ಅರಿತಿಹೆನು ಈಗ ಬಾಳೆಂಬುದು ಶಾಶ್ವತದಲಿ ನಶ್ವರವೆಂದು

ಸಮುದ್ರದ ಅಲೆಗಳು ಉಸಿರಾಡುವ ರಭಸಕ್ಕೆ
ಕಂಗಾಲಾಗಿ ಕುಳಿತಿರುವೆ ಮರೆಯಲಿ
ಅರಸಿಹೊರಟಿರುವೆ ನವೀನವಾದ ದಾರಿಯನು
ಕತ್ತಲೆಯ ಬೆಳಕಿನಿಂದ ಅಂತರಂಗದ ಪ್ರಕಾಶದೆಡೆಗೆ
ತಟ್ಟುತ್ತಿದೆ ಯಶಸ್ಸಿನ ಬಾಗಿಲು ಹೃದಯದೊಳಗೆ

ಹಾಗೇ ಸುಮ್ಮನೆ ಯೋಚಿಸಿದೆ
ಏನಿದೆ ಈ ಬದುಕಿನಲಿ ?
ಪ್ರಕೃತಿಯನ್ನು ನೋಡಿ ಅರಿತೆನು
ಬದಲಾವಣೆಯೇ ಬದುಕು.

ನೇಹಾ ಮಹೇಶ್ ಕೋಟೆಮನೆ, ದ್ವಿತೀಯ ಪಿ.ಯು.ಸಿ.

03 Pg_035-110 TY200028

ಜೋಗತಿ ಮಂಜಮ್ಮ

✍ **ಕೃಷ್ಣ ಜಾದವ,** ತೃತೀಯ ಬಿ.ಎ.

ಜೋಗತಿ ಮಂಜಮ್ಮ ಮೂಲತಃ ಬಳ್ಳಾರಿ ಜಿಲ್ಲೆಯ ಕಲ್ಲುಕಂಬದವರು. ತಂದೆ ಹನುಮಂತಯ್ಯ, ತಾಯಿ ಜಯಲಕ್ಷ್ಮೀ. ಇವರ ಮೂಲ ಹೆಸರು ಮಂಜುನಾಥ, ತಂದೆ-ತಾಯಿ ಗಂಡುಮಗುವಾಯಿತೆಂದು ಇಟ್ಟ ಹೆಸರು. ಮಂಜುನಾಥ ಏಳನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಶರೀರದಲ್ಲಿ ಬದಲಾವಣೆಯಾಗುವುದನ್ನು ಅನುಭವಿಸಿದ್ದಾನೆ. ಇವರ ತಂದೆ ಸಕ್ಕರೆ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದ ಕಾರಣ ಇವರ ಕುಟುಂಬ ದಾವಣಗೆರೆಯ ಸಮೀಪದ ಕುಕ್ಕವಾಡ ಗ್ರಾಮಕ್ಕೆ ತೆರಳಿತು.

ಹೀಗೆ ಮಂಜುನಾಥ 10ನೇ ತರಗತಿಯಲ್ಲಿದ್ದಾಗ, ದೇಹದಲ್ಲಿ ಇನ್ನಷ್ಟು ಬದಲಾವಣೆಗಳು, ನಡವಳಿಕೆಯು ಓರ್ವ ಹುಡುಗನಿಗಿಂತ ಹೆಚ್ಚಾಗಿ ಹೆಣ್ಣಿನ ಹಾವಭಾವಗಳನ್ನು ಹೋಲತೊಡಗಿತು. ಇದರಿಂದಾಗಿ ಸಮಾಜದಲ್ಲಿ ನೋವು ಸಂಕಟಗಳನ್ನು ಅನುಭವಿಸಿದನು. ಮನೆಯಲ್ಲೂ ಇರುಸು-ಮುರುಸು, ತಿರಸ್ಕಾರ ಮತ್ತು ತಂದೆ-ತಾಯಿಯೂ ಸಂಕೋಚ, ಮುಜುಗರ ಮಾಡಲು ಪ್ರಾರಂಭಿಸಿದರು. ಈ ಕಾರಣದಿಂದಾಗಿ ಮನೆಯವರೆಲ್ಲ ಸೇರಿ ಹುಲಿಗೆಮ್ಮ ದೇವತೆಯ ಸಮ್ಮುಖದಲ್ಲಿ ಮುತ್ತು ಕಟ್ಟಿಸಿ, ಜೋಗತಿಯಾಗಿ ದೀಕ್ಷೆ ಕೊಡಿಸುತ್ತಾರೆ. ಈ ಘಟನೆಯಿಂದ ತೀವ್ರ ಮಾನಸಿಕ ಖಿನ್ನತೆಗೊಳಗಾದ ಮಂಜುನಾಥ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾನೆ. ನಂತರ ಮನೆಯನ್ನು ತ್ಯಜಿಸಿದ ಮಂಜುನಾಥ ಇಡ್ಲಿ ಮಾರಿ ಜೀವನ ಸಾಗಿಸುತ್ತಾನೆ.

ನಂತರ ಕಾಲ ಕಳೆದಂತೆ ಮಂಜುನಾಥ, ಮಂಜಮ್ಮನಾಗಿ ಗಟ್ಟಿ ನಿರ್ಧಾರ ಮಾಡುತ್ತಾನೆ. ನಂತರ ಮಂಜಮ್ಮಳಿಗೆ ಹೊಸಪೇಟೆ ತಾಲೂಕಿನ ಗೊಲ್ಲರ ಹಳ್ಳಿಯ ಜೋಗತಿ ಕಾಳವ್ವ ಗುರುವಾಗಿ ದೊರಕುತ್ತಾರೆ. ಇವರ ಮಾರ್ಗದರ್ಶನದಲ್ಲಿ ಮಂಜಮ್ಮ ಜೋಗತಿ ನೃತ್ಯ ಮತ್ತು ನಾಟಕ ಕಲೆಗಳನ್ನು ಕಲಿತು ತಮ್ಮದೇ ಆದ ಒಂದು ಜೋಗತಿ ನೃತ್ಯದ ತಂಡವನ್ನು ಕಟ್ಟುತ್ತಾರೆ. ರಾಜ್ಯದೆಲ್ಲೆಡೆ ಜೋಗತಿ ನೃತ್ಯದ ಪ್ರದರ್ಶನ ನೀಡುತ್ತಾರೆ.

ಜೋಗತಿ ನೃತ್ಯಕ್ಕೆ ಹೊಸ ಘನತೆಯನ್ನು ಇವರು ತಂದುಕೊಟ್ಟು, ಜೋಗತಿ ವೃತ್ತಿಯನ್ನೇ ತಮ್ಮ ಬದುಕಿಗೆ ಆಧಾರವಾಗಿ ಮಾಡಿಕೊಳ್ಳುತ್ತಾರೆ. ಜೋಗತಿ ನೃತ್ಯವಲ್ಲದೆ ಮಂಜಮ್ಮ ರಂಗಭೂಮಿಯಲ್ಲೂ ಕೂಡಾ ತಮ್ಮನ್ನು ತೊಡಗಿಸಿಕೊಂಡು ಎಲ್ಲಮ್ಮ, ಹೇಮರೆಡ್ಡಿ ಮಲ್ಲಮ್ಮ, ಭಸ್ಮಾಸುರ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೂ ಪಾತ್ರರಾಗುತ್ತಾರೆ.

ಮಂಜಮ್ಮ ತಂಡ ಕಟ್ಟಿಕೊಂಡು ಕಳೆದ ಮೂರು ದಶಕಗಳಿಂದ

ತುಮಕೂರು, ಬೆಂಗಳೂರು, ಹಂಪಿ, ಬಳ್ಳಾರಿ, ಬೆಳಗಾವಿ, ಅಥಣಿ, ಧಾರವಾಡ, ಮೈಸೂರು ಮುಂತಾದೆಡೆ ಪ್ರದರ್ಶನ ನೀಡಿದ್ದಾರೆ. ಇವರ ಸಾಧನೆಯನ್ನು ಗುರುತಿಸಿದ ಕರ್ನಾಟಕ ಸರಕಾರ 2010ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇದಲ್ಲದೆ ಮಂಜಮ್ಮ ಜಾನಪದ ಅಕಾಡೆಮಿ ಪ್ರಶಸ್ತಿ, ಜಾನಪದ ಲೋಕ ಪ್ರಶಸ್ತಿ, ಸಮಾಜ ಸಖೀ ಪ್ರಶಸ್ತಿಗಳು ಲಭ್ಯವಾಗಿದೆ. ಇವರ ಜೀವನ ಸಾಧನೆಯನ್ನು ಗುರುತಿಸಿ ಇವರ ಜೀವನ ಕಥೆಯನ್ನು ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಪದವಿ ಪಠ್ಯದಲ್ಲಿ ಪ್ರಕಟಿಸಿದ್ದಾರೆ. ಈ ಮೂಲಕ ಮಂಜಮ್ಮನ ತಂಡದವರು ಜೋಗತಿ ನೃತ್ಯ ಮತ್ತು ಹಾಡುಗಾರಿಕೆಯ ಮೂಲಕ ಗ್ರಾಮೀಣ ರಂಗಭೂಮಿಗೆ ಒಂದು ಹೊಸ ಪರಿಭಾಷೆ ಬರೆದಿದ್ದಾರೆ.

ಪ್ರಾರಂಭದ ದಿನಗಳಲ್ಲಿ ಜಾನಪದ ಅಕಾಡೆಮಿಯ ಸದಸ್ಯರಾಗಿದ್ದ ಜೋಗತಿ ಮಂಜಮ್ಮನವರನ್ನು ಈಗ ಜಾನಪದ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಇದೇ ಮೊದಲಬಾರಿಗೆ ತೃತೀಯ ಲಿಂಗಿಯೊಬ್ಬರು ಜಾನಪದ ಅಕಾಡೆಮಿಯ ಅಧ್ಯಕ್ಷೆಯಾದದ್ದು ಬಹಳ ಹೆಮ್ಮೆಯ ಸಂಗತಿ.

ಈ ರೀತಿಯಾಗಿ ಮಂಜಮ್ಮ ಮಂಗಳಮುಖಿಯಾಗಿ, ಛಲಗಾರ್ತಿಯಾಗಿ ಇಡೀ ಕರ್ನಾಟಕದಲ್ಲಿ ಅಲ್ಲದೇ ದೇಶ-ವಿದೇಶಗಳಲ್ಲಿ ಹೆಸರುವಾಸಿಯಾಗಿದ್ದಾರೆ. ಜೋಗತಿ ನೃತ್ಯವಲ್ಲದೆ ಮಂಗಳಮುಖಿಯರಿಗೆ ಸಮಾಜದಲ್ಲಿ ಒಂದು ಉತ್ತಮ ಸ್ಥಾನಮಾನ ಸಿಗುವಲ್ಲಿ ಸಂಪೂರ್ಣ ಪ್ರಯತ್ನಪಟ್ಟು ತಮ್ಮ ಛಾಪನ್ನು ಎಲ್ಲರ ಮನೆ-ಮನದಲ್ಲಿರುವಂತೆ ಮಾಡಿದ್ದಾರೆ. ●

03 Pg_035-110 TY200028

ಬನ್ನಿ ಒಂದಾಗೋಣ ''ಬನ್ನಿ'' ಮರದಲ್ಲಿ

✍ **ನಾಗರಾಜ ಹೆಚ್. ಕೆ.**, ದ್ವಿತೀಯ ಬಿ.ಎಸ್ಸಿ.

ಮೈಸೂರು ದಸರಾ ಎಂದೊಡನೆ ಮೊದಲು ನೆನೆಯುವುದು ಜಂಬೂ ಸವಾರಿ. ಜಂಬೂ ಸವಾರಿಯನ್ನು ಬಿಟ್ಟರೆ ನಮಗೆ ನೆನಪಾಗುವುದು ಬನ್ನಿ ಪೂಜೆ (ಬನ್ನಿ ಮಂಟಪದ ಪೂಜೆ). ನಮ್ಮೂರು ಮಲೆನಾಡ ಒಂದು ಪುಟ್ಟ ಹಳ್ಳಿ, ಮೈಸೂರಿನಲ್ಲಿ ನಡೆಯುವಷ್ಟು ಅದ್ದೂರಿಯಾಗಿ ನವರಾತ್ರಿ ನಡೆಯದಿದ್ದರೂ, ಒಂದು ಚಿಕ್ಕ ಪಲ್ಲಕ್ಕಿಯಲ್ಲಿ ತಾಯಿ ದುರ್ಗಾಪರಮೇಶ್ವರಿಯ ವಿಗ್ರಹವನ್ನು ನಮ್ಮೂರ ಬನ್ನಿ ಮಂಟಪಕ್ಕೊಯ್ದು ಪೂಜೆ ಮಾಡುವ ಪದ್ಧತಿ ನಮ್ಮ ಊರಿನಲ್ಲಿ ನಡೆದು ಬಂದಿದೆ. ಅದರಂತೆ ಪ್ರತಿವರ್ಷವೂ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತದೆ. ವಿಜಯದಶಮಿಯ ದಿನ ನಮಗೆಲ್ಲಾ ಸಂತೋಷದ ವಿಷಯವೆಂದರೆ ''ಬನ್ನಿ ಕೊಡುವ ಪದ್ಧತಿ''. ನಾವು ಚಿಕ್ಕವರಿದ್ದಾಗ ನಮಗೆ ಅದರ ಅರಿವಿಲ್ಲದಿದ್ದರೂ ಅದು ಒಂದು ಶಾಸ್ತ್ರ ಎಂದು ಭಾವಿಸಿ ನಾವೂ ಎಲ್ಲರಿಗೂ ಬನ್ನಿಯನ್ನು ಕೊಟ್ಟು ಆಶೀರ್ವಾದವನ್ನು ಪಡೆಯುತ್ತಿದ್ದೆವು. ನಮಗೆ ಸ್ವಲ್ಪ ತಿಳುವಳಿಕೆ ಬಂದಾಗ ಬನ್ನಿ ಉತ್ಸವದಲ್ಲಿ, ಬನ್ನಿಯನ್ನು ಕೊಟ್ಟು ''ಬಾಳು ಬಂಗಾರವಾಗಲಿ, ಶುಭವಾಗಲಿ'' ಎಂದು ಹಾರೈಸುವ ಶುಭನುಡಿಗಳು ಕೇಳತೊಡಗಿದವು. ಎಲ್ಲರೂ ಬನ್ನಿಯನ್ನು ಕೊಡುವ-ತೆಗೆದುಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದಾರೆ, ಆದರೆ ನನಗೆ ಆ ಕ್ಷಣದಲ್ಲಿ, ಈ ದಿನ ಯಾಕೆ, ಬನ್ನಿ ಗಿಡದ ಎಲೆಯನ್ನು ಕೊಡಬೇಕು, ಅದರಲ್ಲಿ ಏನಿದೆ, ಎಂದು ತಿಳಿಯುವ ಕುತೂಹಲ ಹೆಚ್ಚಾಯಿತು. ಅಲ್ಲೇ ದೇವಸ್ಥಾನದಲ್ಲೇ ಇದ್ದಂತಹ ನಮ್ಮೂರಿನ ಕೆಲವು ಬುದ್ಧಿವಂತ ಹಿರಿಯರನ್ನು ಕೇಳಿದೆ. ಅವರು ತಮಗೆ ಗೊತ್ತಿದ್ದಷ್ಟನ್ನು ಸರಳವಾಗಿ ಹೇಳಿದರು. ಆದರೆ ಅವರ ಉತ್ತರಗಳು ನನಗೆ ತೃಪ್ತಿಯನ್ನು ನೀಡಲಿಲ್ಲ. ಆದರೆ ಅದನ್ನು ತಿಳಿಯುವ ಕುತೂಹಲ ನನ್ನ ಬಿಡಲಿಲ್ಲ. ಆದರೆ ಆ ಬನ್ನಿ ಮರವು ನೋಡಲು ಒಂದು ಕುರುಚಲು ಗಿಡದಂತೆ, ಕಾಂಡದ ಮೇಲೆ ಮುಳ್ಳುಗಳು, ಚಿಕ್ಕ-ಚಿಕ್ಕ ಎಲೆಗಳು, ಇದರಿಂದ ಯಾವ ಉಪಯೋಗವಿದೆ ಎಂದೆನಿಸಿತು ಮೊದಮೊದಲು, ಆದರೆ ನಿಜಮಾತ್ರವಾಗಿದ್ದು ನಾನು ಎಣಿಸಿದಷ್ಟು ಸುಲಭವಾಗಿರಲಿಲ್ಲ...!

ಬನ್ನಿ ಮರಕ್ಕೆ ಪರ್ಯಾಯವಾದ ಪದವೆಂದರೆ ''ಶಮೀವೃಕ್ಷ'' ಎಂಬ ಮತ್ತೊಂದು ಹೆಸರು ಸಹ ಇದೆ. ಶಮೀವೃಕ್ಷ ಎಂಬ ಹೆಸರು ಬರಲು, ಶಮೀವೃತ ಮತ್ತು ವೃಕ್ಷತ ಎಂಬ ಇಬ್ಬರು ಶಿಷ್ಯಂದಿರ ಕಥೆ ಇದೆ. ಬನ್ನಿ ಮರದ ವೈಜ್ಞಾನಿಕ ಹೆಸರು ಅಕೇಸಿಯಾ ಫಾರ್ನೆಸಿಯಾನ. ಈ ಮರವು ಕಡಿಮೆ ಮಳೆ ಪ್ರದೇಶದಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಈ ಮರವು ಭಾರತ, ಶ್ರೀಲಂಕಾದಲ್ಲಿ ಸಾಮಾನ್ಯವಾಗಿ ಬೆಳೆಯುತ್ತದೆ. ಭಾರತದಲ್ಲಿ ರಾಜಸ್ಥಾನದಲ್ಲಿ ಈ ಮರವು ಹೇರಳವಾಗಿದ್ದು, ರಾಜಸ್ಥಾನದ ರಾಜ್ಯ ಮರ ಎಂದು ಘೋಷಿತವಾಗಿದೆ. ಬನ್ನಿ ಮರವು ಸುಮಾರು 10-12 ಮೀ. ಎತ್ತರದವರೆಗೆ ಬೆಳೆಯುತ್ತವೆ. ಎಲೆಗಳು ಚಿಕ್ಕದಾಗಿದ್ದು ಚಿಕ್ಕ-ಚಿಕ್ಕ ಮುಳ್ಳುಗಳು ಇರುತ್ತವೆ. ಕೆಲವು ಮುಳ್ಳುಗಳು 15 ಸೆಂ.ಮೀ. ಉದ್ದವಾಗಿವೆ, ಕೆಲವು ಮರಗಳಲ್ಲಿ ಮುಳ್ಳುಗಳು ಕಡಿಮೆ ಇರುತ್ತವೆ. ಇದು ಒಂದು ಬರ ನಿರೋಧಕ ಮರವಾಗಿದೆ. ಕೊಂಬೆಗಳು ಚಿಕ್ಕದಾಗಿರುತ್ತವೆ. ವಸಂತ ಕಾಲದಲ್ಲಿ ಬಿಳಿಯ ಹೂಗಳು ಗೊಂಚಲುಗಳ ಹಾಗೇ ಚಿಕ್ಕ ಚಿಕ್ಕದಾಗಿರುತ್ತವೆ. ಮಳೆಗಾಲದಲ್ಲಿ ಕಾಯಿಗಳಾಗುತ್ತವೆ. ಈ ರೀತಿಯಲ್ಲಿ ನೋಡಲು ಸುಂದರವಾದ ರಚನೆಯನ್ನು ಹೊಂದಿದೆ. ಅಲ್ಲದೇ ಹಲವಾರು ಉಪಯೋಗಗಳು ಸಹ ಇವೆ. ಅವುಗಳೆಂದರೆ,

1. ಮರದ ಸಾರವನ್ನು ಕುಷ್ಟ ರೋಗ (ಚರ್ಮ ರೋಗ), ಬಾಲ ರೋಗಗಳು, ವಾತ, ಪಿತ್ತ, ಕಫ, ಕೆಮ್ಮು, ಅತಿಸಾರ ಮತ್ತು ಶ್ವಾಸಕೋಶ ಸಂಬಂಧಿ ರೋಗಗಳ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.
2. ಅನಿರೀಕ್ಷಿತ ಗರ್ಭಪಾತವನ್ನು ತಪ್ಪಿಸಲು ಮರದ ಹೂವುಗಳನ್ನು ಸಕ್ಕರೆ ಕ್ಯಾಂಡಿಯೊಂದಿಗೆ ಮಿಶ್ರಣ ಮಾಡಿ ಕೊಡಲಾಗುತ್ತದೆ.
3. ಮರದ ತೊಗಟೆಯನ್ನು ಸಂಧಿವಾತದಲ್ಲಿ ಬಳಸಲಾಗುತ್ತದೆ.
4. ಮೂಲವ್ಯಾಧಿ (ಪೈಲ್ಸ್) ಚಿಕಿತ್ಸೆಗಾಗಿ ಇದರ ಎಲೆಗಳನ್ನು ಉಪಯೋಗಿಸುವರು.
5. ತೊಗಟೆಯನ್ನು ಪುಡಿ ಮಾಡಿ ಚೇಳು ಕಚ್ಚಿದ ಜಾಗಕ್ಕೆ ಹಚ್ಚಿದರೆ ವಿಷದ ಪ್ರಭಾವ ಕಡಿಮೆಯಾಗುತ್ತದೆ.
6. ತೊಗಟೆಯ ಕಷಾಯವು ಆಮಶಂಕೆ, ಭೇದಿಗೆ ಉತ್ತಮ ಔಷಧಿ.
7. ಬನ್ನಿ ಮರದ ಕೆಳಗೆ ಕುಳಿತು ಧ್ಯಾನ ಮಾಡುವುದರಿಂದ ದೀರ್ಘಕಾಲೀನ ರೋಗಗಳಿದ್ದರೆ ಗುಣವಾಗುತ್ತವೆ.
8. ಪ್ರತಿನಿತ್ಯ ಇದರ ಗಾಳಿಯನ್ನು ಸೇವಿಸುವುದರಿಂದ ಹೃದ್ರೋಗವನ್ನು ತಡೆಯಬಹುದು.

ಇತರೆ ಉಪಯೋಗಗಳು

ಜಾನುವಾರುಗಳಿಗೆ ಮೇವು, ಸೌದೆ, ಫರ್ನಿಚರ್, ಒಣಗಿದ ಕಾಯಿಗಳು, ಇದರ ಕಾಯಿಗಳನ್ನು ಪಲ್ಯದಿಂದ ಹಿಡಿದು ಉಪ್ಪಿನಕಾಯಿಯವರೆಗೆ ಬಳಸಲಾಗುವುದು. ಸಾರಜನಕವನ್ನು ಮಣ್ಣಿಗೆ ನೀಡಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಹೋಮ-ಹವನಗಳಲ್ಲಿ ಬಳಸುವರು.

ಬನ್ನಿ ಮರವು ಹಲವಾರು ಉಪಯೋಗಗಳನ್ನು ಹೊಂದಿರುವಂತೆ, ಹಲವು ಪುರಾಣ ಕಥೆಗಳಲ್ಲಿ ತನ್ನ ಪಾತ್ರವಹಿಸಿದೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅವರ ಆಯುಧಗಳನ್ನು ಇಟ್ಟು ಅಜ್ಞಾತವಾಸ ಮುಗಿದ ನಂತರ ಆ ಆಯುಧಗಳನ್ನು ಯುದ್ಧದಲ್ಲಿ ಬಳಸಲಾಯಿತು, ಆದರೆ ಆ ಆಯುಧಗಳಿಗೆ ಆ ಮರದಲ್ಲಿಟ್ಟಿದ್ದ ಕಾರಣ ತುಕ್ಕು ಸಹ ಹಿಡಿದಿರಲಿಲ್ಲವಂತೆ, ಈ ರೀತಿ ಮಹಾಭಾರತದಲ್ಲಿದೆ. ಮತ್ತೆ ಶ್ರೀರಾಮನು ರಾವಣನ ಸಂಹಾರಕ್ಕೆ ಹೊರಡುವಾಗ ಬನ್ನಿ ಮರಕ್ಕೆ ಪೂಜೆ ಮಾಡಿ ಹೊರಟಿದ್ದನು ಎಂಬ ಪ್ರತೀತಿಗಳು ಇವೆ. ಇದರ ನೆನಪಿಗಾಗಿ ವಿಜಯದಶಮಿಯ ದಿನ ಬನ್ನಿಮರಕ್ಕೆ ವಿಶೇಷವಾದ ಪೂಜೆ ನಡೆಯುತ್ತದೆ. ಹೀಗೆ ಒಬ್ಬರು ಮತ್ತೊಬ್ಬರಿಗೆ ಬನ್ನಿಯನ್ನು ನೀಡಿ ಶುಭದ ಸಂಕೇತವಾಗಿ ''ಬನ್ನಿ ಕೊಡುವ'' ಪದ್ಧತಿ ನಡೆದು ಬಂದಿದೆ. ಹೀಗಾಗಿ ಬನ್ನಿ ಮರವು ಪವಿತ್ರ ಮರ ಎಂಬುದು ನಮ್ಮ ನಂಬಿಕೆ.

ಹೀಗೆ ಪೂಜೆ-ಪುನಸ್ಕಾರ, ನಂಬಿಕೆಗಳಿಂದ ಬನ್ನಿ ಮರವು ಕೆಲವು ಮೂಢನಂಬಿಕೆಯ ಹಾದಿಯಿಂದಾಗಿ ಅಳಿವಿನ ಅಂಚಿನ ಪ್ರವೇಶಕ್ಕೆ ಅವಕಾಶ ನೀಡಿಲ್ಲ. ಎಲ್ಲಾ ಜನರನ್ನು ಸೇರಿಸುವ ಶಕ್ತಿ ಮರಗಳಿಗೆ ಇದೆ. ಉದಾಹರಣೆಗೆ ''ಯಾವುದೇ ದೇವಸ್ಥಾನ, ಚರ್ಚ್, ಮಸೀದಿಗಳಿಗೆ ಅದಕ್ಕೆ ಸಂಬಂಧಿಸಿದ ಧರ್ಮದವರು ಮಾತ್ರ ಹೋಗುತ್ತಾರೆ. ಆದರೆ ಒಂದು ಮರದ ನೆರಳನ್ನು ಆಶ್ರಯಿಸುವಾಗ ಯಾವ ವ್ಯಕ್ತಿಯು ಅದರ ಧರ್ಮ, ಜಾತಿ, ಕುಲವನ್ನು ನೋಡುವುದಿಲ್ಲ''. ಹೀಗೆ ಬನ್ನಿ ಮರ ಮಾತ್ರವಲ್ಲ ತುಂಬಾ ಮರಗಳು ಜನರನ್ನು ತನ್ನಲ್ಲಿಗೆ ಕರೆದುಕೊಳ್ಳುವ ಸಾಂಪ್ರದಾಯಿಕ ಶಕ್ತಿಯನ್ನು ಹೊಂದಿವೆ. ಹೀಗೆ ಎಲ್ಲಾ ಮರವನ್ನು ಉಳಿಸಿದರೆ ಅವು ನಮ್ಮನ್ನು ಉಳಿಸುತ್ತವೆ. ಎಲ್ಲರೂ ಬಂದು ಬನ್ನಿ ಮರದಲ್ಲಿ ಒಂದಾಗುವಂತೆ, ಪ್ರತಿಯೊಂದು ಮರದ ಅಭಿವೃದ್ಧಿಯಲ್ಲಿ ಪಾಲ್ಗೊಂಡರೆ, ಅರಣ್ಯ ನಾಶ ಎಂಬ ಪದವನ್ನು ನಾಶ ಮಾಡಬಹುದು. ಹೀಗೆ ಮರದ ಸಾಲಿನಲ್ಲಿ ಒಂದಾಗೋಣ ಎಂಬುದೇ ನನ್ನದೊಂದು ಚಿಕ್ಕ ಕೋರಿಕೆ. ''ನಾವು ಬೆಳೆಯೋಣ, ಮರವನ್ನು ಬೆಳೆಸೋಣ, ಹಸಿರ ಮಡಿಲನ್ನು ಹಾಸೋಣ''.

●

ಇರುವೆಯೇ ಇದರ ಆಹಾರ !

✍ **ಪ್ರಮೋದ್ ಆರ್. ನಾಯಕ್,** ದ್ವಿತೀಯ ಪಿ.ಯು.ಸಿ.

ತಲೆಬರಹ ಕಂಡು ವಿಸ್ಮಯಗೊಂಡಿರಾ! ಹೌದು ಇದು ಒಂದು ಸೌಮ್ಯ ಸ್ವಭಾವದ ವಿಚಿತ್ರ ಪ್ರಾಣಿ, ಇದು ತಿನ್ನುವುದು ಇರುವೆಗಳನ್ನು ಮಾತ್ರ. ಏಕೆಂದರೆ ಇದಕ್ಕೆ ಹಲ್ಲೇ ಇಲ್ಲ. ಘನ ಆಹಾರ ತಿನ್ನಲು ಆಗುವುದಿಲ್ಲ. ಆದ್ದರಿಂದಲೇ ಈ ಪ್ರಾಣಿಗೆ ''ಆ್ಯಂಟ್ ಈಟರ್'' ಅಂದರೆ ''ಇರುವೆ ಭಕ್ಷಕ'' ಎಂದು ಹೆಸರು ಬಂದಿರುವುದು. ಇದರ ವೈಜ್ಞಾನಿಕ ಹೆಸರು "Vermilingua".

ಇರುವೆಗಳನ್ನು ಹೇಗೆ ತಿನ್ನುತ್ತದೆ ಗೊತ್ತ?

ಎರಡು ಅಡಿ ಉದ್ದನೆಯ ನಾಲಿಗೆ ಇದಕ್ಕಿದೆ. ಎಲ್ಲಿಯಾದರೂ ಇರುವೆಗಳ ಗೂಡು ಕಂಡರೆ ಸಾಕು, ಗಬಕ್ ಎಂದು ನಾಲಿಗೆಯನ್ನು ತೂರಿಸಿಯೇ ಬಿಡುತ್ತದೆ. ಗೂಡಿಗೆ ಒಮ್ಮೆ ನಾಲಿಗೆ ತೂರಿತೆಂದರೆ ಅದರೊಳಗಿರುವ ಬಹುತೇಕ ಇರುವೆಗಳು ಖತಂ! ಅಂದಹಾಗೆ, ಇದಕ್ಕೆ ಏನಿಲ್ಲವೆಂದರೂ ದಿನಕ್ಕೆ 35 ರಿಂದ 40 ಸಾವಿರ ಇರುವೆಗಳು ಬೇಕಂತೆ. ಇದು ತನ್ನ ನಾಲಿಗೆಯನ್ನು ನಿಮಿಷಕ್ಕೆ 150-160 ಬಾರಿ ಚಪ್ಪರಿಸುತ್ತದೆ. ಇರುವೆಗಳೇನು ಕಮ್ಮಿ ಬುದ್ಧಿವಂತ ಅಲ್ಲವಲ್ಲ! ಏನಾದರೂ ಬೇರೆ ವಸ್ತು ತನ್ನ ಬಳಿ ಬರುತ್ತಿದೆ ಎಂದು ಗೊತ್ತಾದ ತಕ್ಷಣ ಅವು ಓಡಲು ಶುರು ಮಾಡುತ್ತವೆಯಲ್ಲವೆ? ಇರುವೆ ಭಕ್ಷಕಗಳಿಗೂ ಅದೇ ಸಮಸ್ಯೆ. ಇವು ತಮ್ಮ ಉದ್ದನೆಯ ನಾಲಿಗೆಯನ್ನೇನೋ ಗೂಡಿನೊಳಕ್ಕೆ ಚಾಚುತ್ತವೆ ಸರಿ. ಆದರೆ ಅಷ್ಟರಲ್ಲಿ ಅಲ್ಲಿರುವ ಇರುವೆಗಳೆಲ್ಲಾ ದಿಕ್ಕಾಪಾಲಾಗಿ ಓಡಿಬಿಡುತ್ತವಲ್ಲ. ಅದಕ್ಕೆ ಈ ಇರುವೆ ಭಕ್ಷಕ ''ಪಾಲಿಗೆ ಬಂದದ್ದು ಪಂಚಾಮೃತ'' ಎಂದುಕೊಂಡು ಸಿಕ್ಕ ಇರುವೆಗಳನ್ನಷ್ಟೇ ಚಪ್ಪರಿಸುತ್ತದೆ.

ಗೂಡು ಬಗೆದು ಕೆಲಸ

ನೀವು ಗೆದ್ದಲುಗಳ ಗೂಡನ್ನು ನೋಡಿದ್ದೀರಲ್ಲವೆ? ಈ ಗೂಡು ಬೇರಾವುದೂ ಅಲ್ಲ. ಹಾವುಗಳಿರುವ ಹುತ್ತಗಳೇ. ಆ ಹುತ್ತಗಳನ್ನು ಕಟ್ಟುವುದು ಗೆದ್ದಲುಗಳು. ಆ ಗೂಡುಗಳಲ್ಲಿ ಗೆದ್ದಲು ಇರುವುದನ್ನು ಕನ್‌ಫರ್ಮ್ ಮಾಡಿಕೊಂಡ ನಂತರ ಇರುವೆ ಭಕ್ಷಕಗಳು ತನ್ನ ಹರಿತವಾದ 4 ಇಂಚಿನ ಪಂಜಿನಿಂದ ಹುತ್ತವನ್ನು ಅಗೆಯುತ್ತವೆ. ನಂತರ ಅದರಲ್ಲಿರುವ ಇರುವೆಗಳನ್ನು ಗುಳುಂ ಮಾಡುತ್ತವೆ. ಮರದ ಪೊಟರೆಗಳಲ್ಲಿ ಇರುವೆಗಳು ಇದ್ದರೆ ಇವುಗಳಿಗೆ ಅಷ್ಟೊಂದು ಸಮಸ್ಯೆಗಳಾಗುವುದಿಲ್ಲ. ಇವು ಎಷ್ಟು ಬೇಗ ತಿನ್ನುವ ಕೆಲಸ ಪೂರೈಸಬೇಕು ಎಂದರೆ, ಒಂದು ಸೆಕೆಂಡ್ ಅತ್ತಿತ್ತ ಮಾಡಿದರೂ

ಇರುವೆಗಳು ನಾಲಗೆಯನ್ನೇ ಕಚ್ಚಿಹಾಕಿ ಬಿಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಕ್ಷಣಾರ್ಧದಲ್ಲಿ ಸಿಕ್ಕಷ್ಟನ್ನು ತಿನ್ನುತ್ತವೆ. ಇನ್ನೊಂದು ವಿಷಯ ಎಂದರೆ, ಇವು ಪೂರ್ತಿ ಗೂಡನ್ನು ಹಾಳು ಮಾಡುವುದಿಲ್ಲ. ಗೂಡು ಹಾಳಾಗಿ ಬಿಟ್ಟರೆ ಮತ್ತೆ ಇರುವೆಗಳು ಬರುವುದಿಲ್ಲವಲ್ಲ! ಅದಕ್ಕಾಗಿ ಇರುವೆಗಳ ಇರುವಿಕೆಯ ಸ್ಥಳಗಳನ್ನು ತನ್ನ ವ್ಯಾಪ್ತಿಯೊಳಕ್ಕೆ ಗುರುತಿಸಿಕೊಂಡಿರುತ್ತವೆ ಈ ಜಾಣ ಭಕ್ಷಕಗಳು.

ದೇಹ ರಚನೆ ಹೀಗಿದೆ

ಇರುವೆ ಭಕ್ಷಕಗಳು, ಮಧ್ಯ ಮತ್ತು ದಕ್ಷಿಣ ಅಮೆರಿಕಾದಲ್ಲಿ ಕಂಡುಬರುತ್ತವೆ. ಇದರ ಉದ್ದ 5 ರಿಂದ 7 ಅಡಿ, ತಲೆ ಚಿಕ್ಕದಿರುತ್ತದೆ. ಕಣ್ಣುಗಳು ಕೂಡ ಚಿಕ್ಕವು. ಬಾಲ ಎರಡು ಅಡಿಗಳಷ್ಟಿರುತ್ತದೆ. ಕಿವಿ ಗೋಲಾಕಾರವಾಗಿರುತ್ತದೆ. ಮೈತುಂಬಾ ದಟ್ಟವಾದ ಕೂದಲು, ತಿನ್ನುವುದು ಬಿಟ್ಟರೆ ಮಲಗುವುದೇ ಇವುಗಳ ಕೆಲಸ. ಆದ್ದರಿಂದ ಸೋಮಾರಿ ಪ್ರಾಣಿ ಎಂದೂ ಇದನ್ನು ಕರೆಯಲಾಗುತ್ತದೆ. ಪ್ರತಿದಿನ ಏನಿಲ್ಲವೆಂದರೂ 15 ಗಂಟೆ ನಿದ್ದೆ ಮಾಡುತ್ತವೆ. ತಾಯಿ ತನ್ನ ಮಗುವನ್ನು ಒಂದು ವರ್ಷ ಬೆನ್ನಿನ ಮೇಲೆ ಹೊತ್ತು ಸಾಕುತ್ತದೆ. ತನಗೆ ಅಪಾಯ ಎದುರಾದರೆ ಮಾತ್ರ ಪ್ರತಿರೋಧ ತೋರುತ್ತವೆ ಬಿಟ್ಟರೆ ಉಳಿದ ಸಮಯದಲ್ಲಿ ಇದರಿಂದ ಯಾವುದೇ ಹಾನಿ ಇಲ್ಲ. ಇದರ ಆಯಸ್ಸು ಸುಮಾರು 25 ವರ್ಷ. ನಾಲ್ಕು ಪ್ರಕಾರಗಳ ಆ್ಯಂಟ್ ಈಟರ್ ಇದ್ದು, ಚಿಕ್ಕ ಗಾತ್ರದವು ಮರವನ್ನೂ ಏರಬಲ್ಲವು.

ಕಣ್ಣು ಕಾಣಿಸುವುದಿಲ್ಲ

ಈ ಪ್ರಾಣಿಗಳಿಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ. ಆದ್ದರಿಂದ ಮೂತಿಯ ಮೂಲಕ ವಾಸನೆಯ ಜಾಡು ಹಿಡಿದು ಇರುವೆ ಗೂಡಿರುವ ಜಾಗವನ್ನು ಹುಡುಕಬೇಕು. ಆದ್ದರಿಂದಲೇ ಅವು ತನ್ನ ಮೂತಿಯನ್ನು ಯಾವಾಗಲೂ ನೆಲದತ್ತಲೇ ಇಟ್ಟು ಓಡಾಡುತ್ತವೆ. ಅಷ್ಟಕ್ಕೂ, ಇದರ ಮೂಗು ಮನುಷ್ಯರಿಗಿಂತಲೂ 40 ಪಟ್ಟು ಅಧಿಕ ವಾಸನೆಯನ್ನು ಗ್ರಹಿಸುವ ಸಾಮರ್ಥ್ಯ ಹೊಂದಿದೆ. ಇದು ಉತ್ತಮ ಈಜುಗಾರ ಕೂಡ.

●

ಜೀನ್ ಎಡಿಟಿಂಗ್ ಜೀವ ವಿರೋಧಿಯೋ, ಜೀವ ಪರವೋ...?

✍ **ನಾಗರಾಜ ಹೆಚ್. ಕೆ.**, ದ್ವಿತೀಯ ಬಿ.ಎಸ್ಸಿ.

ಪ್ರಪಂಚದಲ್ಲಿರುವ ಎಲ್ಲಾ ಜೀವರಾಶಿಗಳಿಗೆ ಹೋಲಿಸಿದರೆ ಮಾನವನು ಎಲ್ಲಾ ಜೀವಿಗಳಿಗಿಂತಲೂ ಹೆಚ್ಚು ಬುದ್ಧಿವಂತ ಮತ್ತು ಕ್ರಿಯಾಶೀಲವಾದ ಜೀವಿ. ಇತ್ತೀಚಿನ ದಿನಗಳಲ್ಲಿ ಮಾನವನು ಹಲವಾರು ತಂತ್ರಜ್ಞಾನವನ್ನು ಉಪಯೋಗಿಸಿ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆದಿದ್ದಾನೆ. ಆದರೆ ಮಾನವ ತಾನು ಕೃತಕವಾಗಿ ನಿರ್ಮಿಸಿದ (ಮಾನವ ನಿರ್ಮಿತ) ವಸ್ತುಗಳು ಮಾತ್ರ ಒಂದಕ್ಕೊಂದು ಸಮವಾಗಿ, ಸಮವಾದ ಆಕಾರ, ಗಾತ್ರ, ಗುಣವನ್ನು ಹೊಂದಿದೆ. ಆದರೆ ಒಬ್ಬ ವ್ಯಕ್ತಿಗಿಂತ ಮತ್ತೊಬ್ಬ ಭಿನ್ನವಾಗಿಯೇ ಇದ್ದಾನೆ. ಎಂತಹ ಸಯಾಮಿ ಅವಳಿಗಳಲ್ಲಾದರೂ ಒಂದಿಷ್ಟು ರೂಪ ಬದಲಾವಣೆ ಇದೆ. ಹೀಗೆ ಮಾನವನಲ್ಲಿನ ಬದಲಾವಣೆಗೆ ಕಾರಣಗಳೆಂದರೆ ಜೀವಕೋಶಗಳಲ್ಲಿನ ವಂಶವಾಹಿನಿ (ಜೀನ್). ಈ ಜೀನ್ ಗಳು ಪೋಷಕರಿಂದ ಅವರ ಮುಂದಿನ ಪೀಳಿಗೆಗೆ ವರ್ಗಾವಣೆ ಆಗುತ್ತವೆ. ಈ ಜೀನ್‌ಗಳ ಕುರಿತ ಅಧ್ಯಯನವೇ ಅನುವಂಶೀಯತೆ (Genetics). ಆದರೆ ಇತ್ತೀಚಿನ ದಿನಗಳಲ್ಲಿ ಮಾನವ ಹಲವಾರು ತಂತ್ರಜ್ಞಾನವನ್ನು ಬಳಸಿ ಒಳ್ಳೆಯ ಗುಣವನ್ನು ಹೊಂದಿರುವ ಜೀನ್ ಗಳು ಮಾತ್ರ ಮುಂದಿನ ಪೀಳಿಗೆಗೆ ವರ್ಗಾವಣೆಯಾಗುವಂತೆ ಅಥವಾ ತನಗೆ ಬೇಕಾದ ಉತ್ತಮ ಅಂಶವನ್ನು ಹೊಂದಿರುವ ಜೀನ್‌ಗಳನ್ನು ವರ್ಗಾಯಿಸುವಂತಹ ಕ್ರಿಯೆಯೆ ಜೀನ್ ಎಡಿಟಿಂಗ್ ಅಥವಾ ಜೀನೋಮ್ ಎಡಿಟಿಂಗ್.

ಮಾನವನ ಜೀವಕೋಶದಲ್ಲಿ 23 ಜೊತೆ ವರ್ಣತಂತುಗಳಿರುತ್ತವೆ. ಅವು ವಿಶಿಷ್ಟ ರಾಸಾಯನಿಕಗಳ ಮಿಶ್ರಣ. ಅವುಗಳೆಂದರೆ ಅಡಿಸಿನ್, ಥೈಮಿನ್, ಗ್ವಾನಿನ್ ಮತ್ತು ಸೈಟೋಸಿನ್. ಈ ವರ್ಣತಂತುಗಳಲ್ಲಿ (ಕ್ರೋಮೋಸೋಮ್) ನಮ್ಮ ದೇಹದ ರಚನೆಯ ಸೂತ್ರ ಅಡಗಿದೆ. ಪ್ರತಿ ಜೀವಕೋಶದಲ್ಲಿ DNA (De-Oxyribose Nucleic Acid) ಇರುತ್ತದೆ. ಆ ಡಿಎನ್‌ಎಗಳ ಜೋಡಣೆಯಲ್ಲಿನ ವಿಭಿನ್ನತೆಯಿಂದಾಗಿಯೇ ಆಯಾ ಜೀವಿಗಳು ಅದರ ಬಣ್ಣ, ಆಕಾರ, ಸ್ವಭಾವಗಳನ್ನು ಪಡೆದಿವೆ. ಈ ವರ್ಣತಂತುಗಳಲ್ಲಿ ಜೀವಿಯ ಶರೀರಕ್ಕೆ ಸಂಬಂಧಿಸಿದ ಅಗಾಧ ಮಾಹಿತಿಯಿರುತ್ತದೆ.

03 Pg_035-110 TY200028

ಜೀನ್ ಎಡಿಟಿಂಗ್ ಎಂಬುದು ವಿಜ್ಞಾನಿಗಳಿಗೆ ಜೀವಿಗಳ ಡಿಎನ್‌ಎ ಬದಲಿಸುವ ಸಾಮರ್ಥ್ಯವನ್ನು ನೀಡುವ ತಂತ್ರಗಳ ಒಂದು ಗುಂಪು. ಈ ತಂತ್ರಜ್ಞಾನಗಳು ಜೀನೋಮ್‌ಗಳನ್ನು ನಿರ್ದಿಷ್ಟ ವಂಶವಾಹಿ ವಸ್ತುಗಳನ್ನು ಸೇರಿಸುವುದು, ತೆಗೆದುಹಾಕುವುದು ಅಥವಾ ಬದಲಾಯಿಸುವಿಕೆಯನ್ನು ಅನುಮತಿಸುತ್ತವೆ. ಜೀನ್ ಎಡಿಟಿಂಗ್‌ನ್ನು ಮೊದಲು ಪ್ರನಾಳಶಿಶು ಕ್ರಿಯೆಯಲ್ಲಿ ಮಾಡಿ, ಯಶಸ್ಸನ್ನು ಕಾಣಲಾಯಿತು. ಪ್ರನಾಳಶಿಶು ಅಂದರೆ ಗಂಡಸಿನ ವೀರ್ಯಾಣು ಮತ್ತು ಹೆಣ್ಣಿನ ಅಂಡಾಣುಗಳನ್ನು ಪ್ರನಾಳಗಳಲ್ಲಿ ಸೇರಿಸಿ ಉತ್ತಮವಾದ ಪ್ರಯೋಗಾಲಯಗಳಲ್ಲಿ ಬೆಳೆಸಲಾಗುತ್ತದೆ. ಆ ಸಂದರ್ಭದಲ್ಲಿ ದುರ್ಬಲ ಅಥವಾ ಕೆಟ್ಟ ಗುಣಗಳನ್ನು ಹೊಂದಿರುವ ಜೀನ್‌ಗಳನ್ನು ತೆಗೆದು ಉತ್ತಮವಾದ ಜೀನ್‌ಗಳನ್ನು ಅಂಟಿಸಲಾಗುತ್ತದೆ. ಇದರಿಂದಾಗಿ ನಮ್ಮಿಚ್ಛೆಯಂತೆಯೇ ಮಗುವು ಜನಿಸುವ ಪ್ರಮಾಣ ಹೆಚ್ಚಿರುತ್ತದೆ. ಆದರೆ ಇದರಿಂದಾಗಿ ಕೆಲವು ತೊಂದರೆಗಳು ಸಹ ಉಂಟಾದವು, ಕೆಲವು ಅನುಕೂಲಗಳಾದವು. ಅವುಗಳೆಂದರೆ,

ಕ್ರಿಸ್ಪರ್ ತಂತ್ರಜ್ಞಾನವು ಜೀನ್ ಎಡಿಟಿಂಗ್ ಕಾರ್ಯವನ್ನು ಮುಂದುವರಿಸಲು ಸಹಾಯಕಾರಿಯಾಯಿತು. ಮೊದಲು ಜೀನ್ ಎಡಿಟಿಂಗ್‌ನಿಂದ ಹುಟ್ಟಿದ ಜೀವಿಯೆಂದರೆ ಇಲಿ, ನಂತರ ಅದನ್ನು ಇತರ ಪ್ರಯೋಗಗಳಿಗೆ ಬಳಸಲಾಯಿತು. ನಂತರ ಟೊಮ್ಯಾಟೋ, ಹಂದಿ ಮುಂತಾದ ಜೀವಿಗಳ ಮೇಲೆ ಪ್ರಯೋಗ ಮಾಡಲಾಯಿತು. ಈ ಕ್ರಿಯೆಯಲ್ಲಿ ಜೀವಿಯ ದೇಹದಲ್ಲಿ ಉದಾಹರಣೆಗೆ ಕ್ಯಾನ್ಸರ್ ರೋಗದ ವಿರುದ್ಧ ಸೋಲುವ ಗುಟ್ಟು ಸೂಚನೆಗಳ ಬದಲಾಗಿ ಗೆಲ್ಲುವ ಸೂಚನಾ ಸಾಲುಗಳನ್ನು ಸೇರಿಸಿದರೆ ಕ್ಯಾನ್ಸರ್ ಬರದಂತೆ ತಡೆಯಬಹುದು. ಚೀನಾದ ವಿಜ್ಞಾನಿ ಜೀಯನ್ ಕ್ವಾಯಿರವರು ಮೊದಲ ಬಾರಿಗೆ ಮನುಷ್ಯನ ಎಳೆ ಬಸಿರು (ಭ್ರೂಣ)ಗಳ ಮೇಲೆ, ಆ ಭ್ರೂಣವು ಏಡ್ಸ್ ರೋಗವನ್ನು ತಡೆಗಟ್ಟುವ ಸೂಚನಾ ಸಾಲುಗಳನ್ನು ಅಳವಡಿಸಿ ಜೀನ್ ಎಡಿಟಿಂಗ್ ಮಾಡಿ ಯಶಸ್ವಿಯಾಗಿದ್ದರು. ಈ ರೀತಿಯಾಗಿ ನಮಗೆ ಬೇಕಾದ ಬಣ್ಣ ಅಥವಾ ಬುದ್ಧಿವಂತಿಕೆಯ ಸೂಚನೆಗಳನ್ನು ಅಳವಡಿಸಿ ನಮಗೆ ಬೇಕಾದಂತಹ ಮಗುವನ್ನು ಜೀನ್ ಎಡಿಟಿಂಗ್‌ನಿಂದ ಪಡೆಯಬಹುದಾಯಿತು.

ಆದರೆ, ಯಾವುದೇ ಒಂದು ತಂತ್ರಜ್ಞಾನವು ಎಷ್ಟೇ ಉಪಕಾರಿಯಾಗಿದ್ದರೂ ಅದು ಮಾನವನ ಅತೀ ಬುದ್ಧಿವಂತಿಕೆ ಅಥವಾ ಸ್ವಾರ್ಥದಿಂದಾಗಿ ಅದರಲ್ಲಿ ಅಪಾಯಗಳು ಇರುತ್ತವೆ. ಇದರಂತೆ ಜೀನ್ ಎಡಿಟಿಂಗ್‌ನಲ್ಲಿ ಸಹ ಕೆಲವು ಜೀವ ವಿರೋಧಿ ಗಳಿದ್ದವು. ಉದಾಹರಣೆಗೆ ಜೀನ್ ಎಡಿಟಿಂಗ್ ಮಾಡುವಾಗ ತಪ್ಪಾಗಿ ಬೇರೊಂದು ಸೂಚನಾ ಸಾಲು ಕತ್ತರಿಯಾಯಿತೆಂದರೆ ಅದು ಮುಂದಿನ ಪೀಳಿಗೆಗೆ ಹರಿದುಬರುತ್ತದೆ. ಇದರಿಂದ ಮಿಲಿಯನ್ ವರ್ಷಗಳಿಂದ ವಾತಾವರಣಕ್ಕೆ ಹೊಂದಿಕೊಂಡಿರುವ ಗುಣಗಳು ಇಲ್ಲವಾಗಬಹುದು, ಅಥವಾ ಯಾವುದೋ ಒಂದು ಅಂಗವೇ ಮಾಯವಾಗಿ ಹೋಗಬಹುದು, ಅಥವಾ ತಪ್ಪಾಗಿ ಬೇರೆ ಸೂಚನಾ ಸಾಲುಗಳನ್ನು ಹೊಂದಿ ಆ ಜೀವಿಯು ಮನುಷ್ಯ ರೂಪವನ್ನೇ ಬದಲಾಯಿಸಬಹುದು, ಅಥವಾ ಎಲ್ಲಾ ಮನುಷ್ಯರಲ್ಲಿಯೂ ಎಲ್ಲಾ ಜೀವಿಗಳಲ್ಲಿಯೂ ಒಂದೇ ರೀತಿಯ ಸೂಚನಾ ಸಾಲುಗಳು ಸೇರಿ ಎಲ್ಲಾ ಮಾನವರು ಒಂದೇ ತರಹದ ಜೀವ ರಚನೆಯನ್ನು ಹೊಂದಿದರೆ ಯಾರಲ್ಲಿಯೂ ವ್ಯತ್ಯಾಸವಿಲ್ಲದೇ ಆಗಬಹುದು, ಇದರಿಂದಾಗಿ ಮಾನವನಲ್ಲಿಯೇ ಹಲವು ಗೊಂದಲಗಳುಂಟಾಗುವ ಹೆಚ್ಚಿನ ಸಾಧ್ಯತೆಯಿದೆ.

ಹೀಗೆ ಜೀನ್ ಎಡಿಟಿಂಗ್‌ನಲ್ಲಿ ಹಲವಾರು ಉತ್ತಮವಾಗಿದ್ದರೂ, ಅದರಿಂದ ಕೆಲವು ತೊಂದರೆಗಳು ಉಂಟಾಗುವ ಸಾಧ್ಯತೆಗಳು ಹೆಚ್ಚಿವೆ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಜೀನ್ ಎಡಿಟಿಂಗ್ ಒಂದು ಉತ್ತಮ ತಂತ್ರಜ್ಞಾನವಾದರೂ ಸಹ, ಕೆಲವು ತೊಂದರೆಗಳನ್ನುಂಟು ಮಾಡುವ ಸಾಧ್ಯತೆಗಳಿವೆ. ಉತ್ತಮ ಹಾಗೂ ರೋಗನಿರೋಧಕ ಶಕ್ತಿಯನ್ನು ನೀಡುವ ಸೂಚನಾ ಸಾಲುಗಳನ್ನು ಸೇರಿಸಿ ಯಾವುದೇ ಕಾಯಿಲೆಯೇ ಇಲ್ಲದಂತೆ ಮಾಡಬಹುದು. ಆದರೆ ಅದರಿಂದಾಗಿ ಮಾನವ ಸಂಕುಲ ನಾಶವಾಗುವ ಸಾಧ್ಯತೆ ಸಹ ಇದೆ. ಹೀಗೆ ಜೀನ್ ಎಡಿಟಿಂಗ್‌ನ ಕುರಿತಾದ ಗೊಂದಲವು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಹೀಗೆ ಜೀನ್ ಎಡಿಟಿಂಗ್ ಜೀವ ಸಹಕಾರಿಯಾದರೆ ಉತ್ತಮ, ಜೀವ ವಿರೋಧಿಯಾದರೆ ತೊಂದರೆಯೇ ಎಂಬ ನಿರ್ಧಾರ ತೆಗೆದುಕೊಳ್ಳುವುದು ಉತ್ತಮವಷ್ಟೇ. ಈ ತಂತ್ರಜ್ಞಾನವು ಮುಂದಿನ ದಿನಗಳಲ್ಲಿ ಉತ್ತಮವಾಗಿ ಬಳಕೆಯಾಗಬೇಕೆಂಬುದು ನನ್ನ ಒಂದು ಅಭಿಪ್ರಾಯ, ಅದು ಸಹ ಗೊಂದಲದಲ್ಲಿ... ●

ವನ್ಯಜೀವಿ ಪತ್ರಿಕೋದ್ಯಮ: ನಮ್ಮ ದೃಷ್ಟಿಕೋನ ಬದಲಾಯಿಸಿದ ಕಾರ್ಯಕ್ರಮ

✍ **ನವ್ಯಶ್ರೀ ಶೆಟ್ಟಿ**, ಪ್ರಥಮ ಬಿ.ಎ.

ಸದಾ ಹೊಸತನದ ಕಾರ್ಯಕ್ರಮಗಳ ಮೂಲಕ ಜನರಿಗೆ ಒಂದಿಷ್ಟು ಸಂದೇಶ ನೀಡುವ ಕಾರ್ಯವನ್ನು ನಮ್ಮ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಮಾಡುತ್ತಾ ಬಂದಿದೆ. ಅದರಂತೆ ಕಳೆದ ವರ್ಷದ ಆಗಸ್ಟ್ ತಿಂಗಳಲ್ಲಿ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ಫೋಟೋಗ್ರಫಿ ದಿನ ಆಚರಿಸುವ ಸಲುವಾಗಿ ಒಂದು ದಿನದ ವಿಶೇಷ ಕಾರ್ಯಕ್ರಮ ಆಚರಿಸಬೇಕು ಎಂದು ಯೋಚಿಸುತ್ತಿರುವ ಸಮಯದಲ್ಲಿ ಬಂದ ಆಲೋಚನೆಯೇ ಈ ವಿಚಾರ ಸಂಕಿರಣ.

ಎಂಜಿಎಂ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಹಾಗೂ ಉಡುಪಿಯ ಅರಣ್ಯ ಇಲಾಖೆ, ನಿರ್ಮಿತಿ ಕೇಂದ್ರ ಉಡುಪಿಯ ಸಹಯೋಗದಲ್ಲಿ ''ವನ್ಯಜೀವಿ **ಪ**ತ್ರಿಕೋದ್ಯಮ ಮತ್ತು ಅರಣ್ಯ ಸಂರಕ್ಷಣೆ'' ಎನ್ನುವ ರಾಜ್ಯ ಮಟ್ಟದ ವಿಚಾರಣಾ ಸಂಕಿರಣ ಕಾರ್ಯಕ್ರಮವನ್ನು ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಆಯೋಜನೆ ಮಾಡಲಾಗಿತ್ತು. ಗ್ರೀನ್ ಆಸ್ಕರ್ ಪ್ರಶಸ್ತಿ ಪಡೆದ ಕೃಪಾಕರ ಸೇನಾನಿ ಅವರನ್ನು ಈ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಆಗಸ್ಟ್ 30ರಂದು ನಡೆದ ಈ ಕಾರ್ಯಕ್ರಮದಲ್ಲಿ ಬೇರೆ ಬೇರೆ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಜಿ. ಜಗದೀಶ್ ಅವರ ಉದ್ಘಾಟನೆಯೊಂದಿಗೆ ಕಾಲೇಜಿನ ಪ್ರಾಂಶುಪಾಲರಾದ ಎಂ. ಜಿ. ವಿಜಯ್ ಸರ್ ಅವರ ಅಧ್ಯಕ್ಷತೆಯೊಂದಿಗೆ ಉಡುಪಿಯ ಅರಣ್ಯ ಇಲಾಖೆ ಹಾಗೂ ನಿರ್ಮಿತಿ ಕೇಂದ್ರದ ವಿವಿಧ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಬೆಳಗಿನ ಕಾರ್ಯಕ್ರಮದ ವೇಳೆಯಲ್ಲಿ ಕೃಪಾಕರ ಸೇನಾನಿ ಅವರು ಮಾತನಾಡಿ ಅರಣ್ಯ ವನ್ಯ ಜೀವಿಗಳು, ಪತ್ರಿಕೋದ್ಯಮ – ಹೀಗೆ ಹಲವು ವಿಷಯದ ಕುರಿತು ವಿದ್ಯಾರ್ಥಿಗಳೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದರು.

ನಂತರದ ಸಮಯದಲ್ಲಿ ಕೃಪಾಕರ ಸೇನಾನಿ ಅವರಿಗೆ ಗ್ರೀನ್ ಆಸ್ಕರ್ ಪ್ರಶಸ್ತಿ ತಂದು ಕೊಟ್ಟ ಸೀಳು ನಾಯಿಗಳ ಕುರಿತಾದ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಗಿತ್ತು.

ಇನ್ನೂ ಮಧ್ಯಾಹ್ನದ ಕಾರ್ಯಕ್ರಮ ಎಲ್ಲರಿಗೂ ಕುತೂಹಲದ ಕಾರ್ಯಕ್ರಮವಾಗಿತ್ತು. ಅದು ಕೃಪಾಕರ ಸೇನಾನಿ ಅವರ ಜೀವನಗಾಥೆ ತಿಳಿಸುವ ಕಾರ್ಯಕ್ರಮ. ಕೃಪಾಕರ ಸೇನಾನಿ ಎರಡೂ ಒಂದೇ ಹೆಸರು ಎಂದು ಎಲ್ಲರೂ ತಿಳಿದಿದ್ದರು. ಅವರಿಬ್ಬರೂ ಸ್ನೇಹಿತರು ಎಂದು ಹಲವರಿಗೆ ಗೊತ್ತಿರಲಿಲ್ಲ. ಆದರೆ ಈ ಕಾರ್ಯಕ್ರಮದ ಮೂಲಕ ಅದೆಷ್ಟೋ ಜನರಿಗೆ ಅವರಿಬ್ಬರೂ ಸ್ನೇಹಿತರು, ಇಬ್ಬರ ನಡುವಿನ ಒಡನಾಟ, ಅವರ ಜೀವನದ ಒಂದಷ್ಟು ರೋಮಾಂಚನಕಾರಿ ಅಂಶ ತಿಳಿಯುವಂತೆ ಆಗಿತ್ತು.

ತೃತೀಯ ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿ ಶ್ರೇಯಸ್ ಕೋಟ್ಯಾನ್ ಇವರ ನೇತೃತ್ವದಲ್ಲಿ ಕೃಪಾಕರ, ಸೇನಾನಿ ಅವರ ಜೀವನ ಕಥೆ ತಿಳಿಯುವ ವಿಭಿನ್ನ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ವೀರಪ್ಪನ್ ಸೆರೆವಾಸದ ಆ 14 ದಿನ ಕಾಡಿನ ಪ್ರಾಣಿ ಪಕ್ಷಿಗಳೊಂದಿಗಿನ ಅವರ ಒಡನಾಟ – ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ತಿಳಿಯುವಂತೆ ಆಗಿತ್ತು. ಈ ಮೂಲಕ ಎಲ್ಲೋ ನಮ್ಮ ಮನಸ್ಸಿನ ಮೂಲೆಯಲ್ಲಿ ವನ್ಯ ಜೀವಿಗಳ ಬಗ್ಗೆ ತಿಳಿದುಕೊಳ್ಳಲು ಒಂದಷ್ಟು ಆಸೆಗಳು ಹುಟ್ಟಿಕೊಂಡವು.

ವಿಚಾರ ಸಂಕಿರಣದ ಕೊನೆಯ ಕಾರ್ಯಕ್ರಮ ಎನ್ನುವಂತೆ ರವೀಂದ್ರ ಮಂಟಪದ ಹೊರಗಡೆ ಕರಾವಳಿಯ ಸಮಸ್ಯೆಗಳ

03 Pg_035-110 TY200028

ಕುರಿತು ವಿವಿಧ ಕ್ಷೇತ್ರಗಳ ಪರಿಣಿತರೊಂದಿಗೆ ವಿಶೇಷ ಚರ್ಚಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಒಟ್ಟಾರೆ ಆ ಒಂದು ದಿನದ ಕಾರ್ಯಕ್ರಮ ಒಂದಷ್ಟು ಸಂದೇಶಗಳೊಂದಿಗೆ ಹೊಸತನದಿಂದ ಕೂಡಿತ್ತು. ಆ ನಂತರ ನಮ್ಮ ಕಾಲೇಜಿನ ಹೆಮ್ಮೆಯ ನಾಟಕ ತಂಡದಿಂದ 'ಪಂಚವಟಿ' ನಾಟಕ ಪ್ರದರ್ಶಿಸಲಾಗಿತ್ತು. ಕಾರ್ಯಕ್ರಮದ ನಂತರ ಪ್ರತಿಯೊಬ್ಬರಲ್ಲೂ ಸಾಕಷ್ಟು ಬದಲಾವಣೆ ಆಗಿದೆ. ಕಾಡು, ವನ್ಯಜೀವಿಗಳ ಬಗ್ಗೆಯ ನಮ್ಮ ದೃಷ್ಟಿಕೋನ ಬದಲಾಗಿದೆ.

ಕಾರ್ಯಕ್ರಮ ಕಳೆದು ಹಲವು ತಿಂಗಳುಗಳೇ ಕಳೆದಿದೆ. ಆದರೂ ಕೂಡ ಇಂದಿಗೂ ಕಾರ್ಯಕ್ರಮದ ಮೂಲಕ ಕಲಿತ ವಿಚಾರಗಳನ್ನು ಮರೆತಿಲ್ಲ. ವಿಚಾರ ಸಂಕಿರಣ ಕಾರ್ಯಕ್ರಮದ ನಂತರ ಕೃಪಾಕರ ಸೇನಾನಿ ಅವರು ಎರಡು ಬಾರಿ ನಮ್ಮ ಕಾಲೇಜಿಗೆ ಭೇಟಿ ನೀಡಿ ನಮ್ಮೊಂದಿಗೆ ಬಹು ಸಲುಗೆಯಿಂದ ಮಾತನಾಡಿದ್ದರು. ಅವರಿಗೂ ನಮ್ಮ ಕಾಲೇಜಿನ ಕಾರ್ಯಕ್ರಮಗಳು ಖುಷಿ ಕೊಟ್ಟಿದೆ. ಅವರು ತೀರಾ ಆತ್ಮೀಯರು ಅನ್ನುವ ಭಾವನೆಗಳು ವಿದ್ಯಾರ್ಥಿಗಳಿಗೆ ಮೂಡಿದೆ. ಅದೆಷ್ಟೋ ವಿದ್ಯಾರ್ಥಿಗಳಿಗೆ ವನ್ಯಜೀವಿ ಪತ್ರಿಕೋದ್ಯಮ, ಫೋಟೋಗ್ರಫಿ ಬಗ್ಗೆ ಒಲವು ಮೂಡಿದೆ. ಸದಾ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಬಹು ಪ್ರೀತಿಯಿಂದ ಉತ್ತರಿಸುತ್ತಾರೆ.

ಇವರ ಜೊತೆಗೆ ಇಂದಿಗೂ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಸದಾ ಸಂಪರ್ಕದಲ್ಲಿದ್ದಾರೆ.

ಸದಾ ಹೊಸತನವನ್ನು ಕಲಿಯಲು ಹಲವಾರು ಅವಕಾಶ ನೀಡುವ ನಮ್ಮ ಕಾಲೇಜಿನಲ್ಲಿ ಈ ಕಾರ್ಯಕ್ರಮದ ಮೂಲಕ ನಮ್ಮ ನಿತ್ಯದ ಬದುಕಿನಲ್ಲಿ ಇರುವ ಹಲವಾರು ವಿಷಯಗಳು ಕುತೂಹಲದಿಂದ ಕೌತುಕಗಳಿಂದ ನೋಡುವಂತಾಗಿದ್ದಂತೂ ನಿಜ. ●

ನಿರ್ಬಂಧನ

ನಿರ್ಬಂಧನವೆಂಬ ಬಂಧನದ ಕಿಡಿ
ವಿಫಲಗೊಳ್ಳುವುದು ಮನಸ್ಸಿನ ಹಾದಿ

ಯಾರೂ ಇಲ್ಲ ಹೀಗೆ ನಿನ್ನ ನೋಡಿ
ನಗುಮುಖದ ಮನ ಸಾಕು, ಸಿಗುವುದಿನಿಗೆ ಜೋಡಿ

ಕಲುಕಬೇಡ ಮನವ ಕೀಳಬೇಡ ಹೂವ
ಕಿತ್ತರೂ ಮನದಲ್ಲಿಟ್ಟುಕೋ, ಹೃದಯದ ಬುಟ್ಟಿಯಲ್ಲಿ

ಈ ನಿರ್ಬಂಧನದ ಬಂಧವೋ? ಅಥವಾ
ಬಂಧನದ ನಿರ್ಬಂಧವೋ? ಆಯ್ಕೆ?!

ನಿರ್ಬಂಧನವೆಂಬ ಬಂಧನದ ಕಿಡಿ
ವಿಫಲಗೊಳ್ಳುವುದು ಮನಸ್ಸಿನ ಹಾದಿ

✍ **ಪಲ್ಲವಿ ಕೊಡಗು**, ಪ್ರಥಮ ಪಿ.ಯು.ಸಿ.

ಕರೆ ತಂದ ಕೆರೆದಂಡೆಯ ಕೇದಿಗೆ

✍ **ನಾಗರಾಜ ಹೆಚ್. ಕೆ.**, ದ್ವಿತೀಯ ಬಿ.ಎಸ್ಸಿ.

ಮಲೆನಾಡು, ಮುಂಜಾನೆಯ ಮುಸುಕು, ಅಲ್ಲಲ್ಲಿ ಸೂರ್ಯರಶ್ಮಿಗಳು ಮಂದಲೆಯ ಮೇಲೆ ಬಿದ್ದು ರಾರಾಜಿಸುತ್ತಿವೆ. ಮನೆಯಲ್ಲಿ ಅವರವರ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ಮನೆಯ ಆವರಣದಲ್ಲಿ ಪ್ರತಿನಿತ್ಯಕ್ಕಿಂತ ಏನೋ ಒಂದು ಸೊಬಗು ಹೆಚ್ಚಾಗಿ ತೋರುತ್ತಿದೆ. ಗದ್ದೆ, ತೋಟದ ಮೂಲಕ ಹಾದು ಮನೆಯ ಕಡೆ ಒಂದು ಸುವಾಸನೆ ಬೀರುತ್ತಿತ್ತು. ಅಲ್ಲಲ್ಲಿ ಹಕ್ಕಿಗಳ ಕಲರವ ಕೇಳುತ್ತಿತ್ತು. ಮನೆಯ ಸಮೀಪದಲ್ಲಿದ್ದ ನನಗೆ ಸಹ ಆ ಪರಿಮಳ ಬಂದು ತಾಗಿತು. ಆ ಪರಿಮಳ ಎಲ್ಲರಿಗೂ ನಿನ್ನ ಕೆಲಸವನ್ನು ನಿಲ್ಲಿಸಿ ನನ್ನ ಬಳಿ ಬಾ ಎನ್ನುವಂತೆ ಇತ್ತು. ಅದರಂತೆಯೇ ನಾನು ಅದನ್ನು ಹುಡುಕಲು ಹೊರಟೆ, ತೋಟವನ್ನು ದಾಟಿ ಗದ್ದೆಯ ಬಳಿ ಹೋಗುತ್ತಿದ್ದಂತೆ ಆ ಪರಿಮಳ ಇನ್ನೂ ಹೆಚ್ಚಾಯಿತು, ಗದ್ದೆಯ ಪಕ್ಕದಲ್ಲಿದ್ದ ಕೆರೆಯ ಮಾರ್ಗವಾಗಿ ಪರಿಮಳ ಬರುತ್ತಿದೆ ಎಂದು ತಿಳಿದು ಹೊರಟೆ, ಕೆರೆದಂಡೆಯಲ್ಲಿದ್ದ ಕೇದಿಗೆ ಗಿಡದಲ್ಲಿ ಒಂದು ಹೂವಾಗಿತ್ತು. ಅದರಿಂದ ಈ ಪರಿಮಳ ಎಲ್ಲೆಡೆ ಹರಡಿತ್ತು ಎಂಬುದು ಗೊತ್ತಾಯಿತು. ನಾನು ಕೇದಿಗೆ ಗಿಡವನ್ನು ನೋಡಿದ್ದೆ. ಆದರೆ ಅದರ ಹೂವನ್ನು ನೋಡಿರಲಿಲ್ಲ, ಅದರ ಸುವಾಸನೆಯನ್ನು ಸವಿಯಲು ತುಂಬಾ ಮಧುರವಾಗಿತ್ತು. ಆ ಕೇದಿಗೆಯ ಹೂ ನೋಡಲು ಅಷ್ಟೇನೂ ಆಕರ್ಷಕವಾಗಿಲ್ಲದಿದ್ದರೂ ಎತ್ತರದ ಒಂದು ಕೊಂಬೆಯಲ್ಲಿ ಹಸಿರು ಎಲೆಗಳ ನಡುವೆ ಬಿಳಿಯ ಬಣ್ಣದಲ್ಲಿ ತ್ರಿಕೋನಾಕಾರಕ್ಕೆ ಇತ್ತು. ಆ ಹೂವಿನ ಪರಿಮಳ ನನ್ನನ್ನು ಮೂಕವಿಸ್ಮಿತನಾಗುವಂತೆ ಮಾಡಿತು. ಮತ್ತಷ್ಟು ಕುತೂಹಲ ಹೆಚ್ಚಾಗಿ ಇನ್ನೂ ಹೂಗಳಿವೆಯೋ ಎಂದು ಪರೀಕ್ಷಿಸಿದೆ. ಆದರೆ ಇರಲಿಲ್ಲ. ನನಗೆ ಅದರ ಆ ಸೊಬಗನ್ನು ಎಷ್ಟು ಬಾರಿ ಮನೆಯಲ್ಲಿ ಬಂದು ಹೇಳಿದರೂ ಸಾಲದು, ಮನೆಯಲ್ಲಿ ಕೇದಿಗೆಯ ಕುರಿತು ಕೇಳಿದೆ, ಅವರಿಗೆ ಗೊತ್ತಿರುವಷ್ಟನ್ನು ಅವರು ಹೇಳಿದರು, ಆದರೆ ನನಗೆ ಅದರ ಬಗ್ಗೆ ತಿಳಿಯುವ ಕುತೂಹಲ ಹೆಚ್ಚಾಯಿತು, ಅದನ್ನು ಕುರಿತು ಹೊರಟೆ...

ಕೇದಿಗೆಯು ಸಾಮಾನ್ಯವಾಗಿ ಹಳ್ಳ-ಕೊಳ್ಳ, ಹೊಳೆ-ಕೆರೆ ಮುಂತಾದ ಜೌಗು ಪ್ರದೇಶದಲ್ಲಿ ಬೆಳೆಯುವ ಗಿಡ. ಕೇದಿಗೆಯ ವೈಜ್ಞಾನಿಕ ಹೆಸರು ಪೆಂಡಾನಸ್ ಒಡೊರಾಟಿನೆಮಸ್. ಕೇದಿಗೆಯಂತೆಯೇ ಇರುವ ಇನ್ನೊಂದು ಗಿಡ ಮುಂಡಿಗೆ (ಮುಂಡೇಯಿ). ಕೇದಿಗೆಯು ಸುಮಾರು 10 ಮೀ. ಎತ್ತರದವರೆಗೆ ಬೆಳೆಯುತ್ತದೆ. ಜೌಗು ಪ್ರದೇಶದಲ್ಲಿ ತನ್ನ ಬೇರುಗಳನ್ನು ಸರಾಗವಾಗಿ ಬೆಳೆಯಲು ಅನುಕೂಲವಾಗುತ್ತದೆ. ಬೇರುಗಳು ಪ್ರಾರಂಭದಲ್ಲಿ ಬೆಳವಣಿಗೆ ನಿಧಾನವಾಗಿದ್ದರೂ ನಂತರ ಉತ್ತಮ ಬೆಳವಣಿಗೆ ಕಾಣುತ್ತದೆ. ಗಿಡದಲ್ಲಿನ ಕೊಂಬೆಗಳು ನೇರವಾಗಿ ಬೆಳೆಯಬಲ್ಲವು. ಆದರೆ ಹೆಚ್ಚಿನ ಭಾಗ ಅವು ಒಂದಕ್ಕೊಂದು ಲಂಬಕೋನದಲ್ಲಿ ಬೆಳೆಯುತ್ತವೆ. ಕಾಂಡ ಮತ್ತು ಬೇರುಗಳು ಹೆಚ್ಚು ನಾರುಗಳನ್ನು ಹೊಂದಿದೆ. ಕಾಂಡದ ತುದಿಯಲ್ಲಿ ಉದ್ದವಾದ ಎಲೆಗಳ ಕಿರೀಟ. ಎಲೆಗಳಲ್ಲಿ ತುದಿಯಲ್ಲಿ ಮತ್ತು ಮಧ್ಯದಲ್ಲಿ ಚಿಕ್ಕ-ಚಿಕ್ಕ ಮುಳ್ಳುಗಳಿವೆ. ಕೇದಿಗೆಯ ಹೂವೆಂದು ಬಳಸುವುದು ನಿಜವಾದ ಹೂವನ್ನಲ್ಲ. ಹೂವು ಬಲು ಕಿರಿದು. ಹೂವಿಗೆ ಪಕಳೆ (ದಳ)ಗಳಿಲ್ಲ. ಹೂವಿನ ರಕ್ಷಣೆಗೆಂದು ಅಂಟಿಕೊಂಡಿರುವ ಎಲೆಯಾಕಾರದ ರಚನೆಯೇ ಹೂ ಎಂಬ ಅಂಕಿತ ಇದೆ. ಕೇದಿಗೆಯಲ್ಲಿ ಪ್ರಮುಖವಾಗಿ ಎರಡು ಬಗೆಯ ಹೂಗಳಿವೆ. ದೊಡ್ಡ-ದೊಡ್ಡ ಬಿಳಿಯ ಹೂ ಮತ್ತೊಂದು ಚಿಕ್ಕ ಹೂ ಬಿಡುವ ಬಂಗಾರ ಬಣ್ಣದ್ದು. ಕೇದಿಗೆಯ ಹೂವು ನೋಡಲು ಬುಡದಲ್ಲಿ ಅಗಲವಾಗಿದ್ದು ಹಾಗೂ ಉದ್ದದಲ್ಲಿ ಹಿರಿದಾಗಿದ್ದು ಕ್ರಮೇಣ ಕಿರಿದಾಗಿರುತ್ತದೆ. ನೋಡಲು ದೇವಸ್ಥಾನದ ಗೋಪುರಕ್ಕೆ ಏರಿಸಿದ ಕಳಸದಂತೆ. ಹೂ ವರ್ಷದ ಕೆಲವು ದಿನಗಳಲ್ಲಿ ಕಾಣಬಹುದು ಹೆಚ್ಚಾಗಿ ವಸಂತ ಕಾಲದಲ್ಲಿ, ಸಂತಾನೋತ್ಪತ್ತಿ ರೆಂಬೆಯೊಂದನ್ನು ನೆಟ್ಟರೆ ಸಾಕು.

ಕೇದಿಗೆ ಹೂವಿಗೆ ಹಾಗೂ ನಾಗರಹಾವಿಗೆ ವಿಶೇಷವಾದ ನಂಟು ಇದೆ ಎಂಬ ಪ್ರತೀತಿ ಇದೆ. ಕಾರಣ ಮಳೆಗಾಲದ ದಿನಗಳಲ್ಲಿ ನಡೆಯುವ ನಾಗರಪಂಚಮಿಯ ಹಬ್ಬದ ದಿನಗಳಲ್ಲಿ ಈ ಹೂಗಳು ಸಿಗುತ್ತವೆ. ಅಲ್ಲದೇ ಹೂವಿನ ಪರಿಮಳಕ್ಕೆ ಮನಸೋತು ಹಾವು ಬರುವ ಕಾರಣವೂ ಇರಬಹುದು.

ಕೇದಿಗೆಯ ಸುಗಂಧ ತೈಲವೊಂದನ್ನು ಭಟ್ಟಿ ಇಳಿಸಬಹುದು. ಇದು ನಿಸರ್ಗಸಿದ್ಧ ಸುಗಂಧ ತೈಲವಾಗಿ ಸುಗಂಧ ವಸ್ತು ಕೈಗಾರಿಕೆಯಲ್ಲಿ ಬಲು ಬೇಡಿಕೆ ಇದೆ. ಮಹಿಳೆಯರಿಗಂತೂ ಕೇದಿಗೆಯ ಹೂ ಮುಡಿಯುವ ಸಂಭ್ರಮ ಹೇಳತೀರದು. ಜನಪದ ಕಾವ್ಯದಲ್ಲಿ ಕೇದಿಗೆ ವರ್ಣನೆ ಧಾರಾಳ. ಹಲವು ಆಭರಣ, ಯಕ್ಷಗಾನ ಪ್ರಸಾಧನ ವಸ್ತುಗಳಿಗೆ ಕೇದಿಗೆ ಹೂ ಸ್ಫೂರ್ತಿ ನೀಡಿದೆ. ಹೂವಿನಿಂದ ಪಡೆದ ಸುಗಂಧ ತೈಲವನ್ನು ಕೇಶ ತೈಲ, ಸುಗಂಧದ್ರವ್ಯ (ಸೆಂಟು), ಲೋಶನ್, ತಂಬಾಕು ಸುಗಂಧಗೊಳಿಸಲು ಬಳಸುತ್ತಾರೆ. ಎಳೆಯ ಹೂಎಲೆಗಳನ್ನು ಬೇಯಿಸಿ ತಿನ್ನುತ್ತಾರೆ. ಎಲೆಯಲ್ಲಿ ಹಲವಾರು ಉಪಯೋಗಗಳಿವೆ, ಅವುಗಳೆಂದರೆ ಗುಡಿಸಲ ಚಾವಣಿಗೆ, ಬಡವರ ಜೀವನಾಧಾರವಾದ ಚಾಪೆ ಹೆಣೆಯಲು, ಬುಟ್ಟಿನೇಯ್ಗೆಗೆ, ಕಡುಬಿನ

03 Pg_035-110 TY200028

ಕೌಳಿಗೆಯಲ್ಲಿ ಬಳಸುತ್ತಾರೆ. ಕೆಲವು ಪ್ರಭೇದಗಳನ್ನು ಅಲಂಕಾರಿಕ ಸಸ್ಯವಾಗಿ ಬಳಸುತ್ತಾರೆ. ಕೆಲವು ಔಷಧೀಯ ಅಂಶಗಳಿವೆ.

ಔಷಧೀಯ ಗುಣಗಳು

1. ಹೂವಿನ ಪನ್ನೀರು – ನೇತ್ರರೋಗ, ಕಣ್ಣಿಗೆ ಹಿತಕರ.
2. ಹೂವಿನ ಅತ್ತರು – ಉಲ್ಲಾಸಕಾರಿ, ಹೊಟ್ಟೆನೋವು ಶಾಮಕ.
3. ಗಾಳಿ ಬೇರು ಕಷಾಯ – ಕಾಮಾಲೆ (ಜಾಂಡೀಸ್), ಮೂತ್ರದ ತೊಂದರೆ, ನರಬಿಗಿತ, ವಾತರೋಗ.
4. ಹೂವಿನ ಭಟ್ಟಿ ಇಳಿದ ನೀರು – ಜ್ವರ ತಾಪವಿಳಿಸಲು, ಬೆವರಿಳಿಸಲು (ಕೇತಕ್ಯಾರ್ಕ)
5. ಕೇತಕೀ ತೈಲ ಮಾಲೀಸು – ತಲೆನೋವು, ಕೀಲುನೋವು, ಗಂಟುನೋವು.
6. ಎಲೆಯ ಕಷಾಯ – ಚರ್ಮರೋಗ.
7. ಎಲೆ ಸುಟ್ಟ ಭಸ್ಮ ಸಿದ್ಧ ಕ್ಷಾರ ಸೇವನೆ – ಗುಲ್ಮ ರೋಗ (ಹೈಪರ್ ಅಸಿಡಿಟಿ).
8. ಹೂವಿನ ರಸ ಸೇವನೆ – ಕೀಲುಗಂಟಿನ ವಾಯು, ಮೂತ್ರರೋಗ.
9. ಎಲೆರಸ ಸೇವನೆ – ಹೃದಯ ಮತ್ತು ಮೆದುಳಿನ ರೋಗ.

ಕೇದಿಗೆಯು ಹಿಂದಿನ ಕಾಲದಲ್ಲಿ ಹೇರಳವಾಗಿ ಬೆಳೆಯುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅದರ ಬೆಳವಣಿಗೆ ಇಳಿಮುಖವಾಗಿದೆ. ಇಂತಹ ಹಲವಾರು ಉತ್ತಮ ಗುಣ ಮತ್ತು ಉಪಯೋಗವಿರುವ ಕೇದಿಗೆಯು ಕಣ್ಮರೆಯಾಗದಂತೆ ಕಾಯಬೇಕಿದೆ. ವರ್ಣಮಾಲೆಯ ಅಕ್ಷರಗಳು ಸೇರಿ ಉತ್ತಮ ವಾಕ್ಯವಾಗುವಂತೆ, ನಮ್ಮ ಪರಿಸರದಲ್ಲಿರುವ ಒಂದೊಂದು ಮರಗಳಿಗೂ ತಮ್ಮದೇ ಆದ ವೈಶಿಷ್ಟ್ಯ ಗುಣಗಳಿವೆ. ಹೆಚ್ಚಿನ ಮರಗಳಿಗೆ ಔಷಧೀಯ ಗುಣಗಳಿವೆ, ಇಂತಹ ಮರಗಳನ್ನು/ಪರಿಸರವನ್ನು ನಮ್ಮ ಮಕ್ಕಳಂತೆ ಪೋಷಣೆ ಮಾಡಿ ಉಳಿಸಿಕೊಳ್ಳಬೇಕಾಗಿದೆ. ●

ಕನಸೆಂಬ ಕುದುರೆ

ಕನಸೆಂಬ ಕುದುರೆಯನ್ನೇರಿ ಹೊರಟ ಕಾಯಕ್ಕೆ
ಕಾರೆಂಬ ಕಾರ್ಮೋಡ ಕಾಲ್ಚಾಚಿ ಬೀಳಿಸಿದೆ, ಕುರುಡಾಗಿಸಿ ಕಣ್ಣನ್ನು
ಕುರುಡಾದ ಕಣ್ಣಿಂದ ಬಿಕ್ಕಿ ಅಳಬೇಕೆನಿಸಿದರೂ...
ಕಾರಣ ಕಂಡೂ ಕಾಣುತ್ತಿಲ್ಲ ಮಸುಕಾದ ಮಬ್ಬಿನಲಿ
ಕುತಂತ್ರಕ್ಕೆ ಕಾಲೆಡವಿ ಬಿದ್ದ ಕುದುರೆಯನ್ನು
ಕ್ಷಣ ಕ್ಷಣವೂ ಮೇಲೆತ್ತುವ ಕಾತರ
ಆದರೇನು ಮಾಡಲಿ?
ಕಣ್ಣೆಂಬ ಕಡಲಿನಿಂದ ಇಳಿಯುವ ಕಣ್ಣೀರಿನಲ್ಲಿ
ಕೊಚ್ಚಿ ಹೋಗುತ್ತಿದೆ ಕನಸೆಂಬ ಕುದುರೆ ಕಡಲ್ಗುದುರೆಯಾಗಿ...

❖ ❖ ❖

ಮುಖವಾಡಗಳ ನಡುವೆ...

ಭಾವನೆಗಳ ದಂಡಿನ ಹೊಡೆತಕ್ಕೆ ತಟಸ್ಥವಾಗಿದೆ ಮನಸ್ಸು
ಕಾಣದ ಹಾದಿಯಲ್ಲಿ ಕರಾಳ ಮುಖವಾಡಗಳ ನಡುವೆ
ಹುಡುಕಲೂ ಕಷ್ಟವಾಗಿದೆ ನನ್ನವರ್ಯಾರು ಪರರಾರು...
ಮಾಯಾವಿಗಳ ಮಧ್ಯೆ ಮನದಾನಂದ ಮರೀಚಿಕೆಯಾದರೂ
ಮಸುಕಾದ ಹಾದಿಯಲ್ಲಿ ಸಂತೋಷ ಹುಡುಕುವ ಹುಚ್ಚಾಸೆ
ಸಂತಸ ಸಿಗಬಹುದೆಂಬ ಆಮಿಷಕ್ಕೆ ಸಿಲುಕಿ
ಮತ್ತೆ ಮರುಗದಿರಲಿ ಮನ ಕೊರಗಿ
ಮುಖವಾಡ ಧರಿಸದಿರಲಿ ನಾನೆಂದೂ ಬದಲಾಗಿ.

✍ **ಭೂಮಿಕ ಎಂ.ಯು.**, ದ್ವಿತೀಯ ಪಿ.ಯು.ಸಿ.

03 Pg_035-110 TY200028

ರಕ್ತದ ಕ್ಯಾನ್ಸರ್ [ಲ್ಯೂಕೇಮಿಯಾ]

✍ **ಭಾಗ್ಯಶ್ರೀ ಡಿ.ಬಿ.,** ದ್ವಿತೀಯ ಬಿ.ಎ.

ಕ್ಯಾನ್ಸರ್ ಎಂದಾಗ ಹೌಹಾರದೆ ಇರುವ ಮನುಷ್ಯರೇ ಇಲ್ಲ. ಅದರಲ್ಲೂ ರಕ್ತದ ಕ್ಯಾನ್ಸರ್ ಎಂದರೆ ಹೆಚ್ಚಿನವರು ಹೆಸರು ಕೇಳಿದೊಡನೆಯೇ ಅರ್ಧ ಸತ್ತಂತಾಗುತ್ತಾರೆ. ಕ್ಯಾನ್ಸರ್‌ನಲ್ಲಿ ನೂರಾರು ವಿಧಗಳಿದ್ದು ಅದು ಚರ್ಮ, ಎಲುಬು, ಮೆದುಳಿನ ಜೀವಕೋಶಗಳು, ರಕ್ತದ ಕಣಗಳು, ಹೀಗೆ ಎಲ್ಲ ಬಗೆಯ ಜೀವಕೋಶಗಳಿಗೆ ಕ್ಯಾನ್ಸರ್ ಬರುತ್ತದೆ. ಆದರೆ ರಕ್ತದ ಕ್ಯಾನ್ಸರ್ ಎಂದರೆ ಎಲ್ಲ ರೀತಿಯ ಕ್ಯಾನ್ಸರ್ ರೋಗಗಳಿಗೆ ಅಧಿಪತಿ ಅಥವಾ ರಕ್ಕಸ ಕ್ಯಾನ್ಸರ್ ಎಂಬ ಕುಖ್ಯಾತಿಯನ್ನು ಪಡೆದಿದೆ. ಹಿಂದಿನ ಹಳೆಯ ಹಿಂದಿ ಸಿನೆಮಾಗಳಲ್ಲಿ ಹೆಚ್ಚಿನ ಹೀರೋಗಳು ರಕ್ತದ ಕ್ಯಾನ್ಸರ್ ಬಂದು ರಕ್ತ ಕಾರುತ್ತಾ ಸಾಯುವ ದೃಶ್ಯದಿಂದಾಗಿಯೂ ಜನರಲ್ಲಿ ರಕ್ತದ ಕ್ಯಾನ್ಸರ್ ಬಗ್ಗೆ ಒಂದು ರೀತಿಯ ಅವ್ಯಕ್ತ ಭಯ ಮತ್ತು ಅಂಜಿಕೆ ಯಾವತ್ತೂ ಇದೆ. ಹೀಗಾಗಿ ರಕ್ತದ ಕ್ಯಾನ್ಸರ್ ಎಂದ ಕೂಡಲೇ ವ್ಯಕ್ತಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿ ಹೋಗಿ ಭಯಾನಕ ಸಂಕಟವನ್ನು ಅನುಭವಿಸುವುದಂತೂ ಸತ್ಯವಾದ ಮಾತು.

ಏನಿದು ರಕ್ತದ ಕ್ಯಾನ್ಸರ್

ರಕ್ತದಲ್ಲಿ ಬಿಳಿ ರಕ್ತ ಕಣ, ಕೆಂಪು ರಕ್ತ ಕಣ, ರಕ್ತ ತಟ್ಟೆಗಳು ಮತ್ತು ಪ್ಲಾಸ್ಮಾ ಇರುತ್ತದೆ. ರಕ್ತದ ಕ್ಯಾನ್ಸರ್ ಬಂದಾಗ ರಕ್ತದಲ್ಲಿ ಅತೀ ಹೆಚ್ಚು ಅಸಹಜ, ಅಪಕ್ವ ಬಿಳಿ ರಕ್ತ ಕಣಗಳು ಇರುತ್ತದೆ. ಸಾಮಾನ್ಯವಾಗಿ ಒಬ್ಬ ಮನುಷ್ಯನ ಒಂದು ಮೈಕ್ರೊಲೀಟರ್‌ನಲ್ಲಿ 5,000 ದಿಂದ 10,000 ವರೆಗೆ ಬಿಳಿ ರಕ್ತ ಕಣ ಇರುತ್ತದೆ. ರಕ್ತದ ಕ್ಯಾನ್ಸರ್ ಬಂದಾಗ ಇದರ ಸಂಖ್ಯೆ 50,000 ದಿಂದ 75,000 ವರೆಗೂ ಇರುತ್ತದೆ. ಸಾಮಾನ್ಯವಾಗಿ ಬಿಳಿ ರಕ್ತ ಕಣಗಳು ಎಲುಬಿನ ಒಳಭಾಗದ ಮೂಳೆಯ ತಿರುಳಿ [ಅಸ್ಥಿಮಜ್ಜೆ] ನಲ್ಲಿ ಉತ್ಪತ್ತಿಯಾಗುತ್ತದೆ. ಅತಿಯಾದ, ಅಪಕ್ವವಾದ ಬಿಳಿ ರಕ್ತ ಕಣಗಳು ಉತ್ಪತ್ತಿಯಾದಾಗ, ಅವು ತನ್ನ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುತ್ತದೆ. ಬಿಳಿ ರಕ್ತ ಕಣಗಳು ನಮ್ಮ ದೇಹದ ಸೈನಿಕರು ಇದ್ದಂತೆ. ದೇಹಕ್ಕೆ ಸೋಂಕು ತಗುಲದಂತೆ ತಡೆಯುವಲ್ಲಿ ಬಹಳ ಪರಿಣಾಮಕಾರಿ ಪಾತ್ರವಹಿಸುತ್ತದೆ. ಅಪಕ್ವ ಬಿಳಿ ರಕ್ತ ಕಣಗಳಿಂದ ದೇಹಕ್ಕೆ ಯಾವುದೇ ರಕ್ಷಣೆ ಸಿಗದೆ ದೇಹ ಪದೇ ಪದೇ ಸೋಂಕಿಗೆ ತುತ್ತಾಗುತ್ತದೆ. ಅದೇ ರೀತಿ ಮೂಳೆ ತಿರುಳಿನಲ್ಲಿ ಉತ್ಪತ್ತಿಯಾಗಬೇಕಾದ ಕೆಂಪು ರಕ್ತ ಕಣಗಳು ಮತ್ತು ರಕ್ತ ತಟ್ಟೆಗಳ ಉತ್ಪತ್ತಿಗೂ ಧಕ್ಕೆ ಉಂಟಾಗಿ ಅವುಗಳ ಸಂಖ್ಯೆಯೂ ಕ್ಷೀಣಿಸುತ್ತದೆ. ಇದೇ ಕಾರಣದಿಂದ ದೇಹದ ಅಂಗಾಂಗಗಳಿಗೆ ಆಮ್ಲಜನಕ ಸರಬರಾಜು ವ್ಯತ್ಯಯವಾಗಿ ಉಸಿರಾಟದ ತೊಂದರೆ ಉಂಟಾಗುತ್ತದೆ. ರಕ್ತಹೀನತೆಯಿಂದಾಗಿ ಉಸಿರಾಟ ಮಾಡಲು ಕಷ್ಟವಾಗುತ್ತದೆ. ರಕ್ತ ತಟ್ಟೆಗಳ ಸಂಖ್ಯೆ ಕ್ಷೀಣಿಸುವುದರಿಂದ ರಕ್ತ ಹೆಪ್ಪುಗಟ್ಟುವ ಪ್ರಕ್ರಿಯೆಗೆ ಪೂರಕವಾದ ವಾತಾವರಣ ಇರುವುದಿಲ್ಲ. ಇದೇ ಕಾರಣದಿಂದ ಸಣ್ಣ ಗಾಯವಾದರೂ ದೇಹದಲ್ಲಿ ರಕ್ತ ಒಸರುತ್ತದೆ ಮತ್ತು ರಕ್ತ ಹೆಪ್ಪುಗಟ್ಟದೇ ಇರಬಹುದು. ಬಾಯಿಯಲ್ಲಿ, ಒಸಡಿಯಲ್ಲಿ ತನ್ನಿಂತಾನೇ ರಕ್ತ ಒಸರುತ್ತದೆ.

ರೋಗದ ಲಕ್ಷಣಗಳು ಏನು ?

1) ಪದೇ ಪದೇ ಕಾಡುವ ಜ್ವರ, ಯಾವುದೇ ಕಾರಣವಿಲ್ಲದೆ ವಾರಗಟ್ಟಲೆ ಜ್ವರ ಕಾಡುತ್ತದೆ ಮತ್ತು ಆ್ಯಂಟಿಬಯೋಟಿಕ್‌ಗಳಿಗೆ ಸರಿಯಾಗಿ ಸ್ಪಂದಿಸದೇ ಇರಬಹುದು.
2) ವಿಪರೀತ ಆಯಾಸ, ಸುಸ್ತು, ಉಸಿರಾಟದ ತೊಂದರೆ, ಯಾವುದೇ ಕೆಲಸದಲ್ಲಿ ಉತ್ಸಾಹ ಇಲ್ಲದಿರುವುದು.
3) ದೇಹದ ತೂಕ ಕಾರಣವಿಲ್ಲದೆ ಕಡಿಮೆಯಾಗುವುದು. ಕಾರಣವಿಲ್ಲದೆ ಬೆವರುವುದು, ರಾತ್ರಿ ಹೊತ್ತು ವಿಪರೀತ ಬೆವರುವಿಕೆ.
4) ಊಟ ಸೇರದಿರುವುದು, ಹಸಿವಿಲ್ಲದಿರುವುದು, ಬಾಯಿರುಚಿ ಇಲ್ಲದಿರುವುದು.
5) ಕಾರಣವಿಲ್ಲದೆ ಒಸಡಿನಲ್ಲಿ ರಕ್ತ ಒಸರುವುದು, ದೇಹಕ್ಕೆ ಗಾಯವಾದಾಗ ರಕ್ತ ಹೆಪ್ಪುಗಟ್ಟದೇ ಇರುವುದು.
6) ಪದೇ ಪದೇ ದೇಹಕ್ಕೆ ಸೋಂಕು ತಗಲುತ್ತದೆ. ಕೆಮ್ಮು, ಶೀತ, ನೆಗಡಿ, ಜ್ವರ ವಾರಗಟ್ಟಲೆ ಬರುತ್ತದೆ. ಯಾವುದೇ ಔಷಧಿಗೂ ಈ ಸೋಂಕು ಸ್ಪಂದಿಸುವುದಿಲ್ಲ.
7) ಗಂಟುನೋವು, ಎಲುಬುಗಳಲ್ಲಿ ನೋವು, ಮೈಯಲ್ಲಿ ತುರಿಕೆ, ಚರ್ಮದಲ್ಲಿ ಕಪ್ಪು ಕಪ್ಪು ಚುಕ್ಕೆಗಳು ಕಾರಣವಿಲ್ಲದೆ ಕಾಣಿಸಿಕೊಳ್ಳುತ್ತದೆ.

ಕಾರಣಗಳು ಏನು ?

ಸಾಮಾನ್ಯವಾಗಿ 55ರ ವಯಸ್ಸಿನ ನಂತರ ರಕ್ತದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತದೆ. ಆದರೆ 15 ವರ್ಷದ ಒಳಗಿನ ಮಕ್ಕಳಲ್ಲಿಯೂ ಹೆಚ್ಚಾಗಿ ಕಂಡು ಬರುತ್ತದೆ. ರಕ್ತದ ಕ್ಯಾನ್ಸರ್‌ಗಳಲ್ಲಿ ನಾಲ್ಕು ವಿವಿಧ ಬಗೆಗಳಿದ್ದು ಒಂದು ತೀವ್ರತರವಾದ ಬಗೆಯಾಗಿದ್ದು ಉಳಿದ ಮೂರು

03 Pg_035-110 TY200028

ಅಷ್ಟೇನೂ ತೀವ್ರತರವಾಗಿರದು. ತೀವ್ರತರವಾದ ರಕ್ತದ ಕ್ಯಾನ್ಸರ್ ಅತೀ ಬೇಗನೆ ಕೆರಳುತ್ತದೆ ಮತ್ತು ಮಾರಣಾಂತಿಕವಾಗಿ ಕಾಡುತ್ತದೆ. ಬಾಕಿ ಉಳಿದ ಮೂರು ಬಗೆಯ ರಕ್ತದ ಕ್ಯಾನ್ಸರ್ ನಿಧಾನವಾಗಿ ಕಾಡುತ್ತದೆ ಮತ್ತು ಚಿಕಿತ್ಸೆಗೆ ಸ್ಪಂದಿಸುತ್ತದೆ. ಈ ರಕ್ತದ ಕ್ಯಾನ್ಸರ್ ಯಾರಿಗೆ ಬೇಕಾದರೂ, ಯಾವಾಗ ಬೇಕಾದರೂ ಬರಬಹುದು ಎಂದು ಸಂಶೋಧನೆಗಳಿಂದ ತಿಳಿದು ಬಂದಿದೆ. ದೇಹದಲ್ಲಿನ ಜೀವಕೋಶಗಳು ವಿಭಜನೆಯಾದಾಗ ವರ್ಣತಂತುವಿನ [ಜೀನ್] ಒಳಗಿನ ಡಿ.ಎನ್.ಎ. [D.N.A.] ನಲ್ಲಿ ಆಗಿಂದಾಗ್ಗೆ ಆಗುವ ಏರುಪೇರು ಅಥವಾ ಅನಿರೀಕ್ಷಿತ ತಪ್ಪುಗಳಿಂದಾಗಿ ಶೇಕಡಾ 50 ಮಂದಿಯಲ್ಲಿ ರಕ್ತದ ಕ್ಯಾನ್ಸರ್ ಬರುತ್ತದೆ ಎಂದು ತಿಳಿದುಬಂದಿದೆ. ಈ ರೀತಿ ಆಓಂಗೆ ತೊಂದರೆಯಾದಾಗ ಜೀವಕೋಶಗಳು ಎಗ್ರಾಬಿರ್ರಿಯಾಗಿ ಸಿಡಿದು ನಿಂತು, ಅಪಕ್ವ ಮತ್ತು ಅಸಹಜವಾದ ಬಿಳಿ ರಕ್ತ ಕಣಗಳು ಉತ್ಪಾದನೆಯಾಗಿ ಎಲುಬಿನ ಒಳಭಾಗವನ್ನು ಆಕ್ರಮಿಸಿಕೊಳ್ಳುತ್ತದೆ. ಸಹಜ ಮತ್ತು ಪಕ್ವವಾದ ಬಿಳಿ ರಕ್ತ ಕಣಗಳ ಸಂಖ್ಯೆ ಕ್ಷೀಣಿಸುತ್ತದೆ. ಕೆಂಪು ರಕ್ತ ಕಣಗಳು ಮತ್ತು ರಕ್ತ ತಟ್ಟೆಗಳ ಸಂಖ್ಯೆಯೂ ಕಡಿಮೆಯಾಗಿ ರೋಗವನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. ಅಪಕ್ವ ಬಿಳಿ ರಕ್ತ ಕಣಗಳು ಸೂಕ್ತ ಸಮಯಕ್ಕೆ ಸರಿಯಾಗಿ ಸಾಯುವುದಿಲ್ಲ ಮತ್ತು ಅವುಗಳ ಸಂಖ್ಯೆ ಅನಿಯಂತ್ರಿತವಾಗಿ ಬೆಳೆಯುತ್ತಲೇ ಹೋಗಿ ಹಲವಾರು ಅನಾಹುತಗಳಿಗೆ ನಾಂದಿ ಹಾಡುತ್ತದೆ.

ಯಾಕಾಗಿ ವರ್ಣತಂತುಗಳಲ್ಲಿ ವ್ಯತ್ಯಾಸ ಬರುತ್ತದೆ ?

1) **ವಿಕಿರಣ ಸೂಸುವಿಕೆಯಿಂದ :** ವಾತಾವರಣ ಅಥವಾ ವೃತ್ತಿ ಸಂಬಂಧ ಕಾರಣಗಳಿಂದ ಅತಿಯಾದ ವಿಕಿರಣ ಜೀವಕೋಶಗಳಿಗೆ ಹಾನಿಮಾಡಿ DNAಯಲ್ಲಿ ನ್ಯೂನತೆ ಉಂಟುಮಾಡುತ್ತದೆ.
2) **ವೈರಾಣು ಸೋಂಕು :** HTLV-1 ಮತ್ತು HIV ವೈರಾಣು ಜೀವಕೋಶಗಳ DNA ಮೇಲೆ ನ್ಯೂನತೆ ಬರುವಂತೆ ಮಾಡುತ್ತದೆ.
3) ಬೆನ್ಜೀನ್ ಮತ್ತು ಪೆಟ್ರೋಲಿಯಂ ಕೆಮಿಕಲ್ (ರಾಸಾಯನಿಕ) ಕೂಡಾ ಜೀವಕೋಶಗಳಿಗೆ ಹಾನಿ ಮಾಡುತ್ತದೆ.
4) ಅತಿಯಾದ ಧೂಮಪಾನ, ಹೇರ್ ಡೈ, ಮೊದಲು ಚಿಕಿತ್ಸೆಗಾಗಿ ನೀಡಿದ ಕಿಮೋಥೆರಪಿ ಮುಂತಾದವುಗಳಿಂದಲೂ ಜೀವಕೋಶಗಳಲ್ಲಿನDNA ಮೇಲೆ ದುಷ್ಪರಿಣಾಮ ಬೀರುತ್ತದೆ.
5) ವಂಶಪಾರಂಪರಿಕವಾಗಿ, ಅನುವಂಶಿಕವಾಗಿಯೂ ವರ್ಣತಂತುಗಳಲ್ಲಿ ಹರಡುವ ಸಾಧ್ಯತೆಯೂ ಇದೆ.

ಕಂಡುಹಿಡಿಯುವುದು ಹೇಗೆ ?

1) **ರಕ್ತದ ಪರೀಕ್ಷೆ ಮುಖಾಂತರ :** ಬಿಳಿ ರಕ್ತ ಕಣಗಳ ಸಂಖ್ಯೆ, ಕೆಂಪು ರಕ್ತ ಕಣಗಳ ಸಂಖ್ಯೆ ಮತ್ತು ರಕ್ತ ತಟ್ಟೆಗಳ ಸಂಖ್ಯೆ ಕಂಡು ಹಿಡಿಯುವುದು, ಅಪಕ್ವವಾದ ಮತ್ತು ಅತಿಯಾದ ಬಿಳಿ ರಕ್ತ ಕಣಗಳ ಸಂಖ್ಯೆ ಇದ್ದಲ್ಲಿ ಹೆಚ್ಚಿನ ಪರೀಕ್ಷೆ ಮಾಡಲಾಗುತ್ತದೆ.
2) ಪೆರಿಫೆರಲ್ ಸ್ಮಿಯರ್ ಎಂಬ ರಕ್ತದ ಪರೀಕ್ಷೆ ಮುಖಾಂತರ ರಕ್ತದಲ್ಲಿ ಬಿಳಿ ರಕ್ತ ಕಣಗಳ ಆಕೃತಿ, ಬಣ್ಣ, ರಚನೆ ಮತ್ತು ಗಾತ್ರವನ್ನು ಪತ್ತೆ ಹಚ್ಚಿ ರೋಗವನ್ನು ಕಂಡು ಹಿಡಿಯುತ್ತಾರೆ.
3) ಎಲುಬಿನ ಒಳಗಿನ ಮೂಳೆ ತಿರುಳು ಅಥವಾ ಅಸ್ಥಿಮಜ್ಜೆಯನ್ನು ಪರೀಕ್ಷೆ ಮಾಡಿ ರಕ್ತದ ಕ್ಯಾನ್ಸರನ್ನು ದೃಢೀಕರಣ ಮಾಡಲಾಗುತ್ತದೆ.

ಚಿಕಿತ್ಸೆ ಹೇಗೆ ?

ರಕ್ತದ ಕ್ಯಾನ್ಸರ್ ರೋಗಿಗಳನ್ನು ಒಳರೋಗಿಯಾಗಿ ಚಿಕಿತ್ಸೆ ನೀಡಲಾಗುತ್ತದೆ. ರೋಗಿಗಳಿಗೆ ಯಾವುದೇ ಕ್ಷಣದಲ್ಲಿ ಸೋಂಕು ತಗಲುವ ಸಾಧ್ಯತೆ ಇರುತ್ತದೆ. ಸಹಜ ಬಿಳಿ ರಕ್ತ ಕಣಗಳ ಸಂಖ್ಯೆ ಕಡಿಮೆಯಾದ ಕಾರಣದಿಂದ ದೇಹದ ರೋಗ ನಿರೋಧಕ ಶಕ್ತಿ, ನಂಜು ಎದುರಿಸುವ ಶಕ್ತಿ ಹಾಳಾಗುತ್ತದೆ. ಮುಖ ಕವಚ ಧರಿಸಿ ಓಡಾಡಬೇಕಾಗುತ್ತದೆ. ದೇಹದಲ್ಲಿನ ಬಿಳಿ ಸಹಜ ರಕ್ತ ಕಣಗಳ ಸಂಖ್ಯೆ ಸರಿ ಆಗುವವರೆಗೆ ಒಳ ರೋಗಿಯಾಗಿ ಚಿಕಿತ್ಸೆ ನೀಡಲಾಗುತ್ತದೆ. ಸರ್ಜರಿ ಮುಖಾಂತರ ರೋಗಗ್ರಸ್ತ ಅಸ್ಥಿಮಜ್ಜೆಯನ್ನು ಎಲುಬಿನಿಂದ ತೆಗೆದು ಹಾಕಲಾಗುತ್ತದೆ.

ಕಿಮೋಥೆರಪಿ ಚಿಕಿತ್ಸೆಯಿಂದ ಅಪಕ್ವ ಬಿಳಿ ರಕ್ತ ಕಣಗಳನ್ನು ಸಾಯಿಸಲಾಗುತ್ತದೆ. ರಕ್ತ ಪೂರಣ, ರಕ್ತ ತಟ್ಟೆಗಳ ಪೂರಣ ಮಾಡಿ ರಕ್ತದಲ್ಲಿ ರಕ್ತ ಕಣಗಳ ಸಂಖ್ಯೆಯನ್ನು ಹತೋಟಿಗೆ ತರಲಾಗುತ್ತದೆ. ಆ್ಯಂಟಿಬಯೋಟಿಕ್ ಔಷಧಿ ನೀಡಿ ಸೋಂಕು ಬರದಂತೆ ಎಚ್ಚರ ವಹಿಸಲಾಗುತ್ತದೆ. ಅಸ್ಥಿಮಜ್ಜೆ ಕಸಿ ಮಾಡುವುದರ ಮೂಲಕ ಅಪಕ್ವ ಅಸ್ಥಿಮಜ್ಜೆಯನ್ನು ತೆಗೆದು ಆರೋಗ್ಯವಂತ ಅಸ್ಥಿಮಜ್ಜೆಯನ್ನು ಎಲುಬಿನೊಳಗೆ ಕಸಿ ಮಾಡಿ ಆರೋಗ್ಯವಂತ ಬಿಳಿ ರಕ್ತ ಕಣ ಉತ್ಪತ್ತಿಯಾಗುವಂತೆ ಪ್ರಚೋದಿಸಲಾಗುತ್ತದೆ.

ಕರ್ನಾಟಕದಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಆಸ್ಪತ್ರೆಗಳು :

1) ಶಿರಿಡಿ ಸಾಯಿಬಾಬಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಮಣಿಪಾಲ್, ಉಡುಪಿ.
2) ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕೋಲಜಿ, ಮಂಗಳೂರು.
3) HGG ಕ್ಯಾನ್ಸರ್ ಆಸ್ಪತ್ರೆ, ಹುಬ್ಬಳ್ಳಿ.
4) ಸಿಟಿಕೇರ್ ಕ್ಯಾನ್ಸರ್ ಆಸ್ಪತ್ರೆ, ಬೆಂಗಳೂರು.
5) ಮಲೆನಾಡು ಕ್ಯಾನ್ಸರ್ ಆಸ್ಪತ್ರೆ, ಶಿವಮೊಗ್ಗ.
6) ಶ್ರೀ ಶಂಕರ ಕ್ಯಾನ್ಸರ್ ಫೌಂಡೇಶನ್ : ಬೆಂಗಳೂರು, ಇತ್ಯಾದಿ.

ಕೊನೆ ಮಾತು :

ಗ್ರೀಕ್ ಭಾಷೆಯಲ್ಲಿ ಲ್ಯೂಕೋಸ್ ಎಂದರೆ ಬಿಳಿ ಮತ್ತು ಹೈಮಾ

ಎಂದರೆ ರಕ್ತ ಎಂಬರ್ಥವಿದೆ. ಇವೆರಡನ್ನು ಸೇರಿಸಿ ಲ್ಯೂಕೇಮಿಯಾ ಎಂದು ಆಂಗ್ಲಭಾಷೆಯಲ್ಲಿ ಕರೆಯಲಾಗುತ್ತದೆ. ರಕ್ತದಲ್ಲಿ ಬಿಳಿ ರಕ್ತ ಕಣಗಳ ಸಂಖ್ಯೆ ಜಾಸ್ತಿಯಿರುತ್ತದೆ. ಕೆಂಪು ರಕ್ತ ಕಣಗಳ ಸಂಖ್ಯೆ ಕ್ಷೀಣಿಸುವುದರಿಂದ ಬಿಳಿ ರಕ್ತ ಖಾಯಿಲೆ ಎಂದು ರಕ್ತದ ಕ್ಯಾನ್ಸರ್‌ಗೆ ಅನ್ವರ್ಥನಾಮ ಬಂದಿದೆ. ರಕ್ತದ ಕ್ಯಾನ್ಸರ್ ಯಾರಿಗೂ ಬರಬಹುದು. ಯಾವ ವಯಸ್ಸಿನಲ್ಲಿಯೂ ಕಾಡಬಹುದು. ಪ್ರತಿ ವರ್ಷದಲ್ಲಿ ಒಮ್ಮೆಯಾದರೂ ರಕ್ತದ ಪರೀಕ್ಷೆ ಮಾಡಿಸಿಕೊಳ್ಳಬೇಕು. ನಾವು ತಿನ್ನುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ ಎಲ್ಲವೂ ಕಲ್ಮಶ ಮತ್ತು ರಾಸಾಯನಿಕ ಪೂರಿತವಾಗಿರುವುದರಿಂದ ಆದಷ್ಟು ಆರೋಗ್ಯಪೂರ್ಣ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ಆತ್ಮವಿಶ್ವಾಸ, ಮನೋಶಕ್ತಿಯಿಂದ ಯಾವುದೇ ರೋಗವನ್ನು ಜಯಿಸಬಹುದು ಎಂಬ ಮಾತನ್ನು ಮರೆಯಬಾರದು. ಆಧುನಿಕ ಕಿಮೋಥೆರಪಿ, ಅಸ್ಥಿಮಜ್ಜೆಯ ಕಸಿಯ ಮುಖಾಂತರ ರಕ್ತದ ಕ್ಯಾನ್ಸರನ್ನು ಕೂಡಾ ಜಯಿಸಬಹುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಬದುಕಿದ್ದೂ ಸಾಯಬೇಡಿ ಸತ್ತ ಮೇಲೆಯೂ ಬದುಕುವ ರೀತಿಯಲ್ಲಿ ಜೀವನ ನಡೆಸಬೇಕು. ಅದರಲ್ಲಿಯೂ ಮನುಕುಲದ ಒಳಿತು ಅಡಗಿದೆ.

●

ಪ್ರಾಣಿ ಪಕ್ಷಿಗಳ – ವಿಷಜಂತುಗಳ ಕುರಿತು ವರ್ಣನೆ

✍ **ಏಂಜಲ್**, ಪ್ರಥಮ ಬಿ.ಎ.

ತಲೆ ಎತ್ತಿದರೆ ಹಾವಿನ ರೀತಿ ಎತ್ತಬೇಕು
ತಲೆ ಬಗ್ಗಿಸಿದ್ರೆ ಆನೆಯ ರೀತಿ ಬಗ್ಗಿಸಬೇಕು
ಕೈ ಎತ್ತಿದ್ರೆ ಬೆಕ್ಕಿನ ರೀತಿ ಎತ್ತಬೇಕು
ನಮಸ್ಕಾರ ಮಾಡಿದ್ರೆ ನಾಯಿಯ ರೀತಿ ಮಾಡಬೇಕು
ಸಿಟ್ಟಿನಿಂದ ಗರ್ಜಿಸಿದ್ರೆ ಸಿಂಹದ ರೀತಿ ಗರ್ಜಿಸಬೇಕು
ಅಮ್ಮ ಎಂದು ಮೃದುವಾಗಿ ಕರೆಯುವ ದನದ ಹಾಗೆ ಕರೆಯಬೇಕು
ಸುಂದರವಾಗಿ ಹಾಡಿದ್ರೆ ಕೋಗಿಲೆಯ ಹಾಗೆ ಹಾಡಬೇಕು
ಕಿರುಚಿದ್ರೆ ಕಾಗೆಯ ಹಾಗೆ ಕಿರುಚಬೇಕು
ಪ್ರೀತಿಸಿದ್ರೆ ಪ್ರೇಮ ಪಕ್ಷಿ (Love Birds) ಇದ್ದ ಹಾಗೆ ಇರಬೇಕು.
ಒಳ್ಳೆ ಗುಣ ಇದ್ರೆ ಪಾರಿವಾಳದ ಹಾಗೆ ಇರಬೇಕು
ಸುತ್ತಿಕೊಂಡ್ರೆ ಹೆಬ್ಬಾವಿನ ಹಾಗೆ ಸುತ್ತಿಕೊಳ್ಳಬೇಕು
ಬಿಡಿಸಿಕೊಂಡು ಬಂದ್ರೆ ಇಲಿಯ ಹಾಗೆ ಬಿಡಿಸಿಕೊಂಡು ಬರಬೇಕು
ಸುಂದರ ರಾಣಿಯಾಗಿ ಕಾಣುವ ಆಸೆ ಇದ್ರೆ ನವಿಲಿನ ರೀತಿಯಾಗಿ ಇರಬೇಕು
ಕಣ್ಣಿಗೆ ಕಲ್ಲಿನ ರೀತಿಯಾಗಿ ಕಂಡು ಹೊಟ್ಟೆಬಾಕನಂತೆ ಕಂಡು ಪಕ್ಷಿಗಳನ್ನ, ಪ್ರಾಣಿಗಳನ್ನ ಮೋಸಮಾಡುವ ಮೊಸಳೆಯಂತೆ ಇರಬಾರದು
ಜಿಗಿದು ಜಿಗಿದು ಪ್ರಾಣ ಭಯದಿಂದ ತಪ್ಪಿಸಿಕೊಂಡು ಓಡಿ ಬಂದು ಗುರಿ ಮುಟ್ಟುವ ಜಿಂಕೆಯ ಹಾಗೆ ಇರಬೇಕು
ಹೇಳಿದನ್ನು ಕೇಳುವ, ಹೇಳಿ ಕೊಟ್ಟದ್ದನ್ನು ಕೇಳಿ ಕಲಿಯುವ ಹಂಬಲವಿರುವ ಗಿಳಿಯ ಹಾಗೆ ಇಂದು ವಿದ್ಯಾರ್ಥಿಗಳು ಇರಬೇಕು.
ವಿಧೇಯತೆ, ಗೌರವ, ಕೊಡುವುದನ್ನು ನಾಯಿಯಿಂದ ನೋಡಿ ಕಲಿಯಬೇಕು.
ಕೆಸರು ಎಂದು ತಿಳಿದರೂ ಅದಕ್ಕೆ ಕಲ್ಲು ಎಸೆದು ಮೈಗೆ ಕೆಸರು ಮಾಡಿಕೊಳ್ಳುವ ಬುದ್ಧಿಹೀನ ಜನರನ್ನು ಹಂದಿಗೆ ಹೋಲಿಸಲಾಗಿದೆ.
ಎಲ್ಲದರಲ್ಲೂ ಇತರರಿಗೆ ಸಲಹೆಯನ್ನು ಕೊಟ್ಟು ಕಷ್ಟದಿಂದ ಬಿಡಿಸುವ ನರಿಯ ಹಾಗೆ ಇರಬೇಕು ಆದರೆ ವಂಚನೆಯನ್ನು ಮಾಡಬಾರದು.
ಬಹಳ ಸೂಕ್ಷ್ಮವಾಗಿ ಗುರುತು ಹಿಡಿದು ಕಣ್ಣಿನ ಸೂಕ್ಷ್ಮತೆಯನ್ನು ಹೆಚ್ಚಿಸಿಕೊಂಡು ಪ್ರಸಿದ್ಧವಾಗಿರುವ ಹದ್ದಿನ ಹಾಗೆ ಹಾಗೂ ಅದರ ಕಣ್ಣಿನ ಹಾಗೆ ಇರಬೇಕು.

●

03 Pg_035-110 TY200028

ರಸ್ತೆ ಸುರಕ್ಷತೆ

✍ **ರಕ್ಷಾ ಪೈ,** ಪ್ರಥಮ ಪಿ.ಯು.ಸಿ.

'ರಸ್ತೆ ಸುರಕ್ಷತೆ' ಎಂದರೆ ರಸ್ತೆಯಲ್ಲಿ ಪಾಲಿಸಬೇಕಾದ ಸುರಕ್ಷತಾ ನಿಯಮಗಳು ಅಥವಾ ರಸ್ತೆ ಸುರಕ್ಷತೆಗಾಗಿ ನಾವು ಪಾಲಿಸಬೇಕಾದ ನಿಯಮಗಳು. ಇತ್ತೀಚಿನ ದಿನಗಳಲ್ಲಿ ರಸ್ತೆ ಸುರಕ್ಷತೆ ಅತಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈಗ ಎಲ್ಲಿ ನೋಡಿದರೂ ವಾಹನಗಳು, ಯಾರ ಮನೆಯಲ್ಲಿ ನೋಡಿದರೂ ವಾಹನಗಳು. ಈ ವಾಹನಗಳನ್ನು ಚಲಿಸಲು ಬೇಕಾದುದು ರಸ್ತೆ. ಆದ್ದರಿಂದ ಅದರ ಸುರಕ್ಷತೆ ನಾವು ಮಾಡಬೇಕಾಗಿದೆ.

ರಸ್ತೆ ಸುರಕ್ಷತೆಯನ್ನು ನೋಡಿಕೊಳ್ಳುವುದರಿಂದ ನಮಗೆ ಹಲವಾರು ಉಪಯೋಗಗಳಿವೆ. ರಸ್ತೆ ಸುರಕ್ಷತೆಯಿಂದಾಗಿ ಆಗಬಹುದಾದ ಎಷ್ಟೋ ಅಪಘಾತಗಳನ್ನು, ಪ್ರಾಣಿಗಳನ್ನು, ಮನುಷ್ಯರನ್ನು ತೊಂದರೆಯಿಂದ ತಪ್ಪಿಸಬಹುದಾಗಿದೆ. ನಮ್ಮ ನಗರ, ಜಿಲ್ಲೆ, ರಾಜ್ಯ, ದೇಶವನ್ನು ಅಭಿವೃದ್ಧಿಯ ಕಡೆಗೆ ತರಬಹುದಾಗಿದೆ. ರಸ್ತೆಯಲ್ಲಿ ನಡೆಯುವ ಜನರಿಗೆ ಬದಿಯಲ್ಲಿ ಪಾದಚಾರಿ ರಸ್ತೆ ಎಂದು ಮಾಡಿ ಅನುಕೂಲ ಮಾಡಿಕೊಡಬಹುದಾಗಿದೆ. ಅಪಘಾತವಾದಾಗ ಆ್ಯಂಬುಲೆನ್ಸ್ ಹೋಗಲು ಅನುವು ಮಾಡಿಕೊಟ್ಟು ಜೀವವನ್ನು ಉಳಿಸಲು ಸಹಾಯ ಮಾಡಬೇಕು.

ರಸ್ತೆಗಳಲ್ಲಿ ಪಾಲಿಸಬೇಕಾದ ಸುರಕ್ಷತಾ ನಿಯಮಗಳು:

- ಟ್ರಾಫಿಕ್ ಸಿಗ್ನಲ್‌ಗಳನ್ನು ಸರಿಯಾಗಿ ಪಾಲಿಸುವುದು.
- ಪಾದಚಾರಿಗಳಿಗೆ ಹಾಗೂ ತುರ್ತು ವಾಹನಗಳಿಗೆ ಅನುವು ಮಾಡಿಕೊಟ್ಟು ರಸ್ತೆಯಲ್ಲಿ ಅಪಘಾತಗಳಾಗದಂತೆ ತಡೆಯುವುದು.
- ರಸ್ತೆ ದಾಟುವಾಗ ಅಡ್ಡಪಟ್ಟೆಗಳನ್ನು ಬಳಸುವುದು.
- ಪಾದಚಾರಿಗಳು ಹಾಗೂ ಸೈಕಲ್ ಸವಾರಿಗರು, ಅವರಿಗೆ ನೀಡಲಾದ ಪಾದಚಾರಿ ರಸ್ತೆ (footpath) ಬಳಸಿ ವಾಹನಗಳಿಗೆ ದಾರಿ ಮಾಡಿಕೊಡುವುದು.
- ಆಸ್ಪತ್ರೆ, ಶಾಲೆ, ಕಾಲೇಜು ಮುಂತಾದ ಶಬ್ದ ರಹಿತ ಜಾಗಗಳಲ್ಲಿ ಅಡ್ಡಪಟ್ಟೆಗಳನ್ನು ಬಳಸುವುದು. ಅದರ ಜೊತೆಗೆ ಶಬ್ದ ಮಾಡದೆ ಚಲಿಸುವುದು.
- ಅಪರಿಚಿತ ಜಾಗಗಳಿಗೆ ಹೋದಾಗ ಅಲ್ಲಿ ನೀಡಿರುವ ಚಿಹ್ನೆಗಳನ್ನು ಪಾಲಿಸುವುದು.
- ವಾಹನವನ್ನು ಹಿಂದಿಕ್ಕುವಾಗ ಬಲಬದಿಯಿಂದಲೇ ಹಿಂದಿಕ್ಕುವುದು.
- ಅಪಘಾತ ವಲಯಗಳಲ್ಲಿ ರಸ್ತೆ ಚಿಹ್ನೆಗಳನ್ನು ಸರಿಯಾಗಿ ಪಾಲಿಸುವುದು, ಇತ್ಯಾದಿಗಳು.

ರಸ್ತೆ ಸುರಕ್ಷತೆ ನಮಗೆ ಮಾತ್ರವಲ್ಲದೇ ಇತರರಿಗೂ ಸುರಕ್ಷತೆಯನ್ನು ನೀಡುತ್ತದೆ. ಆದರೆ ಅದನ್ನು ಪರಿಪಾಲಿಸದೇ ಇದ್ದರೆ ಅದರ ಪರಿಣಾಮವು ಅಪಾಯಕಾರಿಯಾಗಿದೆ. ಉದಾಹರಣೆಗೆ, ರಸ್ತೆ ನಿರ್ಮಿಸುವಾಗ ಉತ್ತಮ ಗುಣಮಟ್ಟದ ವಸ್ತುಗಳನ್ನು ಬಳಸದೇ ಹೋದರೆ, ಬೇಗ ಹೊಂಡ, ಗುಂಡಿ, ಕೆಸರು ಕಲ್ಲು ತುಂಬಿ ರಸ್ತೆಗಳು ಹಾಳಾಗುತ್ತವೆ. ಅದರಿಂದಾಗಿ ಧೂಳು, ಪ್ರದೂಷಣೆ ಉಂಟಾಗಿ ಉಸಿರಾಟ, ಚರ್ಮರೋಗ, ಮುಂತಾದ ತೊಂದರೆಗಳನ್ನು ಉಂಟು ಮಾಡುತ್ತದೆ. ರಸ್ತೆ ಒಂದು ಮುಖ್ಯವಾದ ಚಲಿಸುವ ಮಾರ್ಗವಾಗಿದ್ದು, ರಸ್ತೆಯ ಪ್ರಗತಿ ದೇಶದ ಪ್ರಗತಿಯನ್ನು ಬಿಂಬಿಸುತ್ತದೆ. ಆದ್ದರಿಂದ ರಸ್ತೆಯನ್ನು ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಇವುಗಳನ್ನು ಪರಿಹರಿಸುವುದು ಜನಸಾಮಾನ್ಯರ ಕರ್ತವ್ಯವಾಗಿದೆ. ಆದ್ದರಿಂದ ಕೆಲವು ರೀತಿಗಳನ್ನು ಪಾಲಿಸುವುದು ಅತಿಮುಖ್ಯವಾಗಿದೆ. ನನ್ನ ಪ್ರಕಾರ ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಲಂಚವನ್ನು ತೆಗೆದುಕೊಂಡು ಕಳಪೆ ಮಟ್ಟದ ವಸ್ತುಗಳನ್ನು ಬಳಸುವ ಬದಲು ಉತ್ತಮ ವಸ್ತುಗಳನ್ನು ಬಳಸಿ ರಸ್ತೆ ನಿರ್ಮಾಣವನ್ನು ಮಾಡಬೇಕು. ನಮ್ಮ ಸುತ್ತಮುತ್ತ ಇರುವ ರಸ್ತೆಗಳನ್ನು ಸರಿಪಡಿಸಲು ಸೂಕ್ತ ಅಧಿಕಾರಿಗಳಿಗೆ ವಿಷಯವನ್ನು ತಿಳಿಸುವುದು. ರಸ್ತೆ ನಿರ್ಮಾಣ ಮಾಡುವ ಜಾಗದಲ್ಲಿ ಇರುವ ಧೂಳು, ಮಣ್ಣು, ತರಕಾರಿ-ಹಣ್ಣುಗಳ ಬೀಜವನ್ನು ಕಿತ್ತು ಚೆನ್ನಾಗಿಡುವುದು. ಇದರಿಂದ ಮುಂದೆ ಮಳೆಗಾಲದಲ್ಲಿ ನೀರಿನಿಂದ ಬೀಜ ಒಡೆಯದೇ ಇರುತ್ತದೆ. ಇದರ ಪರಿಣಾಮವಾಗಿ ರಸ್ತೆ ಬಿರುಕು ಬೀಳುವುದು ತಪ್ಪುತ್ತದೆ. ಮುಖ್ಯವಾಗಿ, ಪ್ರಜೆಗಳಾದ ನಾವು ಅಸಡ್ಡೆ ಮಾಡದೆ ಸಾರ್ವಜನಿಕರಿಗೆ ಸಹಾಯ ಮಾಡುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತೇವೆ. ಇದೇ ಅತಿ ಮುಖ್ಯವಾದ ಕೆಲಸವಾಗಿದೆ.

ಭವ್ಯ ಭಾರತದ ಪ್ರಜೆಗಳಾದ ನಾವು, ರಸ್ತೆ ಸುರಕ್ಷತೆ ವಹಿಸುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸಿ, ಎಲ್ಲರಿಗೂ ಸಂತೋಷವಾಗುವಂತೆ ಮಾಡಿ ದೇಶದ ಪ್ರಗತಿಗೆ ಸಹಕರಿಸೋಣ. ನಾವು ಎಲ್ಲಾ ನಿಯಮಗಳನ್ನು ಪಾಲಿಸಿ, ಅದರ ಜ್ಞಾನವನ್ನು ಎಲ್ಲರಿಗೆ ನೀಡಿ, ನಮ್ಮ ಸಮಾಜದಲ್ಲಿರುವ ಬಿರುಕನ್ನೂ ಸರಿಪಡಿಸೋಣ. ಭಾರತವನ್ನು ಅಭಿವೃದ್ಧಿಯ ಪಥದ ಕಡೆಗೆ ತೆಗೆದುಕೊಂಡು ಹೋಗೋಣ. ●

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕ್ರೀಡಾ ಸಾಧನೆ

✍ **ಸುಪ್ರೀತಾ ನಾಯಕ್**, ಪ್ರಥಮ ಪಿ.ಯು.ಸಿ.

ಪ್ರತಿಯೊಬ್ಬ ವ್ಯಕ್ತಿಯ ಆರೋಗ್ಯ ಉತ್ತಮವಾಗಿರಬೇಕಾದರೆ, ಸರಿಯಾದ ಪ್ರಮಾಣದಲ್ಲಿ ಶ್ರಮ, ವ್ಯಾಯಾಮ, ಶಕ್ತಿಯ ಉಪಯೋಗವಾಗಬೇಕು. ದೇಹದ ಆರೋಗ್ಯದೊಂದಿಗೆ, ಮನಸ್ಸಿನ ಆರೋಗ್ಯವೂ ಸಹ ಚೆನ್ನಾಗಿರಬೇಕಾದರೆ, ಅದಕ್ಕೆ ಕ್ರೀಡೆಗಳು ಬಹಳ ಮುಖ್ಯವಾಗುತ್ತವೆ. ಕ್ರೀಡೆಗಳೆಂದರೆ ಎಲ್ಲರಿಗೂ ಇಷ್ಟ, ಇವುಗಳನ್ನು ನೋಡಿ, ಕೇಳಿ, ಆಡಿ ಆನಂದಿಸದ ಮನುಷ್ಯ ಇರಲಾರನು. ಕ್ರೀಡೆಗಳು ನಮ್ಮಲ್ಲಿ ನಾಯಕತ್ವದ ಬೆಳವಣಿಗೆಗೆ, ಶಿಸ್ತಿನ ಅರಿವಿಗೆ ಬಹಳ ಮುಖ್ಯ. ಅದರಲ್ಲೂ ಕ್ರೀಡೆಗಳಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ, ಮನ್ನಣೆ ಗಳಿಸುವುದೆಂದರೆ, ಅದು ಒಂದು ಹೆಮ್ಮೆಯ ಸಂಗತಿ. ಅದರಂತೆ, ನಮ್ಮ ಹಲವಾರು ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ, ನಮ್ಮ ಭಾರತಕ್ಕೆ ಹೆಮ್ಮೆ ಎನಿಸಿಕೊಂಡಿದ್ದಾರೆ.

ಒಂದು ದೇಶದಲ್ಲಿ ಪಂದ್ಯಾಟಗಳು ನಡೆಯುವಂತೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೋತ್ಸವಗಳು ನಡೆಯುತ್ತವೆ. ಇಂತಹ ಕ್ರೀಡೋತ್ಸವಗಳಲ್ಲಿ ಮುಖ್ಯವಾದವುಗಳೆಂದರೆ, ಒಲಿಂಪಿಕ್ ಆಟಗಳು. ಅನೇಕ ಭಾರತೀಯರು ಈ ಒಲಿಂಪಿಕ್ ಆಟಗಳಲ್ಲಿ ಭಾಗವಹಿಸಿ, ವಿಜಯಶಾಲಿಗಳಾಗಿದ್ದಾರೆ. ಅದರಂತೆ, ನಮ್ಮ ರಾಷ್ಟ್ರೀಯ ಆಟವಾದ ಹಾಕಿಯು, ಇಂತಹ ಒಲಿಂಪಿಕ್ಸ್‌ನಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. 1927 ರಂದು ಹಾಕಿ ಆಟದಲ್ಲಿ, ಭಾರತ ತಂಡವು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸಿತ್ತು. ಅಷ್ಟೇ ಅಲ್ಲದೆ, 1975ರಂದು ಭಾರತದ ಹಾಕಿ ತಂಡವು ಪ್ರಪ್ರಥಮ ಬಾರಿಗೆ, ಹಾಕಿ ವಿಶ್ವಕಪ್ ಅನ್ನು ತನ್ನದಾಗಿಸಿಕೊಂಡಿತು. ಇತ್ತೀಚೆಗಷ್ಟೇ ನಡೆದ ಎಫ್‌ಐಎಚ್ ಟೂರ್ನಿಯಲ್ಲಿ, ಭಾರತದ ಮಹಿಳಾ ಹಾಕಿ ತಂಡದ ನಾಯಕಿ ರಾಣಿರಾಮ್‌ಪಾಲ್ ಅವರ ನಾಯಕತ್ವದಲ್ಲಿ ಭಾರತವು ಅಮೆರಿಕಾ ತಂಡವನ್ನು ಸೋಲಿಸಿ 2020ರಲ್ಲಿ ನಡೆಯುವ ಟೋಕಿಯೋ ಒಲಿಂಪಿಕ್ಸ್‌ಗೇ ಅರ್ಹತೆ ಪಡೆದಿದ್ದಾರೆ.

ಇನ್ನು ಕುಸ್ತಿ, ಬಾಕ್ಸಿಂಗ್ ಎಂಬ ಕ್ರೀಡೆಗಳು, ಕೇವಲ ನಮ್ಮ ದೇಶದ ಚೌಕಟ್ಟಿಗೆ ಸೀಮಿತವಾಗಿರದೆ, ಹೊರ ದೇಶಗಳಲ್ಲಿ ಮನ್ನಣೆಯನ್ನು ಪಡೆದುಕೊಂಡಿದೆ. ಹಾಗೆ, ಭಾರತೀಯರು ಕೂಡ, ಇಂತಹ ಕ್ರೀಡೆಗಳಲ್ಲಿ ಭಾಗವಹಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಅದರಂತೆ ಭಾರತದ ಶಿವಥಾಪ ಹಾಗೂ ಪೂಜಾರಾಣಿ ಇತ್ತೀಚೆಗೆ ನಡೆದಂತಹ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಗಳಿಸಿ, ಒಲಿಂಪಿಕ್ ಟೆಸ್ಟ್ ಬಾಕ್ಸಿಂಗ್ ಟೂರ್ನಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು. ಅವರೊಂದಿಗೆ ಆಶೀಶ್ ಎಂಬುವವರು ಕೂಡ, ಈ ಟೂರ್ನಿಯಲ್ಲಿ ಬೆಳ್ಳಿ ಪದಕವನ್ನು ಗಳಿಸಿದ್ದಾರೆ. ಭಾರತದ ಪ್ರವೀಣ್ ಕುಮಾರ್ ಶಾಂಫೈನಲ್ಲಿ ನಡೆದ 15ನೇ ಪುರುಷರ 48 ಕೆ.ಜಿ. ವಿಭಾಗದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ವರ್ಣ ಪದಕ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಎನಿಸಿಕೊಂಡಿದ್ದಾರೆ. ಇವರೊಂದಿಗೆ, ಮಹಿಳೆಯರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ, 48 ಕೆ.ಜಿ. ವಿಭಾಗದಲ್ಲಿ, ಭಾರತದ ಮಂಜುರಾಣಿ ಅವರು ಬೆಳ್ಳಿ ಪದಕವನ್ನು ಗಳಿಸಿಕೊಂಡಿದ್ದಾರೆ. ಭಾರತದ ಉದಯೋನ್ಮುಖ ಮಹಿಳಾ ಕುಸ್ತಿಪಟು ಪೂಜಾ ಗೆಹ್ಲೋಟ್ ಅವರು 23ರ ವಯೋಮಿತಿಯಲ್ಲಿ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ. ಹಾಗು 2017ರಲ್ಲಿ, ಪೋಲೆಂಡ್‌ನಲ್ಲಿ ನಡೆದ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ರೀತು ಪೊಗಾಟ್ ಬೆಳ್ಳಿ ಪದಕ ಜಯಿಸಿದ್ದರು. ಇವರೊಂದಿಗೆ ವಿಶ್ವ ಚಾಂಪಿಯನ್‌ಷಿಪ್ ಇತಿಹಾಸದಲ್ಲೇ ಅತ್ಯಧಿಕ ಪದಕ ಗೆದ್ದ ಬಾಕ್ಸರ್ ಎಂಬ ಹಿರಿಮೆಗೆ ಪಾತ್ರರಾಗಿದ್ದ ಎಂ. ಸಿ. ಮೇರಿಕೋಮ್, ಈ ಸಾಲಿನ ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಪದಕವನ್ನು ಗಳಿಸಿದ್ದಾರೆ.

ಹಲವಾರು ದಶಕಗಳಿಂದಲೂ ಭಾರತ ದೇಶವು, ಬ್ಯಾಡ್ಮಿಂಟನ್ ಆಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. 1980ರಲ್ಲಿ 'ಆಲ್ ಇಂಗ್ಲೆಂಡ್ ಓಪನ್'ವನ್ನು ಗೆಲ್ಲುವ ಮೂಲಕ ಪ್ರಕಾಶ್ ಪಡುಕೋಣೆ ಬ್ಯಾಡ್‌ಮಿಂಟನ್‌ನಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೇವೆ ಸಲ್ಲಿಸಿದರು. ಹಾಗೂ ಪಿ. ವಿ. ಸಿಂಧುರವರು ಕೂಡ 10 ಆಗಸ್ಟ್ 2013ರಂದು ಚೀನಾದಲ್ಲಿ ಜರುಗಿದ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದಂತಹ ಭಾರತದ ಮೊದಲ ಮಹಿಳೆ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಸೈನಾ ನೆಹವಾಲ್ ಕೂಡ ಒಂದು ಅತ್ಯುತ್ತಮ ಬ್ಯಾಡ್ಮಿಂಟನ್ ಆಟಗಾರ್ತಿಯಾಗಿದ್ದು. 2008ರ ಬೀಜಿಂಗ್ ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಕ್ವಾರ್ಟರ್ ಫೈನಲ್ಸ್ ತಲುಪಿದ ಮೊದಲ ಭಾರತೀಯಳಾಗಿದ್ದಾಳೆ. ಇವರೊಂದಿಗೆ, ಭಾರತದ ಡಬಲ್ಸ್ ಜೋಡಿ ಎಂದೇ ಖ್ಯಾತಿ ಪಡೆದಿರುವ ಸಾತ್ವಿಕ್ ಸಾಯಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ, ಡಬಲ್ಸ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದಾರೆ.

ಇನ್ನು ಭಾರತೀಯರ ಅತ್ಯಂತ ಇಷ್ಟವಾದ ಕ್ರೀಡೆ ಎಂದರೆ ಕ್ರಿಕೆಟ್. ಅದರಲ್ಲೂ ಸಚಿನ್ ತೆಂಡೂಲ್ಕರ್ ಎಂದರೆ ಎಲ್ಲರಿಗೂ ಎಲ್ಲಿಲ್ಲದ ಪ್ರೀತಿ, ಗೌರವ. ಇವರು ವಿಶ್ವದ ಅತಿಶ್ರೇಷ್ಠ ಆಟಗಾರರೆಂದು

ಗುರುತಿಸಿಕೊಂಡಿದ್ದಾರೆ. ಇವರು ತಮ್ಮದೇ ಆದ ಹಲವು ದಾಖಲೆಗಳನ್ನು ಬರೆದಿದ್ದಾರೆ. ಉದಾ: ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ನುಗಳು, ಅತಿ ಹೆಚ್ಚು ಅಂತಾರಾಷ್ಟ್ರೀಯ ಪಂದ್ಯಗಳು ಇತ್ಯಾದಿ. ಇಷ್ಟೇ ಅಲ್ಲದೆ, ನಮ್ಮ ಭಾರತದ ಕ್ರಿಕೆಟ್ ತಂಡವು 1983ರಲ್ಲಿ ವಿಶ್ವಕಪ್ ಅನ್ನು ಪ್ರಪ್ರಥಮ ಬಾರಿಗೆ ತನ್ನದಾಗಿಸಿಕೊಂಡಿತು. ಪುನಃ 2011ರಲ್ಲಿ ಎರಡನೆಯ ಬಾರಿಗೆ, ಭಾರತವು ವಿಶ್ವಕಪ್‌ಅನ್ನು ಪಡೆಯಿತು. ಈ ಪ್ರಸಂಗವು ನಮ್ಮೆಲ್ಲ ಭಾರತೀಯರಿಗೆ ಅತ್ಯಂತ ಹೆಮ್ಮೆಯ ವಿಷಯ ಎಂದು ಹೇಳಿದರೆ ತಪ್ಪಾಗಲಾರದು.

ಕೇವಲ ದೊಡ್ಡವರಲ್ಲದೆ ಚಿಕ್ಕವರೂ ಕೂಡ ಅತ್ಯುತ್ತಮ ರೀತಿಯಲ್ಲಿ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ ಎಂಬುದಕ್ಕೆ ಆರ್. ಪ್ರಜ್ಞಾನಂದ ಅವರೇ ಉದಾಹರಣೆ. ಆರ್. ಪ್ರಜ್ಞಾನಂದ ಅವರು ಭಾರತದ ಒಬ್ಬ ಅತ್ಯುತ್ತಮ ಚೆಸ್ ಆಟಗಾರ. ಇವರು 18ರ ವಯೋಮಿತಿ ವಿಭಾಗದ ವಿಶ್ವ ಯೂತ್ ಚೆಸ್ ಚಾಂಪಿಯನ್‌ಷಿಪ್ ನಲ್ಲಿ ಭಾಗವಹಿಸಿ, ಚಿನ್ನದ ಪದಕ ಗೆಲ್ಲುವ ಮೂಲಕ, ಅತ್ಯಂತ ಕಿರಿಯ ವಯಸ್ಸಿಗೆ ಈ ದಾಖಲೆಯನ್ನು ನಿರ್ಮಿಸಿದ ಮೊದಲ ಭಾರತೀಯ ಎನಿಸಿಕೊಂಡಿದ್ದಾನೆ. ಕೇವಲ ಕ್ರಿಕೆಟ್, ಬ್ಯಾಡ್ಮಿಂಟನ್ ಕ್ರೀಡೆಗಳಲ್ಲದೆ ಜಾವೆಲಿನ್, ಶೂಟಿಂಗ್ ಮುಂತಾದ ಹಲವಾರು ಕ್ರೀಡೆಗಳೂ ಕೂಡ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಭಾರತದ ಅನುಭವಿ ಶೂಟರ್ ದೀಪಕ್ ಕುಮಾರ್ 32ನೇ ಹುಟ್ಟುಹಬ್ಬದಂದೇ 14ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದು ಒಲಿಂಪಿಕ್ಸ್ ಅರ್ಹತೆ ಗಳಿಸುವ ಮೂಲಕ ನಮ್ಮ ಭಾರತಕ್ಕೆ ಸ್ವಯಂ ಉಡುಗೊರೆಯಾಗಿದ್ದಾರೆ. ಇವರು ಟೋಕಿಯೊ ಒಲಿಂಪಿಕ್ಸ್ ಕೋಟಾ ಗಿಟ್ಟಿಸಿದ ಭಾರತದ 2ನೇ ಶೂಟರ್ ಎನಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ, ಭಾರತದ ಜಾವೆಲಿನ್ ಪಟು ಶಿವಪಾಲ್ ಸಿಂಗ್ ಚೀನಾದಲ್ಲಿ ನಡೆಯುತ್ತಿರುವ 7ನೇ ವಿಶ್ವಕ್ರೀಡಾಕೂಟದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗಳಿಸಿದ್ದಾರೆ. ಇವರೊಂದಿಗೆ ಗುರುಪ್ರೀತ್ ಸಿಂಗ್ ಕಂಚಿನ ಪದಕವನ್ನು ಶೂಟಿಂಗ್‌ನಲ್ಲಿ ಗಳಿಸಿದ್ದಾರೆ. ಭಾರತದ ಅವಿನಾಶ್ ಸಾಬ್ಲೆ, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಪುರುಷರ 2000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ 13ನೇ ಸ್ಥಾನ ಗಳಿಸಿ, ಟೋಕಿಯೋ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಇಷ್ಟೇ ಅಲ್ಲದೆ, ಭಾರತ ಪರ ನೂತನ ರಾಷ್ಟ್ರೀಯ ದಾಖಲೆ ಬರೆದ ಮೊದಲನೆಯ ಓಟಗಾರ ಎನಿಸಿಕೊಂಡಿದ್ದಾನೆ. ಇದರೊಂದಿಗೆ, ಅಮೋಘ ಪ್ರದರ್ಶನ ನೀಡಿದ ಭಾರತದ ರಮಾನಂದ ಶರ್ಮ ಮತ್ತು ಸಿದ್ಧಾರ್ಥ ಜೋಡಿ 10ನೇ ಆವೃತ್ತಿಯ ಏಷ್ಯನ್ ಏಜ್ ಗ್ರೂಪ್ ಚಾಂಪಿಯನ್‌ಷಿಪ್‌ನ 2 ಮೀಟರ್ ಡೈವಿಂಗ್ ವಿಭಾಗದಲ್ಲಿ ಬಂಗಾರದ ಪದಕ ಪಡೆದುಕೊಂಡಿರುವ ಒಂದು ಹೆಮ್ಮೆಯ ಸಂಗತಿ.

ಎಲ್ಲದರ ಅನುಗುಣವಾಗಿ ನೋಡುವುದಾದರೆ, ಒಂದು ಕ್ರೀಡೆಯಲ್ಲಿ ಸೋಲು-ಗೆಲುವು ಇದ್ದದ್ದೇ. ಆದರೆ, ಕ್ರೀಡಾಮನೋಭಾವನೆ ಬೆಳೆಸಿಕೊಳ್ಳುವುದೇ ಕ್ರೀಡಾಪಟುಗಳ ಮುಖ್ಯ ಕೆಲಸ. ಇದರಂತೆ, ನಮ್ಮ ಭಾರತೀಯರೂ ಕೂಡ ಕ್ರೀಡಾಮನೋಭಾವನೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ, ತಮ್ಮದೇ ಆದ ಗೆಲುವನ್ನು ಸಾಧಿಸಿ, ನಮಗೆ ಹಾಗೂ ನಮ್ಮ ದೇಶಕ್ಕೆ ಹೆಮ್ಮೆಯಾಗಿದ್ದಾರೆ.

ಮಾತು ಮೌನವಾದಾಗ

ಮೌನವೆಂಬ ಮೋಡ ಮುದುಡಿ ಮುಂದುವರೆಯುತ್ತಿದೆ ಮುಗಿಲೆತ್ತರದಲ್ಲಿ
ಮಾತೆಂಬ ಮಯೂರ ಮಂಕಾಗಿ ಮುದುರಿ ಕುಳಿತಿದೆ ಮನದಲ್ಲಿ
ಮುದುಡಿರುವ ಮೋಡ ಚದುರಿ ಮಳೆಯಾಗಬೇಕೆನ್ನುವುದು
ಮೌನಿಯಾಗಿ ಮರುಗುತ್ತಿರುವ ಮಯೂರದ ಮನದಾಸೆ
ಮೃದು ಮಯೂರದ ಮನಸ್ಸಿನ ಆಶಯಕ್ಕೆ ಮನ್ವಂತರವೇ ಮುಗಿದರೂ...
ಮೋಡ ಕರಗಿ ಮಳೆಯಾಗಲಿಲ್ಲ
ಮಯೂರ ನೃತ್ಯವೂ ಮಾಡಲಿಲ್ಲ
ನರ್ತಿಸುವ ಹೊರತು ಮತ್ತೇನನ್ನೂ ಧ್ಯಾನಿಸದ ಮಯೂರ
ಮಂದ ಆಸೆಯಲ್ಲಿ ಮಗ್ನನಾಗಿ ಕಾದು ಕುಳಿತಿದೆ
ಮೋಡದ ಮೃತ್ಯುವಾಗಿ ಮಳೆಯಾಗಿ ಸುರಿಯಲು
ತಾನಾ ಮಳೆಯಲ್ಲಿ ಮರುಕ್ಷಣವೇ ಗರಿಗೆದರಿ ಕುಣಿಯಲು.

✍ **ಭೂಮಿಕ ಎಂ.ಯು.,** ದ್ವಿತೀಯ ಪಿ.ಯು.ಸಿ.

03 Pg_035-110 TY200028

ತೊತ್ತೊ ಚಾನ್‌ಳೊಂದಿಗಿನ ನನ್ನ ಬೇಸಿಗೆ

✍ **ಪಲ್ಲವಿ ಕೊಡಗು**, ಪ್ರಥಮ ಪಿ.ಯು.ಸಿ.

ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದಿತ್ತು. ರಿಸಲ್ಟ್ ಡೇಟ್ ಪ್ರಕಟವಾಗಿತ್ತು. ಬೇಸಿಗೆ ರಜೆ ಶುರುವಾಗಿತ್ತು. ಅಂದು ರಾತ್ರಿ ಅಪ್ಪ – ಅಮ್ಮನಿಗೆ ವಿದಾಯ ಹೇಳಿ ಹುಬ್ಬಳ್ಳಿಯ ಬಸ್ಸು ಹತ್ತಿದ್ದೆ. ಬೆಳಕ್ ಹರಿಯೋದ್ರೊಳಗೆ ಹುಬ್ಬಿಯಾಗ್ ಇದ್ದೆ ನೋಡ್ರಿ ನಾನ್ ! ಅತ್ತೆ ಮಾವನ ಮನೆಗೆ ಹೋಗಿದ್ದೆ. ಇನ್ನೇನು ಎರಡು ದಿನಗಳಲ್ಲಿ ರಂಗಶಿಬಿರ ಪ್ರಾರಂಭವಾಗುತ್ತೆ. ಅದರ ತಯಾರಿಯಲ್ಲಿ ದಿನಗಳನ್ನು ಕಳೆದೆ. ರಂಗಶಿಬಿರದ ಉದ್ಘಾಟನೆಯಾಯಿತು. ಬೆಳಿಗ್ಗೆಯಿಂದ ಸಂಜೆ ತನಕ ಚಿಳ್ಳೆಪಿಳ್ಳೆಗಳೊಂದಿಗೆ ಸಮಯ ಕಳೆದು, ಸದಾ ನಗುಮುಖದ ಅಭಿ ಸರ್ ಜೊತೆಗೋ, ಅಥವಾ ಅಪರೂಪಕ್ಕೆ ನಗುವ ಅವರ ಗೆಳೆಯನ ಬುಲೆಟ್‌ನಲ್ಲೋ ಕೂತು, ನಾನು ಅತ್ತೆ ಮನೆಗೆ ಹೋಗ್ತಿದ್ವಿ. ಇಡೀ ದಿನದ ಸುಸ್ತು. ಹೋದ ಕೂಡ್ಲೆ ಅಡ್ಡ ಬಿದ್ರೆ, ನಿದ್ದೆ ಮುಗಿಸಿ ಅರ್ಧ ಒಂದು ಗಂಟೆ ಆದ್ಮೇಲೆ ಎಳ್ತಿದ್ದೆ. ಅತ್ತೆ ಆಗ್ಲೆ ಎದ್ದು ಮನೆಗೆಲ್ಸ ಶುರು ಮಾಡ್ತಿರ್ತಿದ್ರು. ನಾನು ಅವ್ರಿಗೆ ಸಹಾಯ ಮಾಡುತ್ತಿದ್ದೆ. ಅತ್ತೆಯ ಲೈಬ್ರೆರಿಯಲ್ಲಿದ್ದ ಮಕ್ಕಳ ನಾಟಕ ಪುಸ್ತಕಗಳನ್ನು ಓದ್ತಿದ್ದೆ. ರಂಗಶಿಬಿರದ ಸಮಾರೋಪ ಸಮಾರಂಭಕ್ಕೆ ಗುಲ್ಪುಟ್ಟಿ–ಮುನ್ಪುಟ್ಟಿ ನಾಟಕವನ್ನು ಪ್ರದರ್ಶಿಸುವುದಾಗಿ ನಿರ್ಧರಿಸಲಾಯಿತು. ಆ ಪುಟಾಣಿ ಮಕ್ಕಳೊಂದಿಗೆ ನಾಟಕದ ತಯಾರಿ, ದೊಡ್ಡಾಟ (ಉತ್ತರ ಕರ್ನಾಟಕದ ಒಂದು ನೃತ್ಯ ಪ್ರಕಾರ), ಕರಕುಶಲ ವಸ್ತುಗಳ ತಯಾರಿಕೆ ಹಾಗೂ ಇತರೆ ಕಲಿಕೆಗಳು ಶುರುವಾಗಿತ್ತು. ಸಂಜೆ ಸೆಟ್ ವರ್ಕ್ ಶುರು ಮಾಡಿಕೊಂಡಿದ್ವಿ. ಹೀಗೆ ಎರಡು ಮೂರು ಸಂಜೆಗಳನ್ನು ಕಳೆದೆ. ನಾಳಿನ ಸಂಜೆ ''ಬೋರ್ ಆಗ್ತುಂಟು ಅತ್ತೆ'' ಅಂದೆ. ಆಗ ಆಕೆ ''ತಗೋ, ಚೆನ್ನಾಗಿದೆ ಓದು'' ಎಂದು ಕೊಟ್ಟ ಪುಸ್ತಕವೇ 'ತೊತ್ತೊ–ಚಾನ್'.

''ತೊತ್ತೊ–ಚಾನ್'' ಈ ಪುಸ್ತಕವು ತೆತ್ಸುಕೊ ಕುರೊಯಾನಾಗಿ ರಚಿಸಿದ್ದು, ಬಿ. ಗಾಯತ್ರಿಯವರು ತುಂಬಾ ಸರಳವಾಗಿ ಮನಮುಟ್ಟುವಂತೆ ಕನ್ನಡಕ್ಕೆ ಅನುವಾದಿಸಿರುತ್ತಾರೆ.

ಈ ಪುಸ್ತಕದಲ್ಲಿರುವ ಯಾವ ಘಟನಾವಳಿಗಳೂ ಕಲ್ಪನೆ ಅಲ್ಲ ಎಂದು ಹೇಳುತ್ತಾರೆ ತೆತ್ಸುಕೊ. ಈ ಪುಸ್ತಕವು ತೊಮೊಯೆ ಎಂಬ ಶಾಲೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ತಿಳಿಸುತ್ತದೆ. ಇದನ್ನು ಓದಿದ ಮೇಲೆ ನಾನೂ ತೊಮೊಯೆ ಶಾಲೆಗೆ ಹೋಗಬೇಕಿತ್ತು. ತೊತ್ತೋ–ಚಾನ್, ಯಾಸುಕೀ–ಚಾನ್, ಮಿಯೋ–ಚಾನ್ ಮಿಯಾಜಾರ, ಕಾವಲುಗಾರ ರಯೋ–ಚಾನ್, ಪ್ರೀತಿಯಿಂದ ಮಾತಾಡಿಸುವ ಕೊಬಾಯಾಶಿಯವರು, ರಾಕಿ ಇವರೆಲ್ಲರ ಸ್ನೇಹ ಸಂಪಾದಿಸಬೇಕಿತ್ತು ಅಂತ ಅನಿಸಿತ್ತು. ಆದರೆ ಇವರೆಲ್ಲರ ಪ್ರೀತಿಯ ಶಾಲೆ ತೊಮೊಯೆ ಈಗಿಲ್ಲ. 1945ರಲ್ಲಿ ಟೋಕಿಯೋ ಮೇಲಿನ ಬಾಂಬ್ ದಾಳಿಯಲ್ಲಿ ತೊಮೊಯೆ ನಾಶಗೊಂಡಿತ್ತು. ಕೊಬಾಯಾಶಿಯವರು ತಮ್ಮದೇ ಹಣದಿಂದ ಅದನ್ನು ಪ್ರಾರಂಭಿಸಿದ್ದರಿಂದ ಅದನ್ನು ಮರುಸ್ಥಾಪಿಸಲು ಸಮಯ ಹಿಡಿಯಿತು. ಯುದ್ಧಾನಂತರ ಅವರ ಅದೇ ಹಳೆಯ ಕನಸಿನ ಜಾಗದಲ್ಲಿ ಶಿಶುಕೇಂದ್ರವೊಂದನ್ನು ಪ್ರಾರಂಭಿಸಿದ್ದರು ಎಂದು ಲೇಖಕಿ ಹೇಳಿದ್ದಾರೆ. ಬೇಜಾರಿನ ಸಂಗತಿ ಏನೆಂದರೆ ಒಂದು ದಾಳಿ, ಸಾವಿರಾರು ಮಕ್ಕಳನ್ನು ಬೆಳೆಸಬೇಕಾದ ಇನ್‌ಫಾರ್ಮಲ್ ಶಿಕ್ಷಣವಿದ್ದ ಒಂದೇ ಒಂದು ತೊಮೊಯೆ ಸರ್ವನಾಶವಾಗಿತ್ತು. ಈ ಶಾಲೆಯ ಶಿಕ್ಷಣದ ಬಗ್ಗೆ ಹೇಳಲೇಬೇಕು.

ಇಲ್ಲಿ ಎಲ್ಲಾ ಶಾಲೆಗಳ ಹಾಗೆ ಕ್ಲಾಸ್‌ರೂಂಗಳಿರಲಿಲ್ಲ, ನಿಗದಿತ ಪಿರೇಡ್‌ಗಳೂ ಇರಲಿಲ್ಲ. ಗಂಡು ಹೆಣ್ಣು ಎಂಬ ಭೇದವಿರಲಿಲ್ಲ, ಪ್ರೀತಿ–ವಾತ್ಸಲ್ಯಕ್ಕೆ ಕೊರತೆಯೂ ಇರಲಿಲ್ಲ. ಇಲ್ಲಿ ಕ್ಲಾಸ್‌ಗಳು ಹಳೆಯ ರೈಲುಬಂಡಿಗಳಲ್ಲಿ(ಕಂಪಾರ್ಟ್‌ಮೆಂಟ್) ನಡೆಯುತ್ತಿತ್ತು. ಯಾವಾಗ ಬೇಕಾದ್ರು ಏನು ಬೇಕಾದ್ರು ಕಲಿಯುವ ಮುಕ್ತ ಅವಕಾಶವಿತ್ತು. ಗಂಡು–ಹೆಣ್ಣು ನಡುವೆಯ ಭೇದ–ಭಾವ ಹೋಗಲಾಡಿಸಲು ಈಜುಕೊಳದಲ್ಲಿ ಮೈಮೇಲೆ ಯಾವ ಬಟ್ಟೆಯೂ ಇಲ್ಲದೆ ಈಜನ್ನು ಒಟ್ಟಿಗೆ ಅನುಭವಿಸಬಹುದಿತ್ತು. ಕಕ್ಕೂಸುಗುಂಡಿಯಲ್ಲಿ ಬಿದ್ದರೂ ಬೈಯ್ಯಿಸಿಕೊಳ್ಳದೇ ಇರಬಹುದಿತ್ತು. ಮರ ಹತ್ತಿ ಆಡಬಹುದಿತ್ತು. ತೊಮೊಯೆದಲ್ಲಿ ಒಂದು ಮಗುವಿಗೆ ಒಂದು ಮರ ಎಂಬ ಪದ್ಧತಿ ಇತ್ತು. ಆ ಮಗು ಆ ಮರದ ಜತೆ ಇಡೀ ಪ್ರಪಂಚವನ್ನು ಎದುರಿಸುವ ಕನಸು ಕಾಣಬಹುದಿತ್ತು. ಮನ ಬಂದಾಗ ಟೀಚರ್‌ಗಳೊಂದಿಗೆ ವಾಕಿಂಗ್ ಹೋಗಬಹುದಿತ್ತು. ನಡೆದಾಡಿಕೊಂಡೇ, ಕ್ಲಾಸಿನಲ್ಲಿ ಕೂತು ಕಲಿಯಲಾಗದ ಹಲವಾರು ವಿಚಾರಗಳು ಅರಿವಿಗೆ ಬರುತ್ತಿತ್ತು. ಈ ಶಾಲೆಯ ಮೇಲಿನ ನನ್ನ ಪ್ರೀತಿ, ಹೀಗೆ ಹಲವಾರು ಕಾರಣಗಳಿಂದಲೇ ಹೆಚ್ಚಾಗಿದ್ದು.

ಈ ಪುಸ್ತಕದಲ್ಲಿ ಹೇಳಿರುವ, ನನ್ನ ಮೇಲೆ ಬಹಳ ಪ್ರಭಾವ ಬೀರಿದ ನಾಲ್ಕು ಜನರ ಬಗ್ಗೆ ಹೇಳಲಿಚ್ಛಿಸುತ್ತೇನೆ. ಮೊದಲನೆಯದಾಗಿ, ಅಪ್ಪ–ಅಮ್ಮನ ಚಂದದ ಬೆಡಗಿ, ತೊತ್ತೊ–ಚಾನ್. ಈ ಪುಸ್ತಕದಲ್ಲಿ ಈಕೆಯ ಮುಗ್ಧ, ನಿಷ್ಕಲ್ಮಶ ಯೋಚನೆಗಳು, ಅವಳ ತುಂಟಾಟಗಳ ಬಗ್ಗೆ ವಿಸ್ತರಿಸಿ ಬರೆದಿದ್ದಾರೆ. ಇದನ್ನು ಓದಿದ ಯಾರಿಗಾದರೂ ಇವಳ ಮೇಲೆ ಕ್ರಶ್ ಆಗೋದು ಗ್ಯಾರಂಟಿ. ಹಾಗಂತ ಈ ಪುಸ್ತಕದಲ್ಲಿ ಅವಳು ನಮ್ಮ ನಿಮ್ಮ ಹಾಗೆ ಕಾಲೇಜಿಗೆ ಹೋಗೋದಿಲ್ಲ. ಆ ಕಾಲದಲ್ಲಿ ಆಕೆ ಲೋವರ್ ಪ್ರೈಮರಿಯ ಮುದ್ದು ಮರಿ. ಇನ್ನೊಬ್ಬರು, ತೊಮೊಯೆ

ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಕೊಬಾಯಾಶಿಯವರು. ತೊತ್ತೊ-ಚಾನ್‌ಳನ್ನು ಒಳ್ಳೆಯವಳನ್ನಾಗಿ ಮಾಡಿದ್ದು ಇವರ ಮಾತುಗಳೇ ಎಂದು ಹೇಳುತ್ತಾರೆ ಲೇಖಕಿ. ''ನೀನು ಒಳ್ಳೆಯ ಹುಡುಗಿ'' ಎಂದು ಮುಖ್ಯೋಪಾಧ್ಯಾಯರು ಯಾವಾಗಲೂ ಆಕೆಗೆ ಹೇಳುತ್ತಿದ್ದರು. ಹಾಗೇ ಅವರ ಮಾತಿನಿಂದಲೇ ಎಲ್ಲರನ್ನು ಹುರಿದುಂಬಿಸುತ್ತಿದ್ದರು. ಈ ಪುಸ್ತಕವನ್ನು ದೊಡ್ಡವರೂ ಓದಬೇಕು ಎಂದು ಹೇಳಲು ಇವರೇ ಮುಖ್ಯ ಕಾರಣ. ಇವರು ಕಲಿಸುವ ಶೈಲಿ, ಪ್ರೀತಿಯ ಮಾತುಗಳು, ಮಕ್ಕಳನ್ನು ಕೇಳಿಸಿಕೊಳ್ಳುವ ಗುಣ, ತಾಳ್ಮೆ ಇವೆಲ್ಲವೂ ಒಬ್ಬ ಪೋಷಕ ಅರ್ಥ ಮಾಡಿಕೊಳ್ಳಬೇಕು. ಇಂತಹ ಮುಖ್ಯೋಪಾಧ್ಯಾಯ ಅಥವಾ ಪೋಷಕ ಒಂದು ಮಗುವಿನ ಜೀವನದಲ್ಲಿ ಬಂದರೆ, ಆ ಮಗು ಖಂಡಿತವಾಗಿಯೂ ಒಳ್ಳೆ ಪ್ರಜೆಯಾಗುತ್ತದೆ, ಹಾಗೂ ಸೆಂಟ್ ಪರ್ಸೆಂಟ್ ಇಂತಹ ಪೇರೆಂಟಿಂಗ್ ಪದ್ಧತಿ ಇದ್ದರೆ, ಅಪರಾಧಿಗಳು ಸೃಷ್ಟಿಯಾಗುವುದಿಲ್ಲ ಎನ್ನುವುದು ನನ್ನ ಅನಿಸಿಕೆ. ಕೊಬಾಯಾಶಿಯವರಿಗೆ ನನ್ನ ಪ್ರೀತಿಯ ನಮನಗಳು ಇದ್ದೇ ಇರುತ್ತೆ. ಮತ್ತೊಬ್ಬ, ಶಾಲೆಯ ಕಾವಲುಗಾರ ರಯೋ-ಚಾನ್. ರಯೋ-ಚಾನ್‌ನ ಬಗ್ಗೆ ಈ ಪುಸ್ತಕದಲ್ಲಿ ಎರಡೇ ಪುಟ ಇದ್ದರೂ, ತೊತ್ತೊ-ಚಾನ್ ಹಾಗೂ ಎಲ್ಲಾ ಮಕ್ಕಳಿಗೆ ಅವನ ಮೇಲಿದ್ದ ಭಾವನೆಗಳನ್ನು ಕಂಡರೆ, ಯಾರಿಗಾದರೂ ಅವನ ಮೇಲೆ ಗೊತ್ತಿಲ್ಲದೆ ಗೌರವ ಬೆಳೆಯುತ್ತದೆ. ಕಾರಣ ನನಗೂ ಗೊತ್ತಿಲ್ಲ. ಆದರೆ ರಯೋ-ಚಾನ್ ಇತರ ಕಾರ್ಯದ ನಿಮಿತ್ತ ತೊಮೊಯೆ ಬಿಟ್ಟು ಹೋದಾಗ, ಒಳ್ಳೆಯ ವಿಚಾರಗಳನ್ನೂ ಬಿಟ್ಟು ಹೋಗಿದ್ದ.

ತೊಮೊಯೆದಲ್ಲಿ ಮಧ್ಯಾಹ್ನ ಊಟಕ್ಕೆ ಎಲ್ಲಾ ಮಕ್ಕಳು ಒಟ್ಟಾಗಿ ಕೂತು ಉಣ್ಣಬಹುದಿತ್ತು. ಎಲ್ಲರ ಬುತ್ತಿಯಲ್ಲಿ ಸ್ವಲ್ಪ ನೆಲದ್ದು, ಸ್ವಲ್ಪ ಜಲದ್ದು ಇರಬೇಕೆಂದು ಹೇಳುತ್ತಿದ್ದರು. ಯಾರದ್ದಾದರು ಬುತ್ತಿಯಲ್ಲಿ ನೆಲದ್ದು ಅಥವಾ ಜಲದ್ದು ಇಲ್ಲದಿದ್ದಲ್ಲಿ ಕೊಬಾಯಾಶಿಯವರ ಪತ್ನಿ ಅಕ್ಕರೆಯಿಂದ ಇಲ್ಲದನ್ನು ಬಡಿಸುತ್ತಿದ್ದರು. ಇನ್ನು ನೆಲದ್ದು-ಜಲದ್ದು ಅಂದರೆ ಏನು ಎಂಬುವುದನ್ನು ನೀವೇ ಪುಸ್ತಕ ಓದಿ ತಿಳಿದುಕೊಳ್ಳಿ. ಈ ಪುಸ್ತಕದ ರಚನಾರೀತಿಯು ಬಹಳ ವಿಶೇಷವಾಗಿದೆ. ಎಲ್ಲಾ ನಿಜ ಕತೆಯಾದರೂ, ಓದುವಾಗ ಕಾಲ್ಪನಿಕವಾಗಿ ನಮ್ಮ ಕಣ್ಣ ಮುಂದೆ ಕಟ್ಟಿಕೊಳ್ಳುತ್ತದೆ. ನೀಲಿ ಕವರ್‌ಪೇಜ್ ಹೊಂದಿರುವ ಈ ಪುಟ್ಟ ಪುಸ್ತಕವು ನನ್ನಾಣೆಗೂ ನನ್ನ ಓದಿನ ಹವ್ಯಾಸಕ್ಕೆ ಇನ್ನಷ್ಟು ಹುರುಪು ತುಂಬಿದೆ. ಅಂತೂ ಇಂತೂ ನನ್ನ ಬೇಸಿಗೆ ರಜೆ ಮುಗಿದಿತ್ತು. ಎಸ್.ಎಸ್. ಎಲ್.ಸಿ. ರಿಸಲ್ಟ್ ಬಂದು, ಕಾಲೇಜು ಮೆಟ್ಟಿಲು ಏರಿದ್ದೂ ಆಯಿತು. ''ತೊತ್ತೊ-ಚಾನ್'' ಓದಿ ಕೊನೆಯ ಪುಟ ಮಗಚಿ ನನ್ನ ಬಾಯಲ್ಲಿ ಮೊದಲು ಬಂದ ಪದ ''ಮುಗೀತು''. ಇದನ್ನು ಹೇಳುವಾಗ ನನ್ನ ಮನದಲ್ಲಿದ್ದ ಭಾವಜ್ವಾಲೆಯನ್ನು ವಿವರಿಸಲೂ ನನಗೆ ಗೊತ್ತಿಲ್ಲ. ''ಚೆನ್ನಾಗಿದೆ ಓದು'' ಎಂದು ಕೊಟ್ಟ ಪುಸ್ತಕ ತುಂಬಾ ಚೆನ್ನಾಗಿತ್ತು ಅಂತ ಖುಷಿ ಪಡಲೇ ಅಥವಾ ತೊಮೊಯೆ ಬಗ್ಗೆ ಯೋಚಿಸಿ ದುಃಖ ಪಡಲೇ, ಕೊಬಾಯಾಶಿಯವರು ಈಗಿಲ್ಲ ಎಂದು ಮೌನವಾಗಿರಲೇ ಒಂದೂ ತಿಳಿಯಲಿಲ್ಲ. ಇಡೀ ಜಗತ್ತೇ ಮೌನವಾಗಿತ್ತು. ಪುಸ್ತಕ ತಿರುಗಿಸಿ ಮೇಲಿನ ಪುಟ ನೋಡಿದೆ. ನೀಲಿ ವಸ್ತ್ರದಲ್ಲಿ ತೊತ್ತೊ-ಚಾನ್ ಹೂಗುಚ್ಛ ಹಿಡಿದು, ಎರಡು ಜಡೆ ಕಟ್ಟಿ ನಿಂತಿದ್ದಾಳೆ. ನನ್ನ ಶಾಲಾ ದಿನಗಳು ಹಾಗೇ ಮರುಕಳಿಸಿ ಹೋದವು. ''ತೊತ್ತೊ-ಚಾನ್'', ಕಿಟಕಿಯ ಬಳಿ ನಿಂತ ಪುಟ್ಟ ಹುಡುಗಿಯೂ ಹೌದು, ನನ್ನ ಓದಿನ ಆಸಕ್ತಿಯನ್ನು ಹೆಚ್ಚಿಸಿದ ಪುಸ್ತಕವೂ ಹೌದು.

●

ಗುರಿ

ಅಪ್ಪ-ಅಮ್ಮನಿಗೆ ಮಕ್ಕಳ ಕುರಿತು ಒಂದು ಗುರಿ ಇರುತ್ತದೆ. ಶಾಲೆಯಲ್ಲಿ ಟೀಚರ್‌ಗೆ syllabus ಮುಗಿಸುವ ಗುರಿ ಇರುತ್ತದೆ. ಮಕ್ಕಳಿಗೆ ಸ್ಪರ್ಧೆಯಲ್ಲಿ ಗೆಲ್ಲುವ ಗುರಿ ಇರುತ್ತದೆ. ಯೌವನಸ್ಥರಿಗೆ ಎಲ್ಲರ ಎದುರುಗಡೆ ಮಿಂಚುವ ಗುರಿ ಇರುತ್ತದೆ. ಮಧ್ಯ ವಯಸ್ಕರಿಗೆ ತನ್ನ ಕೆಲಸ ಹಾಗೂ ಕುಟುಂಬ ನಡೆಸುವ ಗುರಿ ಇರುತ್ತದೆ. ಅಜ್ಜ-ಅಜ್ಜಿಗೆ ತಮ್ಮ ಮೊಮ್ಮಕ್ಕಳನ್ನು ಮುದ್ದಾಡಿಸಿ ಕಥೆ ಹೇಳುವ ಗುರಿ ಇರುತ್ತದೆ. ರೈತನಿಗೆ ನೇಗಿಲು ಹೂಳುವ ಗುರಿ ಇರುತ್ತದೆ. ಓಟಗಾರನಿಗೆ ಮೊದಲು ತಲುಪುವ ಗುರಿ ಇರುತ್ತದೆ. ಓದುವ/ಕಲಿಯುವ ಮಕ್ಕಳಿಗೆ ಪರೀಕ್ಷೆಯಲ್ಲಿ ಪಾಸ್ ಆಗಿ ರ್‍ಯಾಂಕ್ ಬರುವ ಗುರಿ ಇರುತ್ತದೆ. ಹೂವಿಗೆ ತನ್ನ ಮೊಗ್ಗನ್ನು ಅರಳಿಸಿ ಪರಿಮಳ ಬೀರಿಸಿ ಆಕರ್ಷಿಸಬೇಕೆಂಬ ಗುರಿ ಇರುತ್ತದೆ.

ವಧು-ವರನಿಗೆ ಮದುವೆ ಆಗುವ ಗುರಿ ಇರುತ್ತದೆ. ಇಡೀ ಮನುಷ್ಯ ಜನ್ಮಕ್ಕೆ ಒಂದು ಗುರಿ ಎಂಬುದು ಇರಲೇಬೇಕು. ಆಗ ಮಾತ್ರ ಏನಾದರೂ ಸಾಧಿಸಲು ಸಾಧ್ಯ. ಇಲ್ಲವೆಂದರೆ ಅವನ/ ಅವಳ ಜೀವನ ಕತ್ತಲು ತುಂಬಿದ ಅಂಧಕಾರ, ದಾರಿ ಕಾಣದ ರಸ್ತೆಯ ಹಾಗೆ ಆಗುತ್ತದೆ.

ಏಂಜಲ್, ಪ್ರಥಮ ಬಿ.ಎ.

ಈ ಕಡಲ ತೀರ, ನಡೆದಷ್ಟು ದೂರ

✍ **ನಾಗರಾಜ ಹೆಚ್. ಕೆ.,** ದ್ವಿತೀಯ ಬಿ.ಎಸ್ಸಿ.

''ದೇಶ ತಿರುಗು, ಕೋಶ ಓದು'' ಎಂಬ ಗಾದೆಯ ಮಾತಿನಂತೆ ನನಗೆ ನನ್ನ ದೇಶವನ್ನು ಸುತ್ತುವ ಅವಕಾಶ ದೊರೆಯದೆ ಇದ್ದರು ಸಹ, ನನಗೆ ನನ್ನ ರಾಜ್ಯವನ್ನು ತಿರುಗುವ ಅವಕಾಶಗಳು ದೊರೆತವು, ನನಗೆ ಮೊದಲ ಬಾರಿ ಉತ್ತರ ಕರ್ನಾಟಕವನ್ನು ಸುತ್ತಾಡುವಂತಹ ಅವಕಾಶ ದೊರೆಯಿತು. ಆದರೆ ನನಗೆ ಈಗ ಸಿಕ್ಕಿರುವ ಅವಕಾಶ ಕರ್ನಾಟಕದ ಕಡಲ ತೀರವನ್ನು ನೋಡುವಂತಹ ಅವಕಾಶ, ಈ ಅವಕಾಶ ನನಗೆ 'ರೋವರ್ಸ್ ತಂಡ'ದಿಂದ ದೊರಕಿತು. ಅದೇ ''ರಾಜ್ಯಮಟ್ಟದ ರೋವರ್ಸ್ ಕಡಲ ತೀರ ಚಾರಣ ಶಿಬಿರ''. ಈ ಶಿಬಿರವನ್ನು ಕುರಿತು ನಮ್ಮ ರೋವರ್ಸ್ ಯುನಿಟ್‌ನ ನಿರ್ವಾಹಕರಾದ ಅವಿನಾಶ್ ಸರ್‌ರವರು ನಮಗೆ ತಿಳಿಸಿದರು. ಚಾರಣವು ಹೊನ್ನಾವರದಿಂದ ಪ್ರಾರಂಭವಾಗಿ ಭಟ್ಕಳ ಸಮೀಪದ ಅಳವೆಕೊಡಿ ಎಂಬ ಊರಿನವರೆಗೆ, ದಿನಾಂಕ: 22-03-2019ರಿಂದ 26-03-2019ವರೆಗೆ ನಡೆಯುತ್ತದೆ ಎಂಬ ಮಾಹಿತಿ ನಮಗೆ ದೊರೆತಿತ್ತು. ಮೊದಲ ಬಾರಿ ಕಡಲ ತೀರದಲ್ಲಿ ಚಾರಣ ಮಾಡುತ್ತಿರುವುದರಿಂದ ನಮಗೆ ಏನೋ ಒಂದು ಕುತೂಹಲ, ಅದರಂತೆ ಅದಕ್ಕೆ ಸರಿಯಾದ ಸಿದ್ಧತೆಗಳನ್ನು ಮಾಡುವುದೇ ನಮ್ಮ ಮೊದಲೆರಡು ದಿನಗಳ ಕೆಲಸವಾಗಿತ್ತು. ದಿನಾಂಕ: 22-03-2019ರ ಶುಕ್ರವಾರ ಹೊನ್ನಾವರಕ್ಕೆ ಹೋಗಲಿಕ್ಕೆಂದು ನಮ್ಮ ಉಡುಪಿಯ ಬಸ್ ನಿಲ್ದಾಣದಲ್ಲಿ ಎಲ್ಲರೂ ಸೇರಿದೆವು. ಅದರಂತೆ ಹೊನ್ನಾವರಕ್ಕೆ ಹೋಗುವ ಬಸ್ ಹತ್ತಿ ಕುಳಿತುಕೊಂಡೆವು. ಬಸ್‌ನಲ್ಲಿ ಹೋಗುತ್ತಿರುವಾಗ ನಮಗೆ ಎಷ್ಟು ಬೇಗ ಹೊನ್ನಾವರವನ್ನು ತಲುಪುತ್ತೇವೋ ಎಂಬ ಕುತೂಹಲ. ಅದರಂತೆ 3 ಗಂಟೆಯ ಪ್ರಯಾಣದಲ್ಲಿ ಹೊನ್ನಾವರವನ್ನು ತಲುಪಿದೆವು. ನಮ್ಮ ಶಿಬಿರ ಪ್ರಾರಂಭವಾಗುವ ಸ್ಥಳ ಹವ್ಯಕ ಕಲ್ಯಾಣಮಂಟಪ, ಹೊನ್ನಾವರದಿಂದ 3 ಕಿ.ಮೀ. ದೂರದಲ್ಲಿತ್ತು. ಅಲ್ಲಿಗೆ ಹೋಗುವ ಒಂದು ಟೆಂಪೊವನ್ನು ಹತ್ತಿದೆವು. ಆದರೆ ಆ ಟೆಂಪೊದಲ್ಲಿ ಇದ್ದಂತಹ ಕಂಡಕ್ಟರ್ ಒಂದು ಊರಿನ ಹೆಸರು ಹೇಳಿ ಕೂಗುತ್ತಿದ್ದ, ಅದನ್ನು ಕೇಳಿ ನಾವು ಕರ್ನಾಟಕದಲ್ಲೇ ಇದ್ದೆವೋ ಅಥವಾ ಬೇರೆ ಎಲ್ಲಾದರೂ ಬಂದಿದ್ದೇವೊ ಎಂಬಂತೆ ಆಗಿತ್ತು. ನಾನು ಆ ಕಂಡಕ್ಟರ್‌ನ ಬಾಯಿಯನ್ನೇ ಹತ್ತು ಹಲವು ಬಾರಿ ನೋಡುತ್ತಿದ್ದರು ಊರಿನ ಹೆಸರೇನೆಂದು ಅರ್ಥವಾಗಲಿಲ್ಲ, ನನ್ನ ಸ್ನೇಹಿತರಿಗೂ ಸಹ ಅದು ಅರ್ಥವಾಗಿರಲಿಲ್ಲ, ಆದರೆ ಆ ಟೆಂಪೊಗೆ ಮಾತ್ರ ಯಾವುದೋ ಲಾರಿಗೆ ಕುರಿಗಳನ್ನು ತುಂಬಿದ ಹಾಗೆ ಜನರನ್ನು ತುಂಬಿದ, ಹೇಗೋ ನಗುತ್ತಲೇ ಹವ್ಯಕ ಕಲ್ಯಾಣಮಂಟಪವನ್ನು ತಲುಪಿದೆವು.

ಕಲ್ಯಾಣಮಂಟಪದ ಹೊರಭಾಗದಲ್ಲಿ ನಾವು ನೋಡಿದಾಗ ಒಂದು 10 ರೋವರ್ಸ್‌ಗಳು ತಮ್ಮ ಸಮವಸ್ತ್ರದಲ್ಲಿ ನಡೆದಾಡುತ್ತಿದ್ದರು, ನಾವು ಇಷ್ಟೇ ಜನ ಇರಬೇಕು ಎಂಬ ಖುಷಿಯಿಂದ ಹೋದ ನಾವು ತುಂಬಾ ಬೇಗ ಬಂದಿದ್ದೇವೆ ಎಂಬ ಹೆಮ್ಮೆಯಿಂದ ಹೋಗಿ ಹೆಸರನ್ನು ನೋಂದಾಯಿಸಿಕೊಂಡೆವು. ನಂತರವೇ ತಿಳಿದಿದ್ದು ನಾವು ''ಕೊನೆಯವರಲ್ಲಿ ಮೊದಲಿಗರು'' ಎಂದು. ಒಳಗೆ ಹೋಗಿ ನೋಡಿದಾಗ 150ಕ್ಕೂ ಹೆಚ್ಚು ರೋವರ್ಸ್‌ಗಳು ಸಮವಸ್ತ್ರದಲ್ಲಿ ಸಿದ್ಧರಾಗಿದ್ದರು, ನಾವು ಸಹ ಅವರಂತೆಯೇ ಸಿದ್ಧರಾದೆವು. ಅಷ್ಟರೊಳಗೆ ನಮಗೆ ನಮ್ಮ ಉಡುಪಿ ಜಿಲ್ಲೆಯ 4 ರೋವರ್‌ಗಳು ಪರಿಚಯವಾದರು. ಒಟ್ಟಿಗೆ ನಾವು ಉಡುಪಿಯವರೇ 8 ಜನ ಒಟ್ಟಾದೆವು. ಅಷ್ಟರಲ್ಲಿಯೇ ಅಲ್ಲಿನ ಮುಖ್ಯಸ್ಥರಾದ ಒಬ್ಬ ರೋವರ್ ಬಂದು ಉಡುಪಿಯ ರೋವರ್ಸ್ ಗೆ ಇವತ್ತು ಮಧ್ಯಾಹ್ನದ ಊಟ ಬಡಿಸುವ ವ್ಯವಸ್ಥೆ ಎಂದು ಹೇಳಿ ಹೋದರು. ಅದರಂತೆ ಊಟವನ್ನು ಬಡಿಸಿದೆವು, ಊಟ ಬಡಿಸುವಾಗ ನನಗೆ ಒಂದೇ ಚಿಂತೆ ಎಲ್ಲರೂ ಎರಡು ಮೂರು ಬಾರಿ ಬಂದು ಅನ್ನವನ್ನು ಮಜ್ಜಿಗೆಯನ್ನು ಹಾಕಿಸಿಕೊಂಡು ಹೋಗುತ್ತಿದ್ದರು, ನಮಗೆ ಉಳಿಯುತ್ತದೆಯೋ ಇಲ್ಲವೋ ಎಂಬಂತೆ ಆಯಿತು. ಕೊನೆಗೂ ನಾನು ಯೋಚಿಸಿದಂತೆಯೇ ಆಯಿತು. ಹಾಗಾಗಿ ನಮಗೆ ಅವರು ಮತ್ತೆ ಅಡುಗೆಯನ್ನು ಮಾಡಿದರು. ಊಟ ಬಡಿಸುವಾಗ, ಎಲ್ಲರನ್ನು ನೋಡುವಾಗಲು, ಎಲ್ಲವೂ ಹೊಸ ಮುಖಗಳೇ, ನಮ್ಮಂತೆಯೇ ಪದವಿ ಓದುತ್ತಿರುವರು, ಊಟವೆಲ್ಲ ಮುಗಿಸಿದ ನಂತರ 3 ಗಂಟೆಗೆ ಕಾರ್ಯಕ್ರಮ ಎಂದು ನಮ್ಮ ಶಿಬಿರದ ನಾಯಕರಾದ ಪ್ರತಿಮ್ ಕುಮಾರ್ ಸರ್ ಹೇಳಿದರು.

ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಎಲ್ಲರೂ ಕಲ್ಯಾಣಮಂಟಪದ ಹೊರಭಾಗದಲ್ಲಿ ಸೇರಿದೆವು. ನಂತರ ನಮ್ಮ ರೋವರ್ಸ್ ಧ್ವಜವನ್ನು ಹಾರಿಸಲಾಯಿತು, ಪ್ರಾರ್ಥನೆಯನ್ನು ಮಾಡಿದೆವು. ನಂತರ ವೇದಿಕೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದಲ್ಲಿ ನಮ್ಮ ಶಿಬಿರ (ಕ್ಯಾಂಪ್)ವನ್ನು ಕುರಿತು ಹೇಳಿದರು. ನಮ್ಮಲ್ಲಿ ಪ್ರೋತ್ಸಾಹವನ್ನು ನೀಡಿದರು. ವೇದಿಕೆ ಕಾರ್ಯಕ್ರಮ ಮುಗಿದ ನಂತರ ನಮಗೆ ಚಹ ಮತ್ತು ಬಿಸ್ಕತ್ ವ್ಯವಸ್ಥೆ ಮಾಡಿಸಿದ್ದರು. ಸಂಜೆ 7 ಗಂಟೆ ಸುಮಾರಿಗೆ ಮತ್ತೆ ಊಟಕ್ಕೆ ಕರೆದರು. ಎಲ್ಲರೂ ಊಟವನ್ನು ಮಾಡಿದೆವು, ಅಷ್ಟರೊಳಗೆ ನಮ್ಮ ಸರ್ ಹೇಳಿದ್ದರು ರಾತ್ರಿ ಒಂದೊಂದು ಜಿಲ್ಲೆಯಿಂದ, ಎಲ್ಲರೂ ಬಂದು ಒಂದು ಹಾಡನ್ನು ಹಾಡಬೇಕಿತ್ತು. ಅದರಂತೆಯೇ

ಎಲ್ಲಾ ಮತ್ತೆ ಸೇರಿದೆವು. ಒಟ್ಟು 21 ಜಿಲ್ಲೆಯಿಂದ 170 ಜನ ರೋವರ್ಸ್‌ಗಳು ಹಾಜರಾಗಿದ್ದರು. ಹಾಗೂ 7 ಜನ ಸರ್ ಗಳು ನಮ್ಮೊಟ್ಟಿಗೆ ಇದ್ದರು. ನಾವು ಇದುವರೆಗೆ ಹಾಡಿದವರಲ್ಲ, ಬೇರೆಯವರ ಹಾಡನ್ನು ಕೇಳಿದವರು, ಆದರೂ ಒಂದು ಪ್ರಯತ್ನ ಮಾಡಿದೆವು, ನಮ್ಮ ಪ್ರಯತ್ನಕ್ಕೆ ಒಳ್ಳೆಯ ಯಶಸ್ಸು ಸಿಕ್ಕಿತು. ಇದ್ದವರಲ್ಲಿ ನಾವೇ ಚೆನ್ನಾಗಿ ಹಾಡಿದೆವು ಎಂದು ಸರ್ ತಿಳಿಸಿದರು. ಎಲ್ಲರಿಗೂ ಸಂತೋಷವಾಯಿತು. ಕಾರ್ಯಕ್ರಮ ಮುಗಿದ ನಂತರ ಎಲ್ಲಾ ರೋವರ್ಸ್‌ಗಳಿಗೂ ಚಾರಣಕ್ಕೆ ಯೋಗ್ಯವಾದಂತಹ ಚಿಕ್ಕ-ಚಿಕ್ಕ ಬ್ಯಾಗ್‌ಗಳನ್ನು ನೀಡಿದರು. ನಂತರ ಎಲ್ಲರನ್ನು ಮಲಗಿಕೊಳ್ಳಲು ಕಳುಹಿಸಿದರು.

ನಮ್ಮ ಬ್ಯಾಗ್‌ಗಳನ್ನು ಇಟ್ಟದ್ದಲ್ಲಿಗೆ ಬಂದೆವು, ಬೆಳಿಗ್ಗೆ ಸ್ನಾನ ಮಾಡಲು ಅವಕಾಶ ಸಿಗುವುದಿಲ್ಲವೆಂದು ತಿಳಿದು ರಾತ್ರಿಯೇ ಸ್ನಾನವನ್ನು ಮುಗಿಸಿಕೊಂಡೆವು. ನಂತರ ನನ್ನ ಮೊಬೈಲ್ ನೋಡಿದೆ ಅದರಲ್ಲಿ ಚಾರ್ಜ್ ಕಡಿಮೆಯಾಗಿತ್ತು, ಚಾರ್ಜ್ ಹಾಕೋಣ ಎಂದು ಸ್ವಿಚ್ ಬಾಕ್ಸ್ ಕಡೆ ಒಮ್ಮೆ ನೋಡಿದೆ ಎಲ್ಲಾ ಸ್ವಿಚ್‌ಬಾಕ್ಸ್‌ಗಳು ಒಂದೇ ತರ, ಬಾವಲಿಗಳು ಮರಕ್ಕೆ ನೇತಾಡುವ ಹಾಗೆ ಮೊಬೈಲ್ ನೇತಾಡುತ್ತಿದ್ದವು, ಅದಲ್ಲದೆ ಆ ಮೊಬೈಲ್‌ನವರು ವಾಚ್‌ಮ್ಯಾನ್ ತರ ಅದನ್ನು ಕಾಯುತ್ತಿದ್ದರು. ಅಂತು-ಇಂತು ನನಗೆ ಒಂದು ಕಡೆ ಜಾಗ ಸಿಕ್ಕಿತು, ಮೊಬೈಲನ್ನು ಚಾರ್ಜಿಗೆ ಹಾಕುವುದರಲ್ಲಿ 11 ಗಂಟೆಯಾಗಿತ್ತು. ಬೆಳಿಗ್ಗೆ ನಾನು ಏಳುವುದು ತಡವಾಗಿತ್ತು.

ನಮ್ಮನ್ನು ಅಂದರೆ 170 ರೋವರ್ಸ್‌ಗಳನ್ನು 4 ಗುಂಪುಗಳಾಗಿ (ಪ್ಯಾಟ್ರೋಲ್) ಮಾಡಿದ್ದರು. ಎಲ್ಲಾ ಜಿಲ್ಲೆಯವರನ್ನು ಒಟ್ಟು ಮಾಡಿ, ಆದರೆ ನನ್ನ ಅದೃಷ್ಟವೋ-ದುರದೃಷ್ಟವೋ ಗೊತ್ತಿಲ್ಲ ನನ್ನ ಗುಂಪಿನಲ್ಲಿ ಉಡುಪಿ ಜಿಲ್ಲೆಯವನು ನಾನೊಬ್ಬ ಮಾತ್ರ ಇದ್ದೆ, ಆದರೂ ನಾನಿದ್ದ ಗುಂಪಿನ ಎಲ್ಲಾ ಸದಸ್ಯರನ್ನು ಪರಿಚಯ ಮಾಡಿಕೊಂಡಿದ್ದೆ. ನಂತರ ನಮ್ಮ ಚಾರಣವು ಬೆಳಿಗ್ಗೆ 6 ಗಂಟೆಗೆ ಪ್ರಾರಂಭವಾಯಿತು. ಹವ್ಯಕ ಕಲ್ಯಾಣಮಂಟಪದಿಂದ ಸುಮಾರು 3 ಕಿ.ಮೀ. ದೂರ ಚಲಿಸಿದಂತೆ ನಮಗೆ ಶರಾವತಿ ನದಿಯ ಸೇತುವೆ ಸಿಕ್ಕಿತು. ನನಗೆ ಅದನ್ನು ಕಂಡು ಒಮ್ಮೆ ಆಶ್ಚರ್ಯವಾಯಿತು. ಏಕೆಂದರೆ ನಾನೊಬ್ಬ ಮಲೆನಾಡ ಹುಡುಗ, ನಮ್ಮ ಊರು ತೀರ್ಥಹಳ್ಳಿ ತಾಲೂಕಿನ ಒಂದು ಪುಟ್ಟ ಹಳ್ಳಿ, ನಮ್ಮ ಊರಿನಿಂದ 7 ಕಿ.ಮೀ. ದೂರದಲ್ಲಿ ಶರಾವತಿ ನದಿಯ (ಉಗಮ) ಮೂಲ 'ಅಂಬುತೀರ್ಥ' ದೊರೆಯುತ್ತದೆ. ನಮ್ಮ ಊರಿಗೆ ನದಿ ಹರಿದು ಬರುವಾಗ ಒಂದು 30 ಅಡಿ ಅಗಲವಿದೆ ಅಷ್ಟೇ, ಆ ಹೊಳೆಯಲ್ಲಿಯೇ ನಮ್ಮದು ಎಷ್ಟೋ ತೀರ್ಥ ಸ್ನಾನಗಳು ಆಗಿವೆ, ಅಂತಹ ಚಿಕ್ಕ ಹೊಳೆಯು ಇಲ್ಲಿ ಸುಮಾರು 1 ಕಿ.ಮೀ. ಅಷ್ಟು ಅಗಲವಿದೆ, ಈ ನದಿಯನ್ನು ದಾಟಲು 1 ಕಿ.ಮೀ. ಉದ್ದದ ಸೇತುವೆಯನ್ನು ದಾಟಬೇಕು. ಸೇತುವೆ ದಾಟಿದ ನಂತರ ಸುಮಾರು 2 ಕಿ.ಮೀ. ದೂರ ಚಲಿಸಿ ಇಕೊ ಬೀಚ್ (Echo Beach) ತಲುಪಿದೆವು. ಇದಕ್ಕೂ ಮೊದಲು ನಾನು ಸುಮಾರು ಬೀಚ್‌ಗಳನ್ನು ನೋಡಿದ್ದೆನು. ಆದರೆ ಇದನ್ನು ನೋಡಿದಾಗ ಏನೋ ಒಂದು ತರದ ಮನಃಸಂತೋಷವಾಯಿತು. ಅಲ್ಲೇ ಸಮೀಪದಲ್ಲಿ ಒಂದು ಚಿಕ್ಕ ಪಾರ್ಕ್ ಇತ್ತು, ನಮ್ಮನ್ನೆಲ್ಲ ಅಲ್ಲಿ ಕರೆದುಕೊಂಡು ಹೋದಾಗ ಎಲ್ಲಾ ಸಣ್ಣ ಮಕ್ಕಳಂತೆ ಕುಣಿಯ ತೊಡಗಿದೆವು, ನಾವೆಲ್ಲ ವಯಸ್ಸಿನಲ್ಲಿ 18 ವರ್ಷದವರಾಗಿದ್ದರೂ ಸಹ ನಾವು 8 ವರ್ಷದ ಮಕ್ಕಳಂತೆ ಆಡುತ್ತಿದ್ದೆವು, ಅಲ್ಲಿನ ಪರಿಸರ ಮಾತ್ರ ತುಂಬಾ ಸುಂದರವಾಗಿತ್ತು. ಅಷ್ಟರಲ್ಲೇ ಸುಮಾರು 9 ಗಂಟೆಯಾಗಿತ್ತು. ನಮಗೆ ಅಲ್ಲೇ ತಿಂಡಿಯ ವ್ಯವಸ್ಥೆಯಾಗಿತ್ತು. ಎಲ್ಲರೂ ತಿಂಡಿಯನ್ನು ತಿಂದು ಮತ್ತೆ ನಮ್ಮ ಚಾರಣ ಸಮುದ್ರ ದಂಡೆಯಲ್ಲೆ ಶುರುವಾಯಿತು. ನಮ್ಮ ಪ್ರತಿಮ್ ಕುಮಾರ ಸರ್‌ರವರು ಸೇನೆಯ ಸೇನಾಧಿಪತಿಯಂತೆ ಮುಂದೆ ಬಾವುಟದೊಂದಿಗೆ ಸಾಗುತ್ತಿದ್ದರು. ಅವರ ಹಿಂದೆ ನಮ್ಮ ಹೆಜ್ಜೆಗಳು ಸಹ ಸಾಗುತ್ತಿದ್ದವು.

ಹೀಗೆ ಕಡಲ ತೀರದಲ್ಲಿ ಸುಮಾರು ದೂರ ಚಲಿಸುತ್ತಾ ಬಂದೆವು, ಕೆಲವರು ತುಂಬಾ ಹಿಂದುಳಿದಿದ್ದರು ಅವರನ್ನೆಲ್ಲಾ ಸರ್ ಗಳು ನಮ್ಮೊಟ್ಟಿಗೆ ಕರೆದುಕೊಂಡು ಬರುತ್ತಿದ್ದರು. ಕೆಲವರು ತಮ್ಮ ಶೂಗಳನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದರು ಅದನ್ನು ಕಂಡು ನನಗೆ ತುಂಬಾ ನಗು ಬರುತ್ತಿತ್ತು. ಸುಮಾರು ಐದಾರು ಕಿ.ಮೀ. ನಡೆದ ನಂತರ ನಮಗೆ ಕುಡಿಯಲು ನೀರು ಸಿಕ್ಕಿತು, ನಾವು ತೆಗೆದುಕೊಂಡು ಹೋದ ನೀರು ಮುಕ್ಕಾಲು ಭಾಗ ಖಾಲಿಯಾಗಿತ್ತು. ಹೀಗೆ ಸುಮಾರು ದೂರ ತಲುಪಿದಾಗ ಒಂದು ಬೆಟ್ಟ ಸಿಕ್ಕಿತು. ನಾವು ಮೊದಲು ನೋಡಿದಾಗ ಆ ಬೆಟ್ಟ ಸಣ್ಣದಾಗಿ ಕಾಣುತ್ತಿತ್ತು. ಆದರೆ ಹತ್ತಿರ ಹೋದಾಗ ಮಾತ್ರ ನಾವೆಲ್ಲ ತಲೆ ಎತ್ತಿ ನೋಡಬೇಕಾಗಿತ್ತು, ಇದನ್ನು ಲೆಕ್ಕಿಸದೆ ನಾವೆಲ್ಲ ಬೆಟ್ಟ ಹತ್ತಿದೆವು. ಆ ಬೆಟ್ಟದ ಮೇಲಿಂದ ಸಮುದ್ರವು ತುಂಬಾ ಆಕರ್ಷಣೀಯವಾಗಿ ತೋರುತ್ತಿತ್ತು. ಒಂದು ಕಡೆ ಕೊನೆಯಿಲ್ಲದಂತಹ ಸಮುದ್ರದ ನೀರು, ಮತ್ತೊಂದು ಕಡೆ ಹಸಿರಾದ ಗಿಡ ಮರಗಳು, ಇನ್ನುಳಿದಲ್ಲೆಲ್ಲ ಸುಂದರವಾದ ಕೃಷಿ ಭೂಮಿ, ಸಮುದ್ರದಲ್ಲಿ ಹೋಗುತ್ತಿದ್ದ ಪ್ರಯಾಣಿಕರ ದೋಣಿಗಳು, ಇನ್ನೊಂದೆಡೆ ಆಮೆಗಳಂತೆ ನಾವು ರೋವರ್ಸ್‌ಗಳು ಬೆಟ್ಟ ಹತ್ತುತ್ತಿದ್ದೆವು.

ಈ ಬೆಟ್ಟವು ''ಅಪ್ಸರಕೊಂಡ'' ಎಂಬ ಊರಿನಲ್ಲಿತ್ತು, ಆ ಬೆಟ್ಟದ ಮೇಲೆ ಒಂದು ದೇವಸ್ಥಾನವಿತ್ತು. ನಾವು ಅಲ್ಲಿಗೆ ಬರುತ್ತಿರುವುದಾಗಿ ತಿಳಿದು ನಮಗೆ ಅಲ್ಲಿ ಪಾನೀಯದ ವ್ಯವಸ್ಥೆ ಮಾಡಲಾಗಿತ್ತು. ಅದು ನಮಗೆ ಮರುಭೂಮಿಯಲ್ಲಿ ಓಯಸಿಸ್ ಸಿಕ್ಕಿದ ಹಾಗೆ ಆಯಿತು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಮ್ಮ ಪಯಣ ಮುಂದೆ ಸಾಗಿತು. ಆ ಬೆಟ್ಟವು ಸುಮಾರು 1 ಕಿ.ಮೀ.ಗೂ ಅಧಿಕ ಎತ್ತರವಾಗಿತ್ತು, ಎಲ್ಲೆಲ್ಲೂ ಗಿಡ ಮರಗಳಿದ್ದವು. ಕೆಲವು ಕಡೆ ಜಂಟ್ಟಿಗೆಯಿಂದ ಕಟ್ಟಿದ ಪಾಗಾರಗಳು (Compound) ಇದ್ದವು. ಅದನ್ನು ನೋಡಿ ಕೆಲವರು ಒಬ್ಬೊಬ್ಬ ರಾಜನ ಬಗ್ಗೆ ಚರಿತ್ರೆಯನ್ನು ಹೇಳುತ್ತಿದ್ದರು, ಅದು ಸುಳ್ಳಾಗಿದ್ದರೂ ಕೇಳಲು ಸೊಗಸಾಗಿತ್ತು. ದಾರಿಯುದ್ದಕ್ಕೂ ಚಲಿಸುವಾಗ ನಾವು ಪ್ರಾಣೇಶ್‌ಗಿಂತ ಏನೂ ಕಮ್ಮಿ ಇಲ್ಲ

ಎಂಬುವಂತೆ ಹಾಸ್ಯ ಮಾಡುತ್ತಿದ್ದವು. ಅದರ ಜೊತೆ-ಜೊತೆಗೆ ನಮ್ಮ ಶಿಸ್ತು-ವರ್ತನೆಯ ಬಗ್ಗೆ ನಮ್ಮನ್ನು ನೋಡುತ್ತಿದ್ದರು. ಮೇಲೆ ಬಿಸಿಲು ಕೆಳಗೆ ಕಲ್ಲು ಅದರಲ್ಲೇ ನಮ್ಮ ಪಯಣ ಸಾಗಿತು. ಹೀಗೆ ಒಂದು ದಿನ 20 ಕಿ.ಮೀ.ನಷ್ಟು ದೂರ ನಡೆದೆವು. ಅಂದು ಮಧ್ಯಾಹ್ನ 1 ಕ್ಕೆ ನಮ್ಮ ಮೊದಲ ಚಾರಣದಲ್ಲಿ ಸರಕಾರಿ ಪ್ರಾಥಮಿಕ ಶಾಲೆ, ಮುಗಳಿ ಎಂಬ ಊರಿಗೆ ಬಂದು ಸೇರಿದೆವು.

